# ಆತ್ಮಶಕ್ತಿಯ ತೇಜಸ್ಸು

ಹೊಸಕೆರೆ ಚಿದಂಬರಯ್ಯ

UNIVERSAL
LIBRARY
OU_202240
UNIVERSAL
LIBRARY

# ಆತ್ಮಶಕ್ತಿಯ ತೇಜಸ್ಸು


ಲೇಖಕ:

ನೀತಿಗಳ ನೆಲಗಟ್ಟು, ಭರತಖಂಡದ ಜೀವಜ್ಯೋತಿಗಳು,
ಭರತನ ಬಂಧುಪ್ರೇಮ, ಆರ್ಯಧರ್ಮಪ್ರದೀಪ, ಗೀತಾರ್ಥಚಂದ್ರಿಕೆ,
ಗೀತಾಸಾರವಿಚಾರ, ಪಂಚದಶೀತತ್ತ್ವಾರ್ಥ, ಶ್ರೀವಿದ್ಯಾರಣ್ಯಕಾವ್ಯ,
ಮೊದಲಾದವುಗಳನ್ನು ಬರೆದಿರುವ

**ಹೊಸಕೆರೆ ಚಿದಂಬರಯ್ಯ,**

ಭಕ್ತಬಂಧುಕಾರ್ಯಾಲಯ, ಬಸವನಗುಡಿ, ಬೆಂಗಳೂರು ಸಿಟಿ.



ಪ್ರಕಾಶಕ:

**ಎಂ. ರಾಮರಾವ್**

**ಎಸ್. ಎಸ್. ಎನ್. ಬುಕ್ ಡಿಪೊ, ಬಸವನಗುಡಿ,**

**ಬೆಂಗಳೂರು ಸಿಟಿ.**

ತಿದಿದ ಎರಡನೆ ಮುದ್ರಣ, ೧೦೦೦ ಪ್ರತಿಗಳು

ಶಾ. ೧೮೫೮]  ಬೆಲೆ: ೧-೨-೦  [ಕ್ರಿ. ೧೯೩೬

ಬೆಂಗಳೂರು ಸಿಟಿ, "ವಿ. ಎಂ. ವಿ." ಪ್ರೆಸ್ಸಿನಲ್ಲಿ
ಮುದ್ರಿತವಾಯಿತು.

## ಮೊದಲನೆಯ ಮುದ್ರಣದ

# ಮುನ್ನುಡಿ

---

ಲೋಕದಲ್ಲಿ ದೇಹಶಕ್ತಿಯುಳ್ಳವರು ಒಳ್ಳೇ ಬಲಿಷ್ಠರೆಂದೂ ಅವರಿಂದಲೇ ಜನತೆಯ ಉನ್ನತಿಯೆಂದೂ ಸಾಮಾನ್ಯವಾಗಿ ಜನರು ತಿಳಿಯುವರು. ಈ ತಿಳಿವಳಿಕೆಯು ಸಂಪೂರ್ಣವಾಗಿ ನಿರಾಧಾರವಾದದ್ದೇನೂ ಅಲ್ಲ. ದೇಹಶಕ್ತಿಯೂ ಎಷ್ಟೋ ಸಂದರ್ಭಗಳಲ್ಲಿ ಕಾರ್ಯಕಾರಿಯಾಗಿರುವದನ್ನೂ ನಾವು ಪ್ರತ್ಯಕ್ಷವಾಗಿ ಪ್ರತಿದಿನವೂ ನೋಡುತ್ತಿರುತ್ತೇವೆ. ಆದ್ದರಿಂದ ಅದೂ ಅಗತ್ಯವಾಗಿ ಇರತಕ್ಕದ್ದೆ. ಆದರೆ ಅದೇ ಸರ್ವಾರ್ಥಸಾಧನವಲ್ಲ. ಸೃಷ್ಟಿಯ ವೈಚಿತ್ರ್ಯದ ಕಡೆಗೆ ಕಣ್ಣುಹಾಕಿ ನೋಡಿದರೆ ಭೀಮಸಂಥ ಕಾಯಶಕ್ತಿಯುಳ್ಳವರು ಕೂಡ ಶರೀರದೃಷ್ಟಿಯಿಂದ ದುರ್ಬಲರಾದ ಕೆಲವರೆದುರಿಗೆ "ಮಹಾಪ್ರಸಾದ"ವೆಂದು ಕೈ ಜೋಡಿಸಿಕೊಂಡು ನಿಲ್ಲುವದೂ ನಮಗೆ ಆಗಾಗ ಕಾಣಬರುತ್ತಿದೆ. ಇದರ ಕಡೆಗೆ ಲಕ್ಷ್ಯವನ್ನು ಕೊಟ್ಟು ವಿಚಾರಮಾಡಿದರೆ ಶರೀರದೃಷ್ಟಿಯಿಂದ ದುರ್ಬಲರಾಗಿರಬಹುದಾದ ಕೆಲವರಲ್ಲಿ ಏನೋ ಒಂದು ಮಹತ್ತ್ವವಿರಬೇಕೆಂದು ಸ್ಪಷ್ಟವಾಗುತ್ತದೆ. ಅದಿಲ್ಲದಿದ್ದರೆ ಮಾಂಸಖಂಡಗಳ ಉಬ್ಬಟೆಯಿಂದ ಸೆಡೆತುಕೊಂಡಿರುವ ಶರೀರವು ಅವರ ಮುಂದೆ ಬಗ್ಗುವದಕ್ಕೆ ಕಾರಣವಿಲ್ಲ. ಶರೀರದ ಔದ್ಧತ್ಯದ ಬಿಗುಹನ್ನು ಸ್ವಪ್ರಭಾವದಿಂದಲೇ ಸಡಿಲಮಾಡುವಂಥ ಆ ಮಹತ್ತ್ವವು ಆತ್ಮಶಕ್ತಿಯಿಂದಲ್ಲದೆ ಮತ್ತೊಂದರಿಂದ ಅಲ್ಲ. ಶರೀರದಲ್ಲಿ ಚಲನವಲನಗಳನ್ನುಂಟುಮಾಡುತ್ತ ಒಳಗಿರುವ ಚೈತನ್ಯದ ಬೆಂಬಲವನ್ನು ಹೊಂದಿದ ಮನಸ್ಸಿನ ಶಕ್ತಿಯೇ ಆತ್ಮಶಕ್ತಿ. ದೇಹವು ಸ್ಥೂಲವಾಗಿ ಹೊರಗೆ ಕಣ್ಣಿಗೆ ಕಾಣುವದರಿಂದ ಸ್ಥೂಲವಾದ ಉಪಾಯಗಳಿಂದ ಅದರ ಶಕ್ತಿಯನ್ನು ಹೆಚ್ಚಿಸುವದು ಸುಲಭವು. ಮನಸ್ಸಿನೊಡನೆ ಕೂಡಿಕೊಂಡಿರುವ ಜೀವಚ್ಚೈತನ್ಯವು ಒಳಗೆ ಸೂಕ್ಷ್ಮವಾಗಿರುವದರಿಂದ ಸೂಕ್ಷ್ಮವಾದ ಉಪಾಯಗಳನ್ನವಲಂಬಿಸಿ ಅದರ ಶಕ್ತಿಯನ್ನು ಹೆಚ್ಚಿಸುವದು ಸರ್ವಸಾಮಾನ್ಯವಲ್ಲ. ಆದ್ದರಿಂದ ಆತ್ಮಶಕ್ತಿ

ಯನ್ನು ಬೆಳೆಸಿಕೊಂಡಿರುವವರು ದೇಹಶಕ್ತಿಯನ್ನು ಬೆಳೆಸಿಕೊಂಡಿರುವವರಷ್ಟು ಹೆಚ್ಚಾಗಿ ಸಿಕ್ಕಲಾರರು. ನಿಜವಾಗಿ ತನ್ನ ಉನ್ನತಿಯಾಗಲಿ ಜನತೆಯ ಉನ್ನತಿಯಾಗಲಿ ಹೆಚ್ಚಾಗಿ ಆತ್ಮಶಕ್ತಿಯನ್ನೇ ಅವಲಂಬಿಸಿಕೊಂಡಿರುವದು. ಆದ್ದರಿಂದ ಆತ್ಮಶಕ್ತಿಯ ವಿಚಾರವಾದ ಕಲ್ಪನೆಯ ಕಡೆಗೆ ಜನರ ಲಕ್ಷ್ಯವನ್ನು ತಿರುಗಿಸುವದು ಅವಶ್ಯಕವೆಂದು ನನಗೆ ತೋರಿತು.

ಆ ಆತ್ಮಶಕ್ತಿಯ ಬರೀ ಭಾವರೂಪವನ್ನು ನಿರೂಪಣೆಮಾಡಿದರೆ ಅದರ ಉಜ್ವಲತೆಯನ್ನು ನೋಡಿ ಅದಷ್ಟು ಕೃತಿಯಲ್ಲಿಳಿಯಲಾರದೆಂದು ಜನರು ಸಂಶಯಗೊಳ್ಳುವರೆಂಬ ಯೋಚನೆ ಬಂತು. ಆಗ ಶ್ರುತಿಸ್ಮೃತಿಗಳಲ್ಲಿ ಹೇಳಿದ ಧರ್ಮನೀತಿಗಳನ್ನು ಪುರಾಣಿಕಾರರು ಉದಾಹರಣೆಗಳೊಡನೆ ಪರಿಣಾಮಕಾರಕಗಳಾಗಿ ಮಾಡಿದ್ದು ನೆನಪಾಯಿತು. ಆತ್ಮಶಕ್ತಿಪ್ರದರ್ಶನದ ಉದಾಹರಣೆಗಳು ಪುರಾಣಗಳಲ್ಲಿ ಬೇಕಾದಷ್ಟು ತುಂಬಿತುಳುಕುತ್ತಿದ್ದರೂ ಪಾಶ್ಚಾತ್ಯವಿದ್ಯಾಸಂಸ್ಕಾರದ ಪ್ರಭಾವದಿಂದ ಕೇವಲ ಪ್ರತ್ಯಕ್ಷಪ್ರಮಾಣಪ್ರಿಯವಾಗಿರುವ ಆಧುನಿಕಜನತೆಯ ಮುಂದೆ ಆ ಪುರಾಣವನ್ನು ಬಿಚ್ಚುವದು ನನ್ನ ಮನಸ್ಸಿಗೆ ಬರಲಿಲ್ಲ. ಆದ್ದರಿಂದ ಇತಿಹಾಸಕಾಲದಲ್ಲಿ ಆಗಿಹೋದ ಲೋಕೋತ್ತರವಿಭೂತಿಗಳ ನಡೆವಳಿಕೆಗಳನ್ನು ಉದಾಹರಣೆಯಾಗಿ ಕೊಟ್ಟು ಆತ್ಮಶಕ್ತಿಯ ಜೀವಾಳವನ್ನು—ಜೀವಸ್ಥಾನವನ್ನು—ಮುಂದುಮಾಡಿ ತೋರಿಸಿ ಅದರ ಅಭಿವ್ಯಕ್ತಸ್ವರೂಪದ ವೈಭವವನ್ನೂ—ಅದರ ಬೆಳಕು ಹೇಗೆ ಝಗಝಗಿಸುತ್ತಿರುವದೆಂಬುದನ್ನೂ—ಅದರ ದಾರ್ಢ್ಯವು ಎಷ್ಟು ಬಲವತ್ತರವಾದದ್ದೆಂಬುದನ್ನೂ—ಕಣ್ಣಿಗೆ ಕಟ್ಟಿದಂತೆ ಮಾಡಿ ಆತ್ಮಶಕ್ತಿಯ ತೇಜಸ್ಸೆಂದು ಹೆಸರಿಟ್ಟು ಈ ಗ್ರಂಥವನ್ನು ರಚಿಸಿರುತ್ತೇನೆ. ಧರ್ಮನೀತಿಗಳನ್ನು ಪ್ರತಿಪಾದಿಸುವಾಗ ಹಲವೆಡೆಗಳಲ್ಲಿ ಇತರರ ಉಕ್ತಿಗಳನ್ನು ಉದಾಹರಿಸಿರುತ್ತೇನೆ. ಈ ರೀತಿಯಲ್ಲಿ ಅವು ನನಗೆ ನೆರವಾದದ್ದಕ್ಕೆ ಅವುಗಳ ಕರ್ತರನ್ನು ನಾನು ವಂದಿಸುತ್ತೇನೆ.

ಈ ಗ್ರಂಥದ ಹಸ್ತಪ್ರತಿಯನ್ನು ನನ್ನ ಮಿತ್ರರಾದ ಶ್ರೀಯುತ ನಾರಾಯಣಶರ್ಮರು ಪೂರ್ಣವಾಗಿಯೂ ಶ್ರೀಯುತ ಸುರೇಂದ್ರಶಿವರಾವ ದೇಸಾಯಿ, ಎಂ.ಎ.—ಇವರು ಮತ್ತು ಶ್ರೀಯುತ ಗೋಪಾಲರಾವ

ನಾರಾಯಣರಾವ ಅಸುಂಡಿ, ಬಿ.ಎ.—ಇವರು ನಡುನಡುವೆ ಕೆಲವು ಭಾಗಗಳನ್ನೂ ಪ್ರೇಮಪೂರ್ವಕವಾಗಿ ಓದಿನೋಡಿ ಅಲ್ಲಲ್ಲಿಗೆ ಉಪಯುಕ್ತವಾದ ಅನೇಕ ಸೂಚನೆಗಳನ್ನು ಕೊಟ್ಟು ನನಗೆ ನೆರವಾಗಿರುವವನ್ನು ನಾನು ಇಲ್ಲಿ ನೆನೆಯದಿರಲಾರೆನು. ಇನ್ನೂ ಇದರಲ್ಲಿ ಉಳಿದಿರುವ ದೋಷಗಳನ್ನು ಅಭಿಜ್ಞರು ದಯವಿಟ್ಟು ತಿಳಿಸಿದರೆ ಮುಂದಿನ ಮುದ್ರಣದಲ್ಲಿ ಕೃತಜ್ಞತಾಪೂರ್ವಕವಾಗಿ ಅವುಗಳನ್ನು ತಿದ್ದಿಕೊಳ್ಳುತ್ತೇನೆ.

(ಕ್ರಿ ೧೯೨೪) ಗ್ರಂಥಕರ್ತ

## ತಿದ್ದಿದ ಎರಡನೆ ಮುದ್ರಣ ೧೯೩೫

ಜನರ ಸಾಮಾನ್ಯವ್ಯವಹಾರಕ್ಕೆ ಹೆಚ್ಚು ಅಗತ್ಯವಾಗಲಾರದೆಂದು ತೋರಿದ ಕೊನೆಯ ಎರಡು ಪ್ರಕರಣಗಳನ್ನು ಹಿಂದಿನ ಮುದ್ರಣದಲ್ಲಿಯೇ ಉಳಿಸಿ ಅಲ್ಲಲ್ಲಿ ಅಗತ್ಯವಾದ ತಿದ್ದುಪಾಟಗಳನ್ನು ಮಾಡಿ ಇವರ ಬೆಲೆಯನ್ನು ಬಹಳಮಟ್ಟಿಗೆ ಇಳಿಸಿದ್ದೇನೆ.

ಪ್ರಕಾಶಕ

# ವಿಷಯಕ್ರಮ


| ವಿಷಯಗಳು. | ಪುಟ |
|---|---|
| ಮನುಷ್ಯತ್ವದ ಧ್ಯೇಯ | ೧ |
| ಸತ್ಕೀರ್ತಿಯ ಸಾಧನ | ೬ |
| ಆತ್ಮಶಕ್ತಿಯ ಪ್ರಾಶಸ್ತ್ಯ | ೧೧ |
| ಸದ್ವಂಶದ ಅಗತ್ಯ | ೧೮ |
| ಸತ್ಸಂತತಿಯ ಸಾಧನ | ೨೭ |
| ಆತ್ಮಶಕ್ತಿಯ ಸೂಚನೆ | ೩೫ |
| ಶಿಕ್ಷಣ | ೪೧ |
| ಜೀವನೋಪಾಯ | ೫೫ |
| ಮಾತೃಭಕ್ತಿ | ೬೧ |
| ಸ್ವದೇಶಭಕ್ತಿ | ೭೦ |
| ಗೋಭಕ್ತಿ | ೭೯ |
| ಮಾತೃಭಾಷಾಭಕ್ತಿ | ೮೬ |
| ರಾಜಭಕ್ತಿ | ೯೯ |
| ಬ್ರಹ್ಮಚರ್ಯ | ೧೧೦ |
| ಧೈರ್ಯ | ೧೩೫ |
| ಉದ್ಯೋಗ | ೧೪೫ |
| ಆಶ್ರಿತರಕ್ಷಣೆ | ೧೬೬ |
| ನಿಷ್ಪಕ್ಷಪಾತ | ೧೭೪ |

‘ ನಮೋ ಮಹದ್ಭ್ಯಃ ’

# ಆತ್ಮಶಕ್ತಿಯ ತೇಜಸ್ಸು

## ಮನುಷ್ಯತ್ವದ ಧ್ಯೇಯ

---

ಈ ಜಗತ್ತಿನಲ್ಲಿ ನಡೆಯುತ್ತಿರುವ ವ್ಯವಹಾರದ ಕಡೆಗೆ ಕಣ್ಣು ಹಾಕಿ ನೋಡಿದರೆ ಯಾರು ಹೆಚ್ಚಿನವರೆನಿಸಿಕೊಂಡಿರುವರೊ ಅವರ ತಲೆಯ ಮೇಲೆ ಹೆಚ್ಚಿನ ಕಾರ್ಯನಿರ್ವಹಣಭಾರವು ಬಿದ್ದಿರುವದು. ಒಬ್ಬನು ವಿದ್ಯೆಯಲ್ಲಿ ಹೆಚ್ಚಿನವನೆನಿಸಿಕೊಂಡಿದ್ದರೆ ಅವನು ಆ ವಿದ್ಯೆಯನ್ನು ಇತರರಿಗೆ ಕಲಿಸುವ ಅಥವಾ ಆ ವಿದ್ಯೆಯ ಪ್ರಯೋಜನವನ್ನು ಇತರರಿಗೆ ಉಂಟುಮಾಡಿ ಕೊಡುವ ಭಾರವನ್ನು ಹೊತ್ತವನಾಗಿರುವನು. ಒಬ್ಬನು ಐಶ್ವರ್ಯದಲ್ಲಿ ಪ್ರತಿಷ್ಠೆಯನ್ನು ಪಡೆದಿದ್ದರೆ ಅವನು ಅದನ್ನು ಸಂರಕ್ಷಿಸಿಕೊಳ್ಳುವದಕ್ಕೂ ಬೆಳೆಸಿಕೊಳ್ಳುವದಕ್ಕೂ ಅದರ ಸದುಪಯೋಗಮಾಡಿಕೊಳ್ಳುವದಕ್ಕೂ ನಾನಾಮುಖವಾದ ಯೋಚನೆಯನ್ನು ಮಾಡುತ್ತಿರಬೇಕಾಗುವದು. ಒಬ್ಬನು ಶಾರೀರಕಶಕ್ತಿಯನ್ನು ಚೆನ್ನಾಗಿ ಬೆಳೆಸಿಕೊಂಡು ಯೋಧನಾಗಿದ್ದರೆ ಪರದೇಶದವರ ದಾಳಿಯ ಕಾಲಕ್ಕೆ ಅವನ ನೆರವನ್ನು ಬಯಸಿ ಒಂಮ ದೇಶದವರೆಲ್ಲರೂ ಅವನ ಕಡೆಗೆ ದೀನದೃಷ್ಟಿಯನ್ನು ಹಾಕುತ್ತಿರುವರು. ಆದ್ದರಿಂದ ಹೆಚ್ಚಿನ ಯೋಗ್ಯತೆಯವರು ಹೆಚ್ಚಿನ ಕಾರ್ಯಭಾರವನ್ನು ನಿರ್ವಹಿಸಬೇಕಾಗುವದೆಂಬ ಈ ನಿಯಮವನ್ನು ಮನುಷ್ಯನು ತನಗೆ ಅನ್ವಯಿಸಿಕೊಂಡು ತನ್ನ ಯೋಗ್ಯತೆಗೆ ತಕ್ಕಂತೆ ತಾನು ನಿರ್ವಹಿಸಬೇಕಾದ ಕಾರ್ಯಭಾರವೇನೆಂಬುದನ್ನು ಗೊತ್ತುಮಾಡಿಕೊಳ್ಳಬೇಕು. ವಿಚಾರಮಾಡಿ

ದರೆ ಈ ಬ್ರಹ್ಮಾಂಡವಲ್ಲಿ ಬೇರೆ ಯಾವ ಯಾವ ಪ್ರಾಣಿಯೂ ಸಾಧಿಸು ವದಕ್ಕಾಗದಂಥ ಮಹತ್ಕಾರ್ಯವನ್ನು ಸಾಧಿಸಿದ ಹೊರತು ಆ ಮನು ಷ್ಯನು ಮನುಷ್ಯನಾಗುವದಿಲ್ಲ. ಏಕೆಂದರೆ: ಒಂದು ತಕ್ಕಡಿಯ ಒಂದು ಕಡೆಯಲ್ಲಿ ಮನುಷ್ಯನ ಯೋಗ್ಯತೆಯನ್ನಿಟ್ಟು ಇನ್ನೊಂದು ಕಡೆಯಲ್ಲಿ ಉಳಿದ ಎಲ್ಲಾ ಪ್ರಾಣಿಗಳ ಯೋಗ್ಯತೆಯನ್ನೂ ಒಟ್ಟಿದರೂ ಅವು ಮನು ಷ್ಯನ ಯೋಗ್ಯತೆಯ ಜೊತೆಗೆ ತೂಗಲಾರವು. ಶರೀರಸಾಮರ್ಥ್ಯ, ಸೌಂದರ್ಯ ಮತ್ತು ಇಂದ್ರಿಯ ಪಟುತ್ವ-ಮೊದಲಾದ ಕೆಲಕೆಲವು ಯೋಗ್ಯ ತೆಗಳಲ್ಲಿ ಮನುಷ್ಯನನ್ನು ಹುಲ್ಲಿಗಿಂತಲೂ ಕಡಿಮೆಯಾಗಿ ಕಾಣುವ ಇತರ ಪ್ರಾಣಿಗಳುಂಟು. ಆದರೆ ಮನುಷ್ಯನಲ್ಲಿ ಬುದ್ಧಿಶಕ್ತಿಯೆಂಬುದೊಂದು ವಿಶೇಷವನ್ನು ಇರುವದರಿಂದ ಅದರ ಮುಂದ ಇತರ ಪ್ರಾಣಿಗಳ ಯಾವ ಆಟವೂ ನಾಗುವದಿಲ್ಲ. ಆ ಬುದ್ಧಿಶಕ್ತಿಯೆಂಬ ವಜ್ರಾಯುಧದ ಪ್ರಭಾವ ದಿಂದ ಮನುಷ್ಯನು ಪರ್ವತಪ್ರಾಯವಾದ ಪಶುವರ್ಗವನ್ನೆಲ್ಲ ತನ್ನ ಪರಿ ಚರ್ಯೆಗೆ ಉಪಯೋಗಿಸಿಕೊಳ್ಳುತ್ತ ಅಖಂಡಭೂಮಂಡಲಕ್ಕೇ ಶಾಸನ ಕರ್ತನಾಗಿ ವಿರಾಜಿಸುತ್ತಿರುವನು. ಇಂಥ ಸರ್ವೋತ್ಕೃಷ್ಟಸಾಮರ್ಥ್ಯವಿದ್ದ ಮೇಲೆ ಇವನು ಸಾಧಿಸಬೇಕಾದ ಕಾರ್ಯಭಾರವು ಸರ್ವೋತ್ಕೃಷ್ಟವಾಗಿದ್ದೇ ತೀರಬೇಕೆಂದು ಸಿದ್ಧವಾಯಿತು.

ಆ ಸರ್ವೋತ್ಕೃಷ್ಟಕಾರ್ಯವೆಂಬುದು ಯಾವದು? ಪ್ರತಿಯೊಬ್ಬ ಮನುಷ್ಯನೂ ಈ ಯೋಚನೆಯನ್ನು ತಲೆಗೆ ಹಚ್ಚಿಕೊಳ್ಳಬೇಕು. ವಿಚಾರ ಮಾಡಿರಿ. ಹೊಟ್ಟೆಬಟ್ಟೆಗಳ ಸೌಕರ್ಯಗಳನ್ನು ಮಾತ್ರ ಬೆಳೆಸಿಕೊಳ್ಳುವದನ್ನು ಮನುಷ್ಯನಿಗೆ ಅನುರೂಪವಾದದ್ದೆನ್ನಬಹುದೆ? ಆ ಸೌಕರ್ಯಗಳ ಯೋಚನೆ ಯನ್ನೇ ಮನಸ್ಸಿನ ಮೇಲೆ ಹೇರಿಕೊಳ್ಳದೆ ಸ್ವೇಚ್ಛೆಯಿಂದ ಉಂಡುತಿಂದು ನಿರಾಲೋಚನೆಯಿಂದ ನಿದ್ರೆಮಾಡುವ ಪ್ರಾಣಿಗಳ ಸುಖದ ಮುಂದೆ ನಾಳೆಗೇನು ಗತಿಯೆಂಬ ವಿಷದಲಗಿನ ವೇಧೆಯಿಂದ ಕೂಡಿದ ಮನುಷ್ಯನ ಕೃತ್ರಿಮಸೌಕರ್ಯಗಳ ಸುಖವು ಯಾವ ಕೆಲಸಕ್ಕೆ ಬಂದೀತು! ಇನ್ನು ಮನುಷ್ಯನು ಬೇಕುಬೇಕಾದ ವೈಭವಗಳನ್ನು ಅನುಭವಿಸುವದು ಅವನ ಪ್ರತಿಷ್ಠೆಗೊಪ್ಪುವದೆಂದರೆ ಚಕ್ರಾಧೀಶ್ವರರ ಅರಮನೆಗಳನ್ನೂ ವಿರಕ್ತರ ಮಠಗಳನ್ನೂ ಸೇರಿದ ಆನೆಗಳೂ ಕುದುರೆಗಳೂ ಬೇಕುಬೇಕಾದ ವೈಭವ

ಳಗನ್ನು ಅನುಭವಿಸುವವಲ್ಲದೆ ಆ ರಾಜಾಧಿರಾಜರಿಂದಲೂ ವಿರಕ್ತಶಿಖಾಮಣಿಗಳಿಂದಲೂ ಕೂಡ ಪೂಜೆಯನ್ನು ಪಡೆಯುವವಲ್ಲ! ಮನುಷ್ಯನು ಪಶುಗಳಿಂದ ಎಂದಾದರೂ ಪೂಜೆಯನ್ನು ಪಡೆದದ್ದುಂಟೋ? ಎಂದಿಗೂ ಇಲ್ಲ. ಆದ್ದರಿಂದ ವೈಭವವನ್ನು ಅನುಭವಿಸುವದೆಂಬುದರಿಂದ ಮನುಷ್ಯನಿಗೆ ಇತರ ಪ್ರಾಣಿಗಳಿಗಿಂತ ಪ್ರಾಶಸ್ತ್ಯವು ದೊರೆಯುವದಿಲ್ಲ. ಒಂದು ಪಕ್ಷ ಮನುಷ್ಯನು ತನ್ನ ವೈಭವವನ್ನು ಪ್ರವರ್ತನಮಾಡುವದಕ್ಕಾಗಿಯೇ ತನ್ನನ್ನಾಶ್ರಯಿಸಿದ ಪಶುಪ್ರಾಣಿಗಳಿಗೆ ಕೂಡ ವೈಭವದ ಅನುಭವವನ್ನು ತಂದುಕೊಡುವೆನೆಂದು ಹೇಳಿದರೂ ಮನುಷ್ಯನಿಗೆ ಅದರಿಂದ ಗೌರವವೇನೂ ಇಲ್ಲ. ಏಕೆಂದರೆ: ವೈಭವವನ್ನನುಭವಿಸಿದ ಪಶುಪ್ರಾಣಿಗಳೂ ಒಮ್ಮೆ ಸತ್ತು ಹೆಸರಿಲ್ಲದಂತಾಗುವವು; ಮನುಷ್ಯನೂ ಒಂದು ದಿನ ದೀರ್ಘನಿಶ್ವಾಸವನ್ನು ಬಿಟ್ಟು ತನ್ನ ಇರುವಿಕೆಯನ್ನು ಕಳೆದುಕೊಳ್ಳುವನು. ಆದ್ದರಿಂದ ಪಶುವರ್ಗಕ್ಕಿಂತ ಅಧಿಕನೆನಿಸಿಕೊಳ್ಳಬೇಕಾದರೆ ಮನುಷ್ಯನು ತನ್ನ ಇರುವಿಕೆಯನ್ನು ಚಿರಸ್ಥಾಯಿಯಾಗಿ ಮಾಡಿಕೊಳ್ಳಬೇಕು ಅದು ಹೇಗೆ? ತನ್ನ ಸ್ಥೂಲದೇಹದ ಇರುವಿಕೆಯನ್ನು ಚಿರಸ್ಥಾಯಿಯಾಗಿ ಮಾಡುವದು ತನಗೆ ದಕ್ಕುವ ಮಾತಲ್ಲ. ಆ ದೇಹವು ಎಂದಿದ್ದರೂ ಹೋಗತಕ್ಕದ್ದೆ. ಆದರೂ ಆ ದೇಹವಿರುವದರೊಳಗೇ ಮನುಷ್ಯನು ಅದರ ಸಹಾಯದಿಂದ ಒಂದು ಕೀರ್ತಿಶರೀರವನ್ನು ಸಿದ್ಧಗೊಳಿಸುವದು ಮಾತ್ರ ಸಾಧ್ಯವಾಗುತ್ತದೆ. ಹೀಗೆ ಎಷ್ಟೋ ಜನರು ತಮ್ಮ ಸ್ಥೂಲದೇಹವು ಭಸ್ಮೀಭೂತವಾದರೂ ಯಶಶ್ಶರೀರದಿಂದ ಅಜರಾಮರರಾಗಿ ಉಳಿದುಕೊಂಡಿದ್ದಾರೆ. ಶರೀರವೆಂಬ ಶಬ್ದಕ್ಕೆ ನಾಶವಾಗತಕ್ಕದ್ದೆಂಬ ಅರ್ಥವಿದ್ದರೂ ನಮಗೆ ಬರುವ ಸ್ಥೂಲಶರೀರಗಳು ಅನಿತ್ಯಗಳೆಂದು ನಮ್ಮ ಕಣ್ಣಿಗೆ ಕಂಡರೂ ಅನಿತ್ಯವಾದ ಸ್ಥೂಲಶರೀರದಿಂದ ನಿತ್ಯವಾದ ಕೀರ್ತಿಶರೀರವನ್ನು ಸೃಷ್ಟಿಮಾಡುವಂಥ ಅಘಟನಘಟನಾಸಾಮರ್ಥ್ಯವನ್ನು ಯಾವನು ಪ್ರಕಾಶಮಾಡುವನೋ ಅವನೊಬ್ಬನ ಹುಟ್ಟು ಸಾರ್ಥಕವಾಗುವದು. ಸ್ವಸಾಹಸದಿಂದ ಜನರನ್ನು ಬೆರಗುಮಾಡದೆ ಸ್ವಪ್ರತಿಭೆಯಿಂದ ತನ್ನ ವ್ಯಾಪಿತ್ವವನ್ನು ಬೆಳೆಸದೆ ಪ್ರವಾಹದ ಸೆಳೆತಕ್ಕೆ ಸಿಕ್ಕಿ ಹೋಗುವ ಮರದ ತುಂಡಿನಂತೆ ಪರಾಧೀನನಾಗಿ ಹೋಗುವವನಿಗೆ ಮನುಷ್ಯನೆಂಬ ಹೆಸರೇ ಒಪ್ಪುವದಿಲ್ಲ. ಸೆಳೆತಕ್ಕೆ ಸಿಕ್ಕಿ ಹೋಗುವವನು ಮನು

ಷ್ಯನಲ್ಲ. ಆ ಸೆಳೆತದ ಜೊತೆಗೊಂದು ಸುಳಿಯು ತನ್ನನ್ನೆಳೆದರೂ ಕೂಡ ಅದನ್ನು ಎಡಗಾಲಿಂದೊದೆದು ಸುಳಿಯ ಮೇಲೆಯೂ ಸೆಳೆತದ ಮೇಲೆಯೂ ತನ್ನ ಅಧಿಕಾರವನ್ನು ನಡೆಸಬಲ್ಲವನೇ ಮನುಷ್ಯನು. ಸ್ಥೂಲವಾದ ಜಲ ಪ್ರವಾಹದಲ್ಲಿ ಪಶುಗಳು ಕೂಡ ಪ್ರವಾಹದ ವೇಗವನ್ನು ಬದಿಗೊತ್ತುವವು. ಇನ್ನು ಮನುಷ್ಯನು ಅದನ್ನು ಗೆಲ್ಲದಿದ್ದರೇನು ಪ್ರಯೋಜನ? ಆದ್ದರಿಂದ ಪ್ರಪಂಚವ್ಯವಹಾರವೆಂಬ ಸಮುದ್ರದಲ್ಲಿ ಬಹುಜನರ ಪದಹತಿಯಿಂದ ಕ್ಷುಬ್ಧವಾಗಿ ಘೋರ್ಗರೆಯುತ್ತಿರುವ ಮಹಾಮಹಾತರಂಗಗಳ ಉಬ್ಬಟ ಯನ್ನು ವಿವೇಕಪ್ರಧಾನವಾದ ತನ್ನ ಬುದ್ಧಿಶಕ್ತಿಯಿಂದ ಸ್ತಂಭನಮಾಡಿ ಯಾವನು ತನ್ನ ವ್ಯಾಪಾರವನ್ನು ನಿರಾತಂಕವಾಗಿ ಮುಂದುವರಿಸುವನೊ ಅವನೇ ನಿಜವಾದ ಮನುಷ್ಯನು. ಅವನ ಮುಂದೆ ಭೂಮಂಡಲವೇ ತಲೆ ಯನ್ನು ಬಗ್ಗಿಸಿ ತನ್ನ ಸರ್ವಸ್ವವನ್ನೂ ಉಪಾಯನದಾನವಾಗಿ ನೀಡುವದು. ಇಷ್ಟಾದರೆ ಮಾತ್ರ ಅವನು ಅಜರಾಮರನಾಗಿ ಉಳಿಯುವನು. ಈ ಕಾರ್ಯವು ಮನುಷ್ಯನಿಗೊಬ್ಬನಿಗೆ ಸಾಧ್ಯವೇ ಹೊರತು ಉಳಿದ ಪಶುಗಳಿಗಲ್ಲ. ಆದ್ದರಿಂದ ಇದೇ ಮನುಷ್ಯನಿಗನುರೂಪವಾದ ಕಾರ್ಯ ಭಾರವು.

ಹೆಚ್ಚು ಆಳಕ್ಕೆ ಹೋಗಿ ವಿಚಾರಮಾಡಿದರೆ ಮನುಷ್ಯನಿಗೆ ಇದಕ್ಕಿಂ ತಲೂ ಹೆಚ್ಚಿನ ಕಾರ್ಯಭಾರವೂ ಉಂಟು. ಅದೇನೆಂದರೆ: ದೇವತ್ವ ವನ್ನು ಸಂಪಾದನೆಮಾಡುವದು. ಕೀರ್ತಿಶರೀರವೂ ಕಾಲಾನುಕಾಲಕ್ಕೆ ಕರಗಬಹುದು. ಆದರೆ ದೇವತ್ವದ ಸಂಪಾದನೆಯಾದರೆ ಮಾತ್ರ ಅದು ಎಂದೆಂದಿಗೂ ಕರಗುವದಿಲ್ಲ. ದೇವತ್ವವನ್ನು ಸಂಪಾದನೆಮಾಡುವದೇ ಬುದ್ಧಿಗೆ ಅನುರೂಪವಾದ ಕಾರ್ಯ. ಅದಕ್ಕಿಂತ ಹೆಚ್ಚಿನ ಕಾರ್ಯವೇ ಈ ಸೃಷ್ಟಿಯಲ್ಲಿಲ್ಲ. ನಾಟಕದ ಸೂತ್ರಧಾರನ ಪ್ರಸನ್ನತೆಗೆ ಪಾತ್ರನಾಗುವದ ಕ್ಕಿಂತ ನಟನಿಗೆ ಹೆಚ್ಚಿನದೇನಿದೆ? ಬರೀ ಸಭಿಕರು ಮೆಚ್ಚುವದು ಕೂಡ ಮುಖ್ಯವಲ್ಲ. ಏಕೆಂದರೆ ಏನಾದರೊಂದು ಹಾಸ್ಯರಸವನ್ನು ತೋರಿಸಿದ ರೇನೇ ಸಭಿಕರು ಮೆಚ್ಚಿಬಿಡಬಹುದು. ಅವರಿಗೆ ನಾಟ್ಯಶಾಸ್ತ್ರದ ಕುಸುರು ಗಳು ತಿಳಿದಿರುವದಿಲ್ಲ. ಆ ಮರ್ಮಗಳೆಲ್ಲಾ ಸೂತ್ರಧಾರನಿಗೆ 'ಚೆನ್ನಾಗಿ ಗೊತ್ತು. ಆದ್ದರಿಂದ ಸೂತ್ರಧಾರನು ಒಣಹಾಸ್ಯಕ್ಕೆ ತಲೇಹಾಕುವದಿಲ್ಲ.

ನಿಜವಾದ ಪ್ರಾವೀಣ್ಯತೆಯನ್ನು ತೋರಿಸಿದಾಗಲೇ ಅವನ ಮುಖವು ಪ್ರಸನ್ನವಾಗುವದು. ಮತ್ತು ಅವನು ತನ್ನ ನಿಯಾಮಕನಾದ್ದರಿಂದ ನಟನಿಗೆ ಸಭಿಕರ ಮೆಚ್ಚಿಗೆಗಿಂತಲೂ ಸೂತ್ರಧಾರನ ಮೆಚ್ಚಿಗೆಗೆ ಬೆಲೆ ಹೆಚ್ಚು. ಹೇಗೆಂದರೆ: ಸಭಿಕರು ತಮ್ಮ ಮೆಚ್ಚಿಗೆಯನ್ನು ಬರಿೀ ಕರತಾಡನದಿಂದ ತೋರಿಸುವರು. ಸೂತ್ರಧಾರನು ಅವನ ಸಂಬಳವನ್ನು ಹೆಚ್ಚಿಸುವನು. ಈಗ ನಾವು ಇದರಿಂದ ತಿಳಿದುಕೊಳ್ಳಬೇಕಾದುದೇನೆಂದರೆ ಜಗತ್ತೆಂಬುದು ಒಂದು ನಾಟಕಶಾಲೆ; ಇದಕ್ಕೆ ಪರಮೇಶ್ವರನು ಸೂತ್ರಧಾರನು, ಮನುಷ್ಯರೆಲ್ಲರೂ ಒಂದೊಂದು ಪಾತ್ರಗಳು; ಜೀವತೆಗಳೆಲ್ಲರೂ ಸಭಿಕರು. ಈ ಜಗತ್ತಿನ ವ್ಯವಹಾರದಲ್ಲಿ ನಾವು ಕೀರ್ತಿಶರೀರವನ್ನು ಸಂಪಾದಿಸುವದು ಸಭಿಕರನ್ನು ಆನಂದಗೊಳಿಸಿದಂತೆ; ಈಶ್ವರನನ್ನು ಒಲಿಸಿಕೊಳ್ಳುವದು ಸೂತ್ರಧಾರನನ್ನು ಪ್ರಸನ್ನನಾಗಿ ಮಾಡಿಕೊಂಡಂತೆ. ಆದ್ದರಿಂದ ಈಶ್ವರಪ್ರೀತ್ಯರ್ಥವಾದಂಥ ಧ್ಯಾನಾದಿಗಳನ್ನು ಮಾಡುವದೇ ಮನುಷ್ಯನಿಗನುರೂಪವಾದರೂ ಅದು ಒಮ್ಮೆಗೇ ಕೈಗೂಡುವಂಥದ್ದಲ್ಲ; ಕಾಲಕ್ರಮವಾಗಿ ಸಾಧಿಸುವಂಥದ್ದು. ನಾವು ಕೀರ್ತಿಶರೀರವನ್ನು ಪಡೆಯುವದೆಂಬುದು ಈಶ್ವರಪ್ರೀತಿಯ ದಾರಿಯನ್ನೇನೂ ಬಿಟ್ಟದ್ದಲ್ಲ. ಸಭಿಕರ ಮೆಚ್ಚಿಗೆಯೂ ಸೂತ್ರಧಾರನಿಗೆ ಇಷ್ಟವೆ. ಇಷ್ಟೇ ಅಲ್ಲ. ಈ ಕೀರ್ತಿಶರೀರವೇ ಈಶ್ವರಪ್ರಸನ್ನತೆಯನ್ನೂ ಒಲಿಸಿಕೊಡುವದು. ನಮ್ಮ ಸ್ಥೂಲದೇಹವು ಕೀರ್ತಿಶರೀರಸ್ಥಾಪನೆಗೆ ಹೇಗೆ ಸಹಕಾರಿಯಾಯಿತೂ ಕೀರ್ತಿಶರೀರವು ಪರಮಾತ್ಮಪ್ರಸನ್ನತೆಗೆ ಹಾಗೆಯೇ ಸಹಕಾರಿಯಾಗುವದು. ಕೀರ್ತಿಶರೀರದಲ್ಲಿ ಮತ್ತೊಂದು ವಿಶೇಷವುಂಟು. ಅದೇನೆಂದರೆ. ಕೀರ್ತಿಶರೀರವನ್ನು ಉತ್ಪನ್ನ ಮಾಡಿದ ಮೇಲೆ ಸ್ಥೂಲಶರೀರವು ನಾಶವಾದಂತೆ ಈಶ್ವರಪ್ರಸನ್ನತೆಯನ್ನು ಉಂಟುಮಾಡಿದ ಮೇಲೆ ಕೀರ್ತಿಶರೀರವು ನಾಶವಾಗುವದಿಲ್ಲ. ಅದು ತಾನೂ ಇದ್ದು ಈಶ್ವರಪ್ರಸನ್ನತೆಯನ್ನೂ ತಂದುಕೊಡುವದು. ಈ ರೀತಿಯಲ್ಲಿ ಕೀರ್ತಿಶರೀರರಚನೆಯು ಈಶ್ವರಪ್ರಸನ್ನತೆಗೆ ಸಾಧನವಾದ್ದರಿಂದ ಸರ್ವವಿಧದಿಂದಲೂ ಸತ್ಕೀರ್ತಿವಂತನಾಗಿ ಚಿರಂಜೀವಿಯಾಗುವದು ಪ್ರತಿಯೊಬ್ಬನ ಧ್ಯೇಯವಾಗಿರಬೇಕು. ಪ್ರಾಪಂಚಿಕವಾದ ಸತ್ಕೀರ್ತಿಯು ಪರಮೇಶ್ವರನ ಪ್ರಸನ್ನತೆಯನ್ನು ಹೇಗೆ ತಂದು ಕೊಟ್ಟೀತೆಂದು

ಸಂಶಯಪಡಬೇಕಾದದ್ದಿಲ್ಲ. ಕೀರ್ತಿಯೆಂಬುದೇನು? ಬಹುಜನರ ಹಿತವನ್ನು ಮಾಡಿ ಅವರ ಆದರಕ್ಕೆ ಪಾತ್ರವಾಗೋಣ. ಜನತೆಯೇ ಜನಾರ್ದನನೆಂದು ನಾಣ್ಣುಡಿಯಿರುವದರಿಂದ ಬಹುಜನರ ಆದರಕ್ಕೆ ಪಾತ್ರವಾಗೋಣವೂ ಈಶ್ವರನ ಅನುಗ್ರಹಕ್ಕೆ ಪಾತ್ರವಾಗೋಣವೂ ಒಂದೇ ಎಂದು ಸಿದ್ಧವಾಯಿತು. ಈ ಕೀರ್ತಿಶರೀರವನ್ನು ಪಡೆದ ಬಾಳೇ ಬಾಳು.

ಕಂ|| ಲೋಕಜ್ಞರಾಗಿ ಪರಹಿತ ।
ಮೇ ಕಾರಣಮೆನುತ ತಿಳಿದು ಮಾಡುವ ಪುಣ್ಯ ||
ಶ್ಲೋಕರೆ ಸಜೀವರುಳಿದ ವ ।
ರಾಕರ್ ಬದುಕಿರ್ದೊಡೇನೊ! ಸುಯ್ವ ಪೆಣಂಗಳ್ ||
—ನೀತಿಮಂಜರಿ.

ಆದಕಾರಣ ಚಿರಂಜೀವಿತ್ವವನ್ನು ತಂದುಕೊಡುವ ಸತ್ಕೀರ್ತಿಯನ್ನು ಸಂಪಾದಿಸುವದೇ ಮನುಷ್ಯತ್ವದ ಮುಖ್ಯಧ್ಯೇಯವು.

——o——

# ಸತ್ಕೀರ್ತಿಯ ಸಾಧನ

ಆ ಸತ್ಕೀರ್ತಿಯನ್ನು ಸಂಪಾದಿಸುವದು ಹೇಗೆ? ಲೋಕದಲ್ಲಿ ಸಾಮಾನ್ಯವಾಗಿ ಕೀರ್ತಿವಂತರಾಗಿರುವವರ ಪೂರ್ವೋತ್ತರಗಳನ್ನು ನೋಡಿದರೆ ಪ್ರಬಲರಾದ ವಿದ್ವಾಂಸರಾದವರು ದುರ್ಬಲರಾದ ವಿದ್ವಾಂಸರ ಬಾಯಿ ಕಟ್ಟುವದರಿಂದಲೂ ಸಾಮಾನ್ಯಧನಿಕರಾಗಿದ್ದವರು ಸ್ವಲ್ಪಕಾಲದಲ್ಲಿಯೇ ತಮ್ಮ ಮೂಲಧನವನ್ನು ಶತಗುಣವಾಗಿಯೋ ಸಹಸ್ರಗುಣವಾಗಿಯೋ ಮಾಡುವದರಿಂದಲೂ ಬಾಹುಬಲವುಳ್ಳವರು ಕಾಲುಕೆರೆದು ಇತರರ ಮೇಲೆ

ಕೈಮಾಡುವವರಿಂದಲೂ ತಮ್ಮ ಹೆಸರುಗಳನ್ನು ಶಿಲಾಲಿಪಿಗಳಲ್ಲಿ ಮೂಡಿಸಿಕೊಂಡವರೇ ಬಹುಮಟ್ಟಿಗೆ ಇರುವರು. ಅಥವಾ ಇನ್ನೂ ಗುಣೈಕಪಕ್ಷಪಾತದ ದೃಷ್ಟಿಯನ್ನು ಹಾಕಿದರೆ ವಿದ್ವಾಂಸರಾದವರು ಅನೇಕಶಿಷ್ಯರನ್ನು ವಿದ್ವಾಂಸರನ್ನಾಗಿ ಮಾಡುವವರ ಮೂಲಕವೂ ಧನಿಕರು ಅನ್ನದಾನ, ಗೋದಾನ, ಭೂದಾನ, ಕನ್ಯಾದಾನ—ಇವುಗಳನ್ನು ಮಾಡುವವರ ಮೂಲಕವೂ ಬಾಹುಬಲಶಾಲಿಗಳು ರಣರಂಗದಲ್ಲಿ ರಕ್ತವನ್ನು ಬಸಿಯುವವರೆಗೂ ಕಾದುವವರ ಮೂಲಕವೂ ತಮ್ಮ ಯಶೋದುಂದುಭಿಗಳನ್ನು ಮೊಳಗಿಸಿರುವವರುಂಟು. ಇವರೆಲ್ಲರೂ ಕೀರ್ತಿವಂತರೇ ನಿಜ. ಆದರೆ ಈ ಕೀರ್ತಿಶರೀರಗಳನ್ನು ಮೂರದೃಷ್ಟಿಯೆಂಬ ದೂರದರ್ಶಕಯಂತ್ರದ ಸಹಾಯದಿಂದ ನೋಡಿದರೆ ಇವುಗಳಲ್ಲಿ ಕೀರ್ತಿಕಾಮನೆಯ ಅಥವಾ ಪುಣ್ಯದ ಕಾಮನೆಯ ಕಲೆಯು ಅಲ್ಲಲ್ಲಿ ಕಣ್ಣಿಗೆ ಬೀಳುವದು. ಕಾವ್ಯಗಳಲ್ಲಿ ಕವಿಗಳು ಕೀರ್ತಿಯನ್ನು ಬೆಳದಿಂಗಳಿಗೆ ಹೋಲಿಸಿರುವದು ಈ ಕೀರ್ತಿಗಳಿಗೆ ಚೆನ್ನಾಗಿ ಒಪ್ಪುವದು. ಏಕೆಂದರೆ: ಬೆಳದಿಂಗಳು ಎಷ್ಟೇ ಬೆಳ್ಳಗಿದ್ದರೂ ಚಂದ್ರನ ನಡುವೆ ಇರುವ ಕಲಂಕದ ಕಪ್ಪಿನಿಂದ ಕೂಡಿಯೇ ಇರುವದು. ಈ ಕೀರ್ತಿಗಳೂ ಹಾಗೆಯೇ ಒಂದು ಬಗೆಯ ಇಚ್ಛಾವಿಶೇಷದ ಕಲೆಯಿಂದ ಕೂಡಿರುವವು.

ಕಲಂಕರಹಿತವಾದ ಸತ್ಕೀರ್ತಿಯ ವಿಷಯವನ್ನು ತಿಳಿದುಕೊಳ್ಳುವದಕ್ಕೆ ಮುಂಚೆ ಕೀರ್ತಿಯೆಂದರೇನೆಂಬುವನ್ನು ತಿಳಿದುಕೊಳ್ಳುವದು ಅಗತ್ಯವಾಗಿದೆ. ಬರೀ ವಿದ್ಯಾವಂತನಾದ ಮಾತ್ರಕ್ಕೇ ಬರೀ ಧನವಂತನಾದ ಮಾತ್ರಕ್ಕೇ ಬರೀ ಬಾಹುಬಲವುಳ್ಳವನಾದ ಮಾತ್ರಕ್ಕೆ ಯಾವನೂ ಕೀರ್ತಿವಂತನೆನಿಸಿಕೊಳ್ಳುವದಿಲ್ಲ. ವಿದ್ಯೆಯಿಂದ, ಧನದಿಂದ ಅಥವಾ ಬಾಹುಬಲದಿಂದ ತಮ್ಮ ಹೊಟ್ಟೆಯನ್ನು ತಾವು ಹೊರೆದುಕೊಳ್ಳುವವರನ್ನು ಲೋಕದಲ್ಲಿ ಯಾರೂ ಗೌರವಿಸುವದಿಲ್ಲ. ಏಕೆಂದರೆ: ವಿದ್ಯೆ, ಧನ—ಮೊದಲಾದವುಗಳೇನೂ ಇಲ್ಲದ ನಾಯಿನರಿಗಳೂ ಕಾಕಘೂಕಗಳೂ-ಮೊದಲಾದವುಗಳಿಗಿಂತ ಅವರದೇನು ಹೆಚ್ಚುಗಾರಿಕೆ? ತಮ್ಮ ಹೆಸರು ಅಳಿಸಿಹೋಗದಂಥ ಗಟ್ಟಿಬಣ್ಣ ಬರಬೇಕಾದರೆ ಮನುಷ್ಯನು ತನ್ನ ಹೊಟ್ಟೆಬಟ್ಟೆಗಳ ಯೋಚನೆಯೆಂಬ ಮೆಟ್ಟಿಲನ್ನು ದಾಟಿ ಮೇಲಕ್ಕೇರಬೇಕು. ಹೊಟ್ಟೆಬಟ್ಟೆಯ ಜೀವ

ನಕ್ಕಾಗಿ ಹೆಣಗುವದು, ಎಂದರೆ ವಿದ್ಯೆಯನ್ನಾಗಲಿ ಧನವನ್ನಾಗಲಿ ಬಲವನ್ನಾಗಲಿ ಬರೀ ದೇಹೇಂದ್ರಿಯಾದಿಗಳ ಪೋಷಣೆಗೆ ಉಪಯೋಗ ಮಾಡಿಕೊಳ್ಳುವದು ಬಿತ್ತನೆಯ ಬೀಜಗಳನ್ನು ಮರುಭೂಮಿಯಲ್ಲಿ ಚೆಲ್ಲಿ ದಂತೆಯೇ ಸರಿ. ಒಂದಕ್ಕೆ ನೂರರಷ್ಟಾಗುವ ಯೋಗ್ಯತೆಯುಳ್ಳ ಆ ವಿದ್ಯೆ, ಧನ ಮತ್ತು ಬಾಹುಬಲ-ಇವುಗಳಿಂದ ತನ್ನ ಸಂಪತ್ತನ್ನು ಬೆಳೆಸಿಕೊಳ್ಳ ಬೇಕೆಂಬ ಮನುಷ್ಯರು ದೇಹೇಂದ್ರಿಯಾಭಿಮಾನವೆಂಬ ಮರುಭೂಮಿ ಯನ್ನು ದಾಟಿ ಪರಹಿತವೆಂಬ ಹುಲಸಾದ ಭೂಮಿಯಲ್ಲಿ ಆ ಬೀಜ ಗಳನ್ನು ಬಿತ್ತಬೇಕು. ಮರುಭೂಮಿಯನ್ನು ದಾಟುವದೆಂಬುದು ಹೇಳು ವವರಿಗೆ ಸುಲಭವಾದಷ್ಟು ಮಾಡುವವರಿಗೆ ಸುಲಭವಲ್ಲ. ಮರು ಭೂಮಿಯು ಯಾವಾಗಲೂ ವಿಸ್ತಾರವಾಗಿದ್ದು ಅದನ್ನು ದಾಟುವ ಕಾರ್ಯವು ಆಯಾಸಕರವಾಗಿರುವದು. ಹಾಗೆಯೇ ಮನುಷ್ಯನಿಗೆ ದೇಹೇಂದ್ರಿಯಾದಿಗಳ ಅಭಿಮಾನವು ಬಲವತ್ತರವಾಗಿದ್ದು ಅದನ್ನು ಹಿಂದಕ್ಕೆ ಹಾಕುವದು ಬಹು ಕಠಿನವಾಗಿರುವದು. ನನ್ನ ದೇಹ, ನನ್ನ ಇಂದ್ರಿಯ, ಎಂಬ ಮಾತುಗಳಿಂದ ತಾನು ದೇಹೇಂದ್ರಿಯಾದಿಗಳಿ ಗಿಂತ ಭಿನ್ನನೆಂದು ತಿಳಿದಿದ್ದರೂ, ಮತ್ತು ದೇಹೇಂದ್ರಿಯಾದಿಗಳು ಎಂದಿ ದ್ದರೂ ಒಂದು ದಿನ ಮಣ್ಣುಗೂಡಿ ಹೋಗತಕ್ಕವುಗಳೆಂದು ಎಲ್ಲರಿಗೂ ಕಣ್ಣಿಗೆ ಕಟ್ಟಿದಂತೆ ಇದ್ದರೂ, ಅದೇನು ಕಾರಣವೋ, ಮನುಷ್ಯನಿಗೆ ಅವು ಗಳ ಮೇಲಿನ ಅಭಿಮಾನದ ಹುಚ್ಚು ಇಳಿಯುವದಿಲ್ಲ. ಮರುಭೂಮಿಯಲ್ಲಿ ಚೆಲ್ಲಿ ಬಿತ್ತನೆಯ ಬೀಜಗಳನ್ನು ಹಾಳುಮಾಡಿಕೊಳ್ಳಬಾರದೆಂದು ಆಯಾ ಸಪಟ್ಟಾದರೂ ಅದರ ಎಲ್ಲೆಯನ್ನು ದಾಟಿ ಬಂದು, ವಿವೇಕಿಯು ಅವುಗ ಳನ್ನು ಹುಲಸಾದ ಭೂಮಿಯಲ್ಲಿ ಬಿತ್ತಿ ಫಲಸಮೃದ್ಧಿಯನ್ನು ಪಡೆಯು ವಂತೆ ದೇಹೇಂದ್ರಿಯಾದಿಗಳ ಉಪಕರಣವಾಗಿ ಮಾಡಿಕೊಳ್ಳುವದರ ಮೂಲಕ ವಿದ್ಯಾ, ಧನ, ಬಲ—ಮೊದಲಾದವುಗಳನ್ನು ವ್ಯರ್ಥಮಾಡಿಕೊಳ್ಳ ಬಾರದೆಂದು ಮನುಷ್ಯನು ಪ್ರಯತ್ನಪೂರ್ವಕವಾಗಿ ಅವುಗಳ ಮೆಟ್ಟಿಲನ್ನು ದಾಟಿ, ಅವುಗಳನ್ನು ಪರಹಿತಕ್ಕೆ ವಿನಿಯೋಗಿಸಬೇಕು. ಹುಲಸಾದ ಭೂಮಿ ಯಲ್ಲಿ ಬಿತ್ತಿದ ಬೀಜವು ಕೋಮಲವಾಗಿ ಬೆಳೆದು ಅನಂತಫಲವನ್ನು ಕೊಡು ವಂತೆ ಪರಹಿತಕ್ಕೆ ವಿನಿಯೋಗಿಸಿದ ವಿದ್ಯೆ, ಧನ, ಬಾಹುಬಲ—ಮೊದಲಾದ

ವುಗಳು ಚಿರಂಜೀವಿಯಾದ ಕೀರ್ತಿಶರೀರವನ್ನು ತಂದುಕೊಡುವವು. ವಿದ್ಯೆ, ಧನ-ಮೊದಲಾದವುಗಳನ್ನು ಪರಹಿತಕ್ಕೆ ವಿನಿಯೋಗಿಸುವಾಗ ಮನುಷ್ಯನು ದೇಹೇಂದ್ರಿಯಾದಿಗಳ ಅಭಿಮಾನವನ್ನು ತೊರೆದಿದ್ದರೂ ಅವನ ಮನಸ್ಸು ಪುಣ್ಯದ ಮೇಲೆ ಅಥವಾ ಯಶಸ್ಸಿನ ಮೇಲೆ ಇರುವ ಸಂಭವವುಂಟು. ಈ ಸತ್ಕಾಮನೆಯು ದೇಹೇಂದ್ರಿಯಾದಿಗಳ ಮೇಲಿನ ಅಭಿಮಾನದಂಥ ನಿಂದ್ಯವಾದದ್ದಲ್ಲ. ಚಂದ್ರಬಿಂಬದಲ್ಲಿ ಕಲೆ ಇದ್ದರೂ ಬೆಳದಿಂಗಳು ಹೇಗೆ ಬೆಳ್ಳಗೆ ತಣ್ಣಗೆ ಹಾಯಾಗಿರುವದೋ, ಅದರಂತೆ ಈ ಸತ್ಕಾಮನೆಯಿಂದ ಹೊರಬಿದ್ದ ಕೀರ್ತಿಯು ಜನರ ಮೆಚ್ಚಿಕೆಗೆ ಪಾತ್ರವಾಗಿರುವದು. ಜನರ ಆದರಕ್ಕೆ ಪಾತ್ರವಾಗೋಣವೇ ಕೀರ್ತಿ.

ಇದು ಕೀರ್ತಿಯ ಸಾಮಾನ್ಯವಾದ ಅರ್ಥವಿವರಣೆಯಾಯಿತು. ಕೀರ್ತಿಯ ಇನ್ನೊಂದು ಸ್ಥಿತಿಯುಂಟು. ಅದರಲ್ಲಿ ಕಲಂಕದ ಲೇಶವೂ ಇರುವದಿಲ್ಲ; ಎಂದರೆ ಕೀರ್ತಿಯ ಅಥವಾ ಪುಣ್ಯದ ಯಾವ ಕಾಮನೆಯೂ ಅದರಲ್ಲಿರುವದಿಲ್ಲ. ತಾನು ಮಾಡುವ ಪರಹಿತವು ಕರ್ತವ್ಯಬುದ್ಧಿಯಿಂದ ಸಾಗುತ್ತಿರುವದು. ಈ ಸ್ಥಿತಿಯನ್ನೇರಿದ ಮನುಷ್ಯನಿಗೆ ಪರಹಿತವೆಂಬುದು ಹುಟ್ಟುಗುಣವಾಗಿರುವದು. ಅವನು ಪರಹಿತವನ್ನು ಮಾಡದೆ ಇರುವದಕ್ಕೇ ಆಗುವದಿಲ್ಲ. ಪರಹಿತವೇ ಅವನ ಜೀವನ. ಅವನು ಮಾಡುವ ಕಾರ್ಯಗಳೆಲ್ಲ ಅವನಿಗರಿವಿಲ್ಲದೆ ಪರಹಿತಕರಗಳಾಗಿಯೇ ಇರುವವು. ಸಕಾಮರ ಪರಹಿತವು ಸಾಗುವದರಲ್ಲಿಯೂ ನಿಷ್ಕಾಮರ ಪರಹಿತವು ಮುಂದುವರಿಯುವದರಲ್ಲಿಯೂ ಒಂದು ವಿಶೇಷವು ಕಾಣಬರುವದು. ಅದೇನೆಂದರೆ: ಸಕಾಮರ ಪ್ರಯತ್ನವು ಪ್ರಬಲವಾದ ಪ್ರತಿಬಂಧಕಗಳೇನೂ ಬಾರದೆ ಇರುವಾಗ ಒಳ್ಳೇ ವೇಗದಿಂದ ಸಾಗುತ್ತಿರುವದು. ದುರ್ದೈವದಿಂದ ಏನಾದರೊಂದು ಅಡ್ಡಿ ಬಂದರೆ ಸರ್ವಸಾಹಸದಿಂದಲೂ ಅದನ್ನು ನೆಲಕ್ಕೊತ್ತಿ ತಮ್ಮ ಕೃತಿಯನ್ನು ಮುಂದುಮಾಡುವ ಎದೆಯ ಕೆಚ್ಚು ಸಕಾಮರಿಗೆ ಇರುವ ಸಂಭವ ಕಡಿಮೆ. ಏಕೆಂದರೆ: ಅವರ ಎದೆಯಲ್ಲಿ ಒಂದು ಕಾಮನೆಗೆ ಇಂಬು ಕೊಡುವಂಥ ಪೊಳ್ಳಿರುತ್ತದೆ. ಅವರ ಸಾಹಸಪ್ರದರ್ಶನವು ಆ ಇಚ್ಛಾವೇಗದ ಆವೇಶದಿಂದ ಮುಂದೆ ಹಾಯುವದೇ ಹೊರತು ಮನಸ್ಸಿನ ಕರ್ತವ್ಯತಾಬುದ್ಧಿಯ ಭರದಿಂದ ಅಲ್ಲ. ಆದ್ದರಿಂದ ಸಕಾಮರ ಪ್ರಯತ್ನಗಳು ಅಂಥ

ಸಂದರ್ಭಗಳಲ್ಲಿ ಕುಂಟುವ ಕತ್ತೆಗಳಂತೆ ಮುಂದಡಿಯಿಡುವವು; ಅಥವಾ ಅಲ್ಲಿಯೇ ಪ್ರಾಯೋಪವೇಶವ್ರತವನ್ನು ಹಿಡಿಯುವವು. ಸಕಾಮರ ಕಾರ್ಯ ಸಾಧನೆಯಲ್ಲಿ ಮತ್ತೊಂದು ವಿಶೇಷವೇನೆಂದರೆ: ಅವರ ಪ್ರಯತ್ನಸಿದ್ಧಿಯ ಶ್ಲಾಘನೆಯೆಲ್ಲಾ ಅವರ ಹೊರಗಣ ಉಪಕರಣಗಳಿಗೆ ಸಲ್ಲುವದು. ಏಕೆಂದರೆ: ಆ ಉಪಕರಣಗಳಿಲ್ಲದೆ ತಮ್ಮನ್ನು ತಾವು ಮುಂದಕ್ಕೆ ತಂದುಕೊಳ್ಳುವದಕ್ಕೆ ಅವರಿಗೆ ತಿಳಿಯದು. ತಾನು ಚೇತನನಾಗಿದ್ದರೂ ಮತ್ತು ಪ್ರಾಣಿವರ್ಗಕ್ಕೆಲ್ಲ ಶಾಸನಕರ್ತನಾದ ಮನುಷ್ಯನೆಂಬ ಹೆಮ್ಮೆಯನ್ನು ಹೊಂದಿದ್ದರೂ ಅಚೇತನವಾದ ಆ ಹೊರಗಣ ಉಪಕರಣಗಳ ಸಹಾಯದಿಂದ ತನ್ನ ಬೆಲೆಯನ್ನು ಕಟ್ಟಿಸಿಕೊಳ್ಳುವದು ಮನುಷ್ಯನಿಗೆ ಗೌರವದ ಮಾತಲ್ಲ. ಅದು ಎಣ್ಣೆಯ ಮತ್ತು ಬತ್ತಿಯ ಸಹಾಯದಿಂದ ಹೆಣ್ಣುಹತ್ತ ಮನೆಯಲ್ಲಿ ಮಿಣಗುಟ್ಟುವ ದೀಪದಂತೆ. ನಿಷ್ಕಾಮರ ಕಾರ್ಯ ಸಾಧನೆಯಲ್ಲಿ ವಿದ್ಯೆ, ಐಶ್ವರ್ಯ, ಬಾಹುಬಲ-ಮೊದಲಾದವುಗಳು ಇರುವದೇ ಇಲ್ಲವೆಂಬ ನಿಯಮವಿಲ್ಲ. ಅವು ಇದ್ದರೂ ಇರಬಹುದು; ಇಲ್ಲದಿದ್ದರೂ ಇರಬಹುದು. ಅವರಿಗೊಂದುಪಕರಣವೆಂದೆಣಿಸಬೇಕೆಂದರೆ ಅವರ ಮನಸ್ಸೊಂದೆ. ಅವರು ಜನರ ಕಣ್ಣಿಗೂ ಮನಸ್ಸಿಗೂ ಹಬ್ಬವಾಗುವಂಥ ಪ್ರತಿಭೆಯನ್ನು ತೋರುವದು ಮನಸ್ಸಿನ ಸಾಮರ್ಥ್ಯದಿಂದಲೇ ಹೊರತು ಹೊರಗಣ ಉಪಕರಣಗಳ ಉಪಯೋಗದಿಂದಲ್ಲ. ಇವರ ಪ್ರಭಾವವು ಎಣ್ಣೆಬತ್ತಿಗಳಿಲ್ಲದೆ ತಾನೇ ಬೆಳಕಿನ ಮುದ್ದೆಯಾಗಿ ಬೆಳಗುತ್ತಿರುವ ಸೂರ್ಯನಂತೆ ಸ್ವಪ್ರಕಾಶಪ್ರಸಾರಕವಾಗಿರುವದು. ಈ ರೀತಿಯಲ್ಲಿ ಸ್ವಸಾಮರ್ಥ್ಯದಿಂದ ಎಂದರೆ ಆತ್ಮಶಕ್ತಿಯ ಪ್ರದರ್ಶನದಿಂದ ಪಡೆಯುವ ಯಶಸ್ಸೇ ಸತ್ಕೀರ್ತಿ. ಆತ್ಮಶಕ್ತಿಯೇ ಸತ್ಕೀರ್ತಿಯ ನಿಜವಾದ ಸಾಧನ.

# ಆತ್ಮಶಕ್ತಿಯ ಪ್ರಾಶಸ್ತ್ಯ

ಈ ಸೃಷ್ಟಿಯಲ್ಲಿ ಮನುಷ್ಯನು ಹೊರಗಣ ಎಲ್ಲ ವಸ್ತುಗಳ ಮೇಲೆಯೂ ತನ್ನ ಅಧಿಕಾರವನ್ನು ನಡೆಸಬಲ್ಲನು. ನೋಡಿರಿ! ತಾನು ಕನಸಿನಲ್ಲಿ ಕಂಡರೆ ಹೆದರಿ ಗಡಗುಟ್ಟಿ ನಡುಗಿ ಹೇಡಿಯಾಗಿ ಅಪಸ್ವರದಿಂದ ಆರ್ತಧ್ವನಿಯನ್ನು ಮಾಡುವಂಥ ಸಿಂಹ, ಹುಲಿ-ಮೊದಲಾದ ಮಹಾಬಲಶಾಲಿಗಳಾದ ದುಷ್ಟಮೃಗಗಳನ್ನು ತನ್ನ ಕ್ರೀಡಾಮೃಗವಾಗಿ ಮಾಡಿಕೊಂಡಿರುವದನ್ನು ನಾವು ಸರ್ಕಸ್ ಆಟದಲ್ಲಿ ನೋಡುತ್ತೇವೆ. ಬರೀ ಪ್ರಾಣಿವರ್ಗದ ಮೇಲಿಷ್ಟೇ ಏಕೆ? ಮನುಷ್ಯನ ದರ್ಪವು ಪಂಚಭೂತಗಳನ್ನು ಕೂಡ ತಲೆ ಬಗ್ಗಿಸುವಂತೆ ಮಾಡಿರುವದು. ಜಲಪ್ರವಾಹವು ತನ್ನ ಸಾಹಸದಿಂದ ಮನುಷ್ಯನಿಗಾಗಿ ವಿದ್ಯುಚ್ಛಕ್ತಿಯನ್ನು ಕೂಡಿಹಾಕಿ ಕೊಡಬೇಕು. ಆ ವಿದ್ಯುಚ್ಛಕ್ತಿಯು ಮನುಷ್ಯನ ಓಲಿಕಾರನಾಗಿ ಇಲ್ಲಿಂದಲ್ಲಿಗೆ ವರ್ತಮಾನಗಳನ್ನೊಯ್ಯಬೇಕು. ಗಾಳಿಯು ತನ್ನ ವೇಗದಿಂದ ಯಂತ್ರಗಳನ್ನು ತಿರುಗಿಸಿ ಮನುಷ್ಯನ ಕೈಂಕರ್ಯವನ್ನು ಮಾಡಬೇಕು. ಮನುಷ್ಯನು ಶಾಸನಮಾಡಿದರೆ ಒಮ್ಮೊಮ್ಮೆ ಸೂರ್ಯನು ಕೂಡ ತನ್ನ ಪ್ರಖರತ್ವವನ್ನು ಮುದುರಿಟ್ಟುಕೊಳ್ಳಬೇಕಾದೀತು. ಹೀಗೆ ಮನುಷ್ಯನ ನಿಯಾಮಕತ್ವವು ಸಂಕೋಲೆಯನ್ನು ಕಿತ್ತೊಗೆದ ಮದ್ದಾನೆಯಂತೆ ಎಲ್ಲೆಲ್ಲಿಯೂ ನಿರಾತಂಕವಾಗಿ ಮುಂದುವರಿಯುವದು. ಆದರೆ ಅದರ ಕ್ರೈಪೆಯು ಒಂದು ಕಡೆ ಮಾತ್ರ ಸಾಗುವದಿಲ್ಲ. ಅದಾವುದೆಂದರೆ ಮನಸ್ಸು. ಹೊರಗಣ ಸರ್ವಸೃಷ್ಟಿಯನ್ನೂ ಸಂಜ್ಞಾಮಾತ್ರದಿಂದ ಕೂಡ ಬಗ್ಗಿಸಬಹುದು. ಮನಸ್ಸಿನ ಮೇಲೆ ನಮ್ಮ ನಿಯಮನವನ್ನು ನಡೆಸುವದೆಂದರೆ ಬಹು ಸಾಹಸದ ಮಾತು. ಈ ಬ್ರಹ್ಮಾಂಡದಲ್ಲಿ ಬಾಹ್ಯಸೃಷ್ಟಿಯನ್ನೆಲ್ಲ ತಮ್ಮ ವಶವರ್ತಿಯಾಗಿ ಮಾಡಿಕೊಂಡವರೆಷ್ಟೋ ಜನರುಂಟು. ಮನಸ್ಸನ್ನು ವಶವರ್ತಿಯಾಗಿ ಮಾಡಿಕೊಂಡವರ ಲೆಕ್ಕವನ್ನು ಮಾಡಬೇಕಾದರೆ ಕೈಬೆರಳುಗಳನ್ನಷ್ಟೇ ಎಣಿಸಬೇಕಾಗುವದು. ಆದ್ದರಿಂದ ಬಾಹ್ಯಬ್ರಹ್ಮಾಂಡವನ್ನು ಗೆದ್ದವರ ಬೆಲೆಗಿಂತ ಮನಸ್ಸನ್ನು ಗೆದ್ದವರ ಬೆಲೆ

ಹೆಚ್ಚು. ಬಾಹ್ಯಬ್ರಹ್ಮಾಂಡವನ್ನು ಗೆದ್ದವರು ಏಕಚ್ಛತ್ರಾಧಿಪತಿಗಳೆನಿಸಿಕೊಂಡು ನಿರಂಕುಶರಾಗಿ ಐಹಿಕಸೌಖ್ಯದ ಪರಮಾವಧಿಯನ್ನು ಉಪಭೋಗ ಮಾಡಬಹುದು. ಆದರೆ ಅಷ್ಟರಿಂದಲೇ ಅವರಿಗೆ ಈಶ್ವರಪ್ರಾಪ್ತಿಯ ಯೋಗವು ಪಕ್ಕುವದಿಲ್ಲ. ಮನಸ್ಸನ್ನು ಗೆದ್ದವರಿಗೆ ಮಾತ್ರ ಐಹಿಕಸುಖವೆಂಬುದು ಚಿತ್ರದಲ್ಲಿ ಬರೆದ ನಿಕ್ಷೇಪದಂತೆ ಬರೀ ಭಾವನಾಮಯವಾಗಿ ತೋರುವದಲ್ಲದೆ ಪರಮಾನಂದಸ್ವರೂಪನಾದ ಪರಮಾತ್ಮನೇ ಅವರನ್ನು ಅನುವರ್ತಿಸುವವನಾಗಿ ಭಕ್ತಪರಾಧೀನನೆನೆಸಿಕೊಳ್ಳುವದರಿಂದ ಅವರ ನಿಜಾನಂದವು ಮೇರೆಯಿಲ್ಲದ್ದಾಗುವದು. ಆದ್ದರಿಂದ ಮನಸ್ಸಿನ ಮೇಲೆ ನಿಯಮನವನ್ನು ನಡೆಸುವದೇ ನಿಜವಾದ ಸಾಹಸ. ಮನಸ್ಸಿನ ಮೇಲೆ ಸ್ವಾಮಿತ್ವವನ್ನಿಟ್ಟುಕೊಳ್ಳದೆ ಮನಸ್ಸಿನ ಸೆಳೆತಕ್ಕೆ ಸಿಕ್ಕಿ ಅದು ಕರೆದ ಕಡೆಗೆ ಅದರ ಬಾಲವನ್ನು ಹಿಡಿದು ಹೋಗಿ, ಅದು ಆಜ್ಞಾಪಿಸಿದ ಕಾರ್ಯಗಳನ್ನು ಮಾಡುವದರಿಂದ ಸ್ಥೂಲದೃಷ್ಟಿಯಿಂದ ನೋಡಿದಾಗ ಅವನಿಗೆ ಸರ್ವೇಶ್ವರತ್ವವು ಬಂದರೂ ಸೂಕ್ಷ್ಮದೃಷ್ಟಿಯಿಂದ ನೋಡಿದಾಗ ಅವನು ಮನಸ್ಸಿನ ದಾಸನಾಗಿರುವಿಕೆಯು ಎದ್ದು ಕಾಣದೆ ಹೋಗುವದಿಲ್ಲ. ಮನಸ್ಸಿನ ಮೇಲೆ ಸ್ವಾಮಿತ್ವವನ್ನು ಸಾಧಿಸುವವರಲ್ಲಿ ದಾಸತ್ವದ ವಾಸನೆ ಕೂಡ ಇರುವದಿಲ್ಲ. ಆದ್ದರಿಂದ ಹೊರಗಣ ಪ್ರಪಂಚವನ್ನು ಎಷ್ಟೇ ಗೆದ್ದರೂ ದಾಸತ್ವದ ಕಿಲುಬು ತಪ್ಪುವದಿಲ್ಲ. ದಾಸತ್ವದಿಂದ ಕೂಡಿದ ಪ್ರಭುತ್ವದ್ದೇನು ಹೆಚ್ಚುಗಾರಿಕೆ? ಹುಳಿಬೆಲ್ಲವನ್ನು ಯಾರು ಹೊಗಳುತ್ತಾರೆ? ಆದ್ದರಿಂದ ಮನಸ್ಸನ್ನು ಗೆಲ್ಲುವದೇ ಗೆಲುವು.

ಹೊರಗಣ ಪ್ರಪಂಚವನ್ನು ಗೆಲ್ಲುವದರಲ್ಲಿಯೂ ಮನಸ್ಸನ್ನು ಗೆಲ್ಲುವದರಲ್ಲಿಯೂ ಪರಿಣಾಮದಲ್ಲಿ ಒಂದು ವಿಶೇಷವುಂಟು. ಹಿಡಿತಕ್ಕೆ ಸಿಕ್ಕಿದ ಹೊರಗಣ ಪ್ರಪಂಚವು ತನ್ನ ಸ್ವಾಮಿಗೆ ತಾನೊಂದು ಉಪಭೋಗಸಾಧನವಾದೀತೇ ಹೊರತು, ಆ ತನ್ನೊಡೆಯನನ್ನು ಮನಸ್ಸಿನ ದಾಸ್ಯವೆಂಬ ಹಾಳು ಬಾವಿಯಿಂದ ಮೇಲಕ್ಕೆತ್ತಲಾರದು. ಮನಸ್ಸು ಹಿಡಿತಕ್ಕೆ ಸಿಕ್ಕಿದರೆ ಅದು ತನ್ನ ಸ್ವಾಮಿಗೆ ಉಪಭೋಗಸಾಧನವಾಗುವದೂ ಅಲ್ಲದೆ ಹೊರಗಣ ಪ್ರಪಂಚವನ್ನೆಲ್ಲ ಲೀಲಾಜಾಲವಾಗಿ ತನ್ನೊಡೆಯನ ಹಸ್ತಲೇಖೆಯಲ್ಲಿ ಅಡಗಿಸುವದು. ಪೂರ್ವದಲ್ಲಿ ಋಷ್ಯಾಶ್ರಮಗಳಲ್ಲಿ ಪ್ರಾಣಿಗಳೆಲ್ಲ ಪರಸ್ಪರ

ವೈರವನ್ನು ತೊರೆದು ವರ್ತಿಸುತ್ತಿದ್ದವೆಂದು ಉಲ್ಲೇಖಗಳುಂಟು. ಅದೇನೂ ಅತ್ಯುಕ್ತಿಯಲ್ಲ. ಋಷಿಗಳು ಮನಸ್ಸೆಂಬ ಕನ್ನಡಿಯನ್ನು ತಮ್ಮ ಕೈಯಲ್ಲಿಟ್ಟುಕೊಂಡು ಅವರಲ್ಲಿರುವ ವೈರಭಾವವೆಂಬ ಕಲೆಗಳನ್ನೆಲ್ಲ ಹೋಗಲಾಡಿಸಿ ಅದು ಚೆನ್ನಾಗಿ ಮಿರುಗುವಂತೆ ಮಾಡಿರುತ್ತಿದ್ದರು. ಆದ್ದರಿಂದ ಅವರ ಮುಂದೆ ಇತರ ಪ್ರಾಣಿಗಳು ಬಂದಾಗ ಆ ಪ್ರಾಣಿಗಳ ಮನಸ್ಸಿನಲ್ಲಿ ವೈರದ ಕಲೆ ಇದ್ದರೂ, ಋಷಿಗಳ ಮನಸ್ಸಿನ ನಿರ್ವೈರತ್ವಪ್ರಧಾನವಾದ ಪ್ರತಿಭೆಯ ಪ್ರಭಾವವು ಆ ಪ್ರಾಣಿಗಳ ಮನಸ್ಸಿನ ಮೇಲೆ ಬಿದ್ದು ಝಗಝಗಿಸಿ ಅಲ್ಲಿದ್ದ ವೈರದ ಕಲೆಗಳನ್ನು ಎದ್ದು ಕಾಣದಂತೆ ಮಾಡುತ್ತಿತ್ತು. ಈ ಕಾರಣದಿಂದ ಆ ಪ್ರಾಣಿಗಳು ತಮಗೆ ಅರಿವಿಲ್ಲದೆ ನಿರ್ವೈರದಿಂದಿರುತ್ತಿದ್ದವು. ಆತ್ಮಶಕ್ತಿಯ ಪ್ರಾಶಸ್ತ್ಯವನ್ನು ಈ ಉದಾಹರಣೆಯು ಬಹು ಚೆನ್ನಾಗಿ ವ್ಯಕ್ತಗೊಳಿಸುವದು. ವಿಚಾರಮಾಡಿರಿ. ಅಖಂಡಬ್ರಹ್ಮಾಂಡವನ್ನೂ ಒಂದು ಭ್ರೂವಿಕ್ಷೇಪದಿಂದ ತನ್ನ ಇಷ್ಟಾನುವರ್ತಿಯಾಗಿ ಮಾಡಿಕೊಳ್ಳುವಂಥವನಿಗಾದರೂ ಇತರ ಪ್ರಾಣಿಗಳ ವೈರಬುದ್ಧಿಯನ್ನು ನಿರ್ಮೂಲಮಾಡುವದು ಶಕ್ಯವಾದೀತೆ? ಎಂದಿಗೂ ಇಲ್ಲ. ಯಾರಿಗೆ ತನ್ನ ಮನಸ್ಸಿನ ಮೇಲೆಯೇ ತನ್ನ ನಿಯಮನವು ನಡೆಯುವದಿಲ್ಲವೋ ಅಂಥವನಿಗೆ ಇತರರ ಮನಸ್ಸಿನ ಮೇಲೆ ಕೈಮಾಡುವ ಯೋಗ್ಯತೆ ಎಲ್ಲಿಯದು? ಆದ್ದರಿಂದ ಯಾವ ಉಪಕರಣಗಳೂ ಇಲ್ಲದೆ, ಯಾವ ಅಟ್ಟಹಾಸವೂ ಇಲ್ಲದೆ, ಜಯಶ್ರೀಯ ಜಡೆಯನ್ನು ಹಿಡಿದೆಳೆತರುವಂಥ ಆತ್ಮಶಕ್ತಿಯ ಜಯವೇ ಜಯ. ಶೂರರು ಬೇಕಾದಷ್ಟು ರಾಜ್ಯಗಳನ್ನು ಗೆಲ್ಲಬಹುದು; ಅಲ್ಲಿನ ಪ್ರಜೆಗಳ ಮೇಲೆ ಸ್ವೇಚ್ಛೆಯಿಂದ ತಮ್ಮ ರಾಜದಂಡವನ್ನು ಹೇರಬಹುದು; ಆ ದೇಶದ ನಿಕ್ಷೇಪಗಳನ್ನೆಲ್ಲ ರಾಜದಂಡದಿಂದ ಎಬ್ಬಿಸಿಕೊಳ್ಳಬಹುದು; ಮಾತಾಡಿದವರ ಮುಂದೆ ತಮ್ಮರಾಜದಂಡವನ್ನು ಝಳಪಿಸಬಹುದು. ಆ ರಾಜದಂಡದ ಸಹಾಯದಿಂದ ತಮ್ಮನ್ನು ತಾವು ರಾಜರೆಂದುಕೊಳ್ಳಬಹುದು. ಆದರೆ "**ರಾಜಾ ಪ್ರಕೃತಿರಂಜನಾತ್**" ಎಂಬ ವಚನದಂತೆ ಜನಾನುರಾಗಕ್ಕೆ ಪಾತ್ರನಾಗಿ ಜನರ ಮನಸ್ಸನ್ನು ತನ್ನ ವಶಮಾಡಿಕೊಳ್ಳದೆ ಇರುವವರೆಗೂ ಅವನ ರಾಜತ್ವವು ಶೋಭಿಸುವದಿಲ್ಲ. ಹೀಗೆ ನಿಜವಾದ ರಾಜತ್ವವನ್ನು ತಂದುಕೊಡುವ ಸಾಮರ್ಥ್ಯವು ಆತ್ಮಶಕ್ತಿಯಲ್ಲಿರುವದರಿಂದ ಆತ್ಮಶಕ್ತಿಯ ಪ್ರಾಶಸ್ತ್ಯವು ಹೆಚ್ಚಿನದು.

ಒಂದು ದೇಶಕ್ಕೆ ಬೆಲೆಯನ್ನು ಕಟ್ಟಬೇಕಾದರೆ ಅದರಲ್ಲಿರುವ ಅಪಾರವಾದ ಜನಸಂಖ್ಯೆಯೂ ಕೋಟಿಕೂಗುವ ಊರುಗಳಲ್ಲಿಲ್ಲ ಹಣಕಿಹಾಕುತ್ತಿರುವ ಬೌದ್ಧಿಕಶಿಕ್ಷಣಪ್ರಸಾರವೂ ಪರದೇಶೀಯಯಾತ್ರಿಕರನ್ನು ಆಕರ್ಷಣೆ ಮಾಡುವಂಥ ಭವ್ಯವಾದ ಭವನಗಳೂ ರತ್ನಗರ್ಭೆಯೆಂಬ ಹೆಸರನ್ನು ಅನ್ವರ್ಥವಾಗಿ ಮಾಡಿಕೊಂಡು ಉಗುರಿಂದ ಗೀರಿದಷ್ಟು ಉಳುವಿಕೆಯಿಂದಲೇ ಹುಲಸಾಗಿ ಬೆಳೆಯುವ ಭೂಗುಣವೂ ಸಾಮುಮಾಡಿ ಶರೀರಪುಷ್ಟಿಯನ್ನು ಸಂಪಾದಿಸಿ ಭುಜಗಳನ್ನು ಕುಣಿಸುತ್ತ ನೆಲವು ಅದುರುವಂತೆ ಜಗ್ಗುಹಾಕಿಕೊಂಡು ನಡೆಯುವ ನೈಕಟ್ಯೊ ಅಸಂಖ್ಯಾಕಸೇನೆಯೂ ವಿಚಾರಣೀಯುಗಳಲ್ಲ. ಇಷ್ಟೆಲ್ಲಾ ಇದ್ದರೂ ಆ ದೇಶವು ಪರಕೀಯರಿಗೆ ಆಟದ ಚೆಂಡಾಗಿರುವದನ್ನು ನಾವು ಇತಿಹಾಸದಲ್ಲಿ ನೋಡಬಹುದು. ಸ್ಥೂಲಪರೀಕ್ಷೆಯಿಂದ ಬಹುತೂಕವುಳ್ಳದ್ದೆನಿಸಿಕೊಂಡ ಆ ದೇಶವು ಪರಕೀಯರಿಗೆ ಆಟದ ಚೆಂಡಿನಷ್ಟು ಹಗುರವಾದದ್ದು ಹೇಗೆ? ವಿಚಾರಮಾಡಿದರೆ ಆ ದೇಶದ ಭಾರವು ನೋಟಕ್ಕೆ ತೂಕವೇ ಹೊರತು ಕೈಗೆ ತೂಕವಲ. ಕೈಗೆ ತೂಕವಾಗಬೇಕಾದರೆ ಒಳಗೆ ಕೆಚ್ಚು ಇರಬೇಕು. ಅದು ಯಾವದು? ಅದೇ ಆತ್ಮಶಕ್ತಿ. ಒಂದು ದೊಡ್ಡ ಸೋರೆಯ ಬುರುಡೆಯು ಒಂದು ಸಣ್ಣ ಉಕ್ಕಿನ ಗಟ್ಟಿಯಷ್ಟು ಕೂಡ ತೂಗಲಾರದು. ಅದರಂತೆಯೇ ದೇಶಕ್ಕೆ ತೂಕವು ಬರಬೇಕಾದರೆ ದೇಶದ ಹೊರಗಣ ಪರಿಸ್ಥಿತಿ ಮುಖ್ಯವಲ್ಲ. ಆ ದೇಶದಲ್ಲಿರುವ ಜನರ ಆತ್ಮಶಕ್ತಿಯ ಭಾರದ ಮೇಲೆ ತೂಕವೇರುವದು. ಆತ್ಮಶಕ್ತಿಯೆಂದರೇನು? ಆತ್ಮಶಬ್ದಕ್ಕೆ ದೇಹವೆಂದೂ ಅರ್ಥವನ್ನು ಮಾಡಬಹುದಾದರೂ ಇಲ್ಲಿ ಆ ಅರ್ಥಕ್ಕೆ ಪ್ರಾಶಸ್ತ್ಯವಿಲ್ಲ. ಏಕೆಂದರೆ ಶರೀರವು ಮನಸ್ಸಿಗೆ ಅಧೀನವಾದದ್ದು; ಅಂದರೆ ಮನಸ್ಸಿನ ಆಜ್ಞೆಯಾದ ಮೇಲೆಯೇ ಶರೀರವು ಕೆಲಸವನ್ನು ಮಾಡುವದು. ಸ್ವತಂತ್ರವಾಗಿ ಪ್ರವರ್ತಿಸುವ ಯೋಗ್ಯತೆ ಅದಕ್ಕೆ ಇಲ್ಲದ್ದರಿಂದ ಶರೀರದ್ದೇನೂ ಮಹತ್ತ್ವವಲ್ಲ. ಆದ್ದರಿಂದ ಇಲ್ಲಿ ಆತ್ಮಶಬ್ದಕ್ಕೆ ಮನಸ್ಸೆಂಬ ಅರ್ಥವನ್ನು ಮಾಡಿಕೊಳ್ಳಬೇಕು. ಆತ್ಮಶಕ್ತಿಯೆಂದರೆ ಮನಸ್ಸಿನ ಅಥವಾ ಬುದ್ಧಿಯ ಶಕ್ತಿಯೆಂದರ್ಥ. ಸಾಮಾನ್ಯವಾಗಿ ಚಂಚಲವಾಗಿರುವದೇ ಮನಸ್ಸಿನ ಸ್ವಭಾವ. ಆ ಚಾಂಚಲ್ಯವನ್ನು ತಪ್ಪಿಸಿ ಯುಕ್ತಾಯುಕ್ತವಿವೇಕಸ್ವರೂಪವಾದ ಬುದ್ಧಿಯ ಆಳಿಕೆಯೊಳಗೆ ಮನಸ್ಸ

ನ್ನಿಟ್ಟು ಅದನ್ನು ಏಕಮುಖವಾಗಿ ಮಾಡಿದರೆ ಆ ಮನಸ್ಸಿಗೊಂದು ಬಗೆಯ ವಿಲಕ್ಷಣಸಾಮರ್ಥ್ಯವು ಬರುವದು. ಉಳಿದ ಎಲ್ಲರೂ ಕೈಸೋತು ಬಿಟ್ಟ ಕಾರ್ಯಗಳಾವರೂ ಆ ಮನಸ್ಸಿಗೆ ಕರತಲಾಮಲಕವಾಗುವವು. ಒಮ್ಮೆ ವಿಚಾರಪೂರ್ವಕವಾಗಿ ಯೋಗ್ಯವೆಂದು ನಿಶ್ಚಯಿಸಿ ಹಿಡಿದ ಕೆಲಸಕ್ಕೆ ಸ್ಥಿರ ಮನಸ್ಸನ್ನು ನಿಯೋಗಿಸಿದರೆ ಅರುಣೋದಯದಿಂದಲೇ ಕತ್ತಲೆಯು ಕಾಲಿಗೆ ಬುದ್ಧಿ ಹೇಳುವಂತೆ, ಸ್ಥಿರ ಮನಸ್ಸಿನ ಪ್ರಭಾವದಿಂದಲೇ ಅಡಚಣೆ ಗಳೆಲ್ಲ ಅಡ್ಡದಾರಿಯನ್ನು ಹಿಡಿದು ಹೋಗುವವು. ಆತ್ಮಶಕ್ತಿಪ್ರಭಾವ ವುಳ್ಳವನ ಜಾಜ್ವಲ್ಯಮಾನವಾದ ನೇತ್ರದೀಪ್ತಿಯ ಮುಂದೆ ಶರೀರಶಕ್ತಿಯ ಮತ್ತು ಇತರ ಉಪಕರಣಶಕ್ತಿಗಳ ಬಿನ್ನಾಣವೆಲ್ಲ ನೀಮ ನೀಕಾಗುವದು. ಕೆಚ್ಚೆದೆಯವನ ಮುಂದೆ ಬರಿ ತೋರಿಕೆಯ ಪುಷ್ಟಿಯವರೆಲ್ಲ ಎದೆಯೊ ಡೆದು ಬೀಳುವರು. ಆದ್ದರಿಂದ ಆತ್ಮಶಕ್ತಿಗೆ ಪ್ರಾಶಸ್ತ್ಯವು ಹೆಚ್ಚು.

ಆತ್ಮಶಬ್ದಕ್ಕೆ ಇನ್ನೂ ಹೆಚ್ಚಿನ ಅರ್ಥವನ್ನು ಮಾಡುವದಕ್ಕೂ ಅವ ಕಾಶವುಂಟು. ಅದೇನೆಂದರೆ:: ನಮ್ಮ ಮನಸ್ಸಿಗೂ ನಮ್ಮ ಬುದ್ಧಿಗೂ ಕೂಡ ಸಾಮರ್ಥ್ಯವನ್ನು ಕೊಡುವಂಥ ನಮ್ಮ ಜೀವಕಲೆಯೆಂದೂ ಆತ್ಮ ಶಬ್ದಕ್ಕೆ ಅರ್ಥವಾಗುವದು. ಆದ್ದರಿಂದ ಆತ್ಮಶಕ್ತಿಯೆಂದರೆ ಜೀವದ ಸಾಮರ್ಥ್ಯ. ಅದನ್ನು ನಾವು ಹೆಚ್ಚಿಸಿಕೊಳ್ಳುವದು ಅತ್ಯಂತ ಶ್ರೇಯಸ್ಕರವಾ ದದ್ದು. ಜೀವಶಕ್ತಿಯ ಪುಷ್ಟಿಗೆ ಒಂದೇ ಒಂದು ಉಪಾಯವಿರುವದು. ಅದು ಯಾವದೆಂದರೆ ಪರಮಾತ್ಮನ ಧ್ಯಾನ. ಪರಮಾತ್ಮನು ಜೀವಸ್ವರೂ ಪಕ್ಕೆ ಕೂಡ ಆಧಾರಭೂತನಾದಂಥವನು. ಜೀವನಿಗೇನಾದರೂ ಸಾಮ ರ್ಥ್ಯವು ಬಂದಿದ್ದರೆ ಅದು ಈಶ್ವರಾನುಗ್ರಹದಿಂದಲೇ ಹೊರತು ಬೇರೆ ಇಲ್ಲ ಪರಮಾತ್ಮನು ಸರ್ವಸಮರ್ಥನೆಂದು ಶಾಸ್ತ್ರಗಳು ಉದ್ಘೋಷಿಸುವವು. ಲೀಲಾಮಾತ್ರದಿಂದ ಅಖಂಡಬ್ರಹ್ಮಾಂಡದ ಸೃಷ್ಟಿಸ್ಥಿತಿಸಂಹಾರಗಳನ್ನು ಮಾಡುವಂಥ ಪರಮಾತ್ಮನ ಶಕ್ತಿಯನ್ನು ಹೇಳತಕ್ಕದ್ದೇನಿದೆ? ಜೀವನು ಎಷ್ಟೆಷ್ಟು ಪ್ರೇಮವಿಶೇಷದಿಂದ ಆ ಪರಮಾತ್ಮನನ್ನು ಧ್ಯಾನಮಾಡುವನೊ ಅಷ್ಟಷ್ಟು ಪರಮಾತ್ಮನ ಸಾಮರ್ಥ್ಯವು ಜೀವನೊಳಗೆ ಒಡೆದು ಮೂಡು ವದು. ಪರಮಾತ್ಮನು ಪರಮಕರುಣಾಸಾಗರನು ಮತ್ತು ಯಾರು ಏನನ್ನು ಬೇಡಿದರೂ ಕೊಡತಕ್ಕ ಸ್ವಭಾವದವನು. ಆದ್ದರಿಂದ ನಾವು ಅವನನ್ನು

ಬೇಡುವದೊಂದೇ ತಡ; ಅವನು ಅದನ್ನು ನೀಡುವನು. ತಂದೆಯು ತನ್ನ ಸರ್ವಸ್ವವನ್ನೂ ಮಕ್ಕಳಿಗೆ ಕೊಡುವಂತೆ, ಸರ್ವಲೋಕಕ್ಕೂ ಮಾತಾಪಿತೃಸ್ವರೂಪನಾದ ಅವನು ತನ್ನ ಭಕ್ತರಿಗೆ ಬೇಕಾದಷ್ಟು ಕೊಡುವನು. ಆದ್ದರಿಂದ ನಾವು ನಮ್ಮ ಮನಸ್ಸನ್ನು ಪರಮಾತ್ಮನ ಮೇಲೆ ಇಟ್ಟರೆ ಒಡನೆ ಪರಮಾತ್ಮನು ನಮ್ಮ ಮೇಲಿನ ಅನುಗ್ರಹದಿಂದ ನಮಗಾಗಿ ಆ ಮನಸ್ಸಿನಲ್ಲಿ ತನ್ನ ಸಾಮರ್ಥ್ಯವನ್ನು ತುಂಬಿಯೇ ತುಂಬುವನು. ಈ ಸಾಮರ್ಥ್ಯವು ಮನಸ್ಸಿಗೆ ಬಂತೆಂದರೆ ಆ ಮನಸ್ಸಿಗೆ ಅಸಾಧ್ಯವಾದ ಕಾರ್ಯವೇ ಈ ಲೋಕದಲ್ಲಿ ಇಲ್ಲ. ಲೋಕದಲ್ಲಿ ಮನಶ್ಶಕ್ತಿಯನ್ನು ಉಪಯೋಗಮಾಡುತ್ತಿರುವ ಎಷ್ಟೋ ಜನಗಳ ಕಾರ್ಯವು ಸರಾಗವಾಗಿ ಸಾಗದೆ ಇರುವದಕ್ಕೆ ಈ ದೈವಿಕಶಕ್ತಿಯ ಅಭಾವವೇ. ಕಾರಣ. ಆದ್ದರಿಂದ ಆತ್ಮಶಕ್ತಿಯ ಪರಮಾವಧಿಯನ್ನು ಪಡೆಯಬೇಕೆನ್ನುವವರು ತಮ್ಮ ಇಷ್ಟದೇವತೆಯನ್ನು ಉಪಾಸನೆಮಾಡುವ ಅಭ್ಯಾಸವನ್ನಿಟ್ಟು ಆ ಪ್ರಯೋಜನವನ್ನು ಪಡೆಯಬೇಕು.

ಮುಖ್ಯತಾತ್ಪರ್ಯವೇನೆಂದರೆ: ಆತ್ಮಶಕ್ತಿಯ ತಿರೋಭಾವವೇ ನಮ್ಮನ್ನು ಇತರರ ಕಾಲಕಸವಾಗಿಮಾಡುವದು; ಆವಿರ್ಭಾವವೇ ನಮ್ಮನ್ನು ಸಮಸ್ತ ಜನಾಂಗಗಳ ಶಿರೋಭೂಷಣವಾಗಿ ಮಾಡುವದು. ಆದ್ದರಿಂದ ನಾವು ನಮ್ಮ ಉನ್ನತಿಗಾಗಿ ಇತರರ ಮುಂದೆ ದೈನ್ಯದಿಂದ ಕಣ್ಣುಕಣ್ಣು ಬಿಡಬೇಕಾದದ್ದಿಲ್ಲ. ನಮ್ಮಲ್ಲಿ ನಾವು ನಮ್ಮ ಆತ್ಮಶಕ್ತಿಯನ್ನು ಬೆಳೆಸಿಕೊಂಡರೆ ಸರಿ; ಸಮಸ್ತಸಂಪತ್ತುಗಳೂ ತಾವಾಗಿಯೇ ನಮ್ಮನ್ನು ಹುಡುಕಿಕೊಂಡು ಬರುವವು. ಯಾರ ಸಂರಕ್ಷಣೆಯ ಭಾರವನ್ನು ನಾವು ವಹಿಸುತ್ತೇವೊ ಅಂಥವರ ಜೀವವನ್ನು ಉಳಿಸುವದಕ್ಕಾಗಿ ನಮ್ಮ ಜೀವಜ್ಯೋತಿಯನ್ನು ನಿವಾಳಿಸಿಹಾಕುವದು, ಭೌತಿಕಸುಖಸಾಧನಗಳು ನಮ್ಮ ದೇಹೇಂದ್ರಿಯಾದಿಗಳಿಗೆ ಉಪಭೋಗವನ್ನು ಕೊಡಬೇಕೆಂದು ನಾನು ಮುಂದು ತಾನು ಮುಂದೆಂದು ಬಂದರೂ ಅವುಗಳ ಉಲ್ಬಣವನ್ನು ತನ್ನ ಮೇಲೆ ಹಾಯುಗೊಡದಿರುವದು ಯೋಗ್ಯಕಾರ್ಯವನ್ನು ಕೈಗೊಂಡಿರುವಾಗ ಅದರ ದಾರಿಯಲ್ಲಿ ಎಷ್ಟು ಕಷ್ಟಗಳೊದಗಿದರೂ ಅವುಗಳಿಗೆ ಸಮಾಧಾನದಿಂದ ಮೈಗೊಡುವದು, ತನ್ನ ದೇಹದಿಂದ ಪಂಚಪ್ರಾಣಗಳೂ ಹೊರಬೀಳು

ವಂಥ ಸಂಭವವು ಬಂದರೂ ಧರ್ಮಮಾರ್ಗವನ್ನು ಬಿಟ್ಟು ಒಂದು ಕೂದಲೆಳೆಯಷ್ಟೂ ಕದಲದಿರುವದು, ಬ್ರಹ್ಮಾಸ್ತ್ರಕ್ಕೆ ಕೂಡ ಹೆದರದಂಥ ಧೈರ್ಯವಿದ್ದರೂ ಪಾಪಕ್ಕೆ ಮಾತ್ರ ಹೆದರುವದು, ಹಿಡಿದ ಪಟ್ಟನ್ನು ಬಿಡದಿರುವ ಗುಣದೊಂದಿಗೆ ತನ್ನ ದೋಷವನ್ನು ತಾನು ತಿದ್ದಿಕೊಳ್ಳುವ ಗುಣವನ್ನು ಹೊಂದಿರುವದು ಮತ್ತು ಲೋಕವೆಲ್ಲಾ ಪ್ರಾಪಂಚಿಕಸುಖಸಾಧನೆಗಳ ಬಯಕೆಯೆಂಬ ಆವೇಶದಲ್ಲಿ ವೈಮರೆತಿರುವಾಗ, ತಾನು ಪರಮಾತ್ಮಪ್ರೇಮವೆಂಬ ಆವೇಶದಲ್ಲಿ ದೇಹಭಾನವನ್ನು ಕಳೆದುಕೊಳ್ಳುವದು—ಇಂಥವುಗಳೆಲ್ಲಾ ಆತ್ಮಶಕ್ತಿಯ ಒಂದೊಂದು ಚಿಹ್ನಗಳು. ಈ ಲಕ್ಷಣಗಳು ಹೊರಗಣ ಉಪಕರಣಗಳಿಂದ ಹೊರಹೊಮ್ಮುವಂಥವುಗಳಲ್ಲ. ಇಂಥ ಅಸಾಧಾರಣಪ್ರತಿಭೆಗಳನ್ನು ತಂದು ಕೊಡುವ ಸಾಮರ್ಥ್ಯವು ಆತ್ಮಶಕ್ತಿಗೆ ಮಾತ್ರ ಉಂಟು. ಆತ್ಮಶಕ್ತಿಯೆಂಬ ಚಂದ್ರಹಾಸದ ಮೊನೆಯ ಮುಂದೆ ಉಕ್ಕಿನ ಕತ್ತಿಗಳ ಮೊನೆಯು ಒನಕೆಯ ತುದಿಯೇ ಸರಿ. ಭೌತಿಕಪ್ರಭಾಮಂಡಲಗಳ ಕಿರಣಗಳು ಕೆಲವು ವಸ್ತುಗಳೊಳಗೆ ತೂರಲಾರದೆ ಕೆಲವು ಕಡೆ ನೆರಳನ್ನು ಬಿಡುವವು. ಆತ್ಮಶಕ್ತಿಪ್ರಭಾಮಂಡಲದ ಕಿರಣಗಳಿಗೆ ಎಲ್ಲಿಯೂ ತಡೆಯಿಲ್ಲ; ನೆರಳಿಗೆ ಅವಕಾಶವಿರದಂತೆ ಅವು ಎಲ್ಲೆಲ್ಲಿಯೂ ಬೆಳಗುವವು. ಆತ್ಮಶಕ್ತಿಯ ಬಲದ ಮುಂದೆ ಅಖಂಡಭೂಮಂಡಲವೂ ಒಂದು ಹುಲ್ಲುಕಡ್ಡಿಯಾಗುವದು. ಮನುಷ್ಯನ ಮುಖ್ಯ ಜೀವಾಳವೇ ಆತ್ಮಶಕ್ತಿ. ಆತ್ಮಶಕ್ತಿಯ ಕಾವನ್ನು ತಗ್ಗಿಸುವಂಥ ಬೇರೊಂದು ವಸ್ತು ಇದುವರಿಗೂ ಸೃಷ್ಟಿಯಾಗಿಲ್ಲ. ಇಂಥ ಆತ್ಮಶಕ್ತಿಯ ತೇಜಸ್ಸಿನ ಮುಂದೆ ಉಳಿದ ಸರ್ವತೇಜೋರಾಶಿಗಳೂ ಸೂರ್ಯನ ಮುಂದಿನ ಮಿಣುಕುಹುಳದಂತೆ. ಆದ್ದರಿಂದ ಆತ್ಮಶಕ್ತಿಯ ಪ್ರಾಶಸ್ತ್ಯವು ಬೇರೆ ಯಾವದಕ್ಕೂ ಇಲ್ಲ. ನೀತಿಶಾಸ್ತ್ರಕಾರರ ಅಭಿಪ್ರಾಯವನ್ನು ನೋಡಿರಿ.

ಕಂ|| ಗುಣವನೆ ಪಡೆ ನೀಂ ಯತ್ನದೆ ।
ಕ್ಷಣಿಕಾಡಂಬರದೆ ಗೌರವಂ ಬರ್ಪುದೆ? ಪೇಳ್ ||
ಇನಿವಾಲಿರದಿರೆ ಗಂಟೆಯ ।
ಗಣಗಣಕಾಕಳಿನ ಬೆಲೆಯು ಹೆಚ್ಚುವದುಂಟೆ? ||

# ಸದ್ವಂಶದ ಅಗತ್ಯ

ಆತ್ಮಶಕ್ತಿಯನ್ನು ಪರಿಪೂರ್ಣತೆಗೊಳಿಸಿಕೊಳ್ಳಬಲ್ಲಂಥ ಮಹನೀಯರು ಕಂಡಕಂಡ ಕಡೆಯಲ್ಲೆಲ್ಲ ತಲೆದೋರುವದಿಲ್ಲ. ಕಾಡುಗಳಲ್ಲೆಲ್ಲ ಕಲ್ಪವೃಕ್ಷವಿರುವದಿಲ್ಲ. ಊರುಗಳಲ್ಲೆಲ್ಲ ಕಾಮಧೇನುಗಳಿರುವದಿಲ್ಲ. ಅವುಗಳೆಲ್ಲ ಬಹುಮಟ್ಟಿಗೆ ಪ್ರಶಸ್ತವಾದ ಸ್ಥಲಗಳನ್ನಾಶ್ರಯಿಸಿಕೊಂಡಿರುವವು. ಇದರಂತೆ ಆತ್ಮಶಕ್ತಿಸಂಪನ್ನರು ಹೈದೋರುವದಕ್ಕೆ ವಿಶೇಷವಾಗಿ ಸದ್ವಂಶವು ಅಗತ್ಯವಾಗಿರುವದು. ಸದ್ವಂಶವೆಂದರೆ ದೈವಸಂಪತ್ತಿನವರು ವಿಶೇಷವಾಗಿರುವ ಮನೆತನ. ದೈವಸಂಪತ್ತಿನ ಲಕ್ಷಣವನ್ನು ಭಗವಂತನು ಭಗವದ್ಗೀತೆಯಲ್ಲಿ ವಿಶದವಾಗಿ ಹೇಳಿರುವನು. ತಮ್ಮ ಸಾತ್ತ್ವಿಕವೃತ್ತಿಯನ್ನು ಬಿಟ್ಟುಗೊಟ್ಟು ಅಂಜಿಸುವ ಅಧರ್ಮದ ಜೀವಿಕೆಗೆ ಯಾವ ಮನೆತನದವರು ಉಪ್ಪುಹಾಕುವದಿಲ್ಲವೋ ಪ್ರತಿಪಕ್ಷದ ಚೆಲ್ಲಾಟವೆಷ್ಟು ನಡೆದರೂ ಯಾರ ನಿಷ್ಠೆಯು ಜ್ಞಾನವು ಕೂದಲೆಳೆಯಷ್ಟು ಕದಲುವದಿಲ್ಲವೋ ಪರಧರ್ಮಾಚರಣೆಯು ಎಷ್ಟು ಬಾಯಿನೀರು ಸುರಿಸಿದರೂ ಯಾರು ಸ್ವಧರ್ಮಾಚರಣೆಯ ಮುಂದೆ ಅದನ್ನು ವಿಷವೆಂದು ದೂರಮಾಡುವರೋ ಇತರರ ವಸ್ತುವನ್ನು ಸಂಗ್ರಹಿಸಲಿಚ್ಛಿಸದೆ ಯಾರು ತಮ್ಮದನ್ನು ಇತರರಿಗೆ ಕೊಡುವವರೆಂಬ ಬಿರುದನ್ನು ಪಡೆಯುವರೋ ಅವಿಚ್ಛಿನ್ನವಾಗಿ ಅನಂತಕರ್ಮಗಳನ್ನು ಮಾಡಿದರೂ ಯಾರು ಯಾವ ಕರ್ಮಕ್ಕೂ ಯಾವ ಫಲವನ್ನೂ ಬಯಸುವದಿಲ್ಲವೋ ವಿಷಯಗಳು ಎಲ್ಲ ಕಡೆಯಿಂದಲೂ ಜಗ್ಗಿದರೂ ಯಾರು ಯಾವ ಕಡೆಗೂ ಒಲಿಯದೆ ತಮ್ಮ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವರೋ ಅಕಾರ್ಯವೆಂದರೆ ನಾಚಿಕೆಯಾಗಿ ಯಾರಿಗೆ ಕೈಕಾಲುಗಳೇಳುವದಿಲ್ಲವೋ ದೇವತಾರ್ಚನೆ, ದೇವತಾವಿಚಾರ, ದೇವತಾಪ್ರೀತ್ಯರ್ಥವಾದ ಆಚಾರ—ಇವುಗಳು ಯಾರಿಗೆ ನಿತ್ಯನಿಯಮಗಳಾಗಿರುವವೋ ಶರೀರವೂ ವಾಕ್ಕೂ ಮನಸ್ಸೂ ಯಾರಲ್ಲಿ ಒಂದಕ್ಕೊಂದು ಹೊಂದಿಕೊಂಡಿರುವವೋ ಹಿಂಸೆ, ಸಟೆ, ಕ್ರೋಧ, ದ್ರೋಹಬುದ್ಧಿ, ಗರ್ವ—ಇವು ಯಾರನ್ನು ಕಂಡರೆ ದಿಕ್ಕುಗೆಟ್ಟು ಓಡುವವೋ ಶಾಂತಿ,

ಉದಾರಬುದ್ಧಿ, ದಯೆ, ತೇಜಸ್ವಿತೆ, ಕ್ಷಮೆ, ಧೃತಿ, ಶುಚಿ- ಇವು ಯಾರಲ್ಲಿ ಮನೆಮಾಡಿಕೊಂಡಿರುವವೊ ಅವರು ದೈವೀಸಂಪತ್ತಿನವರು. ಈ ದೈವೀ ಸಂಪತ್ತು ಮೋಕ್ಷಕ್ಕೆ ಸಾಧನವಾಗುವದು. ಹೀಗೆ ಈ ಗುಣಗಳಿಗೆ ಪರಮಾತ್ಮಪ್ರಾಪ್ತಿಯೇ ಆಗುವದೆಂದು ಹೇಳಿದ ಮೇಲೆ ಈ ಲೋಕದಲ್ಲಿ ಅವಕ್ಕೆ ಅಸಾಧ್ಯವಾದದ್ದಿನ್ನೇನಿದೆ? ಐಹಿಕವಾದ ಸರ್ವಸಂಪತ್ತೂ ಈ ದೈವೀಸಂಪತ್ತಿನ ಕಾಲಿಕಸವಾಗಿರುವದು. ಆತ್ಮಶಕ್ತಿಯನ್ನು ಪೂರ್ಣಮಾಡಿಕೊಳ್ಳಬಲ್ಲಂಥವರ ಹುಟ್ಟುವಿಕೆಗೆ ಈ ದೈವೀಸಂಪತ್ತಿನವರ ಮನೆತನವು ಒಳ್ಳೇ ಹುಲುಸಾದ ಭೂಮಿ.

ಆತ್ಮಶಕ್ತಿಯನ್ನು ಪೂರ್ಣಮಾಡಿಕೊಳ್ಳುವ ಸಾಮರ್ಥ್ಯವು ಒಮ್ಮೆಗೇ ಎದ್ದು ಕಾಣಿಸಿಕೊಳ್ಳುವದಿಲ್ಲ. ಅನೇಕ ಜನ್ಮಗಳಲ್ಲಿ ಪ್ರಯತ್ನಗಳನ್ನು ಮಾಡಿಮಾಡಿ ಪರಮಾತ್ಮನನ್ನು ಪಡೆಯುತ್ತಾನೆಂದು ಭಗವದ್ಗೀತೆಯಲ್ಲಿ ಹೇಳಿರುವ ಮಾತು ಆತ್ಮಶಕ್ತಿಯ ವಿಚಾರಕ್ಕೂ ಅನ್ವಯಿಸುತ್ತದೆ. ಆತ್ಮಶಕ್ತಿಗೂ ಪರಮಾತ್ಮನಿಗೂ ದೂರವಿಲ್ಲ. ಆತ್ಮಶಕ್ತಿಯೆಂಬುವದು ಪರಮಾತ್ಮನ ಪೀಠವೆಂದು ಹೇಳಬಹುದು. ತಾನು ಹೋಗಬೇಕಾದ ಸ್ಥಲದಲ್ಲಿ ತನಗೆ ಅನುಗುಣವಾದ ಪೀಠದ ಸಿದ್ಧತೆಯು ಆಗಿರುವದನ್ನು ಮನಗಂಡ ಹೊರತು ರಾಜನು ಅತ್ತಕಡೆಗೆ ಕಾಲ್ತೆಗೆಯುವದಿಲ್ಲ. ಅದರಂತೆ ಆತ್ಮಶಕ್ತಿಯು ಪೂರ್ಣವಾದ ಹೊರತು ಯಾರ ಹೃದಯದಲ್ಲಿಯೂ ಪರಮಾತ್ಮನು ಆವಿರ್ಭವಿಸುವದಿಲ್ಲ. ಆತ್ಮಶಕ್ತಿಯು ಅವನ ಪೀಠವಾದ್ದರಿಂದ ಅದರ ಮೇಲೆ ಅವನ ಹೊರತು ಮತ್ತೆ ಯಾರು ಕುಳಿತುಕೊಳ್ಳಲಾದೀತು? ಪರಮಾತ್ಮನು ನಿಜವಾಗಿ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡು ಯಾವಾಗಲೂ ಇದ್ದೇ ಇರುತ್ತಾನೆಯೇ ಹೊರತು ಅವನು ಹೊಸದಾಗಿ ಎಲ್ಲಿಂದಲೂ ಎಲ್ಲಿಗೂ ಬರಬೇಕಾದ್ದಿಲ್ಲ; ಆದರೆ ಅವನಿಗೆ ಕುಳಿತುಕೊಳ್ಳುವದಕ್ಕೆ ತಕ್ಕ ಪೀಠವಿಲ್ಲದ್ದರಿಂದ ಅವನು ಎಲ್ಲಿಯೂ ಕಾಣಿಸಿಕೊಳ್ಳದೆ ಮರೆಯಲ್ಲಿಯೇ ಇರುವನು. ನಾವು ನಮ್ಮ ಹೃದಯದಲ್ಲಿ ಆತ್ಮಶಕ್ತಿಯ ಪೀಠವನ್ನು ಪ್ರಸರಿಸಿದರೆ ಒಡನೆ ಅವನು ಅಲ್ಲಿ ನಮಗೆ ಮೈದೋರುವನು. ಆದ್ದರಿಂದ ಆತ್ಮಶಕ್ತಿಗೂ ಪರಮಾತ್ಮನಿಗೂ ದೂರವಿಲ್ಲ. ಈ ಕಾರಣದಿಂದಲೇ ಆತ್ಮಶಕ್ತಿಯ ಪರಿಪೂರ್ಣತೆಗೂ ಅನೇಕ ಜನ್ಮಗಳ ಪ್ರಯತ್ನವು ಅಗತ್ಯ.

ಸದ್ವಂಶದಲ್ಲಿ ಜನರು ಎಡೆಬಿಡದೆ ದೈವೀಸಂಪತ್ತನ್ನು ಸಾಧನೆಮಾಡುತ್ತಿರುವರಷ್ಟೆ. ಅದು ಒಂದೇ ಜನ್ಮದಲ್ಲಿ ಸಾಧ್ಯವಾಗುವ ನಿಯಮವಿಲ್ಲ. ಆದರೆ ಒಂದು ಜನ್ಮದಲ್ಲಿ ಬಂದ ದೇಹವು ಮಣ್ಣುಗೂಡಿ ನಾಶವಾದರೂ ಅದರೊಳಗಿದ್ದು ಮಾಡಿದ ಪ್ರಯತ್ನವು ನಾಶವಾಗುವದಿಲ್ಲ. ಸತ್ಕರ್ಮವನ್ನು ಮಾಡಿದ ಯಾವನೂ ದುರ್ಗತಿಗೆ ಹೋಗುವದಿಲ್ಲ. ಸತ್ಕರ್ಮವು ತನ್ನ ಒಡೆಯನಿಗೆ ತಕ್ಕ ಫಲವನ್ನು ಕೊಡದೆ ಹೇಗೆ ಬಿಟ್ಟೀತು? ಆದ್ದರಿಂದ ಆ ಕರ್ಮದ ಫಲವನ್ನು ಅನುಭವಿಸುವದಕ್ಕಾಗಿ ಅವನು ಪುತ್ತೆ ಹುಟ್ಟಿಯೇ ತೀರಬೇಕು. ಅವನು ಹುಟ್ಟದೆ ಹೋದರೆ ಆ ಸತ್ಕರ್ಮವು ತನ್ನ ಫಲವನ್ನು ಯಾರಿಗೆ ಕೊಡಬೇಕು? ಅದು ಶಕ್ಯವಲ್ಲ. ಯಾರು ಸತ್ಕರ್ಮವನ್ನು ಮಾಡುತ್ತಿದ್ದು ಅದರ ಪ್ರಯೋಜನವನ್ನು ಪೂರ್ಣಮಾಡಿಕೊಳ್ಳದೆ ಸಾಯುವರೋ, ಅವರು ಮತ್ತೆ ಹುಟ್ಟಿ ಅದರ ಫಲವನ್ನುಣ್ಣಬೇಕು. ಆದರೆ ಇಂಥವರು ಹುಟ್ಟುವುದಕ್ಕೆ ಸ್ಥಲವು ಯಾವದು? ಮರುಭೂಮಿಯಲ್ಲಿ ಕಬ್ಬು ಹುಟ್ಟೀತೇ? ಆದ್ದರಿಂದ ಭಗವಂತನು ಇದಕ್ಕೆ ತಕ್ಕ ವ್ಯವಸ್ಥೆಯನ್ನು ಹೇಳಿದ್ದಾನೆ. ಅದೇನೆಂದರೆ– ತನ್ನ ಪ್ರಯತ್ನದಲ್ಲಿ ಸಿದ್ಧಿಯನ್ನು ಪಡೆಯದೆ ಹೋಗಿದ್ದ ಮನುಷ್ಯನು ಒಳ್ಳೇ ಸುಶೀಲರಾದವರ ಮತ್ತು ಶ್ರೀಮಂತರಾದವರ ಮನೆಯಲ್ಲಿ ಹುಟ್ಟುತ್ತಾನೆ. 'ಆತ್ಮಶಕ್ತಿಯ ಪರಿಪೂರ್ಣತೆಗಾಗಿ ಅಥವಾ ಆತ್ಮಪ್ರಾಪ್ತಿಗಾಗಿ ಮಾಡಿದ ಪರಿಪರಿಯ ಯತ್ನಕ್ಕೆ ಮೂಗಿಗೆ ಹತ್ತಿದ ತುಪ್ಪದಂತೆ ಐಹಿಕಸುಖವನ್ನು ಸುಮ್ಮನೆ ಮೂಸಿನೋಡುತ್ತಿರುವದೇ ಪರಮಾವಧಿಯೋ?" ಎಂದರೆ ಹಾಗಲ್ಲ; ಹಿಂದಿನ ಜನ್ಮದಲ್ಲಿ ಮಾಡಿದ ಪ್ರಯತ್ನವು ತೀವ್ರವಾಗಿದ್ದರೆ–ಅವನು ಬುದ್ಧಿವಂತರಾದ ಸಿದ್ಧರ ಕುಲದಲ್ಲಿಯೇ ಎಂದರೆ ಆತ್ಮಶಕ್ತಿಯನ್ನು ಪೂರ್ಣಮಾಡಿಕೊಂಡವರ ಅಥವಾ ಆತ್ಮಪ್ರಾಪ್ತಿಯನ್ನು ಮಾಡಿಕೊಂಡವರ ಮನೆತನದಲ್ಲಿಯೇ, ಹುಟ್ಟಬಹುದು ಇನ್ನೂ ವಿಚಾರಮಾಡಿದರೆ ಅವನ ಪೂರ್ವಪ್ರಯತ್ನದ ಫಲವು ಬರೀ ಸ್ಥಳ ಪ್ರಾಶಸ್ತ್ಯದ ಪ್ರಾಪ್ತಿಯಲ್ಲಿಯೇ ಮುಗಿಯುವದಿಲ್ಲ. ಏಕೆಂದರೆ, ಬರೀ ಆ ಪ್ರಾಪ್ತಿಯೊಂದೇ ಮಹತ್ತ್ವದ್ದಲ್ಲ. ಆತ್ಮಶಕ್ತಿಯ ಬೆಳವಣಿಗೆಯಷ್ಟು ಅಥವಾ ಆತ್ಮಪ್ರಾಪ್ತಿಯಷ್ಟು ಮಹತ್ತ್ವದ್ದಲ್ಲದ ಇತರ ಸತ್ಕರ್ಮಗಳನ್ನು ಮಾಡಿದ್ದರೂ ಅದರ ಫಲವಾಗಿ ಶ್ರೀಮಂತರ ಕುಲದಲ್ಲಿಯೋ ಸಿದ್ಧರ ಕುಲದಲ್ಲಿಯೊ

ಜನ್ಮವಾಗಬಹುದು. ಆದರೆ ಅವನು ಮುಂದೆ ಆತ್ಮಶಕ್ತಿಯನ್ನು ಬೆಳೆಸಿಕೊಳ್ಳುವವನೂ ಆತ್ಮಪ್ರಾಪ್ತಿಯನ್ನು ಮಾಡಿಕೊಳ್ಳುವವನೂ ಆಗಿಯೇ ತೀರುವನೆಂಬ ನಿಯಮವಿಲ್ಲ. ಉದಾಹರಣೆಯನ್ನು ನೋಡಿರಿ. ಅಹಲ್ಯಾಬಾಯಿಯು ಭಾರತೀಯಧರ್ಮದ ಜೀವಜ್ಯೋತಿಯೆಂದು ಜಗದ್ವಿಖ್ಯಾತಳಾಗಿರುವಳಷ್ಟೆ. ಯಾವಾಕೆಯು ಬ್ರಾಹ್ಮಣರನ್ನು ಸಾಕ್ಷಾದ್ಬ್ರಹ್ಮಸ್ವರೂಪರೆಂಬ ಭಾವನೆಯಿಂದ ಸತ್ಕರಿಸುತ್ತಿದ್ದಳೋ ಯಾವಾಕೆಯು ತನ್ನ ಮೇಲೆ ಅಧಿಕಾರಿಯಾದ ಪೇಶ್ವೆಯನ್ನು ಕೂಡ ತನ್ನ ಮನೋನುವರ್ತಿಯಾಗಿ ಮಾಡಿಕೊಂಡಿದ್ದಳೋ ಯಾವಾಕೆಯು ಕರುಣಾಮೂರ್ತಿಯಾಗಿ ಪ್ರಜೆಗಳ ಮೇಲೆ ಮಾತೃಪ್ರೇಮವೆಂಬ ಅಮೃತಪ್ರವಾಹವನ್ನು ಹಾಯಿಸಿ ಅವರನ್ನು ಉಜ್ಜೀವನಗೊಳಿಸಿದಳೋ ಅಂಥ ಅಹಲ್ಯಾಬಾಯಿಯ ಗರ್ಭದಿಂದ ಒಬ್ಬ ಪುತ್ರನು ಜನ್ಮವೆತ್ತಿದನು. ಎಂಥ ಪುತ್ರ? ಕ್ಷೀರಸಮುದ್ರನಲ್ಲಿದರೂ ವಿಷವು ಹುಟ್ಟಿ ಬರಲಿಲ್ಲವೇನು? ಹಾಯ್! ಹಾಯ್!! ಅಹಲ್ಯಾಬಾಯಿಯ ಮಗನಾದ ಮಾಲೇರಾಯನು ಜೋಡುಗಳಲ್ಲಿ ಚೇಳುಗಳನ್ನಿಟ್ಟು ಬ್ರಾಹ್ಮಣರ ಕಾಲಿಗೆ ತೊಡಿಸಿದನು; ತಂಬಿಗೆಗಳಲ್ಲಿ ಹಾವುಗಳನ್ನು ತುಂಬಿ ಪೂಜ್ಯರ ಕೈಯಲ್ಲಿಟ್ಟನು; ತನ್ನ ಕೈಕೆಳಗಿನವರ ಮೇಲೆ ಕೈಮಾಡಿ ಅವರಿಂದ ಛೀಗುಟ್ಟಿಸಿಕೊಳ್ಳುತ್ತಿದ್ದನು; ಒಬ್ಬ ನಿರಪರಾಧಿಗೆ ಮರಣದಂಡನೆಯನ್ನು ಕೊಟ್ಟು ಅದರ ಫಲವಾಗಿ ತಾನೂ ಮರಣದ ನೆಳೆತಕ್ಕೆ ಸಿಕ್ಕುಬಿದ್ದನು. ಆದ್ದರಿಂದ ಸಾಧಕರಾಗಿದ್ದವರಿಗೆ ಬರೀ ಜನ್ಮಸ್ಥಾನದ ಪ್ರಾಶಸ್ತ್ಯವೇ ಪ್ರಧಾನಫಲವಲ್ಲ. ಜನ್ಮಸ್ಥಾನದ ಪ್ರಾಶಸ್ತ್ಯವೂ ಇದ್ದು ಅದರ ಜೊತೆಗೆ ಅವರು ತಮ್ಮ ಹಿಂದಿನ ವಾಸನೆಯನ್ನು ಹಿಡಿದು ತಮಗೆ ಅರಿವಿಲ್ಲದಂತೆ ಮುಂದೆ ಸಾಗಬೇಕು. ಇದು ದೈವೀಸಂಪತ್ತಿನ ಮುಖ್ಯಫಲ.

ಇನ್ನು ಆಸುರೀಸಂಪತ್ತಿನ ವಿಚಾರಮಾಡಿದರೆ ಇಲ್ಲದ ಯೋಗ್ಯತೆಯನ್ನು ತೋರಿಸಿಕೊಳ್ಳುವದು, ತನ್ನ ಅಧಿಕಾರದ ಪ್ರವಾಹವನ್ನು ಎಲ್ಲರ ಮೇಲೆಯೂ ಹಾಯಿಸುವದು, ತನ್ನ ಸ್ಥಿತಿಗೆ ಮೀರಿದ ಗೌರವವನ್ನು ತನ್ನಲ್ಲಿ ತಾನೇ ಆರೋಪಿಸಿಕೊಳ್ಳುವದು, ಸಿಟ್ಟಾಗುವದು, ಕಲ್ಲೆದೆಯವನಾಗುವದು, ಯಥಾರ್ಥವನ್ನು ತಿಳಿಯದಿರುವದು—ಇವೇ ಆಸುರೀಸಂಪತ್ತಿನ ಮುಖ್ಯ ಲಕ್ಷಣಗಳು. ಈ ಗುಣಗಳು ತಲೆದೋರುತ್ತಲೇ ಯಾವದನ್ನು ಮಾಡ

ಬೇಕೆಂಬುದೂ ಯಾವದನ್ನು ಬಿಡಬೇಕೆಂಬುದೂ ಅವರಿಗೆ ತಿಳಿಯದೆ ಹೋಗುವದು; ಅವರ ಮನೋವಾಕ್ಕಾಯಗಳ ಶುದ್ಧಿಯು ಹಾರಿಹೋಗುವದು; ಅವರಲ್ಲಿ ಸಂಪ್ರದಾಯಸಿದ್ಧವಾದ ಸದಾಚಾರಗಳು ಮಾಯವಾಗುವವು; ಸತ್ಯವು ಅವರ ನಾಲಿಗೆಯನ್ನು ಆರೋಹಣ ಮಾಡಲಾರದೆ ಹೋಗಿ, ಈ ಜಗತ್ತು ಇಲ್ಲವೇ ಇಲ್ಲವೆಂತಲೂ ಇದರ ಕಾಣುವಿಕೆಗೆ ಆಧಾರವೇ ಇಲ್ಲವೆಂತಲೂ ಈ ಜಗತ್ತಿಗೆ ನಿಯಾಮಕನಾದ ಈಶ್ವರನೂ ಇಲ್ಲವೆಂತಲೂ ಮಾತುಗಳು ಹೊರಬೀಳುವವು; ಹೊರಗೆ ಸುಖವಿಲ್ಲವೆಂಬವನ್ನು ತಿಳಿಸುವದೇ ಜಗತ್ತಿನ ಉದ್ದೇಶವೆಂಬ ವೇದಾಂತಗಳ ಸಿದ್ಧಾಂತಕ್ಕೆ ವಿರೋಧವಾಗಿ ವಿಷಯಗಳೆಲ್ಲಾ ಮನುಷ್ಯನ ಉಪಭೋಗಕ್ಕಲ್ಲದೆ ಮತ್ತೇತಕ್ಕೂ ಅಲ್ಲವೆಂದು ಅವರು ವಾದಿಸುವರು. ಹೀಗೆ ವಿಚಾರಮಾಡುತ್ತ ಅವರು ದೇವರನ್ನು ಮರೆತು ಕ್ಷುದ್ರಬುದ್ಧಿಗಳಾಗಿ, ಪಾಪಭೀತಿ ಇಲ್ಲದೆ ಕ್ರೂರ ಕರ್ಮಗಳನ್ನು ಮಾಡುತ್ತ ಲೋಕಕಂಟಕರಾಗುತ್ತಾರೆ. ಅವರ ಆಶೆಯು ಎಂದಿಗೂ ಪೂರ್ಣವಾಗುವ ಹಾಗೆಯೇ ಇರುವದಿಲ್ಲ. ಭ್ರಾಂತಿಯಿಂದ ತಪ್ಪು ತಿಳುವಳಿಕೆಯನ್ನು ಹೊಂದಿ, ಮಾಡಬಾರದ ಕೆಲಸಗಳಿಗೆ ದೀಕ್ಷೆಯನ್ನು ವಹಿಸಿ, ಅವರು ಆದಷ್ಟು ವಿಷಯಸುಖವನ್ನು ಅನುಭವಿಸುವದರ ಹೊರತು ಹೆಚ್ಚಿನದಿಲ್ಲವೆಂಬ ನಿಜಕ್ಕೆ ನಿಂತವರಾಗಿರುತ್ತಾರೆ. ಇದಲ್ಲದೆ ಅವರು ಅನೇಕ ಬಯಕೆಗಳ ಬಲೆಗೆ ಬಿದ್ದು ಮನಸ್ಸಿನ ತಳಮಳವನ್ನು ಹೊಂದಿ ತಮ್ಮ ದೇಹೇಂದ್ರಿಯಗಳ ಸುಖಕ್ಕಾಗಿ ದುರ್ಮಾರ್ಗದಿಂದ ಹೆಚ್ಚು ಹಣವನ್ನು ಕೂಡಿಹಾಕುವದಕ್ಕೆ ಯತ್ನಿಸುತ್ತಾರೆ. ಅವರ ತಪ್ಪುತಿಳುವಳಿಕೆಗಳಿನ್ನೆಷ್ಟೆಂದು ಹೇಳಬೇಕು! "ಈಗ ನಮಗೆ ಇದು ಸಿಕ್ಕಿತು; ಇನ್ನು ಇಂಥದ್ದನ್ನು ಸಂಪಾದಿಸುತ್ತೇವೆ; ಈಗ ನಮ್ಮಲ್ಲಿ ಇಷ್ಟು ಇದೆ; ಇನ್ನೂ ನಮಗೆ ಇಷ್ಟು ದೊರೆಯುತ್ತದೆ; ಈ ಶತ್ರುವನ್ನು ನಾವು ಕೊಂದೆವು; ಇತರರನ್ನೂ ನಾವು ಕೊಲ್ಲುತ್ತೇವೆ; ನಾವೇ ಈ ಪ್ರಪಂಚದಲ್ಲಿ ಮುಂದಾಳುಗಳು; ಎಲ್ಲ ಸುಖ ಸಾಧನಗಳೂ ನಮಗಾಗಿಯೇ ಇರುವವು; ನಮ್ಮ ಪ್ರಯತ್ನಗಳೆಲ್ಲ ನೆರವೇರಿಯೇ ತೀರುತ್ತವೆ; ನಮ್ಮ ಸಮಾನರಾದ ಶಕ್ತಿವಂತರು ಯಾರೂ ಇಲ್ಲ; ನಾವೇ ಶ್ರೇಷ್ಠರು; ನಮ್ಮ ಕುಲವೇ ಸತ್ಕುಲ." ಹೀಗೆ ತಿಳಿದುಕೊಂಡು ತಮ್ಮ ಕಾಲಿಗೆ ತಾವೇ ಶರಣುಮಾಡಿಕೊಳ್ಳುವವರಾಗಿ ಮದೋನ್ಮತ್ತರಾಗಿ

ವರ್ತಿಸುವರು. ಅವರು ಒಮ್ಮೊಮ್ಮೆ ದೇವತಾಕಾರ್ಯಗಳನ್ನು ಮಾಡುವ ದುಂಟು. ಅದು ಬರೀ ಹೊರಗಣ ತೋರಿಕೆಯು ಮಾತ್ರದ್ದಾಗಿರುವದು. ಅದು ಯಥಾವಿಧಿಯಾಗಿರುವದಿಲ್ಲ; ಯಥಾರುಚಿಯಾಗಿರುವುದು. ಇಂಥ ವರಿಗೆ ನಿತ್ಯನರಕವಲ್ಲದೆ ಮತ್ತೇನಾದೀತು? ಆದ್ದರಿಂದ ಆಸುರೀಸಂಪತ್ತನ್ನಾಶ್ರಯಿಸಿದರೆ ಆತ್ಮಶಕ್ತಿಯ ಬೆಳವಳಿಗೆಗೂ ಆತ್ಮಸ್ವಾಪ್ತಿಗೂ ಪ್ರತಿಬಂಧಕ ವಾದ ತೊಡಕು ಹೆಚ್ಚುವದೇ ಫಲವಾಗುವದು. ಇಂಥ ಸ್ಥಾನದಲ್ಲಿ ಪವಿತ್ರ ಮೂರ್ತಿಗಳು ಹೇಗೆ ಉತ್ಪನ್ನರಾದಾರು? ಆದ್ದರಿಂದ ಆಸುರೀಸಂಪತ್ತಿಗೆ ಅವ ಕಾಶವನ್ನು ಕೊಡದೆ ಅದನ್ನು ಪ್ರಯತ್ನದಿಂದ ಹಿಮ್ಮೆಟ್ಟಿಸಿ ದೈವೀಸಂಪ ತ್ತನ್ನು ಬೆಳಸಿಕೊಳ್ಳಬೇಕು. ಭಗವಂತನ ಬಾಯಿಂದ ದೈವೀಸಂಪತ್ತಿನ ಲಕ್ಷಣವನ್ನೂ ಆಸುರೀಸಂಪತ್ತಿನ ಲಕ್ಷಣವನ್ನೂ ಅವುಗಳ ಫಲವನ್ನೂ ಕೇಳಿದ ಅರ್ಜುನನು ತಾನು ಯಾವ ಸಂಪತ್ತಿನಲ್ಲಿದ್ದೇನೋ ಎಂದು ತನ್ನಲ್ಲಿ ತಾನೇ ಬೆಚ್ಚಿಬಿದ್ದುದನ್ನು ನೋಡಿ ಶ್ರೀಕೃಷ್ಣನು "ಅರ್ಜುನನೆ, ಕಳವಳ ಗೊಳ್ಳಬೇಡ. ನೀನು ದೈವಸಂಪತ್ತಿನ ಸತ್ಕುಲದಲ್ಲಿ ಹುಟ್ಟಿದವನಾಗಿದ್ದಿ" ಎಂದು ಅವನನ್ನು ಸಂತಯಿಸಿದ್ದಾನೆ. ಇದರಿಂದ ಆತ್ಮೋನ್ನತಿಯನ್ನು ಮಾಡಿಕೊಳ್ಳುವವರ ಜನ್ಮಕ್ಕೆ ಸದ್ವಂಶದ ಅಗತ್ಯವು ವ್ಯಕ್ತವಾಯಿತು.

ಸದ್ವಂಶವು ಆತ್ಮಶಕ್ತಿಯನ್ನು ಅದರ ಪರಮಾವಧಿಗೆ ಏರಿಸುವ ಸಾಮರ್ಥ್ಯವುಳ್ಳದ್ದು. ನೋಡಿರಿ. ಮೇವಾಡದ ರಾಜಪುತ್ರರು ತಮ್ಮ ವಂಶ ವೃಕ್ಷಕ್ಕೆ ಲವನನ್ನು ತಾಯಿಬೇರೆಂದು ನಿರ್ದೇಶಮಾಡುವರು. ಲವನ ಚರಿತ್ರೆಯು ಬರೀ ಭರತಖಂಡವನ್ನು ಮಾತ್ರವೇ ಅಲ್ಲ; ಇಡೀ ಭೂಮಂಡಲ ವನ್ನೇ ಬೆರಗುಮಾಡತಕ್ಕದ್ದು. ಲವನು ಶ್ರೀರಾಮಚಂದ್ರಮೂರ್ತಿಯ ಮುದ್ದುಮಗ. ಶ್ರೀರಾಮನು ತಾನು ಮನುಷ್ಯರೂಪದಲ್ಲಿದ್ದರೂ ರಾಕ್ಷಸಾಧಿಪನಾದ ರಾವಣನ ರಕ್ತವನ್ನು ರಣರಂಗದಲ್ಲಿ ಹರಿಸಿ ಅದರ ತಣ್ಪಿನಿಂದ ಭಾರತಭೂಮಾತೆಯ ಸಂತಾಪವನ್ನು ಸಮಾಧಾನಗೊಳಿಸಿ ತನ್ನ ಕೀರ್ತಿ ಚಂದ್ರಿಕೆಯನ್ನು ಎಲ್ಲೆಲ್ಲಿಯೂ ಬೆಳಗಿರುವನಷ್ಟೆ. ಈ ಮಹತ್ಕಾರ್ಯವನ್ನು ಸಾಧಿಸುವದಕ್ಕೆ ಅವನಿಗೆ ವಿಭೀಷಣ, ಸುಗ್ರೀವ, ಹನುಮಂತ—ಮೊದಲಾದ ಅಸಾಧಾರಣಪರಾಕ್ರಮಿಗಳ ಬೆಂಬಲವಿತ್ತು. ಇಷ್ಟಿದ್ದರೂ ಇವರೆಲ್ಲರ ಕೆಚ್ಚೆದೆಗಳೂ ಲವನ ಕೋಮಲವಾದ ಹೃದಯವೇದಿಕೆಯ ಮುಂದೆ ಈಸು

ಕುಂಬಳದ ೬೦ರುಡೆಗಳಾದುವು. ರಾಮಚಂದ್ರನ ಯಜ್ಞಾಶ್ವವನ್ನು ಎಳೇ ಹುಲ್ಲಿನ ಹಗ್ಗದಿಂದ ಬಾಳೇಕಂಬಕ್ಕೆ ಕಟ್ಟಿ ರಣಾಂಗಣದಲ್ಲಿ ಇತರರ ಸಹಾಯವಿಲ್ಲದೆ ತನ್ನ ಬಾಲ್ಯಾವಸ್ಥೆಯ ಕ್ಷಾತ್ರತೇಜಸ್ಸಿನ ಉಜ್ವಲತೆಯಿಂದಲೇ ಅಪರಿಮಿತಸೇನೆಯ ಮತ್ತು ಅಪಾರಬಲಸಂಪನ್ನರಾದ ರಾಮಲಕ್ಷ್ಮಣಾದಿಗಳ ದೃಷ್ಟಿಬಂಧನವನ್ನು ಮಾಡಿದಂಥ ಲವನ ಕೈಚಳಕವು ವಾಲ್ಮೀಕಿಋಷಿಗಳ ಕೈಚಳಕದಿಂದ ರಾಮಾಯಣದಲ್ಲಿ ಚಿತ್ರಿತವಾಗಿದೆ. ಅಸಹಾಯಶೂರನಾದ ಆ ಲವನ ಮನೆತನದಲ್ಲಿ ಅವನ ರಕ್ತಧಾರೆಯು ಇಳಿಯುತ್ತಾ ಬಂದು ಇನ್ನೂ ಅದರ ಬಿಸಿಯು ಕಾರ್ಯರೂಪದಲ್ಲಿ ವ್ಯಕ್ತವಾಗುತ್ತಲೇ ಇರುವದು. ದೇಶಾಭಿಮಾನಕ್ಕಾಗಿ ಮತ್ತು ಧರ್ಮಾಭಿಮಾನಕ್ಕಾಗಿ ಪ್ರಾಣಾಂತದವರೆಗೂ ಹೋರಾಡುವವರಲ್ಲಿ ಮೇವಾಡದವರು ಅಗ್ರಗಣ್ಯರಾಗಿರುವರು. ಈ ಮನೆತನದಲ್ಲಿ ಸಂಗ್ರಾಮಸಿಂಹನೆಂಬೊಬ್ಬನ ಜನ್ಮವಾಗಿತ್ತು. ಅವನ ವೀರಾವೇಶವನ್ನು ವಿವರಿಸುವದಕ್ಕೆ ಈಗ ಸಮಯವಿಲ್ಲ. ಇಷ್ಟು ಹೇಳಿದರೆ ಸಾಕು. ಅವನು ಒಂದು ಧರ್ಮಯುದ್ಧಕ್ಕೆ ಮೈಗೊಟ್ಟಿದ್ದಾಗ ಒಂದು ಕೈ ಒಂದು ಕಾಲು ಮತ್ತು ಒಂದು ಕಣ್ಣು ಹೋದರೂ ಕೂಡ ಹಿಂದೆಗೆಯದೆ

"ಅಡಿಯಮುಂದಿಡೆ ಸ್ವರ್ಗ; ಅಡಿಯ ಹಿಂದಿಡೆ ನರಕ;
ಅಡಿಗಶ್ವ ಮೇಧಫಲವಕ್ಕು; ಕಾರ್ಯಕ್ಕೆ
ಮುಡಿಯಲೇ ಬೇಕು ಸರ್ವಜ್ಞ"

ಎಂಬ ಉಪದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡು ಶತ್ರುಗಳ ಮಧ್ಯದಲ್ಲಿ ಗುಡುಗಾಡಿ ದೇಹವೆಲ್ಲ ಚೂರುಚೂರಾಗಿ ಕಡಿದು ಬೀಳುವವರಿಗೂ ಉತ್ಸಾಹದಿಂದ ಮುಂದುವರಿಯುತ್ತಿದ್ದದ್ದು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಮೂಡಿರುವದು. ಈ ಸಂಗ್ರಾಮಸಿಂಹನ ಮುಮ್ಮಗನಾದ ಪ್ರತಾಪಸಿಂಹನು ತನ್ನ ವಂಶಪರಂಪರಾಗತವಾದ ಆತ್ಮಶಕ್ತಿಯನ್ನು ಅದರ ಶಿಖರಕ್ಕೇರಿಸಿದನು. ಅಕ್ಬರನ ಮಂಕುಬೂದಿಯು ಉಳಿದ ಎಲ್ಲ ರಾಜಪುತ್ರರನ್ನೂ ಮರುಳುಮಾಡಿದರೂ ಅದರ ಬೇಳುವೆಯು ಪ್ರತಾಪನ ಮುಂದೆ ನಡೆಯಲಿಲ್ಲ. ಪರಂಪರಾಗತವಾದ ಕ್ಷಾತ್ರತೇಜಸ್ಸಿನ ಪವಿತ್ರರಕ್ತದ ಪರಮಾಣುಗಳು ತಮ್ಮ ಪರಿಶುದ್ಧತೆಯನ್ನು ಕಳೆದುಕೊಳ್ಳದೆ ಈಗ ಎಲ್ಲಿಯಾದರೂ ಅಜ್ಞಾತವಾಸದಲ್ಲಿ ಉಳಿದುಕೊಂಡಿದ್ದರೆ ಅದು ಪ್ರತಾಪನ ಮನೆತನ

ದಲ್ಲಿಯೇ. ಪ್ರತಾಪನು ತನ್ನ ಪ್ರತಾಪದಿಂದ ಸ್ವಾಭಿಮಾನವನ್ನು ಕಾದು ಕೊಂಡು ಎಂಥ ಮಹತ್ತ್ವಾದ ದುಃಖಕ್ಕೂ ಎದೆಗೆಡದೆ ಸ್ವಜಾತಿಯ ಯಶಸ್ಸನ್ನು ಕಾಯುವದಕ್ಕೆ ತನ್ನ ಸರ್ವಸಾಮರ್ಥ್ಯವನ್ನೂ ವಿನಿಯೋಗಿಸಿದವನಾಗಿದ್ದಾನೆ. ಕ್ಷಾತ್ರತೇಜಸ್ಸಿನ ಪ್ರಾಚೀನಸಂಸ್ಕೃತಿಯು ಪ್ರತಿಯೊಬ್ಬ ರಾಜಪುತ್ರನಲ್ಲಿಯೂ ಪ್ರಕಟವಾಗುವಂತೆ ಅವನು ಹಾಕಿದ ನಿಯಮಗಳು ಈಗಲೂ ಆಚರಣೆಯಲ್ಲಿವೆ. ಅವೇನೆಂದರೆ: "ತಮ್ಮ ರಾಜಧಾನಿಯಾದ ಚಿತ್ತೂರಿನ ವಾತಾವರಣವು ಸ್ವರಾಜ್ಯದ ನಿಶಾನೆಯ ಪಟಪಟಧ್ವನಿಯಿಂದ ಗುಡುಗುಟ್ಟುವವರೆಗೂ ಕುಲಾಭಿಮಾನಿಯಾದ ಯಾವ ರಾಜಪುತ್ರನೂ ಕ್ಷೌರವನ್ನು ಮಾಡಿಸಿಕೊಳ್ಳಕೂಡದು; ಭೋಜನಕಾಲದಲ್ಲಿ ಚಿನ್ನದ ತಟ್ಟೆಗಳನ್ನು ಉಪಭೋಗಮಾಡದೆ ಎಲೆಗಳ ಮೇಲೆ ಉಣ್ಣಬೇಕು; ನಿದ್ರಾಕಾಲದಲ್ಲಿ ಮೆತ್ತಗಿರುವ ಹಾಸಿಗೆಯ ಮೇಲೆ ಮಲಗದೆ ಹುಲ್ಲಿನ ಮೇಲೆ ಮಲಗಬೇಕು; ಅರಮನೆಗಳಲ್ಲಿ ವಾಸಮಾಡದೆ ಗುಡಿಸಲುಗಳಲ್ಲಿರಬೇಕು; ರಣಭೇರಿಯನ್ನು ಸೈನ್ಯದ ಹಿಂಭಾಗದಲ್ಲಿ ಹೊಡೆಯಬೇಕು." ಈ ನಿಯಮಗಳು ಈಚೀಚೆಗೆ ಕಾಲವೈಪರೀತ್ಯದಿಂದ ಎಷ್ಟೋ ಶಿಥಿಲವಾಗುತ್ತ ಬಂದಿದ್ದರೂ ಇನ್ನೂ ಹೃದಯದಲ್ಲಿ ಕಳವಳವನ್ನೆಬ್ಬಿಸುವ ಸಾಮರ್ಥ್ಯವುಳ್ಳವುಗಳಾಗಿವೆ. ಆ ರಾಜಪುತ್ರರು ಈಗ ಚಿನ್ನದ ತಟ್ಟೆಯಲ್ಲಿ ಉಂಡರೂ ಅದರ ಕೆಳಗೆ ಎಲೆಯನ್ನು ಹಾಕಿಕೊಳ್ಳುತ್ತಾರೆ; ಹಾಸಿಗೆಯ ಮೇಲೆ ಮಲಗಿದರೂ ಕೆಳಗೆ ಹುಲ್ಲುಕಡ್ಡಿಯನ್ನಿಟ್ಟುಕೊಳ್ಳುತ್ತಾರೆ. ತಮ್ಮ ರಾಜ್ಯವು ಇತರರಿಗೆ ಸೂರೆಯಾಗಿ ಹೋಗಿ ತಮ್ಮ ಬಂಧುವರ್ಗದವರು ತಮ್ಮ ಯೋಗಕ್ಷೇಮಕ್ಕಾಗಿ ಪರಧರ್ಮದವರ ಕನಿಕರವನ್ನು ಕಾಯುವದನ್ನು ನೋಡಿದರೆ ಆತ್ಮಶಕ್ತಿವಂತನಿಗೆ ಹೇಗೆ ಸಹನವಾದೀತು? ಆತ್ಮಶಕ್ತಿವಂತನು ತನ್ನ ಪಂಚಪ್ರಾಣಗಳನ್ನು ಬಿಡುವದಕ್ಕೂ ಹಿಂದುಮುಂದು ನೋಡುವದಿಲ್ಲ. ಸ್ವದೇಶವನ್ನು ಸೂರೆಗೊಡುವದೆಂದರೆ, ಸ್ವಧರ್ಮವನ್ನು ಕಲಂಕಿತವಾಗಿ ಮಾಡಬೇಕೆಂದರೆ, ಸ್ವಾಭಿಮಾನವನ್ನು ಬಿಟ್ಟು ನಡೆಯಬೇಕೆಂದರೆ ಅವನಿಗೆ ಸಹನವಾಗದ ಮಾತು. ಅವುಗಳನ್ನೆಲ್ಲ ಸಾಧಿಸುವದು ತನ್ನಿಂದಾಗಲಿ, ಆಗದಿರಲಿ; ಪ್ರಯತ್ನಿಸುವದು ತನ್ನ ಕರ್ತವ್ಯ. ಆ ಕಾರ್ಯವನ್ನು ಸಾಧಿಸಿದ ಮಹತ್ತ್ವಕ್ಕಿಂತಲೂ ಅದರ ಸಾಧನೆಗಾಗಿ ಹೆಣಗಾಡಿ ಪ್ರಾಣವನ್ನು ಬಿಟ್ಟ ಮಹತ್ತ್ವಕ್ಕೆ

ಹೆಚ್ಚು ಬೆಲೆ. ಕಾರ್ಯಸಿದ್ಧಿಯು ದೈವಾಪೇಕ್ಷೆಗಧೀನವಾಗಿರುವದು. ಕಾರ್ಯ ಸಾಧನೆಯು ಪುರುಷಾಪೇಕ್ಷೆಗಧೀನವಾಗಿರುವದು. ಆದ್ದರಿಂದ ಕಾರ್ಯವನ್ನು ಸಾಧಿಸಬೇಕು; ಅಥವಾ ಸಾಧಿಸುವ ಪ್ರಯತ್ನದಲ್ಲಿಯೇ ಸಾಯಬೇಕು. ಇದೇ ಆತ್ಮಶಕ್ತಿಯ ಲಕ್ಷಣ. ಈ ಲಕ್ಷಣವು ಸತ್ಕುಲಪ್ರಸೂತನಾದ ಪ್ರತಾಪನಲ್ಲಿ ಚೆನ್ನಾಗಿ ಮೈದುಂಬಿಕೊಂಡು ತೋರಿತು. ಅವನು ತನ್ನ ಜೀವಿತಕಾಲದಲ್ಲಿ ಚಿತ್ತೂರಿನ ಸ್ವರಾಜ್ಯವನ್ನು ಸಾಧಿಸುವದಾಗದೆ ಹೋದರೂ ಅದರ ಪ್ರಯತ್ನದಲ್ಲಿಯೇ ಇದ್ದು ಮರಣಕಾಲದಲ್ಲಿ ತನ್ನ ಲಕ್ಷ್ಯವನ್ನೆಲ್ಲ ಚಿತ್ತೂರಿನ ಕಡೆಗೇ ತಿರುಗಿಸಿ ತನ್ನ ಕಣ್ಣೊಳಗೆ ಚಿತ್ತೂರನ್ನು ತುಂಬಿ ಕೊಂಡೇ ಕೊನೆಯ ಸಲ ಕಣ್ಣುಮುಚ್ಚಿದನು.

ಸತ್ಕುಲಪ್ರಸೂತರಾಗಿ ಪ್ರತಿಭೆಯನ್ನು ಪ್ರಕಾಶಮಾಡಿದವರಲ್ಲಿ ಎರಡನೇ ಪುಲಿಕೇಶಿಯನ್ನು ಮುಂದೆ ನಿಲ್ಲಿಸಬಹುದು. ಅವನ ಚಾಲುಕ್ಯ ವಂಶವು ವಿಷ್ಣುಭಕ್ತಿಯಲ್ಲಿ ಹೆಸರಾದದ್ದು. ಎರಡನೇ ಪುಲಿಕೇಶಿಯ ತಾತನ ಹೆಸರು ಒಂದನೇ ಪುಲಿಕೇಶಿ. ಆ ಒಂದನೇ ಪುಲಿಕೇಶಿಯು ತನ್ನ ಸಮಕಾಲಿಕರಲ್ಲೆಲ್ಲ ರಣವೀರಾಗ್ರಣಿಯಾಗಿದ್ದದ್ದು ಅಲ್ಲದೆ ಸರ್ವೋತ್ಕೃಷ್ಟವಾದ ಅಶ್ವಮೇಧಯಜ್ಞವನ್ನೂ ಮಾಡಿ ಧರ್ಮವೀರಾಗ್ರಣಿಯಾಗಿಯೂ ಇದ್ದನು. ಇಂಥವನ ಮೊಮ್ಮಗನಾದದ್ದಕ್ಕೆ ಸಾರ್ಥಕವಾಗಿ ಎರಡನೇ ಪುಲಿಕೇಶಿಯು ಒಳ್ಳೇ ಆತ್ಮಶಕ್ತಿಸಂಪನ್ನನಾಗಿ ಧರ್ಮಸಾಮ್ರಾಜ್ಯವನ್ನೇ ಸ್ಥಾಪಿಸಬೇಕೆಂದು ದಕ್ಷಿಣಹಿಂದುಸ್ಥಾನವನ್ನೆಲ್ಲ ತನ್ನ ಬಾಹುಬಲದಿಂದ ಆಕ್ರಮಿಸಿದ್ದಲ್ಲದೆ ಉತ್ತರಹಿಂದುಸ್ಥಾನದಲ್ಲಿ ಅಪ್ರತಿಮವೀರನಾಗಿದ್ದ ಹರ್ಷವರ್ಧನನನ್ನು ಕೂಡ ಮೂಗುಮುಚ್ಚಿಕೊಂಡು ಹಿಮ್ಮೆಟ್ಟುವಂತೆ ಮಾಡಿ ಕರ್ಣಾಟಕದ ಕೀರ್ತಿಯನ್ನು ದಿಗಂತವಿಶ್ರಾಂತವಾಗಿ ಹರಡಿದನು. ಹೀಗೆ ಆತ್ಮಶಕ್ತಿವಂತರ ಪೂರ್ವಸಂಸ್ಕಾರಕ್ಕೆ ಸದ್ವಂಶವು ಒಳ್ಳೇ ಹುರುಪುಗೊಡುವದು.

*

# ಸತ್ಸಂತತಿಯ ಸಾಧನ

ಸತ್ಸಂತತಿಗೆ ಸಾಧನವಾದಂಥ ಮತ್ತು ಸರ್ವೋತ್ಕೃಷ್ಟವಾದಂಥ ಆ ಆತ್ಮ ಶಕ್ತಿಯನ್ನು ಕೈಗೂಡಿಸಿಕೊಳ್ಳುವದಕ್ಕೆ ಪ್ರತಿಯೊಬ್ಬನೂ ಅಗತ್ಯವಾಗಿ ಪ್ರಯತ್ನಮಾಡತಕ್ಕದ್ದು. ಆದರೆ ಈ ಉದ್ದೇಶವನ್ನು ಸಾಧಿಸುವದು ಮಾತ್ರ ಅತ್ಯಂತ ಕಠಿನವಾದದ್ದು. ಸಮಸ್ತರ ಮನೋಬುದ್ಧಿಗಳನ್ನೆಲ್ಲ ಪ್ರೇರಿಸಬಲ್ಲಂಥ ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಕೃಷ್ಣನು ದೇವೇಂದ್ರನ ಅರ್ಧಾಸನವನ್ನು ಸೂರೆಗೊಂಡಂಥ ಸತ್ತ್ವಶೀಲನಾದ ಅರ್ಜುನನಿಗೆ ಮನೋ ನಿಗ್ರಹದ ವಿಷಯವನ್ನು ಉಪದೇಶಮಾಡಿದಾಗ ಅದನ್ನು ಕೃತಿಯಲ್ಲಿ ಹೇಗೆ ಸಾಧಿಸಬೇಕೆಂದು ಅರ್ಜುನನು ಭ್ರಾಂತನಾಗಿ "ಹೆ, ಕೃಷ್ಣ, ಮನಸ್ಸೆಂಬುವದು ಹರಿದಾಡುವ ಸ್ವಭಾವದ್ದು; ಇಷ್ಟೇ ಅಲ್ಲ; ಶರೀರವನ್ನೂ ಇಂದ್ರಿಯಗಳನ್ನೂ ತನ್ನ ಆಜ್ಞಾಧಾರಕಗಳನ್ನಾಗಿ ಮಾಡಿಕೊಳ್ಳುವಂಥದ್ದು. ಅದರ ಉಪಟಳ ವನ್ನು ತಡೆಯುವದಕ್ಕೆ ಯಾರಿಂದಲೂ ಆಗುವದಿಲ್ಲ. ಅದು ಯಾರಿಗೂ ಮಣಿಯತಕ್ಕದ್ದಲ್ಲ. ಗಾಳಿಯನ್ನು ಮೂಟೆ ಕಟ್ಟುವದು ಹೇಗೆ ಅಶಕ್ಯವೊ ಮನಸ್ಸನ್ನು ಹಿಡಿತಕ್ಕೆ ತೆಗೆದುಕೊಳ್ಳುವದೂ ಹಾಗೆಯೇ ಅಶಕ್ಯವು" ಎಂದು ಹೇಳಿರುತ್ತಾನೆ. ಹೀಗೆಂದಮೇಲೆ ಶ್ರೀಕೃಷ್ಣನಂಥ ಅವತಾರಪುರುಷ ನಿಗೆ ಪರಮಪ್ರಿಯನಾದ ಅರ್ಜುನನಿಗೇ ಅದು ಇಷ್ಟು ಕಠಿನವೆನಿಸಿರುವಾಗ ಉಳಿದ ನಾಡಾಡಿಯ ಜನರ ಪಾಡೇನು? ಆದರೂ ಎಲ್ಲರೂ ಪ್ರಯತ್ನ ಮಾಡಬೇಕು. ಭೌತಿಕಸಾಧನಗಳನ್ನು ಆಶ್ರಯಿಸಿದ ಬರೀ ಪ್ರಯತ್ನ ಮಾತ್ರ ಅಲ್ಲ. ಆತ್ಮಶಕ್ತಿಯಂಥ ದೈವೀಸಂಪತ್ತು ಬರಬೇಕಾದರೆ ಪರ ಮಾತ್ಮನ ಅನುಗ್ರಹವು ಬೇಕು. ಆದ್ದರಿಂದ ಪರಮಾತ್ಮನನ್ನು ಸೆರಗೊಡ್ಡಿ ಬೇಡಿಕೊಂಡು ಆತ್ಮಶಕ್ತಿಯನ್ನು ಪಡೆಯಬೇಕು. ಎಲ್ಲಿಯವರೆಗೆ ಮನು ಷ್ಯನು ಆ ಶಕ್ತಿಯನ್ನು ಪಡೆಯುವದಿಲ್ಲವೊ ಅಲ್ಲಿಯವರೆಗೆ ಅವನಿಗೆ ಮನು ಷ್ಯತ್ವವಿನ್ನೂ ಪ್ರಾಪ್ತವಾಗಿಲ್ಲವೆಂದರೂ ಸಲ್ಲುವದು. ಒಮ್ಮೊಮ್ಮೆ ಆ ಆತ್ಮ ಶಕ್ತಿಯ ವೈಭವವನ್ನು ತಾನೇ ಅನುಭವ ಮಾಡಿ ಕುಲಕೋಟಿಯನ್ನುದ್ಧಾರ ಮಾಡುವ ಯೋಗ್ಯತೆಯನ್ನು ಪಡೆಯುವ ವಿಷಯದಲ್ಲಿ ನಿರಾಶೆಯುಂಟಾ

ದರೂ ತನ್ನ ವಂಶದಲ್ಲಿ ಅಂಥ ಸತ್ಸಂತತಿಯಾಗುವಂತಾದರೂ ದೇವರಿಗೆ ಹರಕೆಯನ್ನು ಹೊರಬೇಕು.

ಲೋಕದಲ್ಲಿ ಎಲ್ಲರೂ ಸಂತತಿಗಾಗಿ ಬಾಯಿನೀರು ಸುರಿಸುವದೇಕೆ? ಮಕ್ಕಳ ದೆಸೆಯಿಂದ ತಮಗೆ ಆನಂದವು ದೊರಕುವದೆಂದಲ್ಲವೆ? ಮನುಷ್ಯನಿಗೆ ಆನಂದವು ಪುಣ್ಯದ ಫಲ; ದುಃಖವು ಪಾಪದ ಫಲ. ಯಾರಿಗಾದರೂ ಬಹುಕಾಲ ಮಕ್ಕಳಾಗದೆ ಇದ್ದರೆ ಅವರಿಗೆ ಅದು ಬಹಳ ದುಃಖವೆನಿಸುವದು. ದುಃಖವು ಪಾಪದ ಫಲವಾದ್ದರಿಂದ ಅವರಿಗೆ ಮಕ್ಕಳಾಗದಿರುವದಕ್ಕೆ ಅವರ ಪೂರ್ವಜನ್ಮದ ಯಾವದೊ ಒಂದು ಪಾಪವು ಅಡ್ಡಬಂದಿರುವದೆಂದು ಊಹಿಸಬೇಕಾಗುವದು. ಆ ಪಾಪವನ್ನು ಹಿಮ್ಮೆಟ್ಟಿಸಿದರೆ ಸಂತತಿಯಾಗಲೇಬೇಕು. ಮಕ್ಕಳಿಲ್ಲದ ಕೆಲವರು ಗರ್ಭಧಾರಣೆಗನುಕೂಲವಾದ ಔಷಧೋಪಚಾರಗಳನ್ನು ಮಾಡುವದುಂಟು. ಪಾಪದ ಫಲವಾಗಿ ಅವರಿಗೆ ಸಂತತಿ ತಡೆದಿದ್ದರೆ ಆ ಔಷಧೋಪಚಾರಗಳ ಆಟವೇನೂ ಅವರ ಮೇಲೆ ನಾಟುವದಿಲ್ಲ. ಔಷಧೋಪಚಾರಗಳೇ ಮೊದಲಾದ ಭೌತಿಕ ಸಾಧನಗಳು ಪಾಪದ ಮೇಲೆ ಕೈಮಾಡಲಾರವು. ಪಾಪಕ್ಕೆ ವಿರೋಧಿ ಪುಣ್ಯ ಒಂದೇ. ಆದ್ದರಿಂದ ಸಂತತಿಯನ್ನು ಬಯಸುವವರು ಈಶ್ವರಾರಾಧನರೂಪವಾದ ಪುಣ್ಯವನ್ನು ಮಾಡಬೇಕು. ಪ್ರಬಲವಾದ ಪುಣ್ಯವು ತನ್ನ ಉಜ್ಜ್ವಲವಾದ ಕಾಂತಿಯನ್ನು ಬೀರಿತೆಂದರೆ ಪಾಪವು ಮೂಗುಮುಚ್ಚಿಕೊಂಡು ಒಂದು ಮೂಲೆಯಲ್ಲಿ ಮುದುರಿಕೊಳ್ಳುವದು. ಆದ್ದರಿಂದ ಸಂತತಿಯಾಗುವದಕ್ಕೆ ಈಶ್ವರಾರಾಧನೆಯೇ ಸರ್ವೋತ್ಕೃಷ್ಟಸಾಧನವು.

ಯಾವ ಆರಾಧನೆಯೂ ಇಲ್ಲದೆಯೇ ಎಷ್ಟೋ ಜನಗಳ ಸಂತತಿ ಬೆಳೆಯುತ್ತಿರುವದಷ್ಟೆ. ಆ ಮಕ್ಕಳಲ್ಲಿ ಆತ್ಮಶಕ್ತಿಯ ತೇಜಸ್ಸು ಹೊರಹೊಮ್ಮುವ ಸಂಭವವು ಕಡಿಮೆ. ಏಕೆಂದರೆ: ಆತ್ಮಶಕ್ತಿಯ ತೇಜಸ್ಸು ಉತ್ಕಟವಾದ ಪುಣ್ಯದ ಫಲ. ಎಲ್ಲರಿಗೂ ಯಾವಾಗಲೂ ಉತ್ಕಟವಾದ ಪುಣ್ಯಗಳೇ ಫಲಿಸುತ್ತಿರುವದಿಲ್ಲ. ಆದಕಾರಣ ಸಾಮಾನ್ಯ ಸಂತತಿಯೆಲ್ಲ ಸಾಮಾನ್ಯ ಪುಣ್ಯಗಳ ಫಲವಾಗಿಯೇ ಮುಂದುವರಿಯುತ್ತಿರುವದು. ಯಾವ ದಂಪತಿಗಳು ವಂಶೋದ್ಧಾರಕವಾದ ಸಂತತಿಗಾಗಿ ಅಲ್ಲದೆ ಕ್ಷಣಿಕಸುಖದ ಮೇಲಿನ ಮೋಹದಿಂದ ದಾಂಪತ್ಯದ ದುಂದನ್ನು ಮಾಡುವರೊ ಯಾವ

ಸ್ತ್ರೀಪುರುಷರು ಪರಮಾತ್ಮವಿಚಾರವನ್ನು ಬದಿಗೊತ್ತಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿ ವಿಷಯಗಳ ವಿಚಾರದಲ್ಲಿ ತೊಳಲುತ್ತಿರುವರೋ, ಯಾವ ದ್ವಿಪಾದಪ್ರಾಣಿಗಳಿಗೆ ಭವಿತವ್ಯತೆಯ ದೂರದೃಷ್ಟಿ ಹಾರಿಹೋಗಿ ಅರಿಗಣ್ಣಾಗಿ ರುವದೋ ಅಂಥವರಿಗೆ ಉತ್ಕಟವಾದ ಪುಣ್ಯವೆಲ್ಲಿಯದು? ಆದ್ದರಿಂದ ಅವರು ಕ್ಷುದ್ರಪುಣ್ಯಗಳ ಫಲವಾಗಿ ಮಕ್ಕಳನ್ನು ಪಡೆಯುತ್ತಾರೆ. ಕ್ಷುದ್ರಪುಣ್ಯ ಗಳೆಂಬ ಮಾತಿನಿಂದಲೇ ಅವು ಬಹುಬೇಗ ನಾಶವಾಗತಕ್ಕವುಗಳೆಂಬ ಧ್ವನಿ ತೋರುತ್ತದೆ. ಅದರಂತೆಯೇ ಆ ಮಾತಾಪಿತೃಗಳ ಸಂತತಿಯು ಸ್ವಾರ್ಥ ಪರವಾಗಿ ಕೊನೆಗಂಡು ಪ್ರಾರಬ್ಧವೆಂಬ ಪ್ರವಾಹಕ್ಕೆ ಪರವಶವಾಗಿ ಸ್ವಾರ್ಥದ ಸೆಳೆತಕ್ಕೆ ಸಿಕ್ಕಿ ನಡೆಯುತ್ತಿದ್ದು ಒಂದು ದಿನ ನಿರ್ನಾಮವಾಗುವದು.

ಲೋಕದ ಏಳಿಗೆಗೆ ಸಂತತಿಯ ಬೆಳವಣಿಗೆ ಅಗತ್ಯವೆಂಬುದು ನಿಜ. ಆದರೆ ಸ್ವಾರ್ಥಪರರಿಂದ ಏನು ಪ್ರಯೋಜನ? ಸ್ವಾರ್ಥಪರರಾದ ಮಕ್ಕ ಳಿಂದ ಯಾವ ತಂದೆತಾಯಿಗಳು ಅಭ್ಯುದಯವನ್ನು ಪಡೆದಿದ್ದಾರೆ? ಎಷ್ಟು ನಕ್ಷತ್ರಗಳು ಹುಟ್ಟಿದರೆ ಆಕಾಶವೆಲ್ಲ ತೇಜೋಮಯವಾಗಿ ಜನರಿಗೆ ಆಹ್ಲಾದ ಕರವಾದೀತು? ಆದ್ದರಿಂದ ಲೋಕದ ಅಭ್ಯುದಯಕ್ಕೆ ಸಾಧನವಾದದ್ದು ಬರೀ ಸಂತತಿ ಮಾತ್ರವಲ್ಲ; ಸತ್ಸಂತತಿ. ಅಂಥ ಸತ್ಸಂತತಿ ಆಗಾಗ ಒಮ್ಮೊಮ್ಮೆ ಆಗಿಹೋದರೂ ಸಾಕು; ಅದರ ಪ್ರಭಾವವು ಎಷ್ಟೋ ಕಾಲ ಉಳಿದುಕೊಂಡಿರುವದು. ಒಮ್ಮೆ ನದಿ ಉಕ್ಕಿ ದಡದ ಮೇಲೆ ಹರಿಯಿ ತೆಂದರೆ ಸಾಮಾನ್ಯವಾಗಿ ಆ ದಡವು ಎಷ್ಟೋ ದಿನ ತಂಪಾಗಿರುವದು ಮತ್ತು ಆ ಭೂಮಿ ಹುಲುಸಾಗುವದು. ಆದ್ದರಿಂದ ಒಮ್ಮೊಮ್ಮೆಯಾದರೂ ಸತ್ಸಂತತಿಯಾಗುವಂತೆ ಎಲ್ಲರೂ ಪ್ರಯತ್ನಪಡಬೇಕು. ಚಂದ್ರನಿಂದಲೇ ರಾತ್ರಿಯು ಆಹ್ಲಾದಕರವಾಗುವಂತೆ ಸತ್ಸಂತತಿಯಿಂದಲೇ ದೇಶದ ಅಭ್ಯು ದಯ; ಸತ್ಸಂತತಿಯಿಂದಲೇ ವಂಶದ ಉದ್ಧಾರ; ಸತ್ಸಂತತಿಯಿಂದಲೇ ಈ ಜಗತ್ತಿಗೆ ಸನಾಥತ್ವ. ಆದ್ದರಿಂದ ಕ್ಷುದ್ರಪುಣ್ಯಗಳ ಫಲರೂಪವಾದ ಸಾಮಾನ್ಯ ಸಂತತಿಯ ಕಡೆಗೆ ಕಣ್ಣು ಹಾಕದೆ ತಮ್ಮ ಬ್ರಹ್ಮಚರ್ಯವ್ರತ ವನ್ನು ಅಸಿಧಾರಾವ್ರತದಂತೆ ಕಾಪಾಡಿಕೊಂಡು ಈಶ್ವರಾನುಗ್ರಹಮೂಲಕ ವಾದ ಸಂತತಿಯನ್ನು ಪಡೆಯಬೇಕು. ಈ ಈಶ್ವರಾನುಗ್ರಹವೆಂಬುದು ಭೌತಿ ಕವಿಷಯವಲ್ಲವಾದ್ದರಿಂದ ಪ್ರತ್ಯಕ್ಷವಾಗಿ ಕಾಣಿಸದಿದ್ದರೂ ಫಲರೂಪವಾಗಿ

ಪುರಾಣಗಳಲ್ಲಿ ಮಾತ್ರವೇ ಅಲ್ಲವೆ ಇತಿಹಾಸವಲ್ಲಿಯೂ ಕೂಡ ಎಷ್ಟೋ ಕಡೆ ಒಡೆದು ಮೂಡಿರುವದು.

ಅಹಲ್ಯಾಬಾಯಿಯ ಚರಿತ್ರೆಯ ಕಡೆಗೆ ಕಣ್ಣು ಹಾಕಿ ನೋಡಿರಿ. ಅಹಲ್ಯಾಬಾಯಿಯ ತಂದೆ ಆನಂದರಾವ ಸಿಂಧ್ಯ. ಇವನು ಅಹಮ್ಮದ ನಗರದ ಜಿಲ್ಲೆಯಲ್ಲಿರುವ ಖಾಸರಡಿ ಎಂಬ ಹಳ್ಳಿಯಲ್ಲಿ ಒಕ್ಕಲತನದಿಂದ ಜೀವಿಸಿಕೊಂಡಿದ್ದನು. ಅವನ ಹೆಂಡತಿಯು ಒಳ್ಳೇ ಹೆಂಗರುಳಿನವಳಾಗಿದ್ದಳು. ಒಂದು ದಿನ ಅಡಿಗೆಯಾಗಿದೆ; ಆನಂದರಾಯನ ಊಟವೂ ಮುಗಿದಿದೆ; ಅವನ ಹೆಂಡತಿಯು ಎಡೆಯ ಮುಂದೆ ಕೂಡುವ ಸಮಯ; ಆ ಹೊತ್ತಿಗೆ ಸರಿಯಾಗಿ ಒಬ್ಬ ಅತಿಥಿಯು ಬಂದು ಊಟವನ್ನು ಯಾಚನೆಮಾಡಿದನು. ಒಳಗೆ ಉಳಿದಿದ್ದ ಅಡಿಗೆಯು ಒಬ್ಬರಿಗೆ ಆಗುವಷ್ಟು ಮಾತ್ರ ಇತ್ತು. ಆಗ ಆನಂದರಾಯನ ಹೆಂಡತಿಯು ತನ್ನ ಹೊಟ್ಟೆಯ ಯೋಚನೆಯನ್ನು ಮುಂದು ಮಾಡಿಕೊಳ್ಳದೆ ಇದ್ದದ್ದನ್ನೆಲ್ಲ ಮೊದಲು ಅತಿಥಿಯ ಹೊಟ್ಟೆ ತುಂಬುವಂತೆ ನೀಡಿದಳು. ಹಸಿದು ಕಂಗಾಲಾಗಿದ್ದ ಅತಿಥಿಗೆ ಅತ್ಯಾನಂದವಾಯಿತು. ಆಗ ಅವನ ಹೃದಯದಿಂದ "ನಿನ್ನ ಮಕ್ಕಳ ಹೊಟ್ಟೆ ತಣ್ಣಗಿರಲಿ" ಎಂಬ ಮಾತುಗಳು ಹೊರಟವು. ಈ ಮಾತು ಕಿವಿಗೆ ಬೀಳುತ್ತಲೆ ಆ ಸಾಧ್ವಿಯ ಮನಸ್ಸಿನಲ್ಲೊಂದು ಬಗೆಯ ಸಂಕಟವುಂಟಾದಂತೆ ಮುಖಭಾವವೇರ್ಪಟ್ಟಿತು. ಅದನ್ನು ಕಂಡು ಅಶ್ಚರ್ಯದಿಂದ ಆ ಅತಿಥಿಯು ಕಾರಣವೇನೆಂದು ಕೇಳಿದನು. ಮಕ್ಕಳ ಮುಖವನ್ನು ನೋಡುವ ಸುಯೋಗವಿಲ್ಲದ್ದರ ಹೊರತು ಬೇರೆ ಏನೂ ಇಲ್ಲವೆಂದು ಹೇಳಿ ಅಕೆ ಕಣ್ಣೀರಿಟ್ಟಳು. ಇದರಿಂದ ಅತಿಥಿಗೂ ಮನಸ್ಸು ಕರಗಿತು. ಆಗ ಅವನು ಕ್ಷಣಕಾಲ ಯೋಚನೆಮಾಡಿ "ತಾಯಿ, ನೀನು ಕೊಲ್ಲಾಪುರದ ಮಹಾಲಕ್ಷ್ಮಿಯನ್ನಾರಾಧಿಸಿದರೆ ಸತ್ಸಂತತಿಯಾಗುವದು" ಎಂದು ಹೇಳಿ ಹೊರಟುಹೋದನು. ಮಕ್ಕಳ ಬಯಕೆಯಿಂದ ಬೆಂದು ಬೆಂಡಾಗಿ ನಿರಾಶರಾಗಿದ್ದ ಆ ದಂಪತಿಗಳ ಕಿವಿಗೆ ಈ ಆಶಾಜನಕವಾದ ವಾಗ್ಧಾರೆ ಸುರಿದದ್ದು ದ್ವಾದಶವರ್ಷಕ್ಷಾಮದಿಂದ ಒಣಗಿ ಗರಗಾಗಿದ್ದ ನೆಲದ ಮೇಲೆ ಸುವೃಷ್ಟಿಯಾದಂತೆ ಆಯಿತು. ಆನಂದರಾಯನೂ ಭಾವಿಕನಾಗಿದ್ದನು. ಅವನ ಹೆಂಡತಿಯಂತು ಆ ವಿಷಯದಲ್ಲಿ ಅವನನ್ನು ಮೀರಿಸಿದ್ದಳು. ಹೀಗಿರುವಾಗ ಹೇಳಬೇಕಾದದ್ದೇನು?

ಇಬ್ಬರೂ ಕೊಲ್ಹಾಪುರಕ್ಕೆ ಹೋಗಿ ಶ್ರೀಮಹಾಲಕ್ಷ್ಮಿಯನ್ನು ಬಹು ಭಕ್ತಿಯಿಂದ ಸೇವಿಸಿದರು. ಸಾತ್ತ್ವಿಕವೃತ್ತಿಯಲ್ಲಿದ್ದಂಥ ಈ ದಂಪತಿಗಳು ತನ್ನ ಮೇಲೆ ತೋರಿಸಿದ ಭಕ್ತಿಗೆ ಪ್ರಸನ್ನಳಾಗಿ ಮಹಾಲಕ್ಷ್ಮಿಯು ಒಂದು ದಿನ ಕನಸಿನಲ್ಲಿ ಬಂದು ಸಂತತಿಯಾಗುವದೆಂದು ಸೂಚನೆ ಮಾಡಿ ಹೋದಳು. ದೈವಾನುಗ್ರಹದ ಪ್ರಭಾವವನ್ನು ಹೇಳುವದೇನು! ಆ ಸಾಧ್ವಿಯು ಆ ದಿನವೇ ಗರ್ಭಿಣಿಯಾದಳು. ನವಮಾಸದ ಮೇಲೆ ಸ್ತ್ರೀಶಿಶುವಿನ ಜನನವಾಯಿತು. ಎಂಥ ಶಿಶು! ಆಕೆಯ ಆತ್ಮಶಕ್ತಿಯಿಂದ ಆಕೃಷ್ಟಳಾಗಿ ಆ ಮಹಾಲಕ್ಷ್ಮಿಯು ಭೌತಿಕಧನರೂಪವನ್ನು ಧಾರಣ ಮಾಡಿ ಆಕೆಯ ಮನೆಯಲ್ಲಿಯೇ ನೆಲಸಬೇಕಾಯಿತು. ಹಿಂದುಸ್ಥಾನದ ಬಹುಭಾಗವನ್ನು ತನ್ನ ದೋರ್ದಂಡಪ್ರಭಾವದಿಂದ ಗಡಗುಟ್ಟಿಸುತ್ತಿದ್ದ ಪೇಷ್ವೆಯು ತನ್ನ ಸಾಮಂತರಾಜ್ಞಿಯಾಗಿದ್ದ ಆಕೆಯ ಆತ್ಮಶಕ್ತಿಪ್ರಭಾವದ ಮುಂದೆ ತಲೆಯನ್ನು ತಗ್ಗಿಸಿ ನಡೆಯಬೇಕಾಯಿತು. ಸಾತ್ತ್ವಿಕರಾದ ಯಾತ್ರಿಕರ ತನುಮನಧನಗಳನ್ನು ಸೂರೆಗೊಳ್ಳುತ್ತಿದ್ದ ಇಂಗ್ಲೀಷರಿಗೆ ಕೂಡ ಅಜೇಯರಾಗಿ ಲೋಕಕಂಟಕರಾಗಿದ್ದ ಭಿಲ್ಲರು ಆಕೆಯ ವಾಕ್ಪ್ರಭಾವದಿಂದ ಶಾಂತತಾರಕ್ಷಣಕಾರ್ಯವನ್ನು ಕೈಗೊಂಡರು. ಈ ಅಹಲ್ಯಾಬಾಯಿಯ ಸ್ಥೂಲಶರೀರವು ಕ್ರಿ. ೧೭೯೫ರಲ್ಲಿ ನಿರ್ಜೀವವಾಗಿ ಮೃಣ್ಮಯವಾಯಿತು. ಆದರೆ ಆಕೆಯ ಕೀರ್ತಿಶರೀರವು ಮಾತ್ರ ಇಂದಿನವರೆಗೆ ಇರುವದೂ ಅಲ್ಲದೆ ಮುಂದೆ ಎಂದೂ ನಾಶವಾಗದಂತೆ ಹಿಂದುಸ್ಥಾನದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಮೂಡಿರುವದು. ಹಿಂದುಸ್ಥಾನದ ಪ್ರತಿಯೊಂದು ದೊಡ್ಡ ದೊಡ್ಡ ಕ್ಷೇತ್ರದಲ್ಲಿಯೂ ಅಹಲ್ಯಾಬಾಯಿಯ ಹೆಸರು ಯಾವದಾದರೊಂದು ಧರ್ಮಕಾರ್ಯದ ರೂಪದಲ್ಲಿ ವ್ಯಕ್ತವಾಗದೆ ಇಲ್ಲ. ಲೋಕದಲ್ಲಿ ಪರಹಿತವನ್ನು ಎಷ್ಟೆಷ್ಟು ಬಗೆಯಾಗಿ ಮಾಡಬೇಕೆಂಬುದನ್ನು ತಿಳಿಸುವದಕ್ಕೆ ಅಹಲ್ಯಾಬಾಯಿಯ ಚರಿತ್ರೆಯಂಥ ಉಪಕರಣವು ಬೇರೆ ಯಾವದೂ ಇಲ್ಲ.

"ಕೊಡಲೆಂದು ಕೈ ಎತ್ತೆ । ಹಿಡಿಯಲ್ಲಿ ನವನಿಧಿಯು ।
ಬಿಡದೆ ಭೋಗಿಸೆ ಕುರುಡು ಕವಡೆಯಿಲ್ಲ ॥

ಎಂಬಂತೆ ಆಕೆಯು ತನ್ನ ಸರ್ವಸ್ವವನ್ನೂ ದಾನಧರ್ಮಕ್ಕೆ ಉಪಯೋಗಿಸುತ್ತಿದ್ದಳೇ ಹೊರತು ತನ್ನ ದೇಹೇಂದ್ರಿಯಗಳ ಸುಖಕ್ಕಾಗಿ ಏನನ್ನೂ ಉಪ

ಯೋಗಮಾಡಿಕೊಳ್ಳುತ್ತಿರಲಿಲ್ಲ. ದೇಹದ ಕಡೆಗೆ ಲಕ್ಷ್ಯವನ್ನು ಕೊಟ್ಟು ಅಹಲ್ಯಾಬಾಯಿಯ ಶರೀರದ ಸೌಂದರ್ಯವನ್ನು ತಿಳಿದುಕೊಳ್ಳಬೇಕಾದರೆ ಆಗಿನ ಪೇಷ್ವೆಯ ತಮ್ಮನಾದ ರಘುನಾಥರಾಯನ ಹೆಂಡತಿಯನ್ನು ಕೇಳ ಬೇಕು. ಏಕೆಂದರೆ: ಆಕೆ ಆಗಿನ ಕಾಲದ ಸುಂದರಿಯರಲ್ಲಿ ಒಳ್ಳೇ ಹೆಸರು ವಾಸಿಯನ್ನು ಹೊಂದಿದ್ದಳು. ಒಮ್ಮೆ ತನ್ನ ಗಂಡನು ಅಹಲ್ಯಾಬಾಯಿಯ ಮೇಲೆ ದಂಡೆತ್ತಿ ಹೋಗಿ ಅಲ್ಲಿಂದ ಜೋಲುಮುಖವನ್ನು ಹಾಕಿಕೊಂಡು ಬಂದದ್ದನ್ನು ನೆನೆದು ಆ ಅಹಲ್ಯಾಬಾಯಿಯ ಸೌಂದರ್ಯವೆನ್ನೆಷ್ಟಿರಬಹು ದೆಂಬುದನ್ನು ತಿಳಿದುಕೊಳ್ಳುವದಕ್ಕಾಗಿ ರಘುನಾಥರಾಯನ ಹೆಂಡತಿಯು ತನ್ನೊಬ್ಬ ಸಖಿಯನ್ನು ಅಹಲ್ಯಾಬಾಯಿಯ ಬಳಿಗೆ ಕಳುಹಿಸಿದಳಂತೆ. ಆ ಸಖಿಯು ಬಂದು ನೋಡಿದಾಗ ಅಹಲ್ಯಾಬಾಯಿಗೆ ಬಡವಾದ ದೇಹ, ಶ್ಯಾಮಲವರ್ಣ, ಮೈಮೇಲಿರಡು ಬಹು ಸಾಧಾರಣವಾದ ಬಿಳೀ ಬಟ್ಟೆ, ಕೈಯಲ್ಲಿ ಜಪಮಾಲೆ. ಈ ಸ್ಥಿತಿಯ ವರ್ಣನೆಯನ್ನು ಸಖಿಯ ಬಾಯಿ ಯಿಂದ ಕೇಳಿ ಆ ಶ್ರೀಮಂತಸ್ತ್ರೀಗೆ ಏನೆನಿಸಿರಬಹುದೆಂಬುದನ್ನು ನೀವೇ ಊಹಿಸಿರಿ. ಅಹಲ್ಯಾಬಾಯಿಯ ಸ್ಥೂಲದೇಹದ ಸೌಂದರ್ಯವು ಎಷ್ಟೇ ವಿಕಾರವಾಗಿದ್ದರೂ ಆಕೆಯ ಕೀರ್ತಿಶರೀರದ ಸೌಂದರ್ಯವು ಅಖಂಡ ಭೂಮಂಡಲವನ್ನೂ ಬೆರಗುಮಾಡುವಂತೆ ಇರುವದು. ಇಂಥ ಶಾಶ್ವತವಾದ ಕೀರ್ತಿಶರೀರವನ್ನು ಸಂಪಾದನೆಮಾಡಿಕೊಳ್ಳುವಂಥ ಆತ್ಮಶಕ್ತಿಯುಳ್ಳ ಅಹ ಲ್ಯಾಬಾಯಿ ಸಿಂಧ್ಯನ ವಂಶದಲ್ಲಿ ಹುಟ್ಟಿದ್ದಕ್ಕೆ ಅವನ ಈಶ್ವರಾರಾಧನೆಯೇ ಕಾರಣವಲ್ಲದೆ ಮತ್ತೇನೂ ಇಲ್ಲ. ಈ ಈಶ್ವರಾನುಗ್ರಹದಿಂದಲೇ ಇಂದೂರು ಸಂಸ್ಥಾನವು ತಾನಾಗಿಯೇ ಆಕೆಯನ್ನು ಹುಡುಕಿಕೊಂಡು ಬಂತು. ಈಶ್ವರಪ್ರಸಾದಲಬ್ಧವಾದ ಆಕೆಯ ಆತ್ಮಶಕ್ತಿಯಿಂದಲೇ ಮಹಾಮಹಾ ವೀರಾಗ್ರಣಿಗಳಾದ ಸುತ್ತಮುತ್ತಣ ರಾಜರು ಹಾವಾಡಿಗನ ಮುಂದಿನ ಹಾವಿ ನಂತೆ ಆಕೆಯ ಮುಂದೆ ತಲೇ ಬಗ್ಗಿಸಿ ನಡೆಯುತ್ತಿದ್ದರು. ಆಕೆಯಲ್ಲಿ ಮಹಾ ಲಕ್ಷ್ಮಿಯ ಅಂಶವು ಮೈಗೂಡಿದ್ದದ್ದರಿಂದಲೇ ಸ್ವದೇಶದವರೂ ಪರದೇಶದ ವರೂ ಎಲ್ಲರೂ ಆಕೆಯನ್ನು ಜಗನ್ಮಾತೆಯೆಂದು ಭಾವಿಸುವವರಾದರು. ಅಂಥ ವ್ಯಕ್ತಿಯ ಉದಯವಾದದ್ದರಿಂದಲೇ ಆಕೆಯ ಬೆಳಕಿನಿಂದ ನಮ್ಮದೊಂದು ಅಸ್ತಿತ್ವವನ್ನು ನಾವು ಹೊಗಳಿಕೊಳ್ಳುವದಕ್ಕೆ ಅವಕಾಶವುಂಟಾಗಿರುವದು.

ನಮ್ಮ ಕರ್ಣಾಟಕದಲ್ಲಿ ಭಾಷಾಪ್ರಸಾರವನ್ನೂ ಧರ್ಮಪ್ರಸಾರವನ್ನೂ ಮಾಡಿರುವ ಸಾಧುಶಿರೋಮಣಿಯಾದ ಕನಕದಾಸನ ಪೂರ್ವಾಪರಗಳನ್ನು ವಿಚಾರಮಾಡಿರಿ. ಇವನು ಅಂಡೆಕುರುಬರ ಜಾತಿಯವನು. ಕುರುಬನೆಂಬ ಶಬ್ದವೇ ಪಾಮರತ್ವದ ಪರಮಾವಧಿಯನ್ನು ತೋರಿಸುವ ಅರ್ಥದಲ್ಲಿ ಈಗ ರೂಢಿಯಾಗಿದೆ. ಕನಕದಾಸನು ಅಂಥ ಮೂಢರ ಗುಂಪಿನಲ್ಲಿ ಹುಟ್ಟಿದನು. ಜಾತಿಯು ಅಂಥದ್ದಾದರೂ ಅವನ ಪ್ರಾಚೀನರ ಭೌತಿಕಪರಿಸ್ಥಿತಿಯೇ ನಾದರೂ ಕನಕನ ಆತ್ಮೋನ್ನತಿಗೆ ಸಾಧನವಾಗಿರಬಹುದೆಂದರೆ ಅದೂ ಇಲ್ಲ. ಕನಕನ ತಂದೆಯಾದ ಬೀರೇಗೌಡನು ಒಂದೂರಿನ ಗೌಡಿಕೆಯನ್ನು ಮಾಡಿ ಕೊಂಡಿದ್ದನು. ಇಂಥ ಮನೆತನದಲ್ಲಿ ಲೋಕೋತ್ತರಪ್ರತಿಭಾಸಂಪನ್ನನಾದ ಕನಕನು ಹೇಗೆ ಹುಟ್ಟಿದನು? ಇದಕ್ಕೆ ಬೀರೇಗೌಡನು ಸಂತತಿಗಾಗಿ ಈಶ್ವರಾರಾಧನೆಯನ್ನು ಮಾಡಿದ್ದೇ ಕಾರಣ. ಬೀರೇಗೌಡನು ಒಮ್ಮೆ ತಿರುಪತಿಗೆ ಹೋಗಿ ದೇವರ ಸೇವೆಯನ್ನು ಮಾಡಿದನು. ಆಗ ದೇವರು ಒಂದು ದಿನ ಕನಸಿನಲ್ಲಿ ಬಂದು ಒಂದು ಭಸ್ಮದ ಉಂಡೆಯನ್ನು ಕೊಟ್ಟಂತಾಯಿತು. ಆ ಈಶ್ವರಪ್ರಸಾದದ ಫಲರೂಪವಾಗಿ ಬೀರೇಗೌಡನಿಗೆ ಸಂತತಿಯಾಯಿತು. ತಿರುಪತಿಯ ತಿಮ್ಮಪ್ಪನ ಪ್ರಸಾದದಿಂದ ಹುಟ್ಟಿದ್ದರಿಂದ ಆ ಶಿಶುವಿಗೆ ಬೀರೇಗೌಡನು ತಿಮ್ಮನೆಂದು ಹೆಸರಿಟ್ಟನು. ಕನಕನೆಂಬ ಹೆಸರು ತಿಮ್ಮನಿಗೆ ಸ್ವಾರ್ಜಿತವಾದದ್ದು. ಈಶ್ವರಪ್ರಸಾದದಿಂದ ಹುಟ್ಟಿದ ಮಕ್ಕಳು ತಮ್ಮದೊಂದು ಹೊಸ ಹೆಸರನ್ನೂ ಮಾಡಿಕೊಳ್ಳಬಲ್ಲರು; ತಮ್ಮದೊಂದು ಕೀರ್ತಿಶರೀರವನ್ನೂ ರಚಿಸಿಕೊಳ್ಳಬಲ್ಲರು. ಅವರ ಆತ್ಮಶಕ್ತಿಗೆ ಅಸಾಧ್ಯವಾದದ್ದೇನೇನೂ ಇರುವದಿಲ್ಲ. ನಾಡಾಡಿಯ ಗೌಡನ ಮಗನಾದ ತಿಮ್ಮನಿಗೆ ಎಲ್ಲಿ ನೋಡಿದರಲ್ಲಿ ಬಂಗಾರದ ನಿಧಿಗಳು ಕಾಣುತ್ತ ಬಂದದ್ದರಿಂದ ಅವನ ಯೋಗ್ಯತೆಯನ್ನು ನೋಡಿ ಜನರು ಅವನನ್ನು ಕನಕನೆಂದು ಕರೆದರು. ಅಸ್ತೇಯ (ಪರರ ವಸ್ತುವನ್ನು ಕದಿಯದಿರುವದು)ವೆಂಬ ಸಾಧನವಿಶೇಷದ ಪರಮಾವಧಿಯನ್ನು ಮುಟ್ಟಿದವರಿಗೆ ಸಕಲನಿಧಿಗಳೂ ಕಾಣುವವೆಂದು ಶ್ರೀ ಪತಂಜಲಿಮಹರ್ಷಿಗಳು ಯೋಗಶಾಸ್ತ್ರದಲ್ಲಿ ಹೇಳಿದ ಸಿದ್ಧಿಯು ನಮ್ಮ ಕನಕನಿಗೆ ಪೂರ್ವಜನ್ಮದಲ್ಲಿಯೇ ಸಿದ್ಧವಾಗಿತ್ತೆಂದು ಇದರಲ್ಲಿ ತೋರುವದು. ಇರಲಿ. ಆ ಮೇಲೆ ಅವನು ಆ ಗ್ರಾಮಕ್ಕೆಲ್ಲ ಅಧಿನಾಯಕನಾದನು.

ಕೊನೆಗೆ ಅವನು ಸದ್ಗುರುಗಳ ಅನುಗ್ರಹಕ್ಕೆ ಪಾತ್ರನಾಗಿ ಕನಕದಾಸನೆಂದು ಪ್ರಸಿದ್ಧನಾದನು. ಈ ಪ್ರಕಾರ ಭಗವದನುಗ್ರಹದಿಂದ ಹುಟ್ಟಿದ ಕನಕನಲ್ಲಿ ಅತ್ಮಶಕ್ತಿ ಎಷ್ಟು ವಿಜೃಂಭಿಸುತ್ತಿತ್ತೆಂಬುದನ್ನು ನೋಡಿರಿ. ಒಮ್ಮೆ ಉಡುಪಿಯಲ್ಲಿ ಶ್ರೀಕೃಷ್ಣದೇವರ ದರ್ಶನಕ್ಕೆ ಹೋದಾಗ ಮಡಿಯ ಬೆಡಗನ್ನು ಬೀರುವ ದಂಭಮೂರ್ತಿಗಳಾದ ಅಲ್ಲಿನ ಪರಿವಾರದೇವತೆಗಳು ಅವನನ್ನು ಹುಸ್ಸೆಂದು ಭ್ರುಕುಟಿಯನ್ನು ತೋರಿಸಿ ಹಿಮ್ಮೆಟ್ಟಿಸಿದ್ದರಿಂದ ನಿರ್ಜನವಾಗಿದ್ದ ಹಿಂಭಾಗಕ್ಕೆ ಹೋಗಿ ಅವನು ಪರಮಾತ್ಮನನ್ನು ಕುರಿತು ದರ್ಶನೇಚ್ಛೆಯಿಂದ ಹಾಡುತ್ತಲೆ ಅವನ ಆತ್ಮಶಕ್ತಿಪ್ರಭಾವದಿಂದ ಒಳಗಿದ್ದ ಶಿಲಾವಿಗ್ರಹವು ಚೇತನಗೊಂಡು ಹಿಮ್ಮುಖವಾಗಿ ಗೋಡೆಯಲ್ಲೊಂದು ಕಂಡಿಯನ್ನು ಮಾಡಿ ಅವನಿಗೆ ದರ್ಶನವನ್ನು ಕೊಟ್ಟಿತೆಂದು ಹೇಳುತ್ತಾರೆ. ಈಗಲೂ ಆ ಕಂಡಿಯು ಕನಕನ ಕಂಡಿಯೆಂದು ಪ್ರಸಿದ್ಧವಾಗಿದೆ. ಅವನು ಹುಟ್ಟಿನಿಂದ ಕುರುಬರ ತಿಮ್ಮನಾದರೂ ಆ ಹುಟ್ಟು ಈಶ್ವರಪ್ರಸಾದದ ಫಲವಾಗಿದ್ದದ್ದರಿಂದ ಅವನು ಬರೆದ ಹರಿಭಕ್ತಿಸಾರ ಮೊದಲಾದ ಗ್ರಂಥಗಳನ್ನು ಮಹಾಮಹಾಪಂಡಿತರಾದರೂ ತಲೆಯ ಮೇಲಿಟ್ಟುಕೊಂಡು ಶ್ಲಾಘಿಸುತ್ತಾರೆ. ಇವೆಲ್ಲ ಅವನ ಆತ್ಮಶಕ್ತಿಯ ಪ್ರಭಾವ.

ಈಶ್ವರ ಪ್ರಸಾದದ ಮಹಿಮೆಯನ್ನು ವ್ಯಕ್ತಗೊಳಿಸುವದಕ್ಕೆ ಬಸವೇಶ್ವರನ ಉದಾಹರಣೆಯೂ ಒಳ್ಳೇ ಸಾಧನವಾಗಿದೆ. ಬಸವೇಶ್ವರನು ಹುಟ್ಟುವಾಗ ಶೈವಬ್ರಾಹ್ಮಣಜಾತಿಯವನು. ಅವನೂ ಸರ್ವಸಾಮಾನ್ಯ ರೀತಿಯಲ್ಲಿ ಹುಟ್ಟಿದವನಲ್ಲ. ಅವನ ತಂದೆತಾಯಿಗಳು ಒಳ್ಳೇ ಶಿವಭಕ್ತನಿರತರಾಗಿದ್ದು ತಮ್ಮೂರಿನ' ಸಂಗಮೇಶ್ವರನ ದೇವಸ್ಥಾನವಲ್ಲಿ ಸಂತತ್ಯರ್ಥವಾಗಿ ಹರಕೆಯನ್ನು ಹೊತ್ತು ಒಂಭತ್ತು ದಿನಗಳು ಬಹು ನಿಯಮದಿಂದ ನಂದೀಶ್ವರನನ್ನು ಉಪಾಸನೆಮಾಡಿದರು. ಆ ನಂದೀಶ್ವರನು ಪ್ರಸನ್ನನಾಗಿ ಆ ದಂಪತಿಗಳಿಗೆ ತನ್ನ ಬಲಗೊಂಬಿನ ಮೇಲಿದ್ದ ಹೂವನ್ನು ಪ್ರಸಾದವಾಗಿ ಕೊಟ್ಟನು. ಬಸವೇಶ್ವರನು ಅದರ ಪ್ರಭಾವದಿಂದ ಹುಟ್ಟಿದವನು. ಆದ್ದರಿಂದಲೇ ಅವನಲ್ಲಿ ಚಿಕ್ಕಂದಿನಲ್ಲಿಯೇ ಆತ್ಮಶಕ್ತಿಯು ಉಜ್ವಲವಾಗಿ ಬೆಳಗುವದಕ್ಕಾರಂಭವಾಯಿತು. ತನ್ನ ವಂಶಪರಂಪರೆಯಿಂದ ಬಂದ ಸಂಪ್ರದಾಯದಂತೆ ಬಸವೇಶ್ವರನು ಉಪನಯನವನ್ನು ಮಾಡಿಕೊಂಡು ವೇದವಿಧಿಗಳಿಂದ ಬದ್ಧನಾಗ

ಬೇಕಾಗಿದ್ದರೂ ವೈದಿಕವಾದ ಉಪಾಸನೆಗಳು ಬಹುಮುಖವಾಗಿದ್ದು ಮನಸ್ಸಿನ ವಿಕ್ಷೇಪಕ್ಕೆ ಕಾರಣವಾಗಿ ಈಶ್ವರಸಾಕ್ಷಾತ್ಕಾರಕ್ಕೆ ಸುತ್ತಾದಿಯಾಗುವವೆಂದು ಅವನಿಗೆ ಸ್ಫೂರ್ತಿಯಾಗಿ ಸಮೀಪದ ಹಾದಿಯಾದ ಏಕನಿಷ್ಠೆಯನ್ನು ತಾನು ಇತರರಿಗೆ ಮೇಲುಪಙ್ಕ್ತಿಯಾಗಿ ಹಾಕಿಕೊಡಬೇಕೆಂಬ ದೃಢತರಸಂಕಲ್ಪದಿಂದ ಅವನು ತಾನೇ ಶಿವದೀಕ್ಷೆಯನ್ನು ತೆಗೆದುಕೊಂಡನು. ಆತ್ಮಶಕ್ತಿಯ ಭರವಸವಿಲ್ಲದಿರುವವರಿಗೆ ತಾವಿರುವ ದಾರಿಯನ್ನು ಬಿಟ್ಟು ಇನ್ನೊಂದು ದಾರಿಯಲ್ಲಿ ಕಾಲಿಡಬೇಕೆಂದರೆ ಧೈರ್ಯವಾಗುವದಿಲ್ಲ. ತಾವು ಹೋದದ್ದನ್ನೇ ಒಂದು ದಾರಿಯಾಗಿ ಮಾಡುವಂಥ ಆತ್ಮಶಕ್ತಿಯುಳ್ಳವರು ಸುತ್ತಾದ ಹಾದಿಯನ್ನು ಬಿಟ್ಟು ತಮಗೆ ಹತ್ತಿರವಾಗಿ ತೋರುವಂಥ ಸಮೀಪದ ಹಾದಿಯನ್ನು ಹಿಡಿಯುವದಕ್ಕೆ ಹಿಂದುಮುಂದು ನೋಡುವದಿಲ್ಲ. ವೈದಿಕೋಪಾಸನೆಗಳಿಂದ ವಿಮುಖನಾದ ಬಸವೇಶ್ವರನು ತನ್ನ ಆತ್ಮಶಕ್ತಿಪ್ರಭಾವದಿಂದ ಬಿಜ್ಜಳನ ಮಂತ್ರಿಯಾಗಿ ಶಿವದೀಕ್ಷಾವಿಧಿಯನ್ನು ಎಲ್ಲೆಲ್ಲಿಯೂ ಹರಡಿದನು.

ಈ ರೀತಿಯಲ್ಲಿ ಈಶ್ವರಪ್ರಸಾದದಿಂದ ಜನ್ಮವನ್ನೆತ್ತಿದವರಲ್ಲಿ ಆತ್ಮಶಕ್ತಿಯು ಪರಿಪೂರ್ಣತೆಗೊಂಡು ಪ್ರಕಾಶಿಸುವದು.

# ಆತ್ಮಶಕ್ತಿಯ ಸೂಚನೆ

ಈ ಆತ್ಮಶಕ್ತಿಯನ್ನು ಮನುಷ್ಯನು ಹೊರಗಣಿಂದ ಪಡೆಯಬೇಕಾಗಿಲ್ಲ. ಪರಮಕಾರುಣಿಕನಾದ ಭಗವಂತನು ಪ್ರತಿಯೊಬ್ಬ ಮನುಷ್ಯನಲ್ಲಿಯೂ ಆತ್ಮಶಕ್ತಿಯ ಬೀಜವನ್ನು ಇಟ್ಟೇ ಇರುತ್ತಾನೆ. ಇಷ್ಟೇ ಅಲ್ಲ. ಅದನ್ನು ಬೇಕಾದಾಗ ಬೇಕಾದಷ್ಟು ಬೆಳಸಿಕೊಳ್ಳುವ ಸ್ವಾತಂತ್ರ್ಯವನ್ನು ಜೀವನಿಗೆ ಕೊಟ್ಟೇ ಇರುತ್ತಾನೆ. ಮನುಷ್ಯರಿಗೆ ಈ ಬಗೆಯ ಸ್ವಾತಂತ್ರ್ಯವನ್ನು ಕೊಡುವದರಲ್ಲಿ ಭಗವಂತನಿಗೊಂದು ಮಹೋದ್ದೇಶವಿದೆ. ಅದೇನೆಂದರೆ "ಭಗವಂತನು ಮನುಷ್ಯವರ್ಗಕ್ಕೆಲ್ಲ ತಂದೆಯಂತೆ" ಎಂಬರ್ಥವು

ಜನಜನಿತವಾಗಿದೆಯಷ್ಟೆ. ತನ್ನ ಮಕ್ಕಳೆಲ್ಲರೂ ತಮ್ಮ ವಿವೇಕಶಕ್ತಿಯಿಂದ ವ್ಯವಹಾರಮಾಡಿ ತನಗಿಂತ ಶ್ರೀಮಂತರಾಗಲೆಂಬ ಸದುದ್ದೇಶದಿಂದ ತಂದೆಯು ಮಕ್ಕಳಿಗೆ ಮೂಲಧನವನ್ನು ಕೊಡುವಂತೆ ಮನುಷ್ಯರೆಲ್ಲರೂ ತಮ್ಮ ಅತ್ಮಶಕ್ತಿಯನ್ನು ಬೆಳೆಸಿಕೊಂಡು ಅವರ ಪ್ರಭಾವದಿಂದ ಲೋಕದಲ್ಲಿ ತನಗಿಂತ ಮಾನ್ಯರಾಗಬೇಕೆಂಬ ಕುತೂಹಲದಿಂದ ಪರಮಾತ್ಮನು ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿಯೂ ಆತ್ಮಶಕ್ತಿಯ ಬೀಜವನ್ನು ಮೂಲಧನವಾಗಿ ಇಟ್ಟಿರುವನು. ಮಕ್ಕಳು ಅಲ್ಪಪ್ರಮಾಣದ ಮೂಲಧನವನ್ನು ಅಧಿಕಪ್ರಮಾಣಕ್ಕೇರಿಸುತ್ತ ಹೋದಷ್ಟೂ ತಂದೆಯು ಸಂತೋಷಿಸುವಂತೆ ಮನುಷ್ಯರು ಬೀಜರೂಪದಲ್ಲಿರುವ ಆತ್ಮಶಕ್ತಿಯನ್ನು ವೃಕ್ಷರೂಪಕ್ಕೆ ಬೆಳಸಿಕೊಳ್ಳುತ್ತ ಹೋದಷ್ಟೂ ಪರಮಾತ್ಮನು ಸಂತೋಷಪಡುವನು. ಸಂತುಷ್ಟನಾದ ತಂದೆಯು ವ್ಯವಹಾರಚತುರನಾದ ಮಗನ ಮೂಲಧನಕ್ಕೆ ಮತ್ತಷ್ಟು ನೆರವಾಗುವಂತೆ ಸಂತುಷ್ಟನಾದ ಪರಮಾತ್ಮನು ಆತ್ಮಶಕ್ತಿಯನ್ನು ಬೆಳಸಿಕೊಳ್ಳುವವನ ಪ್ರಯತ್ನಕ್ಕೆ ಇನ್ನಿಷ್ಟು ಬೆಂಬಲನಾಗುವನು. ವಿವೇಕದಿಂದಲೇ ವ್ಯವಹಾರವನ್ನು ಮಾಡುತ್ತ ಹೋದರೆ ಮಗನು ತಂದೆಯನ್ನು ಮರೆಸುವಂತೆ ಆತ್ಮಶಕ್ತಿಯನ್ನು ಸದುಪಯೋಗಮಾಡಿಕೊಳ್ಳುತ್ತ ಹೋದರೆ ಮನುಷ್ಯನು ಪರಮಾತ್ಮನನ್ನು ಕೂಡ ಮರೆಸಬಹುದು. ಮಗನು ತಂದೆಯನ್ನು ಮರೆಸುವದೆಂದರೇನು? ತಂದೆಯಂತೆ ಧನಿಕನಾಗಿ ತಂದೆಯಂಥ ಯಶಸ್ಸನ್ನು ಸಂಪಾದಿಸುವದು. ಮನುಷ್ಯನು ಪರಮಾತ್ಮನನ್ನು ಮರೆಸುವದೂ ಅದರಂತೆಯೇ. ಪರಮಾತ್ಮನು ಬೀಜರೂಪವಾಗಿ ಕೊಟ್ಟ ಆತ್ಮಶಕ್ತಿಯನ್ನು ಚೆನ್ನಾಗಿ ಬೆಳಸಿಕೊಂಡರಾಯಿತು. ಆ ಮನುಷ್ಯನನ್ನು ಜನರು ದೇವರಿಗಿಂತ ಹೆಚ್ಚಾಗಿ ಗೌರವಿಸುವರು. ಏಕೆಂದರೆ: ದೇವರು ಕಣ್ಣಿಗೆ ಕಾಣುವವನಲ್ಲ. ಆತ್ಮಶಕ್ತಿಯನ್ನು ಬೆಳೆಸಿಕೊಂಡವರಲ್ಲಿ ದೈವೀಸಂಪತ್ತು ಅಭಿವ್ಯಕ್ತವಾಗಿ ಕಾಣುತ್ತಿರುವದು. ಆದ್ದರಿಂದ ಆತ್ಮಶಕ್ತಿವಂತನಿಗೆ ಮನ್ನಣೆ ಹೆಚ್ಚು. ತನ್ನ ಪ್ರಜೆಯಾದ ಮನುಷ್ಯನು ಅಂಥ ಮನ್ನಣೆಯನ್ನು ಸಂಪಾದಿಸಿದರೆ ದೇವರು ಮೆಚ್ಚುವನೆಂಬುದೇನು ದೊಡ್ಡ ಮಾತು! ಆತ್ಮಶಕ್ತಿಯ ಅಭಿವ್ಯಕ್ತಿಯೇ ಬಹುಮಟ್ಟಿಗೆ ಪರಮಾತ್ಮಸ್ವರೂಪದ ಅಭಿವ್ಯಕ್ತಿ. ಆದ್ದರಿಂದ ಜನರು ಆತ್ಮಶಕ್ತಿಯನ್ನು ಮನ್ನಿಸಿದರೆ ಪ್ರಕಾರಾಂತರದಿಂದ ಪರಮಾತ್ಮನನ್ನೇ

ಮನ್ನಿಸಿದ ಹಾಗಾಯಿತು. ಮನ್ನಣೆಯನ್ನು ಪಡೆಯುವ ಸೌಕರ್ಯವಿಲ್ಲದ ಅವ್ಯಕ್ತಸ್ವರೂಪದ ಪರಮಾತ್ಮನು ಆತ್ಮಶಕ್ತಿಯ ಅಭಿವೃದ್ಧಿಯ ಮೂಲಕ ತನಗೆ ಅಭಿವ್ಯಕ್ತಸ್ವರೂಪವನ್ನು ತಂದುಕೊಟ್ಟ ಮನುಷ್ಯನನ್ನು ಹೇಗೆ ಮೆಚ್ಚದೆ ಬಿಟ್ಟಾನು? ತನ್ನ ಅವ್ಯಕ್ತಸ್ವರೂಪಕ್ಕೆ ಮನ್ನಣೆಯನ್ನು ತೋರಿಸಿದರೂ ಕೂಡ ಪರಮಾತ್ಮನಿಗೆ ಹೆಚ್ಚು ಮೆಚ್ಚಿಲ್ಲ. ಆತ್ಮಶಕ್ತಿಗೆ ಮನ್ನಣೆಯನ್ನು ತೋರಿಸಿದರೆ ಅವನಿಗೆ ಅತಿಸಂತೋಷ. ಈ ಸಂತೋಷಪ್ರದರ್ಶನವಾಗಿ ಅವನು ಆ ಆತ್ಮಶಕ್ತಿವಂತರ ಸರ್ವೇಷ್ಟಗಳನ್ನೂ ಸಂಪೂರ್ಣಗೊಳಿಸುವನು. ಹೀಗೆ ಮಾಡುವದರಿಂದಲೆ ಅವನಿಗೆ ಭಕ್ತಪರಾಧೀನನೆಂಬ ಬಿರುದು ಬಂದಿರುವದು. ಭಕ್ತರೆಂದರೇನು? ಭಕ್ತಿಯ ಬಹಿರ್ವ್ಯಾಪಾರದವರಲ್ಲ; ಅಂತರ್ವ್ಯಾಪಾರದವರು. ಎಂದರೆ, ಆತ್ಮಶಕ್ತಿವಂತರು. ಆತ್ಮಶಕ್ತಿಯನ್ನು ಮೈಗೂಡಿಸಿಕೊಳ್ಳುವದೆಂದರೂ ಒಂದೇ, ದೇವತ್ವವನ್ನು ಮೈಗೂಡಿಸಿಕೊಳ್ಳುವದೆಂದರೂ ಒಂದೇ. ಹೀಗೆ ಅವ್ಯಕ್ತಸ್ವರೂಪದಲ್ಲಿರುವ ತನ್ನನ್ನು ಹೃದಯದೊಳಗಿಟ್ಟುಕೊಂಡು ಬೆಳಸಿ, ತನ್ನ ಮಹಿಮೆಯನ್ನು ತಮ್ಮ ಮೂಲಕ ಪ್ರಕಟಮಾಡುವ ಮನುಷ್ಯರಿಗೆ ಪರಮಾತ್ಮನು ಅಧೀನನಾದಂತಲ್ಲದೆ ಮತ್ತೇನು? ಹೀಗೆ ಪರಮಾತ್ಮನು ಅಧೀನನಾದ ಮೇಲೆ ಅವರಿಗೆ ಅಸಾಧ್ಯವಾದದ್ದೇನಿದೆ? ಹೀಗಾಗಿ ಆತ್ಮಶಕ್ತಿವಂತರಿಗೆ ಸಮಸ್ತ ಇಷ್ಟಸಿದ್ಧಿಗಳೂ ಕರತಲಾಮಲಕವಾಗುವವು.

ಪರಮಾತ್ಮನು ಎಲ್ಲರಲ್ಲಿಯೂ ಆತ್ಮಶಕ್ತಿಯ ಬೀಜವನ್ನು ಇಟ್ಟಿದ್ದರೂ ಅದು ಎಲ್ಲರಲ್ಲಿಯೂ ಏಕಪ್ರಕಾರವಾಗಿ ಬೆಳೆಯುವದಿಲ್ಲ. ಕಲ್ಲಿನ ಮೇಲೆ ಚೆಲ್ಲಿದ ಬೀಜದ ಮತ್ತು ಉತ್ತ ಭೂಮಿಯ ಮೇಲೆ ಚೆಲ್ಲಿದ ಬೀಜದ ಬೆಳವಳಿಗೆಯು ಒಂದೇ ಆಗಿರುವದುಂಟೆ? ಕಲ್ಲಿನ ಮೇಲೆ ಬಿದ್ದ ಬೀಜವು ಬಿಸಿಲ ಬೇಗೆಯಿಂದ ಬೆಂದು ಬೂದಿಯಾಗುವದು. ಉತ್ತ ಮಣ್ಣಿನ ಮೇಲೆ ಬಿದ್ದ ಬೀಜವು ಉದ್ಭವಿಸಿ ಉನ್ನತವಾಗಿ ಊರ್ಜಿತಸ್ಥಿತಿಯನ್ನು ಪಡೆಯುವದು. ಹಾಗೆಯೇ ಆತ್ಮಶಕ್ತಿಯ ಬೀಜದ ಬೆಳವಳಿಗೆಗೆ ಸದ್ವಂಶವೂ ಸತ್ಸಂತತಿಯೂ ಸಹಕಾರಿಯಾಗುವವು. ಗೊಬ್ಬರ, ತಂಪು—ಮೊದಲಾದ ಸಹಾಯಸಂಪತ್ತುಗಳಿದ್ದರೆ ಸಣ್ಣದಾದ ಆಲದ ಬೀಜವು ದೊಡ್ಡ ಮರವಾಗುವಂತೆ ಸದ್ವಂಶದ ಮತ್ತು ಈಶ್ವರಾನುಗ್ರಹದ ಬೆಂಬಲವುಳ್ಳ ಆತ್ಮಶಕ್ತಿಯು ಸರ್ವ

ತೋಮುಖದಿಂದ ಪ್ರಸರಿಸಿಕೊಂಡು ಮುಂದೆ ಸರ್ವಾತಿಶಯವಾಗಿ ಪ್ರಕಟವಾಗುವದು. ಬೆಳೆಯುವ ಪೈರಿನ ಲಕ್ಷಣವು ಮೊಳಕೆಯಲ್ಲಿಯೇ ಕಾಣುವಂತೆ ಆತ್ಮಶಕ್ತಿಯ ಬೀಜದ ಅಂಕುರವು ತನ್ನ ಭಾವಿಲಕ್ಷಣವನ್ನು ಸೂಚಿಸುವದು. ಲಕ್ಷ್ಯವನ್ನು ಕೊಟ್ಟು ನೋಡಿದರೆ ಇದು ಎಲ್ಲರಲ್ಲಿಯೂ ಕಂಡೇ ಕಾಣುವದು. ಮಹಾರಾಷ್ಟ್ರದ ಮಹಾಸಾಧುವೆಂದು ಪ್ರಸಿದ್ಧನಾದ ತುಕಾರಾಮನಿಗೂ ಪಂಜಾಬಿನಲ್ಲಿ ಹುಟ್ಟಿ ಸಿಕ್ ಧರ್ಮಪಂಥವನ್ನು ಪ್ರತಿಷ್ಠೆಮಾಡಿದ ನಾನಕನಿಗೂ ಭಗವಂತನ ಕಡೆಯ ಲಕ್ಷ್ಯವನ್ನಿಡುವ ಚಟವನ್ನು ಹೊರಗಣವರು ಯಾರೂ ಕಲಿಸಲಿಲ್ಲ. ಅವರಿಗೆ ಹೊರಗಣ ಪ್ರಪಂಚದ ಸಂಸ್ಕಾರವು ತಗಲುವದಕ್ಕೆ ಮೊದಲೆ ಅವರು ಸ್ವಭಾವವಾಗಿಯೆ ಏಕಾಂತಪ್ರಿಯರಾಗಿದ್ದರು. ಒಡನಾಡಿಗಳು ಹೊರಗಣ ಆಟಗಳನ್ನು ಎಷ್ಟು ಉತ್ಸಾಹಕರವಾಗಿ ಮಾಡಿದರೂ ಇವರ ಮನಸ್ಸು ಅತ್ತ ಕಡೆಗೆ ಒಲಿಯಲಿ ಇಲ್ಲ. ಏನೋ ಒಂದು ಮಹಾಯೋಚನೆಯಲ್ಲಿ ತೊಡಗಿರುವವರಂತೆ ಇವರು ಇತರರಿಂದ ಸಿಡಿದು ಬಿದ್ದು ವಿಚಾರಮಗ್ನರಾಗುತ್ತಿದ್ದರು. ಇತರರೊಡನೆ ಸೇರುವಾಗ ಅವರ ಆಟಪಾಟಗಳ ಸವಿಗೆ ಬಾಯಿನೀರು ಕರೆಯದೆ ತಾವು ಮಾಡಿದ ಹೊಸ ಹೊಸ ಕವಿತೆಗಳ ಮಾಧುರ್ಯಕ್ಕೆ ಇತರರು ಬಾಯನೀರು ಕರೆಯುವಂತೆ ಮಾಡಿ ಚಿಕ್ಕಂದಿನಲ್ಲಿಯೆ ಇತರರನ್ನು ತಮ್ಮ ಭಕ್ತಿಪಂಥಕ್ಕೆ ವಶಮಾಡಿಕೊಳ್ಳುತ್ತಿದ್ದರು. ಬುದ್ಧನಿಗೆ ಧ್ಯಾನೋಪದೇಶವನ್ನು ಮಾಡಿದವರು ಯಾರು? ಎಲ್ಲಾ ವಿನೋದಕಾಲಕ್ಷೇಪಗಳನ್ನೂ ಬಿಟ್ಟು ಬುದ್ಧನು ಚಿಕ್ಕವಯಸ್ಸಿನಲ್ಲಿಯೆ ಜಂಬೂವೃಕ್ಷದ ಕೆಳಗೆ ಕುಳಿತು ಧ್ಯಾನಸ್ಥನಾಗುತ್ತಿದ್ದನಲ್ಲ! ಎಂಥ ಧ್ಯಾನ! ಇವನಿಗೇನೊ ಮಂಕು ಕವಿದುಕೊಂಡಿರುವದೆಂದು ತಿಳಿದು ಯಾರೂ ಹೆಣ್ಣು ಕೊಡಲಾರದೆ ಹೋಗುವಷ್ಟು ಪ್ರಬಲಧ್ಯಾನ!! ಈ ಧ್ಯಾನವು ಕಲಿಸಿದರೆ ಬರತಕ್ಕದ್ದಲ್ಲ. ಶ್ರೀ ಸಮರ್ಥರಾಮದಾಸಸ್ವಾಮಿಗಳು ಮಗುವಾಗಿದ್ದಾಗ ಅಳುತ್ತಲೇ ಇರಲಿಲ್ಲವಂತಲ್ಲ! ಸಾಮಾನ್ಯವಾಗಿ ಹೆದರುವದೇ ಮಕ್ಕಳ ಸ್ವಭಾವವಲ್ಲವೆ? ಎಂಥೆಂಥ ಗುಮ್ಮನ ಮಾತು ತೆಗೆದರೂ ರಾಮದಾಸರ ಎದೆಯ ಗುಂಡಿಗೆಯು ಡವಗುಟ್ಟುತ್ತಿರಲಿಲ್ಲವಲ್ಲ! ಇದಕ್ಕೇನು ಸಮಾಧಾನ? ಪೈಠಣದಲ್ಲಿದ್ದ ಏಕನಾಥನು ಉಳಿದ ಆಟಗಳನ್ನೆಲ್ಲ ಬಿಟ್ಟು ನದಿಯ ಕಲ್ಲುಗುಂಡುಗಳನ್ನು ತಂದು ಅವುಗಳನ್ನು ದೇವರಾಗಿ ಮಾಡಿಕೊಂಡು ಆಟದಲ್ಲಿಯೇ

ಏಕೆ ಮಗ್ನನಾದನು? ಝಾನ್ಸಿಯ ಲಕ್ಷ್ಮೀಬಾಯಿಯು ಎಳೆಯವಳಾಗಿ
ದ್ದರೂ ಆನೆಯ ಮೇಲೆ ಕುಳಿತುಕೊಳ್ಳಬೇಕೆಂದು ಹಠವನ್ನು ಹಿಡಿದದ್ದಕ್ಕೆ
ಆಧಾರವೇನಿರಬಹುದು? ಇವೆಲ್ಲ ಅವರ ಭವಿಷತ್ತಿನ ಚಿಹ್ನೆಗಳು. ಶ್ರೀ
ಮಧ್ವಾಚಾರ್ಯರನ್ನು ಜನರು ವಾಯುದೇವರ ಅವತಾರವೆಂದು ಸಂಭಾವಿ
ಸುವರಷ್ಟೆ. ಅವರ ಶೈಶವದ ಚರಿತ್ರೆಯ ಕಡೆಗೆ ಕಣ್ಣು ಹಾಕಿ ನೋಡಿರಿ.
ಆಗ ನಿಮಗೆ ಅದರ ನಿಜತ್ವವು ಎದ್ದು ಕಾಣುವದು. ಆಚಾರ್ಯರು
ಕಂಕುಳೊಳಗಿನ ಕೂಸಾಗಿರುವಾಗಲೇ ಒಮ್ಮೆ ಬೆಂದ ಹುರುಳಿಯನ್ನು ತಿಂದು
ಅದರ ಮೇಲೆ ಹಾಲುಕುಡಿದು ಜೀರ್ಣಿಸಿಕೊಂಡರೆಂದು ಹೇಳುತ್ತಾರೆ.
ಸಾಮಾನ್ಯವಾಗಿ ಈಗಿನ ಕಾಲದ ಮಕ್ಕಳು ಶುದ್ಧವಾದ ಹಾಲನ್ನು ಕೂಡ
ಜೀರ್ಣಿಸಿಕೊಳ್ಳಲಾರರೆಂದು ಅವಕ್ಕೆ ನೀರು ಬೆರಸುವದಲ್ಲದೆ ಇನ್ನೂ ಸಾಲ
ದೆಂದು ಸೋಡಾ ಹಾಕುವದೂ ಉಂಟು. ಹೀಗಿರುವಾಗ ಆಚಾರ್ಯರು
ಬೆಂದ ಹುರುಳಿಯನ್ನೂ ಹಾಲನ್ನೂ ಜೀರ್ಣಮಾಡಿಕೊಂಡಿರಬೇಕಾದರೆ ಅವ
ರಲ್ಲಿ ಒಂದು ಬಗೆಯ ಶಕ್ತಿವಿಶೇಷವಿಲ್ಲದಿದ್ದರೆ ಹೇಗೆ ಸಾಧ್ಯವಾದೀತು?

ದೂರದರ್ಶಿಗಳಾದವರು ಈ ಶಕ್ತಿವಿಶೇಷಗಳನ್ನು ಪ್ರಕಾರಾಂತರಗಳಿಂದ
ಕಂಡುಹಿಡಿಯುತ್ತಾರೆ. ಒಮ್ಮೆ ಒಂದು ಸಂಗತಿ ನಡೆಯಿತು. ಏನೆಂದರೆ:
ಮೈಸೂರ ದೇಶದಲ್ಲಿ ಇಮ್ಮಡಿ ಕೃಷ್ಣರಾಜರ ಹೆಂಡತಿಯಾದ ಲಕ್ಷ್ಮಮ್ಮ
ಣ್ಣಿಯು ರಾಜಪೀಠಕ್ಕೆ ತಕ್ಕ ಒಬ್ಬ ಬಾಲಕನನ್ನು ದತ್ತಕನನ್ನಾಗಿ ಮಾಡಿ
ಕೊಳ್ಳಬೇಕೆಂದು ತವಕಿಸುತ್ತಿದ್ದಳು. ಬಾಲಕನ ಯೋಗ್ಯತೆಯನ್ನು ಕಂಡು
ಹಿಡಿಯುವದು ಆಕೆಗೆ ಅಶಕ್ಯವಾಗಿತ್ತು. ಆಗ ಹೈದರನೆಂಬ ಅಧಿಕಾರಿಯು
ಅದನ್ನು ಪರೀಕ್ಷಿಸುವ ಭಾರವನ್ನು ಕೈಗೊಂಡನು. ಅವನ ಅನುಜ್ಞೆಯಂತೆ
ಅನೇಕ ಬಾಲಕರ ಗುಂಪು ಒಂದು ಕಡೆ ಸೇರಿತು. ಆಗ ಅವನು ಹುಡು
ಗರ ಮನಸ್ಸನ್ನು ಆಕರ್ಷಿಸುವಂಥ ಅನೇಕ ವಸ್ತುಗಳನ್ನು ಅಲ್ಲಿಟ್ಟು ಅವು
ಗಳಲ್ಲಿ ತಮ್ಮ ಮನಸ್ಸಿಗೆ ಬೇಕಾದವುಗಳನ್ನು ಆರಿಸಿಕೊಳ್ಳಬಹುದೆಂದು ಹೇಳಿ
ತಾನು ಆ ಆಟವನ್ನು ನೋಡುತ್ತ ನಿಂತನು. ಆಗ ಒಬ್ಬ ಹುಡುಗನು
ಮಿಠಾಯಿಯ ಉಂಡೆಗೆ ಕೈಹಾಕಿದನು; ಇನ್ನೊಬ್ಬನು ಒಂದು ಬಣ್ಣದ
ಚೆಂಡನ್ನು ತೆಗೆದುಕೊಂಡನು; ಮತ್ತೊಬ್ಬನು ಒಂದು ನಾಯ ಚಿತ್ರಕ್ಕೆ ಕೈ
ನೀಡಿದನು; ಮಗದೊಬ್ಬನು ಒಂದು ಪುಸ್ತಕವನ್ನು ಹಿಡಿದುಕೊಂಡನು;

ಬೇರೊಬ್ಬನು ಯಾವದಕ್ಕೂ ಕೈಹಾಕದೆ ಬೆಪ್ಪಾಗಿ ನಿಂತುಕೊಂಡನು; ಚಾಮರಾಜನೆಂಬ ಹುಡುಗನು ಮುಂದೆಮುಂದೆ ನುಗ್ಗಿಕೊಂಡು ಬಂದು ಒಂದು ಕತ್ತಿಯನ್ನೂ ನಿಂಬೆಯ ಹಣ್ಣನ್ನೂ ಎತ್ತಿಕೊಂಡು ಅತ್ಯಾನಂದದಿಂದ ಕುಣಿದಾಡಿದನು. ಇದನ್ನು ನೋಡುತ್ತಲಿ ಹೈದರನು ಒಳ್ಳೆ ಸಂಭ್ರಮ ದಿಂದ ಬಂದು ಚಾಮರಾಜನ ಬೆನ್ನುತಟ್ಟಿ ಅವನೇ ಸಿಂಹಾಸನಕ್ಕೆ ತಕ್ಕವ ನೆಂದು ಲಕ್ಷ್ಮಮ್ಮಣ್ಣಿಯವರ ಮುಂದೆ ತಂದು ನಿಲ್ಲಿಸಿದನು. ಮುಂದೆ ಆ ಬಾಲಕನೇ ಸರ್ವಸಮ್ಮತನಾಗಿ ಸಿಂಹಾಸನಾರೋಹಣವನ್ನು ಮಾಡಿ ಮೈಸೂರ ಇತಿಹಾಸದಲ್ಲಿ ತನ್ನ ಯಶಸ್ಸನ್ನು ಚಿರಸ್ಥಾಯಿಯಾಗಿ ಮಾಡಿರು ವನು. ಹೀಗೆ ಪ್ರತಿಯೊಬ್ಬರಲ್ಲಿಯೂ ಆತ್ಮಶಕ್ತಿಯು ಸ್ಥೂಲಪ್ರಮಾಣ ದಲ್ಲಿಯೊ ಸೂಕ್ಷ್ಮಪ್ರಮಾಣದಲ್ಲಿಯೊ ಅಂತೂ ಇದ್ದೇ ಇರುವದಲ್ಲದೆ ತನ್ನ ಇರುವಿಕೆಯನ್ನು ಪ್ರಕಾಶಮಾಡಿಯೂ ಮಾಡುವದು.

ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಅದೇ ನೆಂದರೆ: ಹೈದರನ ಮುಂದೆ ಪರೀಕ್ಷೆಗೆ ನಿಂತವರಲ್ಲಿ ಬೆಪ್ಪಾಗಿ ನಿಂತ ಹುಡುಗ ನಂತೆ ಒಬ್ಬೊಬ್ಬರಲ್ಲಿ ಆತ್ಮಶಕ್ತಿಯು ಕಾಣದೆ ಹೋದರೂ ಹೋಗಬಹುದು. ಆತ್ಮಶಕ್ತಿಯ ಅಂಕುರವು ಕಾಣುವದಕ್ಕೆ ಒಂದು ಪರಿಸ್ಥಿತಿ ಬೇಕು. ಮಲ್ಲಿಗೆಯಲ್ಲಿ ಸ್ವಭಾವವಾಗಿ ಸುವಾಸನೆ ಇದ್ದರೂ ಕೇವಲ ಮೊಗ್ಗಾಗಿರು ವಾಗ ಆ ವಾಸನೆ ಹೊರಹೊಮ್ಮುವದಿಲ್ಲ. ಅದು ಅರಳುವದಕ್ಕಾರಂಭ ವಾಗುತ್ತಲಿ ಅದರ ವಾಸನೆ ಹೊರಬೀಳುವದು. ಹಾಗೆ ಆತ್ಮಶಕ್ತಿಯು ಅಸ್ತಿತ್ವವಿದ್ದಾದರೂ ಬಲಿತ ಮೇಲೆ ಮಾತ್ರ ಅದರ ಭವಿಷ್ಯದ್ಯೋಗ್ಯತೆಯ ಸೂಚನೆ ತೋರಿಬರುವದು. ಸೂಚನೆ ತೋರದೆ ಇರುವಾಗ ಸರ್ವಸಾಮಾ ನ್ಯವಾದ ಮತ್ತು ಸೂಚನೆ ತೋರಿದಾಗ ಅದಕ್ಕೆ ಅನುಗುಣವಾದ ಪರಿ ಸ್ಥಿತಿಗಳನ್ನು ಕಲ್ಪಿಸಿಕೊಟ್ಟು ಪ್ರತಿಯೊಬ್ಬನೂ ಅದನ್ನು ಚೆನ್ನಾಗಿ ಹಬ್ಬಿ ಸುವದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡಬೇಕು.

# ಶಿಕ್ಷಣ

“ಬೀಜಗಳಿಗೆ ಕಾಲಾನುಕಾಲದಲ್ಲಾದರೂ ಹುಟ್ಟುವದು ಸ್ವಾಭಾವಿಕವಲ್ಲವೆ?” ಎಂದರೆ ನಿಜ. ಆದರೂ ಅವುಗಳಲ್ಲಿ ಯೋಗ್ಯತೆಯ ತಾರತಮ್ಯ ಉಂಟು. ಕೆಲವು ಬೀಜಗಳು ಯಾರ ಪೋಷಣೆಯನ್ನೂ ಕಾಯದೆ ಕಾಡುಗಳಲ್ಲಿ ತಮ್ಮಷ್ಟಕ್ಕೆ ತಾವೇ ದೆವ್ವನಂತೆ ಬೆಳೆದುಕೊಳ್ಳುವವು. ಇನ್ನು ಕೆಲವನ್ನು ಹಸನಾದ ಭೂಮಿಯ ಮೇಲೆ ಬಿತ್ತಬೇಕಾಗುವದು. ಇನ್ನು ಕೆಲವಕ್ಕೆ ಬಿತ್ತಿದ ಮೇಲೆಯೂ ಹೆಚ್ಚು ಆರಯಿಕೆ ಮಾಡಬೇಕಾಗುವದು. ಉದಾಹರಣೆಗೆ ನೋಡಿರಿ. ಕಾಡಿನಲ್ಲಿ ಬೇರೆ ಬೇರೆ ಜಾತಿಯ ಎಷ್ಟೋ ಮರಗಳು ತಸುಗೆ ತಾವೇ ಬೆಳೆದುಕೊಳ್ಳುವವು. ಆದರೂ ಅವುಗಳಿಗೆ ಅನುಕೂಲಪರಿಸ್ಥಿತಿಯನ್ನು ಕಲ್ಪಿಸಿದರೆ ಅವು ಮತ್ತಷ್ಟು ತುಂಬಾಗಿ ಬೆಳೆಯುವವು. ಹುರುಳಿಯನ್ನು ಬಿತ್ತಬೇಕಾದರೆ ಸಾಮಾನ್ಯವಾಗಿ ನೆಲವು ಸ್ವಲ್ಪ ಮೆತ್ತಗಿದ್ದರೆ ಸಾಕು; ಕಬ್ಬಿನ ಬೆಳೆಯನ್ನು ತೆಗೆಯಬೇಕಾದರೆ ಮಾತ್ರ ಅದನ್ನು ಬಹುಪರಿಯಿಂದ ಪೋಷಿಸಬೇಕಾಗುವದು. ಈ ನಿಯಮವನ್ನು ಆತ್ಮಶಕ್ತಿಯ ಬೀಜಕ್ಕೆ ಅನ್ವಯಿಸಿ ನೋಡೋಣ. ಅದರ ಬೀಜತ್ವವೇನೂ ಸಾಯುವಂಥದ್ದಲ್ಲ. ಅದು ಎಂದಿದ್ದರೂ ಒಂದು ದಿನ ಮೈದುಂಬಿಕೊಳ್ಳುವಂಥದ್ದೇ ಸರಿ. ಆದರೆ ಅದು ಎಂದಿಗೋ ಏನೋ! ಪ್ರತಿಯೊಬ್ಬ ಮನುಷ್ಯನೂ ತನ್ನ ಉನ್ನತಿಯನ್ನು ಆದಷ್ಟು ಬೇಗ ಮಾಡಿಕೊಳ್ಳಬೇಕೆಂದು ಬಯಸುವದು ಸಹಜವಷ್ಟೆ. ಲೋಕದಲ್ಲಿ ಆತ್ಮಶಕ್ತಿಯ ಉನ್ನತಿಗಿಂತ ಹೆಚ್ಚಿನ ಉನ್ನತಿಯೇ ಇಲ್ಲ. ಒಬ್ಬನು ಉನ್ನತಿಯನ್ನು ಪಡೆದನೆಂಬ ಮಾತು ಅವನ ಆತ್ಮಶಕ್ತಿಯ ಬೆಳವಣಿಗೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಹೇಳಿದರೆ ಮಾತ್ರ ಒಪ್ಪುವದು. ಒಂದು ಜನಾಂಗವು ಉನ್ನತಿಯನ್ನು ಪಡೆಯಿತೆಂಬ ಮಾತು ಆ ದೇಶದಲ್ಲಿ ಆತ್ಮಶಕ್ತಿಯ ಶಿಕ್ಷಣದ ಪ್ರಸಾರವಾಗಿದ್ದರೆ ಮಾತ್ರ ಅರ್ಥವತ್ತಾಗುವದು. ಆತ್ಮಶಕ್ತಿ

ಯಿಲ್ಲದೆ ಅಷ್ಟೈಶ್ವರ್ಯವಿದ್ದರೂ ಅದು ಹುಲ್ಲಿಗಿಂತ ಕಡೆ. ಒಂದು ದೇಶದಲ್ಲಿ ಎಣಿಕೆಗೆ ಬರದಷ್ಟು ಸೇನೆ ಇರಬಹುದು; ಎಣಿಕೆಗೆ ಬರದಷ್ಟು ಧನಕನಕಗಳಿರಬಹುದು; ಎಣಿಕೆಗೆ ಬರದಷ್ಟು ಪ್ರಜಾವೃದ್ಧಿ ಇರಬಹುದು. ಆತ್ಮಶಕ್ತಿ ಇಲ್ಲದಿದ್ದರೆ ಅವುಗಳೆಲ್ಲ ಹೆಣಕ್ಕೆ ಮಾಡಿದ ಶೃಂಗಾರಗಳಂತೆ. ಸೇನೆಗಾಗಲಿ ಧನಕನಕಗಳಿಗಾಗಲಿ ಪ್ರಜಾವೃದ್ಧಿಗಾಗಲಿ ಆತ್ಮಶಕ್ತಿಯ ಸಂಸರ್ಗದಿಂದ ಬೆಲೆಯೇ ಹೊರತು ಬೇರೆ ಇಲ್ಲ. ಆದ್ದರಿಂದ ಸರ್ವೋ ತ್ಕೃಷ್ಟವಾದ ಆತ್ಮಶಕ್ತಿಯನ್ನು ಪ್ರತಿಯೊಬ್ಬನೂ ಆದಷ್ಟು ಬೇಗ ಮೈಗೂಡಿಸಿ ಕೊಂಡು ತನ್ನ ಉನ್ನತಿಯನ್ನು ಮಾಡಿಕೊಳ್ಳುವದಕ್ಕೆ ಆದಷ್ಟು ತವಕ ಗೊಳ್ಳಬೇಕು.

ಆತ್ಮಶಕ್ತಿಯ ಉಜ್ಜ್ವಲತೆಗೆ ತಕ್ಕ ಪರಿಸ್ಥಿತಿಯನ್ನು ಕಲ್ಪಿಸ ಬೇಕೆಂದು ಹೇಳುವದು ಕೇವಲ ನಮ್ಮ ಮಾನುಷದೃಷ್ಟಿಯಿಂದಲೇ ಹೊರತು ಪರಮಾರ್ಥದೃಷ್ಟಿಯಿಂದ ವಿಚಾರಮಾಡಿದರೆ ತನಗೆ ತಕ್ಕ ಪರಿ ಸ್ಥಿತಿಯನ್ನು ತಾನೇ ಕಲ್ಪನೆಮಾಡಿಕೊಳ್ಳುವ ಸಾಮರ್ಥ್ಯವು ಪ್ರಬಲವಾದ ಆತ್ಮಶಕ್ತಿಯ ಬೀಜಕ್ಕೇ ಉಂಟು. ಝಾನ್ಸಿಯ ಮಹಾರಾಣಿಯಾದ ಲಕ್ಷ್ಮೀಬಾಯಿಯು ಒಬ್ಬ ಸಾಮಾನ್ಯ ಗೃಹಸ್ಥನ ಮನೆಯಲ್ಲಿ ಜನ್ಮವೆತ್ತಿ ದಳು. ಸ್ತ್ರೀಜನ್ಮದಲ್ಲಿ ಬಂದ ಆಕೆ ಸಾಮಾನ್ಯಳಾಗಿದ್ದರೆ ಇತರ ಸ್ತ್ರೀಜನ ರಂತೆ ಹಾಡುಹಸೆಗಳಲ್ಲಿ ಮಾತ್ರ ತನ್ನ ಚಾತುರ್ಯವನ್ನು ವ್ಯಕ್ತಗೊಳಿಸ ಬಹುದಾಗಿತ್ತು. ಆದರೆ ವಿಧಾತನ ಇಚ್ಛೆ ಹಾಗಿರಲಿಲ್ಲ. ಆಕೆಯ ಹೃದಯ ದಲ್ಲಿ ಆತ್ಮಶಕ್ತಿಯ ಬೀಜವನ್ನು ಇಟ್ಟಾಗಲಿ ವಿಧಿಯು ಅದರ ಅಭ್ಯು ದಯಕ್ಕೆ ತಕ್ಕ ಉಪಕರಣಗಳ ಯೋಜನೆಯನ್ನು ಮಾಡಿಯೇ ಇದ್ದನು. ಲಕ್ಷ್ಮೀಬಾಯಿಗೆ ಚಿಕ್ಕಂದಿನಲ್ಲಿಯೆ ಮಾತೃವಿಯೋಗವಾಯಿತು. ಸಾಮಾನ್ಯ ದೃಷ್ಟಿಯಿಂದ ಇದೊಂದು ಆಕೆಗೆ ಧಕ್ಕೆಯಾದರೂ ಇದೇ ಆಕೆಯ ಆತ್ಮ ಶಕ್ತಿಯ ಉನ್ನತಿಗೆ ಸಾಧಕವಾಯಿತು. ತಾಯಿ ಇಲ್ಲದ ಕಾರಣ ಲಕ್ಷ್ಮೀ ಬಾಯಿಯು ತಂದೆಯ ಬಳಿಯಲ್ಲಿ ಹೆಚ್ಚಾಗಿ ಇರಬೇಕಾಗಿ ಬಂತು. ಹಾಗೆಯೆ ಆಕೆ ಬೆಳೆದ ಮನೆಯಲ್ಲಿ ಹೆಣ್ಣುಮಕ್ಕಳಿಲ್ಲದೆ ಗಂಡುಮಕ್ಕಳಿದ್ದ ಕಾರಣ ಲಕ್ಷ್ಮೀಬಾಯಿಯ ಆಟಪಾಟವೆಲ್ಲ ಗಂಡುಹುಡುಗರೊಡನೆಯೆ ಸಾಗಿತು. ಹೀಗಾಗಿ ಆಕೆಯಲ್ಲಿ ಸ್ತ್ರೀತ್ವಕ್ಕಿಂತಲೂ ಹೆಚ್ಚಾಗಿ ಪುರುಷತ್ವವೆ

ಎದ್ದು ಕಾಣುವದಕ್ಕಾರಂಭಿಸಿತು. ಆಕೆಯ ಒಡನಾಡಿಗಳಾದ ಗಂಡುಹುಡುಗರು ಕುದುರೆಯನ್ನು ಹತ್ತುವದು ಮತ್ತು ಕತ್ತಿಯನ್ನು ತಿರುಹುವದು—ಮೊದಲಾದ ವಿದ್ಯೆಗಳನ್ನು ಕಲಿಯುತ್ತಿದ್ದದರಿಂದ ಆ ವಿದ್ಯೆಗಳೆಲ್ಲ ಹೆಚ್ಚು ಪ್ರಯತ್ನವಿಲ್ಲದೆ ಲಕ್ಷ್ಮೀಬಾಯಿಗೆ ಬರೀ ಸಹವಾಸಬಲದಿಂದಲೆ ಬಂದವು. ದೈವಯೋಗದಿಂದ ಒದಗಿದ ಈ ಪರಿಸ್ಥಿತಿಯಲ್ಲಿ ದೊರೆತ ಶಿಕ್ಷಣದಿಂದಲೆ ಮುಂದೆ ಲಕ್ಷ್ಮೀಬಾಯಿಯು ತನ್ನ ಯಶಶ್ಶರೀರರಚನೆಯನ್ನು ಮಾಡುವದಕ್ಕೆ ಅನುಕೂಲವಾಯಿತು. ಸಾಮಾನ್ಯರಲ್ಲಿ ಸ್ತ್ರೀಮಾತ್ರಳಾಗಿ ಹುಟ್ಟಿದ ಲಕ್ಷ್ಮೀಬಾಯಿಯು ಸಿಂಹಾಸನಾರೂಢನಾದ ಪತಿಯ ನಿಧನದಿಂದ ಮುಂದೆ ತನಗೇನು ಗತಿಯೆಂದು ಮೂಲೆಯಲ್ಲಿ ಮುದುರಿಕೊಳ್ಳದೆ ತನ್ನ ಪ್ರಜೆಗಳ ಗತಿಯೇನೆಂಬ ಯೋಚನೆಯನ್ನು ಹಚ್ಚಿಕೊಂಡು ದೃಢಮನಸ್ಸನ್ನು ಮಾಡಿ ರಾಜ್ಯಸೂತ್ರವನ್ನು ಕೊರಳಿಗೆ ಹಾಕಿಕೊಂಡು ಪುರುಷರು ಕೂಡ ದಿಕ್ಕುಗೆಡುವಂಥ ಕಠಿನವಾದ ಪ್ರಸಂಗಗಳಿಗೆ ಎದೆಗೊಟ್ಟು ಖಡ್ಗಪಾಣಿಯಾಗಿ ದಿವ್ಯಾಶ್ವವನ್ನೇರಿ ರಣರಂಗದಲ್ಲಿ ಗುಡುಗಾಡಿ ಮಹಾಪ್ರಬಲರಾದ ಪಾಶ್ಚಾತ್ಯರ ಮೂಗಿನ ಮೇಲೆ ಬೆರಳಿಡಿಸುವಂಥವಳಾಗುವಳೆಂದು ಯಾರಿಗಾದರೂ ತಿಳಿಯುವ ಹಾಗಿತ್ತೆ? ಇಲ್ಲ. ಆಕೆಯಲ್ಲಿದ್ದ ಆತ್ಮಶಕ್ತಿಯ ಪ್ರಭಾವವು ತಾನೇ ತನಗೆ ತಕ್ಕ ಪರಿಸ್ಥಿತಿಯನ್ನು ಕಲ್ಪಿಸಿಕೊಂಡು ತನ್ನ ಅದ್ಭುತಸಾಮರ್ಥ್ಯವನ್ನು ಪ್ರದರ್ಶನಮಾಡಿತು.

ಹೀಗೆ ತಾನೇ ಬೆಳೆಯುವ ಶಕ್ತಿ ಆತ್ಮಶಕ್ತಿಗೆ ಇದ್ದರೂ ಶೀಘ್ರವಾಗಿ ಆ ಸ್ಥಿತಿಯನ್ನು ತರುವದಕ್ಕೆ ಶಿಕ್ಷಣವು ಸಹಕಾರಿಯಾಗುವದು. ಶಿಕ್ಷಣವೆಂಬ ಮಾತು ಓದುಬರಹವನ್ನು ಕಲಿಸುವ ಕೆಲಸಕ್ಕೆ ರೂಢಿಯಾಗಿರುವದು. ಅದು ಕೇವಲ ಗೌಣ. ಓದುಬರಹವು ಶಿಕ್ಷಣದ ಒಂದು ಬಗೆಯ ಸಾಧನವೇ ಹೊರತು ಅದೇ ಶಿಕ್ಷಣದ ಸರ್ವಸ್ವವಲ್ಲ. ಶಿಕ್ಷಣವೆಂದರೆ ಆತ್ಮಶಕ್ತಿಯ ಬೆಳವಳಿಗೆಗೆ ಅನುಕೂಲಪಡಿಸುವದು. ಮನುಷ್ಯನಲ್ಲಿ ಈ ಕೃತಿಯು ಯಾವಾಗ ಆರಂಭವಾಗುವದು? ಯಾವಾಗ ಶಿಶು ಭೂಮಿಯ ಮೇಲೆ ಬಿದ್ದು ಕಣ್ಣುಬಿಡುವದೊ ಆಗಲೆ ಆರಂಭವಾಗುವದು. ಆಗನಿಂದಲೂ ಆದು ತನಗರಿವಿಲ್ಲದೆ ಶಿಕ್ಷಣವನ್ನು ಪಡೆಯುತ್ತಲೆ ಇರುವದು. ಮಕ್ಕಳು ಆಡುವ ಆಟದಲ್ಲಿ ಏನೂ ಅರ್ಥವಿಲ್ಲವೆಂದು ಸಾಮಾನ್ಯ ಜನರು

ತಿಳಿಯುವರು. ಇದರ ತಳವನ್ನು ಶೋಧಿಸಿದರೆ ಇವರು ತಮ್ಮ ದಡ್ಡ ತನವನ್ನು ಮಗುವಿನ ಮೇಲೆ ಆರೋಪಣೆಮಾಡಿ ಮಗುವಿನ ಜಾಣತನ ವನ್ನು ತಮ್ಮ ಮೇಲೆ ಆವಾಹನೆ ಮಾಡಿಕೊಳ್ಳುವರು. ನಿಜವಾಗಿ ಮಕ್ಕಳ ಆಟವೆಲ್ಲ ಅರ್ಥವತ್ತಾಗಿರುವವು. ಅವು ಕಂಡಕಂಡ ಪದಾರ್ಥಗಳನ್ನೆಲ್ಲ ಕೈಯಲ್ಲಿ ಹಿಡಿಯುವಾಗ ಅವುಗಳ ತೂಕವನ್ನು ನೋಡುವವು; ಮತ್ತು ಸ್ಪರ್ಶದ ಸುಖವನ್ನು ಹುಡುಕುವವು. ಒಂದು ಪದಾರ್ಥವನ್ನು ನಿಟ್ಟಿಸು ವಾಗ ಅವು ಆ ಪದಾರ್ಥದ ಬಣ್ಣದ ಕಡೆಗೆ ಲಕ್ಷ್ಯವನ್ನು ಕೊಟ್ಟು ನಿಟ್ಟಿಸುವವು. ತಾಯ ಜೋಗುಳದ ಧ್ವನಿಯನ್ನು ಕೇಳುತ್ತಲೆ ಅವು ಆ ಶಬ್ದಮಾಧುರ್ಯದ ಸವಿಯನ್ನು ಕಿವಿಗಳಿಂದ ಈಂಟುತ್ತಿರುವವು. ಕಂಡ ಕಂಡ ಪದಾರ್ಥಗಳನ್ನೆಲ್ಲ ಬಾಯಲ್ಲಿಟ್ಟುಕೊಳ್ಳುವಾಗ ಶಿಶುಗಳ ಉದ್ದೇಶವು ಆ ಪದಾರ್ಥಗಳ ರಸವನ್ನು ಗ್ರಹಿಸುವದರ ಕಡೆಗೆ ಇರುವದು. ಹೀಗೆ ಮಕ್ಕಳು ತಮ್ಮ ಪ್ರತಿಯೊಂದು ಆಚರಣೆಯಲ್ಲಿಯೂ ಸೃಷ್ಟಿವೈಚಿತ್ರ್ಯವನ್ನು ತಿಳಿದು ಮನಸ್ಸನ್ನು ಆಹ್ಲಾದಗೊಳಿಸುತ್ತಿರುವವು. ಆದ್ದರಿಂದ ಮಕ್ಕಳ ಆಟದಲ್ಲಿ ಅರ್ಥವಿಲ್ಲವೆಂಬ ಮಾತು ತಪ್ಪು. ಈ ರೀತಿಯಾದ ಸ್ವಶಿಕ್ಷಣವು ಹುಟ್ಟಿ ಸಾಯುವವರೆಗೂ ಪ್ರತಿಯೊಬ್ಬನಿಗೂ ನಡೆದೇ ಇರುವದು. ಆದರೆ ತಾನೇ ತಾನಾಗಿ ಬೆಳೆದ ಹಣ್ಣಿಗಿಂತಲೂ ಕಶೀ ಮಾಡಿದ ಮರದ ಹಣ್ಣು ಹೆಚ್ಚು ರುಚಿಕರವಾಗುವಂತೆ ಆತ್ಮಶಕ್ತಿಯನ್ನು ಬೆಳೆಸಿಕೊಳ್ಳುವ ಸ್ವಶಿಕ್ಷಣಕ್ಕೆ ಒಬ್ಬರು ಮಾರ್ಗದರ್ಶಿಗಳಿರುವದುತ್ತಮ. ಮಕ್ಕಳಿಗೆ ಯಾರು ಮಾರ್ಗ ದರ್ಶಿಗಳು? ಬರೀ ಮಕ್ಕಳಿಗೇ ಏಕೆ? ಸರ್ವರಿಗೂ ತಾಯ ಸಮಾನಳಾದ ಮಾರ್ಗದರ್ಶಕರು ಯಾರೂ ಇಲ್ಲ. ಮನುಷ್ಯನ ಉತ್ಪತ್ತಿಗೆ ತಂದೆಯೂ ತಾಯಿಯೂ ಇಬ್ಬರೂ ಕಾರಣರಾದರೂ ಮಕ್ಕಳ ಮೇಲಿನ ಪ್ರೀತಿಯು ತಾಯಿಗಿದ್ದಷ್ಟು ತಂದೆಗಿರುವದಿಲ್ಲ. ತಂದೆಯು ತನ್ನ ಮಕ್ಕಳನ್ನು ವಿವೇಕ ದೃಷ್ಟಿಯಿಂದ ಅಥವಾ ವಿಚಾರದೃಷ್ಟಿಯಿಂದ ನೋಡುವನು. ತಾಯಿಯು ಹಾಗಲ್ಲ. ಆಕೆಯದು ಪ್ರೇಮದೃಷ್ಟಿ. ತಂದೆಗೆ ಪ್ರೇಮವಿಲ್ಲವೆಂತಲ್ಲ. ತಾಯಿಗೆ ವಿವೇಕವಿಲ್ಲವೆಂತ ಅಲ್ಲ. ಸ್ವಭಾವವಾಗಿಯೇ ಪುರುಷನು ವಿಚಾರ ಪ್ರಧಾನನು; ಸ್ತ್ರೀಯು ಪ್ರೇಮಪ್ರಧಾನಳು. ಈ ಜಗತ್ತೆಂಬ ಶರೀರಕ್ಕೆ ಪುರು ಷನು ಮೆದುಳಿನಂತೆ; ಸ್ತ್ರೀಯು ಹೃದಯದಂತೆ. ಆದ್ದರಿಂದ ಅವರಿಬ್ಬರಲ್ಲಿ

ಪರಸ್ಪರಭೇದ. ಇಷ್ಟೇ. ಈ ಸ್ಥಿತಿಯಲ್ಲಿ ತಾಯಿತಂದೆಗಳಿಬ್ಬರೂ ಮಕ್ಕಳ ಪೋಷಕರಾದರೂ ಶಿಶುವಿನ ಮನಸ್ಸು ತಂದೆಯ ಮನಸ್ಸಿನ ಕಡೆಗೆ ಒಲಿಯುವದಕ್ಕಿಂತಲೂ ತಾಯ ಮನಸ್ಸಿನ ಕಡಗೇ ಒಲಿಯುವದು. ಸಾಮಾನ್ಯವಾಗಿ ಯಾರಿಗೇ ಆದರೂ ವಿಚಾರಪ್ರಧಾನವಾಗಿ ಹೇಳಿದ ಮಾತಿಗಿಂತಲೂ ಪ್ರೇಮಪ್ರಧಾನವಾಗಿ ಆಡಿದ ಮಾತು ಹೆಚ್ಚು ರುಚಿಸುವದು. ಆ ಪ್ರೇಮದ ಸವಿಯಿಂದ ಹೀರಿಕೊಂಡದ್ದೆ ಮುಂದೆ ಆ ವ್ಯಕ್ತಿಯ ಜೀವನಸರ್ವಸ್ವವಾಗಿರುವದು. ಶಿವಾಜಿಯ ಇತಿಹಾಸವನ್ನು ನೋಡಿರಿ. ಶಿವಾಜಿಯ ತಾಯಿಯು ಒಬ್ಬ ಮಹಾಯೋಧನ ಮಗಳಾಗಿ ಸ್ವದೇಶಾಭಿಮಾನಿಯಾಗಿದ್ದಳು. ಸ್ವಜನಾಭಿಮಾನದಿಂದ ಆವೇಶಗೊಂಡಿದ್ದ ಆಕೆಗೆ ಮಹಮ್ಮದೀಯಧರ್ಮದವರಿಂದ ತಮ್ಮ ಅಧಃಪಾತವಾಗಿದ್ದದ್ದು ಬಹುತಲ್ಲಣವನ್ನುಂಟುಮಾಡಿತ್ತು. ಶಿವಾಜಿಗೆ ಹೊಟ್ಟೆಗೆ ಕೊಡುವಾಗ ಆಕೆಯು ಮುಸಲ್ಮಾನರಿಗೆ ಕೋಳುಹೋದ ತಮ್ಮ ಗಿರಿದುರ್ಗಗಳು ಹಾಳುಬಿದ್ದಿರುವವನ್ನು ನೋಡಿ ಸಿಟ್ಟುಸಿರಿಡುತ್ತಿರಲು ಅದರ ಬಿಸಿಯಿಂದ ಕಾವೇರಿದ ರಕ್ತದಿಂದ ರೂಪಾಂತರಗೊಂಡ ಆಕೆಯ ಮೊಲೆಹಾಲು ಶಿವಾಜಿಯ ರಕ್ತನಾಳಗಳಲ್ಲಿಯೂ ರೋಮಕೂಪಗಳಲ್ಲಿಯೂ ಅದರ ಬಿಸಿಯನ್ನು ಹತ್ತಿಸಿತು. ಸ್ವರಾಜ್ಯದ ಇಚ್ಛಾವಿಶೇಷದಿಂದ ಆಕೆ ಹಂಬಲಿಸಿಕೊಂಡ ಮಾತುಗಳೆಲ್ಲ ಶಿವಾಜಿಯ ಹೃದಯದ ಮೇಲೆ ಒಡೆದು ಮೂಡಿದವು. ಇವೇ ಅವನು ಮುಂದೆ ಮಾಡಿದ ಸ್ವರಾಜ್ಯಸ್ಥಾಪನೆಗೆ ಮೂಲಮಂತ್ರಗಳಾದವು. ವಿಠ್ಠಲಪಂತನೆಂಬವನಿಗೆ ನಿವೃತ್ತಿನಾಥ, ಜ್ಞಾನದೇವ ಮತ್ತು ಸೋಪಾನ ಎಂಬ ಮೂವರು ಗಂಡುಮಕ್ಕಳು ಮತ್ತು ಮುಕ್ತಾಬಾಯಿ ಎಂಬಾಕೆಯು ಹೆಣ್ಣುಮಗಳು. ಈ ನಾಲ್ವರೂ ಇಷ್ಟು ವಿಸ್ತಾರವಾದ ದೇಶದಲ್ಲೆಲ್ಲ ಸ್ತೋತ್ರಾರ್ಹರಾಗಿದ್ದಾರೆ. ಇದಕ್ಕೆ ಇವರಿಗೆ ಎಲ್ಲಿಂದ ಶಿಕ್ಷಣವು ಸಿಕ್ಕಿತು? ಈ ನಾಲ್ವರೂ ಮಹಾಸಾಧುಶಿರೋಮಣಿಗಳೆನಿಸಿ ಮಹಾರಾಷ್ಟ್ರದೇಶದ ಭಕ್ತಿಪಂಥವೆಂಬ ಭವ್ಯವಾದ ಭವನಕ್ಕೆ ನಾಲ್ಕು ಮೂಲಸ್ತಂಭಗಳಾಗಿ ವಿರಾಜಿಸುತ್ತಿರುವರಲ್ಲ! ಈ ಯೋಗ್ಯತೆಯನ್ನುಂಟುಮಾಡಿಕೊಟ್ಟ ಗುರು ಯಾರು? ಈ ನಾಲ್ವರಿಗೂ ಬೇರೆ ಗುರುವಿನ ಆಶೆಯೇ ಇರಲಿಲ್ಲ. ಏಕೆಂದರೆ: ವಿಠ್ಠಲಪಂತನು ಸಂನ್ಯಾಸಿಯಾಗಿದ್ದು ಆ ಮೇಲೆ ಸಂಸಾರವನ್ನು ನಡೆಸಿದವನಾಗಿ

ದ್ದನು. ಅವನು ಆ ರೀತಿ ಮಾಡಿದ್ದಕ್ಕೆ ಅವನಿಗೆ ಗುರ್ವಾಜ್ಞೆಯ ಆಧಾರವಿತ್ತು. ಇರಲಿ. ಪ್ರಕೃತ ಈ ನಾಲ್ವರಿಗೆ ಸಿಕ್ಕಿದ ಶಿಕ್ಷಣವು ಕೇವಲ ಮನೆಯಲ್ಲಿ ತಾಯ ಬಳಿಯ ಮಾತುಕಥೆಗಳಿಂದಲೇ ಹೆಚ್ಚು. ತಾಯಲ್ಲಿ ಯೋಗ್ಯತೆ ಇಲ್ಲದೆ ಹೋದರೆ ಮಾತ್ರ ಅದನ್ನು ಆ ಸಂತತಿಯ ದುರ್ದೈವವೆನ್ನಬೇಕು. ನಿಜವಾಗಿ ತಂದೆಗಿಂತಲೂ ತಾಯಲ್ಲಿ ಹೆಚ್ಚು ಯೋಗ್ಯತೆಯೆ ಇರಬೇಕು. ಏಕೆಂದರೆ: ಭಾವಿಸಂತತಿಯಲ್ಲಿ ಯೋಗ್ಯತೆಯನ್ನುಂಟು ಮಾಡುವ ಭಾರವೆಲ್ಲ ತಾಯ ಮೇಲೆ ಇರುವದು.

ತಾಯ ಬಳಿಯಲ್ಲಿಯೇ ಎಲ್ಲ ಬಗೆಯ ಶಿಕ್ಷಣವೂ ದೊರೆಯುವ ಸಂಭವವು ಕಡಿಮೆ. ಮುಖ್ಯ ಮೂಲಧನವು ತಾಯಿಯಿಂದಲೆ ದೊರೆಯುವದು. ತಾಯ ಬಳಿಯಲ್ಲಿಯೆ ನಲಿದಾಡುವ ವಯಸ್ಸು ಕಳೆದ ಮೇಲೆ ಆ ಮೂಲಧನದ ಪರಿಪುಷ್ಟಿಗೆ ತಕ್ಕ ಪ್ರೌಢಶಿಕ್ಷಣವನ್ನು ಕೊಡುವದಕ್ಕೆ ಬೇರೆ ಗುರು ಬೇಕಾಗುವದು ನಿಜ. ಆದರೆ ಆ ಗುರುವಾದರೂ ತಾಯಂತೆಯೆ ಇರುವಂಥವನಾಗಬೇಕು. ಮಕ್ಕಳಿಗೆ ತಾಯ ಮಾತು ಪಥ್ಯವಾದಂತೆ ತಂದೆಯ ಮಾತು ಆಗುವದಿಲ್ಲ. ತಾಯ ಮಕ್ಕಳ ಸಂಬಂಧದಂತೆ ಆದ ಹೊರತು ಗುರುಶಿಷ್ಯರ ಮನಸ್ಸಿನ ಬೆಸಿಗೆ ಕೂಡುವದಿಲ್ಲ; ಎಂದರೆ ಶಿಷ್ಯನ ಮನಸ್ಸು ತಾಯಂತಲ್ಲದ ಗುರುವಿನ ಉಪದೇಶವನ್ನು ಒಳಕೊಳ್ಳುವದಿಲ್ಲ. ಗುರುವು ತಾಯಂತೆ ಇರಬೇಕೆಂದರೇನರ್ಥ? ತಾಯಿಯು ಮಗನಿಂದ ಪ್ರತಿಫಲವನ್ನು ಬಯಸದೆ, ಅಷ್ಟೇ ಅಲ್ಲ, ಮಗನು ತನ್ನ ಮೇಲೆ ಹೇಸಿಕೆಯನ್ನು ಮಾಡಿದರೂ ಕೂಡ ಮೂಗು ಮುಚ್ಚಿಕೊಳ್ಳದೆ, ಎಲ್ಲವನ್ನೂ ಪ್ರೇಮದೃಷ್ಟಿಯಿಂದಲೆ ನೋಡುತ್ತ ಮಗನ ಅಭ್ಯುದಯಕ್ಕಾಗಿಯೆ ಪ್ರತಿಕ್ಷಣವೂ ಹೆಣಗುತ್ತಿರುವಂತೆ ಶಿಷ್ಯನಿಂದ ಪ್ರತಿಫಲವನ್ನು ಬಯಸದೆ ಶಿಷ್ಯನು ಅಪಚಾರ ಮಾಡಿದರೂ ಕೂಡ ಪ್ರೇಮದೃಷ್ಟಿಯಿಂದ ನೋಡುತ್ತ ಶಿಷ್ಯನ ಅಭ್ಯುದಯಕ್ಕಾಗಿಯೆ ಯಾವಾಗಲೂ ತನ್ನ ತನುಮನಧನಗಳನ್ನು ವಿನಿಯೋಗಿಸುವ ಗುರು ತಾಯಂಥ ಗುರು. ಇದು ಈಗ ನಮಗೆ ಕನಸಿನ ಮಾತಾಗಿ ಹೋಗಿದೆ. ಪೂರ್ವದಲ್ಲಿದ್ದ ಶಿಕ್ಷಣಶಾಲೆಗಳಲ್ಲೆಲ್ಲ ಇಂಥವರೆ ಗುರುಗಳಾಗಿದ್ದರು. ಶಿಷ್ಯರಿಂದ ಪ್ರತಿಫಲವನ್ನು ಅಪೇಕ್ಷಿಸದಿರುವದಿಷ್ಟೇ ಅಲ್ಲ. ಶಿಷ್ಯರಿಗೇ ಅನ್ನವಸ್ತ್ರಗಳನ್ನು ಕೊಟ್ಟು ಜ್ಞಾನದಾನವನ್ನು ಮಾಡುವ ಗುರು

ಗಳು ಆಗಿನ ಕಾಲಕ್ಕೆ ಆಗಿಹೋದರು. ಈಗ ಆ ಗುರುಗಳೂ ಇಲ್ಲ; ಶಿಷ್ಯರೂ ಇಲ್ಲ. "ಈಗಿನ ಕಾಲಚಕ್ರದ ತಿರುಗಾಟದಲ್ಲಿ ಇಂಥ ಗುರುಗಳಿಗೆ ಮಾತ್ರ ಅಭಾವವೆನ್ನಬಹುದಾದರೂ ಶಿಷ್ಯರು ಕೂಡ ಇಲ್ಲವೆಂಮ ಹೇಳು ವದು ಹೇಗೆ?" ಎಂದರೆ ವಿಚಾರಮಾಡಿದರೆ ಇದರ ಉತ್ತರವು ಸಿಕ್ಕುತ್ತದೆ. ಈಗ ಯಾರಾದರೂ ಗುರುತ್ವವನ್ನು ವಹಿಸಿ ಅನ್ನವಸ್ತ್ರಗಳನ್ನು ಕೊಡುವ ದಕ್ಕೆ ದೀಕ್ಷೆಯನ್ನು ತಳೆದು ನಿಂತರೆ ಈ ಕಾಲದಲ್ಲಿಯೂ ಹಿಂದಿನ ಕಾಲ ಕ್ಕಿಂತ ಬಹು ಜನರು ವಿದ್ಯಾಭ್ಯಾಸಕ್ಕೆಂದು ಬರಬಹುದು. ಏಕೆಂದರೆ: ಈಗಿನ ಕಾಲವೈಪರೀತ್ಯದಿಂದ ಜನರಲ್ಲಿ ಸ್ವಾಭಿಮಾನವೂ ತಗ್ಗಿದೆ. ಎಲ್ಲೆ ಲ್ಲಿಯೂ ಕ್ಷಾಮದೇವತೆಯು ಕಾಲುಹಾಕಿಕೊಂಡಿರುವದರಿಂದ ಬಡಬಗ್ಗರ ಹೊಟ್ಟೆಯ ಪಾಡು ನಡೆಯುವದೂ ಕಷ್ಟವಾಗಿದೆ. ಇದರ ಜೊತೆಗೆ ಮನೆ ಯಲ್ಲೇನಾದರೂ ಅಂತಃಕಲಹಗಳೂ ಸಮೃದ್ಧಿಯಾಗಿರುವವು. ಇವುಗಳೆಲ್ಲ ಈ ಕಾಲದ ವಿದ್ಯಾರ್ಥಿಗಳನ್ನು ಹೊರಗೆಡಹುವದಕ್ಕೆ ಉಪಕಾರಕಗಳಾಗಿವೆ. ಆದರೂ ಒಂದು ಪಕ್ಷ ಗುರುವಿನಲ್ಲಿ ನಿಜವಾದ ಗುರುತ್ವವಿದ್ದರೂ ಇರ ಬಹುದು; ಶಿಷ್ಯನಲ್ಲಿ ನಿಜವಾದ ಶಿಷ್ಯತ್ವವಿರುವದಂತು ವಿರಲ. ಪುರಾಣ ಕಾಲದಲ್ಲಿ ಶ್ರೀಕೃಷ್ಣನಂಥ ಅವತಾರಪುರುಷನು ಮಾಡಿದ ಗುರುಸೇವೆ ಯನ್ನು ಮೇಲುಪಙ್ತಿಯಾಗಿಟ್ಟುಕೊಂಡು ಶಿಷ್ಯನ ತಲೆಯ ಮೇಲೆ ಕಟ್ಟಿ ಗೆಯ ಹೊರೆಯನ್ನು ಹೊರಿಸಿದಾಗ ಈಗಿನವರ ಶಿಷ್ಯತ್ವದ ಬೆಳಕು ಬೀಳು ತ್ತದೆ. ಇಷ್ಟೇಕೆ? ಊಟಉಡಿಗೆಗಳ ಸೌಕರ್ಯವನ್ನು ಪೂರ್ವಕಾಲದಷ್ಟೇ ಇಟ್ಟರೂ ಯಾರೂ ಇತ್ತ ಹಣಿಕಿ ನೋಡುವದಿಲ್ಲ. ಏಕೆಂದರೆ: ಪೂರ್ವದ ಗುರುಕುಲವಾಸದಲ್ಲಿ ಮನಸ್ಸನ್ನು ಆಕರ್ಷಣೆಮಾಡುವ ಸೌಕರ್ಯಗಳು ಯಾವವೂ ಇರಲಿಲ್ಲ. ವಿಷಯಸುಖಗಳ ಚಟವನ್ನು ಹೆಚ್ಚಿಸಿಕೊಂಡಿರುವ ಈ ಕಾಲಕ್ಕೆ ಪೂರ್ವದ ವೈರಾಗ್ಯವು ಹೇಗೆ ರುಚಿಸೀತು? ಪೂರ್ವಿಕರು ವೈರಾಗ್ಯವೃತ್ತಿಯನ್ನು ವಿದ್ಯಾರ್ಥಿಗಳಿಗೆ ಬೇಕಾಗಿಯೆ ಅಭ್ಯಾಸಮಾಡಿಸುತ್ತಿ ದ್ದರು. ಏಕೆಂದರೆ: ವಿದ್ಯೆಯ ಮೇಲೆ ಮನಸ್ಸು ಸಟ್ಟವರಿಗೆ ಎಲ್ಲಿಯ ಸುಖ? ಎಲ್ಲಿಯ ನಿದ್ರೆ? ಅಕ್ಕಿಯ ಮೇಲಿನ ಆಸೆ; ನೆಂಟರ ಮೇಲಿನ ಹಿತ—ಈ ಎರಡನ್ನೂ ಸಾಧಿಸುವದಕ್ಕೆ ಹೇಗೆ ಆದೀತು? ಸುಖಕ್ಕೆ ಬಾಯಿ ಬಿಡುವ ಮನಸ್ಸು ವಿದ್ಯೆಯನ್ನು ಹಿಡಿದುಕೊಳ್ಳಲಾರದು. ಆದ್ದರಿಂದ ಈಗಿನ

ಕಾಲದಲ್ಲಿ ಹಿಂದಿನಂಥ ಗುರುಗಳೂ ಇಲ್ಲ; ಶಿಷ್ಯರೂ ಇಲ್ಲ. ಹಿಂದಿನ ಅನುಕೂಲಪರಿಸ್ಥಿತಿ ಇಲ್ಲದಿರುವದೊಂದೇ ಕೊರತೆಯಲ್ಲ; ಪ್ರತ್ಯಕ್ಷವಾಗಿ ಪ್ರತಿಕೂಲಪರಿಸ್ಥಿತಿಯೂ ಇರುವದು ಶೋಚನೀಯವಾಗಿದೆ. ಹಣಕ್ಕಾಗಿ ವಿದ್ಯೆಯನ್ನು ಮಾರುವದು ನಮ್ಮ ದೇಶದ ಧರ್ಮಕ್ಕೆ ಸಂಪೂರ್ಣವಿರೋಧ. ವಿದ್ಯೆಯು ಮಾರುವ ವಸ್ತುವೂ ಅಲ್ಲ; ಕೊಂಡುಕೊಳ್ಳುವ ವಸ್ತುವೂ ಅಲ್ಲ. ವಿದ್ಯೆಯು ಪ್ರೇಮದಿಂದ ಬರತಕ್ಕ ವಸ್ತು. ವಿದ್ಯೆಯನ್ನು ಮಾರಾಟದ ವಸ್ತುವಾಗಿ ಮಾಡಿದರೆ ಅದರ ಜೀವವೇ ಹೋಗಿ ಬರೀ ದೇಹಮಾತ್ರ ಉಳಿದುಕೊಳ್ಳುವದು. ಹಿಂದೆ ವಿರಕ್ತರಾದ ಗುರುಗಳಲ್ಲಿ ವೈರಾಗ್ಯವೃತ್ತಿಯಿಂದ ಶಿಷ್ಯರು ಅಭ್ಯಾಸಮಾಡಿದಾಗ ಮಹಾಮಹಾವಿಭೂತಿಗಳಾಗಿ ಹೋದರು. ಈಚೀಚೆಗೆ ಶಿಷ್ಯರು ತಮ್ಮ ಸುಖಸೌಕರ್ಯಗಳನ್ನೆಲ್ಲ ಚೆನ್ನಾಗಿ ರಕ್ಷಣೆಮಾಡಿಕೊಂಡು ಸಂಬಳದ ಕಟ್ಟಿಗೆ ಬಿದ್ದು ಕಲಿಸುವ ಗುರುಗಳಿಂದ ಕಲಿಯುವ ಪದ್ಧತಿಯು ಕೋಳಿಕೂಗಿದ ಹಳ್ಳಿಯನ್ನೆಲ್ಲ ವ್ಯಾಪಿಸಿದೆಯಲ್ಲ! ವಿದ್ಯಾಭ್ಯಾಸದ ಪ್ರಸಾರವು ಇಷ್ಟಾದರೂ ಪೂರ್ವದ ವಿದ್ಯಾವಂತರ ಹೆಸರನ್ನು ಳಿಸುವಂಥ ಒಬ್ಬನಾದರೂ ಮುಂದೆ ಬರಲಿಲ್ಲ. ಇದಕ್ಕೇನು ಕಾರಣ? ವಿದ್ಯಾರ್ಥಿಗಳ ಸುಖಾಭಿಲಾಷೆಯಿಂದಲೂ ಗುರುಗಳ ಧನಾಭಿಲಾಷೆಯಿಂದಲೂ ವಿದ್ಯೆಯ ಜೀವವು ಅಂತರ್ಧಾನವಾಗಿರುವದಲ್ಲದೆ ಮತ್ತೇನು? ವಿದ್ಯೆಗೆ ಜೀವಕಳೆ ಬರಬೇಕಾದರೆ ವಿದ್ಯಾರ್ಥಿಗಳು ವೈರಾಗ್ಯವೃತ್ತಿಗೆ ಮೈಗೊಡಬೇಕು. ಗುರುಗಳು ತಾವು ಶಿಷ್ಯನಿಗೆ ಹೊರೆಯಾಗಿ ತಮ್ಮ ಹೆಸರನ್ನು ಅನ್ವರ್ಥಮಾಡಿಕೊಳ್ಳದೆ ವೃತ್ತಿಯ ಪಾವಿತ್ರ್ಯದ ಕಡೆಗೆ ಲಕ್ಷ್ಯವನ್ನು ಕೊಡಬೇಕು.

ಗುರುವಿನ ಯೋಗ್ಯತೆಯ ವಿಚಾರವಾದ ಮೇಲೆ ಗುರುವಿನಿಂದ ಪಡೆಯಬೇಕಾದ ಶಿಕ್ಷಣದ ಸ್ವರೂಪದ ವಿಚಾರವು ಮುಂದೆ ಬರುವದು. ಈಗಿನ ಕಾಲದಲ್ಲಿ ಸಾಮಾನ್ಯವಾಗಿ ಬುದ್ಧಿಶಕ್ತಿಯನ್ನು ಬೆಳೆಸುವ ಶಿಕ್ಷಣಕ್ಕೇ ಶಿಕ್ಷಣವೆಂದು ರೂಢಿಯಾಗಿದೆ. ಅನೇಕ ಬಗೆಯ ಭೌತಿಕಶಾಸ್ತ್ರಗಳಲ್ಲಿ ಪ್ರಾವೀಣ್ಯತೆಯನ್ನು ಹೊಂದಿ ಹೊಸಹೊಸ ವಿಷಯಸುಖಸಾಧನಗಳನ್ನು ಕಂಡುಹಿಡಿಯುವ ಬುದ್ಧಿಶಕ್ತಿಯನ್ನು ಪಡೆದವರಿಗೇ ಈಗಿನ ಕಾಲದಲ್ಲಿ ವಿದ್ಯಾವಂತರೆಂಬ ಹೆಸರು. ಇದರಿಂದ ಮೆದುಳು ತೀವ್ರವಾಗುವದು

ನಿಜ. ಮೆದುಳೊಂದಕ್ಕೆ ಮನುಷ್ಯನೆಂಬ ಸಂಜ್ಞೆ ಇದ್ದರೆ ಈ ಬೌದ್ಧಿಕ ಶಿಕ್ಷಣದಿಂದ ಮಾನುಷ್ಯತ್ವವು ಪೂರ್ಣವಾಗುತ್ತಿತ್ತು. ಆದರೆ ವಸ್ತುಸ್ಥಿತಿ ಹಾಗಿಲ್ಲ. ಮನುಷ್ಯನ ದೇಹದೊಳಗೆ ಮೆದುಳು ಮತ್ತು ಹೃದಯವೆಂಬೆರಡು ಬಹುಮುಖ್ಯಭಾಗಗಳಿರುತ್ತವೆ. ಒಂದು ವೇಳೆ ಮೆದುಳು ಕೆಟ್ಟರೂ ಮನುಷ್ಯನಿಗೆ ಮರಣವಿಲ್ಲ. ಹುಚ್ಚನಾಗಿಯಾದರೂ ಒಬ್ಬನು ಜೀವಿಸಿರಬಹುದು. ಹೃದಯವು ಕೆಟ್ಟರೆ ಮಾತ್ರ ಮನುಷ್ಯನು ಕ್ಷಣಮಾತ್ರದಲ್ಲಿ ಅಸ್ತಂಗತನಾಗುವನು. ಆದ್ದರಿಂದ ಮನುಷ್ಯನಿಗೆ ಮೆದುಳಿನ ಶಿಕ್ಷಣಕ್ಕಿಂತ ಹೃದಯದ ಶಿಕ್ಷಣೆ ಹೆಚ್ಚು ಅಗತ್ಯ. ಮನುಷ್ಯಶರೀರವೆಂಬ ತಕ್ಕಡಿಯಲ್ಲಿ ಮೆದುಳು ಮತ್ತು ಹೃದಯವೆಂಬೆರಡೂ ಎರಡು ಕಡೆಯಲ್ಲಿರುವ ತೂಕದ ತಟ್ಟೆಗಳ ಹಾಗೆ. ಮೆದುಳಿನ ತಟ್ಟೆಗೆ ವಸ್ತುಗಳನ್ನು ತುಂಬಿ ಹೃದಯದ ತಟ್ಟೆಗೆ ಏನನ್ನೂ ಹಾಕದೆ ಹೋದರೆ ತಕ್ಕಡಿಯು ಸಮತ್ವದಲ್ಲಿ ಹೇಗೆ ನಿಂತೀತು? ಒಂದು ಹಗುರವಾಗಿ ತೀರ ಮೇಲಕ್ಕೆ ಹಾರಿಹೋಗುತ್ತದೆ; ಇನ್ನೊಂದು ಭಾರವಾಗಿ ನೆಲದ ಮೇಲೆ ಹಾಯಾಗಿ ಕೂಡುತ್ತದೆ. ಈ ನಿಯಮವು ಪಶ್ಚಿಮದೇಶಗಳಲ್ಲಿ ಒಡೆದು ಕಾಣುತ್ತಿದೆ. ನೋಡಿರಿ. ಬೌದ್ಧಿಕಶಿಕ್ಷಣವು ಹೆಚ್ಚಿದ ಹಾಗೆಲ್ಲ ಬುದ್ಧಿಶಕ್ತಿಯ ಬಲವುಳ್ಳ ಕೆಲವು ಜನರು ಯಂತ್ರತಂತ್ರಗಳನ್ನು ಕಂಡುಕೊಂಡು ಉಳಿದ ಕೈಗೆಲಸದವರ ಕೈಗಳನ್ನು ಕಟ್ಟಿ ಅವರ ಎದೆಯನ್ನು ಮೆಟ್ಟಿ ಅವರ ಸಂಪಾದನೆಯನ್ನು ಸೂರೆಮಾಡಿಕೊಂಡು ಧನಿಕರಾಗುವರು. ಉಳಿದ ಬಹುಭಾಗದ ಜನರು ಕಟ್ಟುಬೆವರಿಡುವಂತೆ ದುಡಿದರೂ ಒಪ್ಪತ್ತಿನ ಗ್ರಾಸ ಸಿಕ್ಕದೆ ಹೊಟ್ಟೆಯ ಮೇಲೆ ಒದ್ದೆಯ ಬಟ್ಟೆಯನ್ನು ಹಾಕಿಕೊಳ್ಳುವರು. ಹೀಗೆ ಬರೀ ಬೌದ್ಧಿಕಶಿಕ್ಷಣವು ಹೆಚ್ಚಿದ್ದರಿಂದ ಕೆಲವರಿಗೆ ಅಜೀರ್ಣದಿಂದ ಮರಣ; ಕೆಲವರಿಗೆ ಹೊಟ್ಟೆಗಿಲ್ಲದೆ ಮರಣ. ಅಂತು ಇಂತು ಎಲ್ಲರಿಗೂ ಮರಣವೇ ಫಲ. ಹೀಗಾಗುವದಕ್ಕೆ ಕಾರಣವು ಹೃದಯಶಕ್ತಿಯ ಬೆಳವಳಿಗೆಯ ಅಭಾವದ ಹೊರತು ಬೇರೆ ಇಲ್ಲ. ಮೆದುಳೂ ಮನುಷ್ಯನ ಒಂದಂಗವಾದ್ದರಿಂದ ಮನುಷ್ಯನ ಪೂರ್ಣತೆಯಲ್ಲಿ ಅದರ ಬೆಳವಳಿಗೆಯೂ ಒಂದು ಭಾಗವೇ ನಿಜ. ಆದರೆ ಅದರದೇ ಸಾಮ್ರಾಜ್ಯವಾಗಬಾರದು. ಶರೀರಸಾಮ್ರಾಜ್ಯವನ್ನು ಆಳುವ ಅಧಿಕಾರವು ಹೃದಯಕ್ಕೆ ಸಲ್ಲತಕ್ಕದ್ದು.

ವಿಚಾರಪ್ರಧಾನವಾದ ಬುದ್ಧಿಶಕ್ತಿಯು ಜನರಲ್ಲಿ ತುದಿಮೊದಲಿಲ್ಲದ ಮೇಲಾಟವನ್ನು ಹಬ್ಬಿಸುವದು. ಇದರಿಂದ ಯಾರಿಗಾದರೂ ಇನ್ನೊಬ್ಬನನ್ನು ತಳಕ್ಕೆ ತುಳಿದು ತಾನೊಬ್ಬನೇ ಎಲ್ಲರ ತಲೆಯನ್ನೂ ಮೆಟ್ಟಿ ಹಾರುವವನಾಗಬೇಕೆಂಬ ದುಷ್ಪ್ರವೃತ್ತಿಯುಂಟಾಗುವದು. ಈ ಪ್ರವೃತ್ತಿಯಿಂದ ಹೃದಯವು ಕಲುಷಿತವಾಗುವದು. ಹೀಗೆ ಸರ್ವಾಧಿಪತ್ಯವನ್ನು ಪಡೆದ ಬುದ್ಧಿಶಕ್ತಿಯು ತಾನೂ ದುರ್ಮಾರ್ಗಕ್ಕೆ ಬಿದ್ದು ಹೃದಯವನ್ನೂ ತನ್ನ ಕಡೆಗೆಳೆದುಕೊಂಡು ಮುಂದೆ ಬಿದ್ದು ಮುಗ್ಗರಿಸುವದು.

ಪ್ರೇಮಪ್ರಧಾನವಾದ ಹೃದಯಶಕ್ತಿಯು ತಾಯಂಥ ವಸ್ತು. "ಕೆಟ್ಟ ಮಗನು ಹುಟ್ಟಬಹುದು; ಕೆಟ್ಟತಾಯಿ ಮಾತ್ರ ಎಂದೆಂದಿಗೂ ಹುಟ್ಟುವದಿಲ್ಲ" ಎಂದು ಶ್ರೀಶಂಕರಾಚಾರ್ಯರು ಹೇಳಿದ್ದಾರೆ. ಅದರಂತೆ ಹೃದಯವು ತಾಯಿ ರೀತಿಯಲ್ಲಿ ಸದ್ವಸ್ತುವಾಗಿರುವದು. ಅದಕ್ಕೆ ಸರ್ವಾಧಿಪತ್ಯವು ಬಂದರೆ ಅದು ಸನ್ಮಾರ್ಗವನ್ನು ಹಿಡಿದು ಬುದ್ಧಿಶಕ್ತಿಯನ್ನು ಜೊತೆಗೆ ಕರೆದುಕೊಂಡು ಮನುಷ್ಯಜನ್ಮವು ಪಡೆಯಬಹುದಾದಂಥ ಪರಮಾವಧಿಯ ಪದವಿಯನ್ನು ಪಡೆಯುವದು. ಮನುಷ್ಯನಿಗೆ ಕೊನೆಗೆ ಆತ್ಮಸಾಕ್ಷಾತ್ಕಾರವು ಹೃದಯಕ್ಕೆ ಆಗುವದೇ ಹೊರತು ಬುದ್ಧಿಗಲ್ಲವೆಂದು ಶಾಸ್ತ್ರಗಳೂ ಹೇಳುತ್ತವೆ; ಅನುಭವಿಗಳೂ ಅನುಮೋದಿಸುತ್ತಾರೆ. ಆದಕಾರಣ ಆತ್ಮಶಕ್ತಿಯ ಅಭಿವ್ಯಕ್ತಿಯ ಸ್ಥಾನವು ಹೃದಯವೇ ಹೊರತು ಮೆದುಳಲ್ಲ. ಆದ್ದರಿಂದ ಬುದ್ಧಿಶಕ್ತಿಯ ಬೆಳವಳಿಗೆಗಿಂತಲೂ ಹೃದಯಶಕ್ತಿಯ ಬೆಳವಳಿಗೆಗೆ ಹೆಚ್ಚು ಲಕ್ಷ್ಯವನ್ನು ಕೊಡಬೇಕು; ಮತ್ತು ಬುದ್ಧಿಶಕ್ತಿಯನ್ನು ಹೃದಯಶಕ್ತಿಯ ಅಧೀನವಾಗಿ ಮಾಡಬೇಕು. ಪ್ರಪಂಚದ ಸುಸ್ಥಿತಿಯೆಂಬುದು ವಿಶೇಷವಾಗಿ ಪ್ರೇಮ, ವಿಶ್ವಾಸ, ಕರುಣ—ಮೊದಲಾದ ಹೃದಯಶಕ್ತಿಗಳನ್ನು ಅವಲಂಬಿಸಿಕೊಂಡಿರುವದು. ಇವುಗಳೆಲ್ಲ ನಿರ್ನಾಮವಾಗುವ ಕಾಲಕ್ಕೆ ಪ್ರಪಂಚದ ಹೆಸರು ಕೂಡ ಉಳಿದಿರುವದಿಲ್ಲ. ಆದ್ದರಿಂದ ಹೃದಯಶಕ್ತಿಯ ಬೆಳವಳಿಗೆಗೇ ಸರ್ವಸನ್ನಾಹವನ್ನೂ ಮಾಡತಕ್ಕದ್ದು.

ಹೃದಯಶಕ್ತಿಯ ಬೆಳವಳಿಗೆಗೆ ಸಾಧನಗಳೇನು? ಪುರಾಣಪುಣ್ಯಕಥೆಗಳು, ಇತಿಹಾಸಗಳು, ಕೀರ್ತನಗಳು—ಮೊದಲಾದ ರೂಪದ ಧಾರ್ಮಿಕ

ಶಿಕ್ಷಣೆಯು ಮನುಷ್ಯನ ಶೀಲಕ್ಕೊಂದುಬಗೆಯ ಸುಂದರರೂಪವನ್ನು ಕೊಟ್ಟು ಮನುಷ್ಯನ ಅನ್ಯಾದೃಶವಾದ ಉನ್ನತಿಗೆ ಸಾಧನವಾಗುವದು. ಶ್ರೀಮಧ್ವಾಚಾರ್ಯರ ಪ್ರತಿಭೆಯ ಪ್ರಕಾಶಕ್ಕೆ ಪುರಾಣಗಳೇ ಬಹುಮಟ್ಟಿಗೆ ಉಪಕಾರಕಗಳಾದವು. ಏಕನಾಥಸಾಧುಗಳನ್ನು ಚಿಕ್ಕಂದಿನಲ್ಲಿ ಗುರುಕುಲವಾಸಕ್ಕೆ ಕರೆದುಕೊಂಡು ಹೋದ ಶ್ಲಾಘನೆಯು ಪುರಾಣಕ್ಕೇ ಬಹುಮಟ್ಟಿಗೆ ಸಲ್ಲುವದು. ಶಿವಾಜಿಯ ಶಿಕ್ಷಣವಂತು ಸಂಪೂರ್ಣವಾಗಿ ಪುರಾಣಶ್ರವಣವೇ. ಪುರಾಣವಲ್ಲಿ ಭೀಮಾರ್ಜುನರ ಸಾಹಸಕೃತ್ಯಗಳನ್ನು ಕೇಳಿಮೊಡನೆಯೆ ಶಿವಾಜಿಯ ಮೈ ಉಬ್ಬಿಹೋಗುತ್ತಿತ್ತು. ಪುರಾಣಶ್ರವಣದಿಂದ ಕಾವೇರಿದ ತನ್ನ ರಕ್ತದ ಬಲದಿಂದಲೆ ಶಿವಾಜಿಯು ಭರತಖಂಡದಲ್ಲಿ ಸ್ವರಾಜ್ಯಸ್ಥಾಪಕನಾಗಿ ಯಶಸ್ವಿಯಾದನು. ಪುರಾಣದ ಹೊರತು ಅವನಿಗೆ ಬೇರೆ ಯಾವದೊಂದು ಭೌತಿಕಶಾಸ್ತ್ರವಿಶೇಷದ ಶಿಕ್ಷಣವೂ ಇಲ್ಲದಿದ್ದರೂ ಅಂಥ ಶಾಸ್ತ್ರಜ್ಞರ ಸಮುದ್ರವನ್ನೇ ಏಕಾಪೋಶನವಾಗಿ ತೆಗೆದುಕೊಳ್ಳುವ ಯೋಗ್ಯತೆಯು ಶಿವಾಜಿಯಲ್ಲಿ ಮೈಗೂಡಿಕೊಂಡಿತ್ತು. ತಾತ್ಪರ್ಯವೇನೆಂದರೆ: ಹೃದಯಶಕ್ತಿಗೆ ಶಿಕ್ಷಣವನ್ನು ಕೊಟ್ಟರೆ ಅದು ತನ್ನ ಹಿಂದೆ ಅಗತ್ಯವಾದಷ್ಟು ಮೆದುಳಿನ ಶಕ್ತಿಯನ್ನು ಬೆಳೆಸಿಕೊಂಡೇ ಮುಂದೆ ಸಾಗುವದು. ಕನಕದಾಸ, ಪುರಂದರದಾಸ, ತುಲಸೀದಾಸ, ಕಬೀರ, ಮಿರಾಬಾಯಿ, ಜ್ಞಾನದೇವ, ತುಕಾರಾಮ, ಏಕನಾಥ, ರಾಮದಾಸ—ಮೊದಲಾದ ಎಷ್ಟೋ ಜನರು ಭರತಖಂಡವೆಂಬ ಧರ್ಮಭೂಮಿಗೆ ಆಕಾಶದೀಪಪ್ರಾಯರಾಗಿ ಆತ್ಮಶಕ್ತಿಯಲ್ಲಿ ಅನ್ಯಾದೃಶರೆಂಬ ಹೆಸರನ್ನು ಪಡೆದು ಅಮೋಘವಾದ ತಮ್ಮ ಉಚ್ಚತತ್ತ್ವಗಳನ್ನು ಲೇಖನರೂಪದಲ್ಲಿಟ್ಟು ಆ ಗ್ರಂಥರಾಶಿಯನ್ನು ನಮಗೆ ಮೂಲಧನವಾಗಿ ಕೊಟ್ಟು ಹೋಗಿರುವರಲ್ಲ! ಅವರೆಲ್ಲ ಯಾವ ವಿಶ್ವವಿದ್ಯಾಲಯದಲ್ಲಿ ಎಷ್ಟಕ್ಷರಗಳ ಪದವಿಯನ್ನು ಪಡೆದರು!! ಬುದ್ಧಿಶಕ್ತಿಯ ಬುಡುಬುಡಿಕೆಯ ಪದವಿಗಳಲ್ಲೇನಿದೆ? ಮನುಷ್ಯನ ಬೆಲೆಯನ್ನು ಹೃದಯಶಕ್ತಿಯ ಪದವಿಯ ಮೇಲೆ ನಿರ್ಣಯಿಸತಕ್ಕದ್ದು. ಆ ಪದವಿಯು ಇತರರಿಂದ ಅನುಗ್ರಹಪೂರ್ವಕವಾಗಿ ಬರತಕ್ಕದ್ದಲ್ಲ; ಸ್ವಸಾಹಸದಿಂದ ಸಂಪಾದಿಸತಕ್ಕದ್ದು. ಹೃದಯಶಕ್ತಿಯ ಪದವಿಯ ಮುಂದೆ ಮೆದುಳಿನ ಶಕ್ತಿಯ ಪದವಿಗಳೆಲ್ಲ ನಿವಾಳಿಸಿ ಒಗೆಯತಕ್ಕವುಗಳೇ ಸರಿ.

ಆದ್ದರಿಂದ ಮನುಷ್ಯನಿಗೆ ನಿಜವಾದ ಶಿಕ್ಷಣವನ್ನು ಕೊಡುವವರು ಹೃದಯ ಶಕ್ತಿಯ ಶಿಕ್ಷಣದ ಕಡೆಗೆ ಲಕ್ಷ್ಯವಿಟ್ಟಿರತಕ್ಕದ್ದು.

ಈ ಸಮಯದಲ್ಲಿ ಸೂಚಿಸತಕ್ಕ ಇನ್ನೊಂದು ವಿಷಯವಿದೆ. ಏನೆಂದರೆ: ಹೃದಯವು ಪರಮಾತ್ಮಪ್ರಾಪ್ತಿಯ ಸ್ಥಾನವಾದ್ದರಿಂದ ಅದರ ವಿಕಾಸ ವನ್ನು ಮಾಡಿಕೊಳ್ಳದೆ ಹೋದ ಮನುಷ್ಯನು ಭಗವಂತನ ಕೋಪಕ್ಕೆ ಪಾತ್ರನಾದಂತೆಯೆಂದು ತಿಳಿಯಬೇಕು. ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳ ದಿದ್ದದ್ದು ಭಗವಂತನ ದೃಷ್ಟಿಯಿಂದ ಅಷ್ಟುದೊಡ್ಡ ಅಪರಾಧವೆನಿಸು ವದಿಲ್ಲ. ಇದರಿಂದ ಬುದ್ಧಿಶಕ್ತಿಯು ತುಚ್ಛವಸ್ತುವೆಂದು ಅರ್ಥವಲ್ಲ. ನಿಜವಾಗಿ ಅದು ಒಂದು ಬಗೆಯ ಮಹತ್ತ್ವದ ವಸ್ತು. ಆದ್ದರಿಂದಲೆ ಅದರ ಮೇಲೆ ಈಶ್ವರನಿಗೆ ಉಪೇಕ್ಷೆ. ಲೋಕದಲ್ಲಿ ಹೊಗೇಗಾಡಿಯ ಉಪಾಯವು ಪ್ರಯಾಣಕ್ಕೆ ಅತ್ಯಂತ ಅನುಕೂಲಕಾರಿಯೆಂದು ತಿಳಿದಿರುವ ರಷ್ಟೆ? ಅದರ ಜೊತೆಗೆ ಅದರ ಅಪಾಯವೂ ಹೊರಬೀಳುತ್ತಲೆ ಇರುತ್ತವೆ. ಉಪಾಯವೂ ಅಪಾಯವೂ ಯಾವಾಗಲೂ ಒಂದನ್ನೊಂದು ಅವಲಂಬಿಸಿ ಕೊಂಡೇ ಇರುತ್ತವೆ. ಶತ್ರುವನ್ನು ಕೊಲ್ಲುವದಕ್ಕೆ ಉಪಾಯವಾದ ಕತ್ತಿಯು ತನ್ನ ಅಪಾಯಕ್ಕೆ ಸಾಧನವಾಗಬಹುದಾದದ್ದನ್ನು ವಿಚಾರದಿಂದಲೆ ಊಹಿಸಬಹುದು. ಬುದ್ಧಿಯು ಅಂಥ ಮಹತ್ತ್ವದ ವಸ್ತು. ಅದು ಇತರ ಉಪಕರಣಗಳಿಗಿಂತ ಎಷ್ಟೋ ಉಪಾಯಕರವೂ ಆಗಬಹುದು; ಅಪಾಯಕರವೂ ಆಗಬಹುದು. ಕತ್ತಿಯಂಥ ವಸ್ತುವನ್ನು ಬಹು ಎಚ್ಚರಿಕೆ ಯಿಂದ ಉಪಯೋಗಿಸಬಲ್ಲ ಕೆಲವರ ಕೈಗೆ ಮಾತ್ರ ಕೊಡಬಹುದಾದಂತೆ ಬುದ್ಧಿಶಕ್ತಿಯ ಶಿಕ್ಷಣವನ್ನು ಅದನ್ನುಪಯೋಗಿಸಬಲ್ಲ ಕೆಲವರಿಗೆ ಮಾತ್ರ ಕೊಡಬಹುದಾಗುವದು. ಕಂಡಕಂಡವರಿಗೆಲ್ಲ ಕತ್ತಿಯನ್ನು ತಿರುಹುವದಕ್ಕೆ ಕಲಿಸಹೋಗುವದು ತಪ್ಪು. ತಮ್ಮ ಕೈಚಳಕದಿಂದ ಪ್ರೇರಿತರಾದ ಯಾರ ಮನಸ್ಸು ಅದಕ್ಕೆ ತವಕಿಸುವದೊ ಅವರು ತಾವಾಗಿಯೇ ಕಲಿಯು ವದಕ್ಕೆ ಬರುವರು. ಅವರಿಗೆ ಕಲಿಸುವದು ಯೋಗ್ಯವಾಗುವದು. ಅದ ರಂತೆ ಎಲ್ಲರ ಬುದ್ಧಿಶಕ್ತಿಯನ್ನೂ ಬೆಳೆಸುವದಕ್ಕೆ ಹೋಗುವದು ತಪ್ಪು. ಬುದ್ಧಿಯಿಂದ ಪ್ರೇರಿತರಾದ ಯಾರು ತಾವಾಗಿ ಬರುವರೊ ಅವರಿಗೆ ಕಲಿಸು ವದು ಯೋಗ್ಯವೆನಿಸುವದು. ಈ ನಿಯಮವನ್ನವಲಂಬಿಸಿ ಪೂರ್ವದಲ್ಲಿ

ಗುರುಗಳು ತಮ್ಮ ಬಳಿಗೆ ತಾವಾಗಿ ಬಂದ ಶಿಷ್ಯರಿಗೆ ಮಾತ್ರ ಪಾಠವನ್ನು ಹೇಳುತ್ತಿದ್ದರು. ಈ ಪದ್ಧತಿಯನ್ನು ಬಿಟ್ಟು ತಮ್ಮ ತಮ್ಮ ಶಾಲೆಗೆ ಶಿಷ್ಯರು ಬರಲೆಂದು ಗುರುಗಳು ಮಂತ್ರಾಕ್ಷತೆಯ ಬಟ್ಟಲನ್ನು ಹಿಡಿದುಕೊಂಡು ಮನೆಮನೆಯನ್ನು ತಿರುಗುವದು ನಮ್ಮ ಸಂಪ್ರದಾಯಕ್ಕೆ ಸಲ್ಲದ ನಡವಳಿಕೆ. ಆದರೆ ಈ ಮಾತು ಬುದ್ಧಿಶಕ್ತಿಯ ಬೆಳವಳಿಗೆಗೆ ಅನ್ವಯಿಸುವದೇ ಹೊರತು ಹೃದಯಶಕ್ತಿಯ ವಿಚಾರಕ್ಕಲ್ಲ. ಹೃದಯಶಕ್ತಿಯನ್ನು ಸರ್ವರೂ ಸರ್ವ ಪ್ರಕಾರದಿಂದಲೂ ಬೆಳೆಸತಕ್ಕದ್ದು.

ಮೆದುಳಿನ ಮತ್ತು ಹೃದಯದ ಶಿಕ್ಷಣದ ವಿಚಾರವಾದ ಮೇಲೆ ಇನ್ನೊಂದುಳಿಯುತ್ತದೆ. ಅದೇನೆಂದರೆ: ಮನುಷ್ಯನಿಗೆ ಮೆದುಳೂ ಹೃದಯವೂ ಇರುವಂತೆಯೇ ದೇಹೇಂದ್ರಿಯಗಳಿವೆ. ಹೃದಯದ ಮತ್ತು ಮೆದುಳಿನ ಶಿಕ್ಷಣವನ್ನು ನಡೆಸಿದಂತೆ ದೇಹೇಂದ್ರಿಯಾದಿಗಳ ಶಿಕ್ಷಣವನ್ನು ನಡೆಸಬೇಕು. ಪರಮಾರ್ಥದೃಷ್ಟಿಯಿಂದ ಹೃದಯದ ಮತ್ತು ಮೆದುಳಿನ ಶಿಕ್ಷಣಕ್ಕೆ ಬೆಲೆ ಹೆಚ್ಚು. ವ್ಯವಹಾರದೃಷ್ಟಿಯಿಂದ ಶಾರೀರಕಶಿಕ್ಷಣಕ್ಕೆ ಬೆಲೆ ಹೆಚ್ಚು. ಏಕೆಂದರೆ: ಹೃದಯದ ಮತ್ತು ಮೆದುಳಿನ ಶಿಕ್ಷಣವು ಹೊಟ್ಟೆಬಟ್ಟೆಯ ಯೋಗಕ್ಷೇಮದ ಸಾಧನವಲ್ಲ; ಮನುಷ್ಯನನ್ನು ಪರಮಾತ್ಮಸ್ಥಿತಿಗೆ ಒಯ್ಯುವ ಸಾಧನ. ಶಾರೀರಶಿಕ್ಷಣವು ಪರಮಾತ್ಮಪ್ರಾಪ್ತಿಗೆ ಸಾಧಕವಾಗದಿದ್ದರೂ ಹೊಟ್ಟೆಬಟ್ಟೆಗಳ ಯೋಗಕ್ಷೇಮಕ್ಕೆ ಅಗತ್ಯವಾಗುವದು. ಶಾರೀರಕಶಿಕ್ಷಣವೆಂಬದನ್ನು ಈಗ ಸಾಮಾನ್ಯವಾಗಿ ದೇಹೇಂದ್ರಿಯಗಳ ಪುಷ್ಟಿಗೆ ಸಾಧನವಾಗಿಟ್ಟುಕೊಂಡಿರುವರು. ದೇಹೇಂದ್ರಿಯಗಳ ಪುಷ್ಟಿಯೂ ಅಗತ್ಯವೇ ಸರಿ. ಆದಗೂ ಅದರಿಂದಲೆ ಶಾರೀರಕ ಶಿಕ್ಷಣವು ಪೂರ್ಣವಾಗುವದಿಲ್ಲ. ಅದು ಬರೀ ಪಶುಬಲವನ್ನುಂಟು ಮಾಡುವ ಸಾಧನ. ಮನುಷ್ಯತ್ವದ ಮೆರುಗು ಬರುವ ಶಾರೀರಕಶಿಕ್ಷಣವೆಂದರೆ ಹೊಟ್ಟೆಬಟ್ಟೆಗಳಿಗೆ ಸಾಧನವಾಗುವ ಔದ್ಯೋಗಿಕಶಿಕ್ಷಣ. ಹೃದಯದ ಮತ್ತು ಮೆದುಳಿನ ಸಾಮರ್ಥ್ಯದಿಂದಲೂ ಹೊಟ್ಟೆಬಟ್ಟೆಗಳನ್ನು ಪಡೆಯುವದು ಶಕ್ಯ; ಆದರೆ ಅದು ಯೋಗ್ಯವಲ್ಲ. ದೇವರು ಹೃದಯವನ್ನೂ ಮೆದುಳನ್ನೂ ಮನುಷ್ಯನ ಹೊಟ್ಟೆಬಟ್ಟೆಗಳ ಯೋಗಕ್ಷೇಮಕ್ಕೆ ಕೊಟ್ಟಿಲ್ಲ. ಪರಮಾತ್ಮಪ್ರಾಪ್ತಿಯಂಥ ಪರಮಲಾಭಕ್ಕೆ ಸಾಧನವಾಗಿ

ಕೊಟ್ಟಿದ್ದನ್ನು ಮನುಷ್ಯನು ಕ್ಷುದ್ರವಾದ ಗೇಣುಹೊಟ್ಟೆಗೂ ಮಾರು ಬಟ್ಟೆಗೂ ಉಪಯೋಗಮಾಡಿಕೊಳ್ಳುವದು ಎಂಥ ದಡ್ಡತನ! ಆದ್ದರಿಂದ ಹೃದಯಶಕ್ತಿಯಿಂದ ಅಥವಾ ಮೆದುಳಿನ ಶಕ್ತಿಯಿಂದ ಹೊಟ್ಟೆಬಟ್ಟೆಗಳನ್ನು ಸಾಗಿಸುವದು ನಮ್ಮ ಧರ್ಮದೃಷ್ಟಿಯಿಂದ ಪಾಪ. ಬಾಯಿ ತುಂಬುವ ದಕ್ಕಾಗಿ ದೇವರು ಕೈಯನ್ನು ಕೊಟ್ಟು ಇರುವನು. ಆದ್ದರಿಂದ ಪ್ರತಿಯೊಬ್ಬ ಮನುಷ್ಯನೂ ತನ್ನ ವರ್ಣಾಶ್ರಮಾನುಗುಣವಾಗಿ ಏನಾದರೊಂದು ಉದ್ಯೋಗ ವನ್ನು ಕೈಯಿಂದ ಮಾಡಿ ಹೊಟ್ಟೆಬಟ್ಟೆಗಳನ್ನು ಪಡೆಯಬೇಕು. ಈಗ ಯಜ್ಞಯಾಗಾದಿಗಳನ್ನು ಬಿಟ್ಟು ತನ್ನನ್ನು ಉಪೇಕ್ಷಿಸಿರುವರೆಂಬ ಸಂಕಟ ಕ್ಕಿಂತ ಇಂದ್ರನಿಗೆ ತಾನು ಅಭಿಮಾನದೇವತೆಯಾಗಿರುವ ಕೈಗಳನ್ನು ನಿರು ದ್ಯೋಗಿಗಳಾಗಿ ಮಾಡಿರುವದರಿಂದ ಹೆಚ್ಚು ಪೇಚಾಟವುಂಟಾಗಿರುವದೆಂದು ಸ್ವಾಮಿರಾಮತೀರ್ಥರು ಒಂದು ಕಡೆ ತಮ್ಮ ಉದ್ಗಾರವನ್ನು ಹೊರಗೆಡ ವಿದ್ದಾರೆ. ಆದ್ದರಿಂದ ಪ್ರತಿಯೊಬ್ಬರಿಗೂ ಒಂದೊಂದು ಔದ್ಯೋಗಿಕ ಶಿಕ್ಷಣದ ಅಗತ್ಯವು ಅಭಿವ್ಯಕ್ತವಾಗುವದು. ಚಿಕ್ಕಂದಿನಲ್ಲಿ ತಮ್ಮ ವರ್ಣೋ ಚಿತವಾದ ಯುದ್ಧಕಲೆಯ ಅಭ್ಯಾಸವು ನಡೆಯದೆ ಇದ್ದರೆ ಪ್ರತಾಪಸಿಂಹ ನಿಗೆ ಅಕ್ಬರನ ಬಂಧುತ್ವದ ಬಲೆಗೆ ಬೀಳದೆ ತನ್ನ ವಂಶದ ಪರಿಶುದ್ಧತೆ ಯನ್ನು ಕಾಯ್ದುಕೊಳ್ಳುವದಕ್ಕೆ ಆಗುತ್ತಿರಲಿಲ್ಲ; ಶಿವಾಜಿಗೆ ಮುಸಲ್ಮಾನರ ಉದ್ಧಟತನವನ್ನು ಮುರಿದು ಗೋಬ್ರಾಹ್ಮಣಪ್ರತಿಪಾಲಕನೆಂಬ ಬಿರುದನ್ನು ಪಡೆಯುವ ಯೋಗವು ಒದಗುತ್ತಿರಲಿಲ್ಲ; ಅಶೋಕನಿಗೆ ಅಖಂಡಭರತ ಖಂಡದ ಪ್ರಥಮಚಕ್ರೇಶ್ವರನಾಗುವ ಸಮಯವು ಸಂಭವಿಸುತ್ತಿರಲಿಲ್ಲ.

ಹೃದಯಶಕ್ತಿಯ ಶಿಕ್ಷಣೆಯನ್ನೂ ಔದ್ಯೋಗಿಕಶಿಕ್ಷಣೆಯನ್ನೂ ಪರದೆಯ ಹಿಂದೆ ಇಟ್ಟು ವಿಚಾರಪ್ರಧಾನವಾದ ಬುದ್ಧಿಶಕ್ತಿಯ ವಿವಿಧ ವಿಷಯಜ್ಞಾನಗಳು ಮನುಷ್ಯನ ವ್ಯವಹಾರಕ್ಕೆ ಅಗತ್ಯವಾಗುವವೆಂದು ಅವು ಗಳಿಗೆ ಇಲ್ಲದ ಬೆಲೆಯನ್ನು ಕೊಡುವದು ನಿರಾಧಾರವಾಗಿ ತೋರುವದು. ಇತಿಹಾಸದ ಕಡೆಗೆ ದೃಷ್ಟಿಯನ್ನು ಪ್ರಸಾರಮಾಡಿ ನೋಡಿರಿ. ವಿಸ್ತಾರ ವಾದ ಭರತಖಂಡದಲ್ಲಿ ಶಾಂತಿಮಯವಾದ ಆಳಿಕೆಯನ್ನು ಸ್ಥಾಪಿಸಿದಂಥ ಅಶೋಕನಿಗೆ ಬೌದ್ಧಿಕಶಿಕ್ಷಣವೆಷ್ಟು ನಡೆದಿತ್ತು? ಶಿವಾಜಿಯ ಸ್ವರಾಜ್ಯ ಸ್ಥಾಪನೆಗೆ ಬೇರೆ ಯಾವ ವಿಚಾರವಿಶೇಷಗಳು ಸಾಧನವಾದವು? ಪ್ರಪಂಚ

ಕ್ಕೆಲ್ಲ ಆದರ್ಶಸ್ವರೂಪಳಾಗಿ ಆಳಿದ ಅಹಲ್ಯಾಬಾಯಿ ಯಾವ ರಾಜನೀತಿ ಶಾಸ್ತ್ರದ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿದ್ದಳು? ಅಕ್ಬರನು ಸರ್ವಸಮ್ಮತವಾಗಿ ಮಾಡಿದ ರಾಜ್ಯಭಾರದಲ್ಲಿ ಬುದ್ಧಿಶಕ್ತಿಗೆ ಮಹತ್ತ್ವವನ್ನು ಕೊಟ್ಟು ಮಾಡಿದ್ದೇನಿದೆ? ಸಾರಾಂಶವೇನೆಂದರೆ: ಮನುಷ್ಯನ ಮನುಷ್ಯತ್ವದ ಪೂರ್ಣತೆಯು ಪ್ರಕಟವಾಗುವದು ಹೃದಯಶಕ್ತಿಯ ಅಭಿವ್ಯಕ್ತಿಯಲ್ಲಿಯೇ ಹೊರತು ಮತ್ತೊಂದರಲ್ಲಲ್ಲ; ಬುದ್ಧಿಶಕ್ತಿಯಲ್ಲಂತು ಅಲ್ಲವೇ ಅಲ್ಲ. ಉಳಿದ ಎಲ್ಲ ಶಕ್ತಿಗಳೂ ಹೃದಯಶಕ್ತಿಗೆ ಅಧೀನವಾಗಿದ್ದ ಹೊರತು ಮನುಷ್ಯನಿಗೆ ಆತ್ಮಶಕ್ತಿಯ ಶ್ರೇಯಸ್ಸಿನ ಆಸೆಯೇ ಇಲ್ಲ. ಆದ್ದರಿಂದ ಹೃದಯಶಕ್ತಿಯ ಶಿಕ್ಷಣವೇ ನಿಜವಾದ ಶಿಕ್ಷಣ.

# ಜೀವನೋಪಾಯ

ಶಿಕ್ಷಣಕ್ಕಾಗಿ ಕೈಗೊಂಡ ಗುರುಕುಲವಾಸವು ಮುಗಿಯುತ್ತಲೆ ಸಾಮಾನ್ಯವಾಗಿ ಮನುಷ್ಯನ ವೃತ್ತಿಯು ಗೃಹಕೃತ್ಯಗಳ ಕಡೆಗೆ ತಿರುಗುತ್ತದೆ. ಮನುಷ್ಯನು ಗೃಹಸ್ಥಾಶ್ರಮವನ್ನು ಹೇಗೆ ಸಾಗಿಸಬೇಕಾಗುವದೆಂಬ ಸೂಚನೆಯು ಶಿಕ್ಷಣದ ಪ್ರಕರಣದಲ್ಲಿಯೆ ತಲೇ ಹಾಕಿದೆ. ಅದನ್ನೆ ಇಲ್ಲಿ ಎತ್ತಿ ತೋರಿಸುವೆವು. ಮೆದುಳಿನ ಶಕ್ತಿಯನ್ನಾಗಲಿ ಹೃದಯದ ಶಕ್ತಿಯನ್ನಾಗಲಿ ಮಾರಿಕೊಳ್ಳಬಾರದೆಂಬದನ್ನು ಪ್ರತಿಯೊಬ್ಬನೂ ಮರೆಯದೆ ಇರಬೇಕು. ಮೆದುಳಿನ ಶಕ್ತಿಯನ್ನೂ ಹೃದಯದ ಶಕ್ತಿಯನ್ನೂ ಆತ್ಮಶಕ್ತಿಯ ಬೆಳವಳಿಗೆಗಾಗಿ ಮತ್ತು ಆತ್ಮಪ್ರಾಪ್ತಿಗಾಗಿ ಮೀಸಲಾಗಿಟ್ಟುಕೊಳ್ಳಬೇಕು. ದೇಹೇಂದ್ರಿಯಾದಿಗಳ ಪೋಷಣೆಯ ಭಾರವನ್ನು ಕೈಮೇಲೆ ಹೇರಬೇಕು. ದೇವರು ಆ ಶಕ್ತಿಯನ್ನು ಕೈಗಳಲ್ಲಿ ಗುಪ್ತವಾಗಿಟ್ಟಿರುವನು. ಕೈಗಳ ಅಭಿಮಾನ ದೇವತೆ ಇಂದ್ರ. ಇಂದ್ರನು ಮಳೆಯನ್ನು ಕೊಟ್ಟರೆ ಬೆಳೆ ಬೆಳೆದು ಮನುಷ್ಯರ ಹೊಟ್ಟೆ ತುಂಬಬೇಕಷ್ಟೆ? ಹಾಗೆಯೇ ಕೈಗಳ ದುಡಿಮೆಯಿಂದ ದೇಹೇಂದ್ರಿಯಾದಿಗಳು ತೃಪ್ತಿಗೊಳ್ಳಬೇಕು.

ಯಾರ ಕೈಗಳಲ್ಲಿ ಸ್ವತಂತ್ರವಾದ ಉದ್ಯೋಗವನ್ನು ಮಾಡುವ ಚಪಲತೆ ಇಲ್ಲವೊ ಅವರು ಮಾತ್ರ ಉಪಾಯಾಂತರವಿಲ್ಲದೆ ಸೇವಾವೃತ್ತಿಯನ್ನು ವಹಿಸಬೇಕಾಗುವದು. ಸೇವಾವೃತ್ತಿಯು ತನ್ನನ್ನು ಆಶ್ರಯಿಸಿದವನ ಮನಸ್ಸನ್ನು ಆನೆ ತಿಂದ ಬೇಲದ ಹಣ್ಣಿನಂತೆ ಒಳಗೆ ತಿರುಳಿಲ್ಲದ್ದಾಗಿ ಮಾಡುವ ಸ್ವಭಾವದ್ದು. ಒಬ್ಬನು ಇನ್ನೊಬ್ಬನ ಸೇವಾವೃತ್ತಿಯನ್ನು ಕೈಗೊಂಡೊಡನೆ ಶರೀರದೃಷ್ಟಿಯಿಂದ ಮಾತ್ರ ಅವನ ಹಿಂದೆ ಮುಂದೆ ಓಡಾಡುವದಲ್ಲದೆ ಮನಸ್ಸಿನ ದೃಷ್ಟಿಯಿಂದಲೂ ಅವನನ್ನು ಅನುವರ್ತಿಸಬೇಕಾಗುವದು. ಯಜಮಾನನ ವಿಚಾರವು ಯಾವ ಮಾರ್ಗವನ್ನು ಹಿಡಿದು ಹೋಗುವದೊ ಸೇವಕನ ವಿಚಾರವೂ ಅದೇ ದಾರಿಯಲ್ಲಿಯೇ ಹೆಜ್ಜೆ ಇಡಬೇಕಾಗುವದು. ಯಜಮಾನನಿಗೆ ಯಾವ ಕೃತಿಯು ಹಿತವಾಗುವದೊ ಸೇವಕನು ಅಂಥ ಕೃತಿಯನ್ನು ಮಾಡಬೇಕಾಗುವದು. ಯಜಮಾನನ ಮಾತುಗಳು ಯಾವ ಸರಣಿಯಲ್ಲಿ ಹೊರಡುವವೊ ಸೇವಕನ ಮಾತುಗಳೂ ಅದೇ ಶೈಲಿಯನ್ನು ಅನುಕರಣಮಾಡಬೇಕಾಗುವದು. ಈ ಪ್ರಕಾರವಾಗಿ ಸೇವಕನು ತನ್ನ ವಾಕ್ಕಾಯಮನಸ್ಸುಗಳ ತಲೆಯ ಮೇಲೆ ಮೆಟ್ಟಿಯಾದರೂ ಅವುಗಳನ್ನು ಯಜಮಾನನ ಪ್ರಸನ್ನತೆಗೆ ಪಾತ್ರವಾಗಿ ಮಾಡಿಯೇ ತೀರಬೇಕಾಗುವದು. ಹೀಗಾಗಿ ಸೇವಕನಿಗೆ ಸ್ವಾಭಿಮಾನದ ವಾಸನೆಯೇ ಉಳಿಯುವ ಸಂಭವವಿರುವದಿಲ್ಲ. ತಾನೊಬ್ಬ ಸ್ವತಂತ್ರವ್ಯಕ್ತಿಯೆಂಬ ಭಾವನೆಯೇ ಅವನ ಮನೋಪಥದಿಂದ ಹಾರಿಹೋಗಿ ತಾನೊಂದು ಭೋಗ್ಯವಸ್ತುವೆಂಬ ಕುತ್ಸಿತ ಕಲ್ಪನೆ ಬರುವದು. ಈ ಕಲ್ಪನೆಯು ಮನುಷ್ಯನ ಉನ್ನತಿಗೆ ಸಾಧನವಾಗದೆ ಅವನತಿಗೆ ಉಪಕರಣವಾಗಿ ಆತ್ಮಶಕ್ತಿಯನ್ನು ಸವೆಯಿಸುವದು. ಆದ್ದರಿಂದ ಜನರು ಈ ವೃತ್ತಿಗೆ ಬಾಯಿನೀರು ಕರೆಯುವದು ಶ್ರೇಯಸ್ಕರವಲ್ಲ. ಈ ಸಂದರ್ಭದಲ್ಲಿ ಒಬ್ಬ ಮಹಾಕವಿಯ ಉದ್ಗಾರವು ವಿಚಾರಾರ್ಹವಾಗಿದೆ.

ವೃ|| "ಬಯ್ದೊಡೆ ಮೇಳವಾಡಿದನೆನುತ್ತಪರಾಧಮನಿಟ್ಟು ಸಾವವೊಲ್ ।
ಪೊಯ್ದೊಡೆ ಬುದ್ಧಿವೇಳ್ದನೆನುತರ್ಥಮನುಯ್ದೊಡೆ ತಾನೆ ಕೊಟ್ಟು ತಾ ||
ನುಯ್ದನೆನುತ್ತ, ನೂಂಕಿದೊಡೆ ಬಾಗಿಲೊಳಿರ್ದೆನೆನುತ್ತಮಾಳ್ದನಿ ।
ತ್ತಯ್ದುಪಣಕ್ಕೆ ಮಾರಿ ತನುವಂ ಪೊರೆದೆಂ ಗುರುಮೂರ್ತಿಶಂಕರಾ ||"

—ಗುರುಮೂರ್ತಿಶಂಕರಶತಕ.

ಭಕ್ತಿಶಾಸ್ತ್ರಕಾರರು ದಾಸ್ಯಭಕ್ತಿಯೆಂಬಮೊಂದು ಭೇದವನ್ನು ಭಕ್ತಿಯಲ್ಲಿ ಸೇರಿಸಿರುವವನ್ನು ನೋಡಿದಾಗ ಮಾತ್ರ ಸೇವಾವೃತ್ತಿಯು ಹೀನವೆಂದು ಕಂಡುಬರಲಾರದು. ಆ ದೃಷ್ಟಿಯಿಂದ ಅದು ತ್ರಿಕಾಲಾಬಾಧಿತವಾದ ತತ್ತ್ವವೇ ಸರಿ. ಆ ದೃಷ್ಟಿಯ ವಿಶೇಷವೇನೆಂದರೆ: ಪ್ರಪಂಚದಲ್ಲಿ ಒಂದರ ಹಿಂದೊಂದು ಬರುವ ತೊಡರುಗಳ ದುಃಖವನ್ನು ದೂರಮಾಡಿಕೊಳ್ಳಬೇಕೆಂದು ಕೆಲವರು ವಿಚಾರಶೀಲರು ದೇವರಿಗೆ ಅಥವಾ ಸಾಧುಸಂತರಿಗೆ ಶರಣುಹೊಕ್ಕು ದಾಸ್ಯಭಕ್ತಿಯಿಂದ ಅವರ ಪ್ರಸನ್ನತೆಯನ್ನು ಪಡೆಯುವದಕ್ಕೆ ಯತ್ನಿಸುವರು. ಈ ದಾಸ್ಯವು ಬೇರೆ ಉದ್ಯೋಗಚಾತುರ್ಯವಿಲ್ಲದ್ದರಿಂದ ಕೈಗೊಂಡಂಥದ್ದಲ್ಲ; ಮತ್ತು ಹೊಟ್ಟೆಬಟ್ಟೆಗಾಗಿ ಆರಿಸಿಕೊಂಡದ್ದಲ್ಲ; ಹೇಗೆ ನಾವು ದಾಸ್ಯವನ್ನು ತುಚ್ಛವೆಂದು ತಿಳಿಯುತ್ತೇವೊ ಹಾಗೆ ಅವರು ಉದ್ಯೋಗಚಾತುರ್ಯಗಳನ್ನು ಕೂಡ ತುಚ್ಛಸ್ಥಾನದಲ್ಲಿಟ್ಟು ಕೈಗೊಂಡದ್ದು. ಹೊಟ್ಟೆಬಟ್ಟೆಗಳ ಯೋಚನೆಯಿಂದ ಉದ್ಯೋಗಚಾತುರ್ಯವು ಮೇಲೆನಿಸಿದರೂ ಆ ಹೊಟ್ಟೆಬಟ್ಟೆಗಳ ವಿಚಾರವನ್ನು ಮನಸ್ಸಿಗೆ ತಂದುಕೊಳ್ಳದೆ ಸರ್ವೇಷ್ಟದಾತನಾದ ಮತ್ತು ನಿತ್ಯಸುಖಸ್ವರೂಪನಾದ ಪರಮಾತ್ಮನನ್ನು ಒಲಿಸಿಕೊಂಡು ಶಾಶ್ವತಾನಂದವನ್ನು ಪಡೆಯುವೆವೆಂಬುವರ ದೃಷ್ಟಿಯಿಂದ ಉದ್ಯೋಗಚಾತುರ್ಯವೂ ತುಚ್ಛವೇ ಸರಿ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೆ? "ಅನನ್ಯಭಕ್ತಿಯಿಂದ ಯಾವಾಗಲೂ ಉಪಾಸನೆ ಮಾಡುವವರನ್ನು ರಕ್ಷಿಸುವ ಭಾರವು ದೇವರಿಗೇ ಕೂಡಿದ್ದು" ಎಂಬ ಪೂರ್ಣವಿಶ್ವಾಸದಿಂದ ಅವರು ಹೊಟ್ಟೆಬಟ್ಟೆಗಾಗಿ ಮಾಡುವ ಉದ್ಯೋಗವನ್ನು ಹೊಟ್ಟೆಬಟ್ಟೆಯ ದಾಸ್ಯವೆಂದೇ ಭಾವಿಸಿ ದಾಸ್ಯವು ಹೀನವೆಂದೇ ಅವರು ಅದರಿಂದ ಹಿಮ್ಮುಖರಾಗುವರು. ಭಗವಂತನ ದಾಸ್ಯಕ್ಕೂ ದಾಸ್ಯಶಬ್ದದ ಪ್ರಯೋಗವಿದ್ದರೂ ಅದು ಉಳಿದ ಆಹಾರಗಳನ್ನೆಲ್ಲ ಜೀರ್ಣಿಸುವ ಶುಂಠೀಬೆಲ್ಲದ ರೂಪವಾದ ಆಹಾರದಂತೆ ಇತರ ಸರ್ವದಾಸ್ಯಗಳನ್ನೂ ಜೀರ್ಣಿಸುವಂಥದ್ದಾಗಿರುವದು. ಆದ್ದರಿಂದ ದಾಸ್ಯಭಕ್ತಿಯು ಸ್ತೋತ್ರಾರ್ಹವಾದದ್ದು.

ಸುದೈವದಿಂದ ಸತ್ಪುರುಷನಾದ ಸ್ವಾಮಿಯ ದಾಸ್ಯವು ದೊರೆತರೆ ಅದರಲ್ಲಿ ಬಾಧಕವಿಲ್ಲ. ಸತ್ಪುರುಷರೆಂದರೆ ಕೇವಲ ಭೌತಿಕಭಾಗ್ಯದ

ತಮ್ಮ ಸರ್ವಸ್ವವೆಂದು ತಿಳಿಯದೆ ಭಗವದನುಗ್ರಹಕ್ಕೆ ಹೆಣಗಾಡುವಂಥವರು. ಇಂಥವರು ತಮ್ಮ ಸ್ವಾರ್ಥಾಭಿಲಾಷೆಯ ಬಿಸಿಯಿಂದ ಇತರರ ಆತ್ಮ ಶಕ್ತಿಯ ಬೀಜವನ್ನು ಹುರಿದುಹಾಕುವ ಯೋಚನೆಯನ್ನು ಮಾಡುವ ದಿಲ್ಲ. ಇಷ್ಟೇ ಅಲ್ಲ. ತಮ್ಮಂತೆ ಇತರರನ್ನು ತಿಳಿದು ಅವರ ಆತ್ಮಶಕ್ತಿಯ ಉನ್ನತಿಗೆ ತಾವೂ ನೆರವಾಗುವರು. ಇಂಥವರ ದಾಸ್ಯವು ಬಾಧಕವಾಗಿಲ್ಲ ದಿರುವದಿಷ್ಟೇ ಅಲ್ಲದೆ ಸಾಧಕವೂ ಆಗಿರುವದು. ತಾತ್ಪರ್ಯವೇನೆಂದರೆ: ಹೊಟ್ಟೆಬಟ್ಟೆಗಳಿಗೆ ಗತಿಯಿಲ್ಲದೆ ಸತ್ತರೂ ಚಿಂತೆ ಇಲ್ಲ; ನಮ್ಮ ಆತ್ಮೋ ನ್ನತಿಯ ಅವಕಾಶವನ್ನು ಕಳೆದುಕೊಳ್ಳಬಾರದು.

ಭೌತಿಕಸೌಕರ್ಯಗಳ ಬಾಯಾರಿಕೆಯನ್ನುಂಟುಮಾಡುವಂಥ ವಿಲ ಕ್ಷಣವಾದ ಬಿರುಗಾಳಿ ಬೀಸುತ್ತಿರುವ ಈ ಕಾಲದಲ್ಲಿ ಅಂಥ ಸಾಧು ಸ್ವಭಾವದ ಯಜಮಾನರು ವಿರಳರಾದ್ದರಿಂದ ಸೇವಾವೃತ್ತಿ ಹೆಚ್ಚು ದೂಷ್ಯ ವಾಗಿದೆ. ಆದಕಾರಣ ಪ್ರತಿಯೊಬ್ಬನೂ ತನ್ನ ಹೊಟ್ಟೆಬಟ್ಟೆಗಳಿಗಾಗಿ ಏನಾದರೊಂದು ಉದ್ಯೋಗವನ್ನು ಅವಲಂಬಿಸುವದೇ ಶ್ರೇಯಸ್ಕರವು. ವಂಗದೇಶದಲ್ಲಿ ಪ್ರಸಿದ್ಧಪಂಡಿತನಾಗಿದ್ದ ತಾರಾನಾಥತರ್ಕವಾಚಸ್ಪತಿಯು ನಮಗೊಂದು ಮೇಲುಪಙ್ತಿಯನ್ನು ಹಾಕಿಕೊಟ್ಟು ಹೋಗಿದ್ದಾನೆ. ಅದನ್ನು ನಾವು ಈಗ ನೋಡಿಕೊಂಡು ನಡೆಯಬೇಕು. ತಾರಾನಾಥನು ಭರತಖಂಡದಲ್ಲಿ ಅಪ್ರತಿಮನಾದ ವಿದ್ವಾಂಸನು. ತಾನೇತಾನಾಗಿದ್ದಾಗ ಪ್ರತಿ ಕಕ್ಷಿಯ ಮುಂದೆ ಪರೆಯುಗಿದುರಗರಂತೆ ತಲೆಯೆತ್ತಿ ಭೋರ್ಗರೆಯುವ ಮಹಾಮಹಾವಿದ್ವನ್ಮಣಿಗಳಿಗೆಲ್ಲ ತಾರಾನಾಥನು ಗರುಡಪ್ರಾಯನಾಗಿದ್ದನು. ತಾರಾನಾಥನ ಬುದ್ಧಿಗೆ ಒಲಿಯದೆ ಇರುವ ಶಾಸ್ತ್ರವೇ ಇರಲಿಲ್ಲ. ಅವನ ಪ್ರತಿಭೆಯ ಮುಂದೆ ಮಹಾಮಹಾರಾಜಾಧಿರಾಜರು ತಲೆದೂಗಿದರು. ಇಂಥ ಪಂಡಿತನು ತನ್ನ ಜೀವನಯಾತ್ರೆಯನ್ನು ಹೇಗೆ ನಡೆಸಿರಬಹುದು? ಪದಪದ್ಯಗಳಿಂದ ಧನಮದಾಂಧರ ಮುಖಸ್ತುತಿಯನ್ನು ಮಾಡಿ ಮನ್ನಣೆ ಯನ್ನು ಪಡೆದಿರಬಹುದೆ? ಅಥವಾ ಹೆಚ್ಚು ಹಣಕ್ಕಾಗಿ ತನ್ನ ತನುಮನ ಗಳನ್ನು ಮಾರಿಕೊಂಡಿರಬಹುದೆ? ಅಥವಾ ಪ್ರೌಢಪಾಠವನ್ನು ಕಲಿಸು ವದಕ್ಕೆ ನಿಂತು ಅದಕ್ಕೆ ವಿದ್ಯಾರ್ಥಿಗಳಿಂದ ಹೆಚ್ಚು ಬೆಲೆಯನ್ನು ಪಡೆದು ದಿನಗಳನ್ನು ಕಳೆದಿರಬಹುದೆ? ವಿಚಾರಮಾಡಿದರೆ ಪಂಡಿತರಲ್ಲದಂಥವರು

ಕೊಡುವ ಮನ್ನಣೆಯನ್ನು ಅವನು ಎಳ್ಳಷ್ಟೂ ಗೌರವಿಸುತ್ತಿರಲಿಲ್ಲ. ಏಕೆಂದರೆ: ಯಾರು ತನ್ನ ಯೋಗ್ಯತೆಯ ತೂಕವನ್ನರಿಯರೊ ಅಂಥವರ ಬಾಯುಪಚಾರಕ್ಕೇನು ಬೆಲೆ? ತಾರಾನಾಥನು ಯೋಗ್ಯತೆಯಲ್ಲಿ ತಾನು ಯಾರನ್ನು ಕಡಿಮೆಯವರೆಂದು ತಿಳಿದಿರುವನೊ ಅವರ ಅಭಿನಂದನದಿಂದ ಮೈಯುಬ್ಬುವಷ್ಟು ಕ್ಷುದ್ರಸ್ವಭಾವದವನಾಗಿರಲಿಲ್ಲ. ಇದಲ್ಲದೆ ಇತರರ ಮುಖಸ್ತುತಿಗೆ ತನ್ನ ವಿದ್ವತ್ತೆಯ ದುರುಪಯೋಗಮಾಡಿಕೊಳ್ಳುವಷ್ಟು ಮೂರ್ಖನಾಗಿರಲಿಲ್ಲ. ಅವನು ಕೆಲವು ವೇಳೆ ಸರಕಾರದ ಪಾಠಶಾಲೆಯಲ್ಲಿ ಅಧ್ಯಾಪಕನಾಗಿದ್ದದ್ದು ನಿಜ. ಈ ದಾಸ್ಯವೃತ್ತಿಗೆ ಒಡಂಬಡುವದಕ್ಕೆ ಅವನಿಗೆ ಬೇರೆ ಬೇರೆ ಕಾರಣಗಳೊದಗಿದವು. ಆದರೆ ಈ ವೃತ್ತಿಯಲ್ಲಿರುವಾಗ ಅವನು ಒಮ್ಮೆ ಮೇಲಧಿಕಾರಿಯ ಒತ್ತಾಯದಿಂದ ತನ್ನ ಮನಸ್ಸಿಗೊಪ್ಪದ ಒಂದು ಕಾರ್ಯವನ್ನು ಮಾಡಬೇಕಾಗಿ ಬಂತು. ಒಡನೆ ಅವನು ಎಚ್ಚತ್ತುಕೊಂಡು, ದಾಸ್ಯವೃತ್ತಿಗೆ ತಿಲತರ್ಪಣವನ್ನು ಬಿಟ್ಟು ತನ್ನ ಆತ್ಮಶಕ್ತಿಯನ್ನು ಮುಂದು ಮಾಡಿಕೊಂಡು,ತನ್ನದೊಂದು ಗುರುಕುಲವನ್ನು ತೆಗೆದನು. ಅನೇಕ ವಿದ್ಯಾರ್ಥಿಗಳು ಅವನ ಕಡೆಗೆ ಅಧ್ಯಯನಕ್ಕೆ ಬಂದರು. ಆದರೆ ಅವನು ಒಬ್ಬನಿಂದಲೂ ಒಂದು ಕಾಸು ಕೂಡ ತೆಗೆದುಕೊಳ್ಳಲಿಲ್ಲ. ಹೊಟ್ಟೆಬಟ್ಟೆಯ ವೆಚ್ಚಕ್ಕಾಗಿ ಅವನು ಉದ್ಯೋಗಗಳನ್ನು ಹೂಡಿದನು. ಉದ್ಯೋಗಗಳು ಕಾಮಧೇನುಗಳೆಂದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಅವನು ದೇಶಕಾಲಸ್ಥಿತಿಯನ್ನು ಲಕ್ಷ್ಯಕ್ಕೆ ತಂದುಕೊಂಡು ಜನತೆಯ ನಾಡಿಯನ್ನು ಹಿಡಿದು ನೋಡಿ ನೇಯಿಗೆಯ ಉದ್ಯೋಗವನ್ನು ಆರಿಸಿದನು. ಜನಭರಿತವಾದ ಭರತಖಂಡದಲ್ಲಿ ಆಹಾರದ್ರವ್ಯಗಳೂ ವಸ್ತ್ರಗಳೂ ಎಷ್ಟಾದರೂ ಸಾಲವೆಂದು ತಿಳಿದು ಹಿಡಿದ ನೇಯಿಗೆಯ ಕೆಲಸವು ಒಳ್ಳೆ ಫಲಕಾರಿಯಾಯಿತು. ಆಮೇಲೆ ಅವುಗಳ ಮಾರಾಟದ ಉದ್ಯೋಗವನ್ನೂ ತಾನೇ ನಡೆಸಿದನು. ಹೀಗೆ ಮಾಡಿದ್ದರಿಂದ ಅವನಿಗೆ ಸಮೃದ್ಧಿಯಾಗಿ ಧನಪ್ರಾಪ್ತಿಯಾಯಿತು. ಈ ರೀತಿಯಲ್ಲಿ ಉದ್ಯೋಗದ ಯೋಜನೆಯನ್ನು ಮಾಡಿದ್ದರಿಂದ ಅವನು ಹೊಟ್ಟೆಬಟ್ಟೆಗಾಗಿ ಯಾರ ಯಾರ ಮುಂದೆಯೂ ಬಾಯಿತೆರೆಯಬೇಕಾದ ಸಮಯ ಬರಲಿಲ್ಲ. ಈ ಉದ್ಯೋಗದಿಂದ ಬರೀ ಅವನೊಬ್ಬನ ಹೊಟ್ಟೆಬಟ್ಟೆಯಷ್ಟೇ ಅಲ್ಲ; ಅನೇಕ ಶಿಷ್ಯರ ಹೊಟ್ಟೆಬಟ್ಟೆಗಳೂ ನಿರಂತರವಾಗಿ ಸಾಗಿ ತಾರಾನಾಥನ ಕೀರ್ತಿಯೂ ಹತ್ತು ದಿಕ್ಕು

ಗಳಿಗೂ ಹಬ್ಬಿತು. ಔದ್ಯೋಗಿಕಶಿಕ್ಷಣವು ಕೀಳು ಬಗೆಯದೆಂತಲೂ ಬೌದ್ಧಿಕಶಿಕ್ಷಣವು ಮೇಲಾದುವೆಂತಲೂ ತಿಳಿಯುವದು ಬರೀ ಭ್ರಮೆ. ತಾರಾನಾಥನಿಗೆ ಜ್ಞಾನವು ಶಾಸ್ತ್ರಗಳಲ್ಲಿ ಅಪ್ರತಿಮುಮಗಿದ್ದಂತೆಯೆ ಉದ್ಯೋಗಗಳಲ್ಲಿ ಕೂತ ಅನ್ಯಾದೃಶವಾಗಿತ್ತೆಂದು ಅವನ ಚರಿತ್ರೆಯು ಹೇಳುತ್ತದೆ. ಉಳಿದ ಉಸ್ಯೋಗಗಳ ವಿಷಯವಂತಿರಲಿ; ಅಡಿಗೆಯಲ್ಲಿ ಅವನಿಗೆ ಸಮಾನರೇ ಇಲ್ಲವೆಂದು ಹೇಳುತ್ತಾರೆ. ತನ್ನ ಮನೆಯಲ್ಲಿ ಹವ್ಯಕವ್ಯಗಳು ನಡೆದಾಗ ತಾರಾನಾಥನು ತಾನೇ ಸೊಂಟವನ್ನು ಕಟ್ಟಿ ಅಡಿಗೆಯನ್ನು ಮಾಡುತ್ತಿದ್ದನಂತೆ. ಹೀಗೆ ಮಾಡುತ್ತಿದ್ದದ್ದರ ಕಾರಣವು ಇತರರಿಂದ ಅಡಿಗೆಯನ್ನು ಮಾಡಿಸುವ ಅನುಕೂಲವಿಲ್ಲವೆಂತ ಅಲ್ಲ. ಅವನಿಗೆ ಅದರ ಜ್ಞಾನವು ಅತಿಶಯವಾಗಿದ್ದದ್ದರಿಂದ ಆ ಕೆಲಸಕ್ಕೆ ತಾನೇ ಹೋಗಬೇಕೆಂದು ಉತ್ಸಾಹವು ಉಕ್ಕಲು ಅವನು ಅದಕ್ಕೆ ತಾನೇ ಮುಂದೆ ಬೀಳುತ್ತಿದ್ದನು. ಕೀಳಾದುವೆಂಬ ಶಿಕ್ಷಣವೇ ಇಲ್ಲ. ಮನುಷ್ಯನು ಎಲ್ಲವನ್ನೂ ತಿಳಿದಿರಬೇಕು. ಔದ್ಯೋಗಿಕಶಿಕ್ಷಣವು ಕೀಳಲ್ಲ. ಔದ್ಯೋಗಿಕಶಿಕ್ಷಣವನ್ನು ಕೀಳೆಂದು ತಿಳಿಯುವ ಬುದ್ಧಿ ಕೀಳು. ತಾರಾನಾಥನ ಪಾಂಡಿತ್ಯವೆಂಥದ್ದು! "**ವಾಚಸ್ಪತ್ಯಬೃಹದಭಿದಾನ**"ವೆಂಬ ಹೆಸರಿನ ಅವನ ಂದು ನಿಘಂಟು ಈಗಲೂ ಭರತಖಂಡದ ಪಂಡಿತಶ್ರೇಣಿಯಲ್ಲಿ ಶರತ್ಕಾಲದ ನಡುಹಗಲಿನ ಸೂರ್ಯನಂತೆ ವಿರಾಜಮಾನವಾಗಿದೆ. ಇಂಥ ಪ್ರತಿಭಾವಿಶೇಷವುಳ್ಳವನು ಜೀವನಯಾತ್ರೆಗೆ ಕೈಗಾರಿಕೆಯನ್ನು ಸಾಧನವಾಗಿ ನಡೆವಳಿಕೆಯಲ್ಲಿ ತಂದದ್ದನ್ನು ನಾವು ನೋಡಿದ ಮೇಲೆ ಅದನ್ನು ಅನುಕರಣಮಾಡದೆ ಇರುವದು ತಪ್ಪಲ್ಲವೆ? ದೊಡ್ಡವರ ಆಚರಣೆಗಳೆಲ್ಲ ಇತರರ ಉಪಾರಣೆಗಾಗಿಯೆ ಇರುತ್ತವೆ. ಆದ್ದರಿಂದ :ತಾರಾನಾಥನು ಹಾಕಿಕೊಟ್ಟಿರುವ ದಾರಿಯಲ್ಲಿಯೆ ನಾವು ಮುಂದುವರಿಯಬೇಕು.

# ಮಾತೃಭಕ್ತಿ

ಮನುಷ್ಯನು ಉತ್ಕೃಷ್ಟವಾದ ಸದ್ವಂಶದಲ್ಲಿಯೇ ಹುಟ್ಟಿರಲಿ, ಎಷ್ಟೇ ಉಚ್ಚಶಿಕ್ಷಣವನ್ನು ಪಡೆದಿರಲಿ, ಮತ್ತು ಯೋಗ್ಯವಾದ ಜೀವನೋಪಾಯ ವನ್ನೇ ಕೈಗೊಂಡು ಬೇಕಾದಷ್ಟು ಧನಕನಕಗಳನ್ನು ಸಂಪಾದಿಸಿ ಬೊಕ್ಕಸ ಗಳಲ್ಲಿ ತುಂಬಲಿ, ಅವನ ಜೀವಿತದ ಪವಿತ್ರತೆಯು ತನ್ನ ಶೀಲವನ್ನು ಸರ್ವ ವಿಧದಿಂದಲೂ ಸಂರಕ್ಷಣೆಮಾಡಿಕೊಳ್ಳುವ ಆತ್ಮಶಕ್ತಿಯ ಉಜ್ಜ್ವಲತೆ ಯಿಂದ ಮಾತ್ರ ಚೇತನಗೊಳ್ಳುವದು. ಆದ್ದರಿಂದ ಶೀಲರಕ್ಷಣೆಯ ಸಂಬಂಧವಾದ ಆತ್ಮಶಕ್ತಿಯ ವಿಕಾಸಕ್ಕೆ ಸಾಧನವಾದ ವಿಚಾರಗಳನ್ನೇ ಇನ್ನು ಮುಂದೆ ಮಾಡಲಾಗುವದು.

ದೇವತ್ವವನ್ನು ಪಡೆಯುವದೇ ಮನುಷ್ಯತ್ವದ ಪರಮಧ್ಯೇಯ ವೆಂದು ಹಿಂದೆ ಹೇಳಿದ್ದಾಗಿದೆಯಷ್ಟೆ. ಆ ದೇವರು ಅವ್ಯಕ್ತಸ್ವರೂಪ ನಾದ್ದರಿಂದ ನಮ್ಮ ಉಪಾಸನೆಗಾಗಿ ವ್ಯಕ್ತಸ್ವರೂಪಗಳಲ್ಲಿ ದೇವತ್ವವಿರುವ ಸ್ಥಾನವು ಯಾವದೆಂಬದನ್ನು ತಿಳಿಯುವದಗತ್ಯವಾಗುತ್ತದೆ. "ಆದಿತ್ಯ ರಲ್ಲೆಲ್ಲ ನಾನು ವಿಷ್ಣುವಾಗಿದ್ದೇನೆ" ಎಂಬ ಮುಂತಾದ ವಾಕ್ಯಗಳಿಂದ ಭಗವಂತನು ತನ್ನ ದೇವತ್ವವನ್ನು ಯಾವ ಯಾವ ವ್ಯಕ್ತಸ್ವರೂಪದಲ್ಲಿ ನೋಡಬೇಕೆಂಬದನ್ನು ಗೀತೆಯಲ್ಲಿ ಹೇಳಿದ್ದಾನೆ. ಅವೆಲ್ಲ ದೂರದ ಮಾತು ಗಳು. ವಿಸ್ತಾರವಾದ ಸೃಷ್ಟಿಯ ಜ್ಞಾನವಾಗುವದಕ್ಕೆ ಮೊದಲು ದೇವ ರೊಬ್ಬನಿರುವನೆಂಬ ಕಲ್ಪನೆ ತಲೆಯೆತ್ತುತ್ತಲೇ ಮನುಷ್ಯನಿಗೆ ಸಮೀಪ ದಲ್ಲಿಯೆ ಕಾಣಿಸಿಕೊಳ್ಳುವ ದೇವತ್ವದ ಸ್ಥಾನವನ್ನು ನಿರ್ದೇಶಮಾಡುವ ದಕ್ಕಾಗಿ ಶ್ರುತಿಯು ಹೇಳುವದೇನೆಂದರೆ: "ತಾಯನ್ನು ದೇವರಂತೆ ತಿಳಿಯು ವವನಾಗು." ಲೋಕದಲ್ಲಿ ಸಾಮಾನ್ಯವಾಗಿ ತಂದೆಗೆ ಪ್ರಾಶಸ್ತ್ಯವನ್ನು ಕೊಡುವದೇ ಹೆಚ್ಚು. ಏಕೆಂದರೆ ತಂದೆಯು ತಾಯಿಗಿಂತ ವಿಚಾರಶೀಲ ನಾಗಿರುವನು; ಮತ್ತು ಬೇಕಾದಷ್ಟು ಸಂಪತ್ತನ್ನು ಗಳಿಸಿ ಕುಟುಂಬದ ಹೊಟ್ಟೆಗೆ ಹಾಕುವನು. ಇದು ಕೇವಲ ಪ್ರಾಪಂಚಿಕರ ಮಾತು. ಈಗ

ಪ್ರಪಂಚದಲ್ಲೆಲ್ಲ ಬುದ್ಧಿಶಕ್ತಿಯ ಬೆಲೆ ಏರಿ ಹೋಗಿದೆ ಮತ್ತು ವಿಷಯಾಸಕ್ತಿಯು ಅವರ ಬೆನ್ನು ಹಿಡಿದು ಬೆಳೆಯುತ್ತಿದೆ. ಇದರಿಂದ ಕಲುಷಿತವಾದ ದೃಷ್ಟಿಗೆ ತಂದೆಯೇ ಹೆಚ್ಚಿನವನೆಂದು ತಿಳಿಯುವುದೇನೂ ತಪ್ಪಲ್ಲ. ಈಶ್ವರನ ದೃಷ್ಟಿಯಿಂದ ಮಾತ್ರ ಬುದ್ಧಿಶಕ್ತಿಗಿಂತ ಹೃದಯಶಕ್ತಿಗೆ ಬೆಲೆ ಹೆಚ್ಚು. ಇದನ್ನರಿಯದೆ ಪ್ರಪಂಚದ ಜನರು ಹೀಗೆ ತಪ್ಪು ತಿಳಿದುಕೊಳ್ಳುವರೆಂದು ಯೋಚಿಸಿಯೆ ವೇದವು ಈ ಉಪದೇಶವನ್ನು ಮೊದಲು ಹಾಕಿರುವದು. ಇದರಿಂದ ತಂದೆಯ ಪೂಜ್ಯತೆಗೇನೂ ಕೊರತೆಯಿಲ್ಲ. ವೇದವು ಅವರವರ ಪೂಜ್ಯತೆಯನ್ನು ಅವರವರಿಗೆ ತಪ್ಪದೆ ಕೊಡಿಸಬೇಕೆಂದು ಯತ್ನಿಸುವದೇ ಹೊರತು ಯಾರ ಪೂಜ್ಯತೆಗೂ ಸೊನ್ನೆಸುತ್ತುವ ಕುತಂತ್ರಕ್ಕೆ ಬೀಳುವದಿಲ್ಲ. ಮನುಷ್ಯನು ಪ್ರತಿಯೊಬ್ಬನ ಪೂಜ್ಯತೆಯನ್ನೂ ಗೌರವಿಸಲೇಬೇಕು. ಈ ನಿಯಮವನ್ನು ದಾಟುವದು ಹೆಚ್ಚಿನ ಅಶ್ರೇಯಸ್ಸಿಗೆ ಕಾರಣವಾಗುವದು. ಪರಮಾರ್ಥ-ಸತ್ಯವನ್ನು ಹೇಳುವದಕ್ಕೆ ಹೊರಟಿರುವ ವೇದವು ಪ್ರಥಮಪೂಜ್ಯತೆಯನ್ನು ತಾಯಿಗೆ ಕೊಟ್ಟು ಆಮೇಲೆ "ತಂದೆಯನ್ನು ದೇವರೆಂದು ತಿಳಿ, ಗುರುವನ್ನು ದೇವರೆಂದು ತಿಳಿ,"—ಎಂದು ಮುಂತಾಗಿ ತನ್ನ ಉಪದೇಶವನ್ನು ಮುಂದೆ ಸಾಗಿಸಿರುವದು. ಲೋಕದ ಜನರು ತಪ್ಪುವಂಥ ಕೀಲನ್ನು ಕಂಡುಹಿಡಿದು ಅದಕ್ಕೆ ತನ್ನ ಉಪದೇಶವನ್ನು ಜೋಡಿಸುವದೇ ವೇದದ ಹಿರಿಯತನ. ಹಾಗಿಲ್ಲದೆ ವೇದವು ಲೋಕದಲ್ಲಿ ಎಲ್ಲೆಲ್ಲಿಯೂ ಇರುವ ನಡೆವಳಿಕೆಯಂಥ ಎಲ್ಲರೂ ಕಂಡದ್ದನ್ನು ಕಿವಿಯಲ್ಲಿ ಊದಿದರೆ ಆ ವೇದದ್ದೇನು ಹೆಚ್ಚುಗಾರಿಕೆ? ಜನರು ಮುಗ್ಗರಿಸುವ ಸ್ಥಲದಲ್ಲಿ ಎಚ್ಚರವನ್ನು ಕೊಡುವದರಿಂದಲೇ ವೇದಕ್ಕೆ ವೇದತ್ವ.

ತಾಯಿಯ ಹೆಚ್ಚುಗಾರಿಕೆಗೆ ಬರೀ ವೇದದ ಮೇಲಿನ ಶ್ರದ್ಧೆಯಿಂದ ಹೊಗುಟ್ಟಬೇಕಾದದ್ದಿಲ್ಲ. ಅದನ್ನು ನಮ್ಮ ಅನುಭವವೇ ನಮಗೆ ಹೇಳುವದು. ತಾಯಿ ನಮ್ಮನ್ನು ಒಂಬತ್ತು ತಿಂಗಳು ಎಡೆಬಿಡದೆ ಆದರದಿಂದ ಹೊಟ್ಟೆಯಲ್ಲಿ ಹೊರುವಳು; ಗರ್ಭದಲ್ಲಿರುವ ಶಿಶುವಿನ ಕ್ಷೇಮಾರ್ಥವಾಗಿ ಬೇಕಾದಷ್ಟು ಪಥ್ಯಪಾನಗಳನ್ನು ಮಾಡುವಳು; ಗರ್ಭವಿಶೇಷದಿಂದ ಶರೀರಕ್ಕೆ ಉಂಟಾಗುವ ಆಯಾಸವನ್ನು ಸಂತೋಷದಿಂದ ವಹಿಸುವಳು;

ಭಯಂಕರವಾಗಿ ಬರುವ ಪ್ರಸವವೇದನೆಯನ್ನು ಸರ್ವಯತ್ನದಿಂದಲೂ ಸಹಿಸುವಳು. ಹಡೆದ ಮೇಲಾದರೂ ಶಿಶುವಿನ ರಕ್ಷಣೆಯ ಭಾರವನ್ನು ತೆಗೆದುಕೊಳ್ಳುವವರು ಯಾರು? ಶಿಶುವಿಗೆ ಹಾಲಬತ್ತಿಯನ್ನು ಚೀಪಿಸುವವರು ಯಾರು? ಮೊಲೆಯನ್ನೂಡುವವರು ಯಾರು? ನೆತ್ತಿಯ ಮೇಲೆ ಎಣ್ಣೆಯನ್ನು ಇಡುವವರು ಯಾರು? ನೀರೆರೆಯುವವರು ಯಾರು? ತಟ್ಟಿ ಮಲಗಿಸುವವರು ಯಾರು? ಜೋಗುಳವನ್ನು ಹಾಡುವವರು ಯಾರು? ತೊಡೆಯ ಮೇಲೆ ಮಲಗಿಸಿಕೊಂಡು ಆಡಿಸುವವರು ಯಾರು? ಮುದ್ದಿಸಿ ಮಾತನ್ನು ಕಲಿಸುವವರು ಯಾರು? ಕೈಹಿಡಿದು ನಡೆಸುವವರು ಯಾರು? ಆಡಾಡಬುತ್ತಿಯನ್ನು ಉಣ್ಣಿಸುವವರು ಯಾರು? ಶಿಶುವಿನ ಹೇಸಿಗೆಯನ್ನೆಲ್ಲ ಹಸನ್ಮುಖರಾಗಿ ಬಾಚುವವರು ಯಾರು? ತಾಯಿಯು ತನ್ನ ಶಿಶುವನ್ನೇ ಸರ್ವಸ್ವವೆಂದು ಭಾವಿಸಿ ಇಷ್ಟೆಲ್ಲ ಮಾಡುತ್ತಿರುವಾಗ ಇಂಥ ತಾಯ ಮುಂದೆ ಯಾವಾಗಲಾದರೊಮ್ಮೆ ಬಂದು ಮುಳ್ಳುಮುಳ್ಳಾದ ಗಡ್ಡಮೀಸೆಗಳು ಮೃದುವಾದ ಮಗುವಿನ ಮುಖಕ್ಕೆ ಚುಚ್ಚುವಂತೆ ಮುತ್ತುಕೊಡುವ ತಂದೆಯದೇನು ಹೆಚ್ಚುಗಾರಿಕೆ? ಹುಡುಗನು ಯಾವಾಗಲಾದರೊಮ್ಮೆ ಹಸಿದು ಹೊರಗಿನಿಂದ ಹೊತ್ತಾಗಿ ಬಂದರೆ ಹೊತ್ತಾದ ಕಾರಣವೇನೆಂದು ಗದರಿಸುವ ತಂದೆಯದು ದೇವತ್ವವೋ? ಅಥವಾ ಇದನ್ನು ತಿಂದು ಆ ಮೇಲೆ ಮಾತಾಡೆಂದು ಕನಿಕರದಿಂದ ತಾನು ಮೊದಲೇ ಮುಚ್ಚಿಟ್ಟಿದ್ದ ತಿನಿಸನ್ನು ಮುಂದೆ ತಂದು ಹಿಡಿಯುವ ತಾಯಿಯದು ದೇವತ್ವವೋ? ಮಗನಿಗೇನಾದರೂ ಅಸ್ವಸ್ಥತೆಯುಂಟಾದಾಗ ತಂದೆಯ ಮುಖದಲ್ಲಿ ಮ್ಲಾನತೆ ಮಾತ್ರ ತೋರುತ್ತಿರಲು ತಾಯಿಯ ಹೃದಯವು ಜ್ವಾಲಾಮುಖಿಯಂತೆ ಸಂತಪ್ತವಾಗುವದೇಕೆ? ಯಾವ ಪ್ರಾಣಿಗೂ ತಾಯಿಯಷ್ಟು ಸಮೀಪಸಂಬಂಧದ ವಸ್ತು ಈ ಸೃಷ್ಟಿಯಲ್ಲಿ ಇನ್ನೊಂದಿಲ್ಲ. ಮಗನಿಗೆ ಹಸಿವಾದಾಗ ತಂದೆಯು ಬೇಕಾದಷ್ಟು ಸಿಹಿಮಾತುಗಳನ್ನಾಡಿ ಜಿಲೇಬಿಯನ್ನು ಕೊಡಲಿ; ತಾಯಿಯು ಮುಖವನ್ನು ಗಂಟುಹಾಕಿಕೊಂಡು ಗದರಿಸುತ್ತ ಒಣರೊಟ್ಟಿಯ ಚೂರನ್ನು ಕೊಡಲಿ; ಆ ರೊಟ್ಟಿಯ ಸವಿಯು ಜಿಲೇಬಿಯನ್ನು ಮೀರಿಸಿಯೇ ತೀರುವದು. ಏಕೆಂದರೆ: ಜಿಲೇಬಿಯಲ್ಲಿ ಹೊರಗಣ ಸಕ್ಕರೆತುಪ್ಪಗಳ ಸಂಬಂಧದ ಹೊರತು ತಾಯಿಯ ಪ್ರೇಮದಂಥ ಮಧುರವಸ್ತುವಿನ

ಸಂಪರ್ಕವಿಲ್ಲ. ಅಂಗಡಿಯಲ್ಲಿ ಅದಕ್ಕೆ ಕೊಟ್ಟ ಬೆಲೆಯನ್ನು ಲೆಕ್ಕಕ್ಕೆ ತಂದುಕೊಂಡು ತಾನು ಉತ್ಕೃಷ್ಟವಸ್ತುವನ್ನು ಕೊಟ್ಟೆನೆಂದು ತಂದೆಯು ತನ್ನಲ್ಲಿ ತಾನೇ ಹಿರಿಹಿರಿ ಹಿಗ್ಗಬಹುದು. ಅದೇನೂ ಮಗನಿಗೆ ವಿಶೇಷ ವೆನಿಸಲಾರದು. ತಾಯಿ ಕೊಟ್ಟ ರೊಟ್ಟಿಯಲ್ಲಿ ಸಕ್ಕರೆ, ತುಪ್ಪ–ಮೊದ ಲಾದ ಹೊರಗಣ ಯಾವ ಮಧುರಪದಾರ್ಥಗಳ ಸಂಪರ್ಕವೂ ಇಲ್ಲ ದಿದ್ದರೂ ಆಕೆಯ ಪ್ರೇಮರಸವು ಅದರ ಪ್ರತಿಯೊಂದಣುವಿನಲ್ಲಿಯೂ ವ್ಯಾಪಿಸಿ ಅದಕ್ಕೊಂದು ಬಗೆಯ ವಿಲಕ್ಷಣವಾದ ರುಚಿಯನ್ನುಂಟುಮಾಡು ವದು. ಯಾವಾಕೆಯು ಎಷ್ಟೆಷ್ಟೋಕಾಲ ಶಿಶುವನ್ನು ತನ್ನ ಅಂಗ ದಲ್ಲೊಂದಂಶವಾಗಿ ಮಾಡಿಕೊಂಡಿದ್ದು ತನ್ನ ರಕ್ತಮಾಂಸಗಳಿಂದ ಬೆಳೆಸಿ ಶಿಶುವಿಗಾಗಿ ತನ್ನ ಪ್ರಾಯವನ್ನು ಕಳೆದುಕೊಂಡು ಆಯಸ್ಸನ್ನು ಕುಗ್ಗಿಸಿ ಕೊಂಡಳೊ ಆಕೆಯ ಪ್ರೇಮದಿಂದ ಕೂಡಿದ ರೊಟ್ಟಿಯು ಹೆಚ್ಚು ರುಚಿಯಾಗದೆ ಹೇಗೆ ಬಿಟ್ಟೀತು! ಪರಮಾತ್ಮನು ಪ್ರೇಮಸ್ವರೂಪನೆಂದು ಎಷ್ಟೋ ಶಾಸ್ತ್ರಗಳು ಹೇಳುತ್ತಿವೆ. ಮಗನ ಮೇಲೆ ತಾಯಿ ಅಷ್ಟು ಹೆಚ್ಚಿನ ಪ್ರೇಮವನ್ನು ಮಾಡುತ್ತಿರುವಾಗ ಮಗನು ತಾಯಿಯನ್ನು ಮೊದ ಲನೆಯ ದೇವರೆಂದು ತಿಳಿಯುವದಕ್ಕೆ ಸಂಶಯವೇಕೆ? ಶಿಶುವಿಗೆ ಈ ಸೃಷ್ಟಿಯಲ್ಲಿ ಮೊದಲು ಪರಿಚಯವಾಗುವ ವಸ್ತು ತಾಯಿ. ತಾಯಿ ಬೆಟ್ಟುಟ್ಟು ತೋರಿಸಿದ ಮೇಲೆ ತಂದೆ ಮೊದಲಾದವರ ಮಾತು. ಮನುಷ್ಯ ನನ್ನು ಬಿಟ್ಟರೆ ಉಳಿದ ಯಾವ ಪ್ರಾಣಿಗೂ ತಾಯ ಹೊರತು ಎರಡನೆ ಯವರ ಸಂಬಂಧದ ಪರಿಚಯವೇ ಇರುವದಿಲ್ಲ. ಕರುಗಳು ಕೂಗು ವದನ್ನು ಲಕ್ಷ್ಯವಿಟ್ಟು ಕೇಳಿದರೆ ಆ ಧ್ವನಿಯು "ಅಂಬೇ," ಎಂದು ರೂಪುಗೊಳ್ಳುವದು. ದೇವರು ಮೂಕಪ್ರಾಣಿಗಳಲ್ಲಿ ಕೂಡ ತಾಯಿಗೆ ಶರಣುಹೋಗುವ ಬೀಜವನ್ನಿಟ್ಟಿರುವನೆಂದ ಮೇಲೆ ಮನುಷ್ಯನಿಗೆ ಹೇಳ ಬೇಕಾದದ್ದೇನಿದೆ!

ದೇವರು ತನ್ನ ದೇವತ್ವವನ್ನು ಮನೆಯಲ್ಲಿ ಮಾತ್ರ ಸ್ತ್ರೀರೂಪದಲ್ಲಿ ಪ್ರಕಟಗೊಳಿಸಿರುವನೆಂದಲ್ಲ. ಸಾಮಾನ್ಯವಾಗಿ ಪ್ರಪಂಚದಲ್ಲಿ ಪರಮಾತ್ಮನ ಸಗುಣರೂಪವೆಂದರೆ ರಾಮ, ಕೃಷ್ಣ—ಮೊದಲಾದ ಪುರುಷವ್ಯಕ್ತಿಗಳಾ ದರೂ ಸ್ತ್ರೀವ್ಯಕ್ತಿಗಳೂ ಇದ್ದೇ ಇರುವವು. ಲಕ್ಷ್ಮೀ, ಪಾರ್ವತೀ,

ಶಾರದಾ—ಮೊದಲಾದ ಎಷ್ಟೋ ಸ್ತ್ರೀದೇವತೆಗಳಿರುವವು. ಲೋಕದಲ್ಲಿ ಜನರು ತಮ್ಮತಮ್ಮ ಅಭಿರುಚಿಗನುಗುಣವಾಗಿ ಬೇರೆ ಬೇರೆ ವ್ಯಕ್ತಿಗಳನ್ನು ಆರಿಸಿಕೊಳ್ಳುವರು. ಸ್ತ್ರೀವ್ಯಕ್ತಿಗಳನ್ನು ಆರಿಸಿಕೊಳ್ಳುವ ಸಾಧಕರಿಗೂ ಕಡಿಮೆಯಿಲ್ಲ. ಕಲ್ಕತ್ತೆಯಲ್ಲಿ ಪ್ರಸಿದ್ಧಸಾಧುಶಿರೋಮಣಿಗಳಾಗಿ ಹೋದ ಶ್ರೀರಾಮಕೃಷ್ಣಪರಮಹಂಸರು ವಿಚಾರಪೂರ್ವಕವಾಗಿ ತಮ್ಮ ಉಪಾಸನೆಗೆ ಸ್ತ್ರೀವ್ಯಕ್ತಿಯನ್ನೆ ಆರಿಸಿ ತೆಗೆದುಕೊಂಡಿದ್ದಾರೆ. ಇದಕ್ಕೆ ಕಾರಣವೇನೆಂದರೆ: ಪುರುಷವ್ಯಕ್ತಿಯು ವಿಚಾರಪ್ರಧಾನವಾದದ್ದು; ಸ್ತ್ರೀವ್ಯಕ್ತಿಯು ಪ್ರೇಮಪ್ರಧಾನವಾದದ್ದು. ಲೋಕದಲ್ಲಿ ವಿಚಾರವಂತರು ಬೇಗ ಒಲಿಯುವದಿಲ್ಲ; ಏಕೆಂದರೆ: ಅವರ ಮನಸ್ಸು ಕರಗುವಂಥದ್ದಲ್ಲ. ಪ್ರೇಮಸ್ವಭಾವದವರ ಒಲುಮೆಗೆ ತಡವೇ ಇಲ್ಲ; ಏಕೆಂದರೆ: ಅವರ ಮನಸ್ಸು ಕರಗದೆ ಇರುವದಕ್ಕಾಗುವದೆ ಇಲ್ಲ. ಮನೆಯಲ್ಲಿಯೇ ಲಕ್ಷ್ಯವನ್ನು ಕೊಟ್ಟು ನೋಡಿರಿ. ತಂದೆ ಒಲಿಯುವದಕ್ಕಿಂತಲೂ ತಾಯಿ ಬಹು ಬೇಗ ಒಲಿಯುವಳೆಂಬುದು ಅನುಭವಸಿದ್ಧವಾದ ಮಾತು. ಉಪಾಸನೆಗೆ ದೇವರ ಪುರುಷರೂಪವನ್ನು ಬಿಟ್ಟು ಸ್ತ್ರೀರೂಪವನ್ನು ಆರಿಸಿಕೊಳ್ಳುವದಕ್ಕೆ ಇದೊಂದು ಕಾರಣ. ಇನ್ನೊಂದೇನೆಂದರೆ: ವಿಚಾರವಂತನಾದ ತಂದೆಯು ಮಗನ ತಪ್ಪುಗಳನ್ನು ಕಂಡರೆ ಶಿಕ್ಷಿಸಿ ಅರ್ಧಚಂದ್ರಪ್ರಯೋಗವನ್ನು ಮಾಡುವನು; ಪ್ರೇಮಪ್ರಧಾನಳಾದ ತಾಯಿಯು ನಮ್ಮ ತಪ್ಪುಗಳನ್ನೆಲ್ಲ ಮನ್ನಿಸಿ ಮಡಿಲಿಗೆ ಹಾಕಿಕೊಳ್ಳುವಳು. ಅಜ್ಞಾನಿಗಳಾದ ನಮಗಂತು ತಪ್ಪಾಗುವದು ಬಿಟ್ಟದ್ದಲ್ಲ. ಹೀಗೆ ಅದು ನಮ್ಮ ಸ್ವಭಾವವಾಗಿರುವಾಗ ಪ್ರತಿಯೊಂದು ತಪ್ಪಿಗೂ ನಾವು ಶಿಕ್ಷೆಯನ್ನು ಅನುಭವಿಸಬೇಕೆಂದರೆ ನಮ್ಮ ಗತಿಯೇನು? ಶಿಕ್ಷೆಯನ್ನು ಕೊಟ್ಟು ಹೊರಗೆ ಹಾಕಿಯೂ ಬಿಟ್ಟರೆ ಮುಂದೆ ನಮ್ಮ ಪಾಡೇನು? ನಮಗೆ ಶಿಕ್ಷಿಸುವವರು ಬೇಡ; ಮನ್ನಿಸುವವರು ಬೇಕು. ನಿಷ್ಕರುಣದಿಂದ ಕಾಡಿಸುವವರು ನಮಗೆ ಬೇಡ; ನಾವು ಬೇಡವೆಂದರೂ ನಮಗೆ ಒಲಿಯುವವರು ಬೇಕು. ಭಗವಂತನ ಸ್ತ್ರೀವ್ಯಕ್ತಿಯ ಸಗುಣರೂಪವನ್ನು ಉಪಾಸನೆಗೆ ತೆಗೆದುಕೊಂಡರೆ ಈ ಎಲ್ಲ ಸುಗುಣಸಂಪತ್ತೂ ಅಲ್ಲಿರುವದು. ಆದ್ದರಿಂದ ಸ್ತ್ರೀರೂಪಕ್ಕೆ ಇಷ್ಟು ಶ್ರೇಷ್ಠತೆ. ಭಗವಂತನ ಸಗುಣರೂಪವನ್ನು ಸ್ತ್ರೀವ್ಯಕ್ತಿಯಾಗಿ ಮಾಡಿ ಮನುಷ್ಯತ್ವದ ಇಷ್ಟಾರ್ಥವನ್ನು ಸಾಧಿಸಿಕೊಳ್ಳುವ ಈ ಅತ್ಯಂತ

ಸುಲಭಸಾಧ್ಯವಾದ ಉಪಾಯುವನ್ನು ಈ ಸೃಷ್ಟಿಯಲ್ಲಿ ಭರತಖಂಡದವರ ಹೊರತು ಬೇರೆ ಯಾವ ದೇಶದವರೂ ಕಂಡುಕೊಂಡಿಲ್ಲ.

ಲೋಕವಲ್ಲಿ ಮನುಷ್ಯನು ಯಾವ ಸಾಲವನ್ನಾದರೂ ತೀರಿಸ ಬಹುದು; ತಾಯ ಉಪಕಾರದ ಸಾಲವನ್ನು ತೀರಿಸುವದಸಾಧ್ಯ. ಇದನ್ನು ಶಾಸ್ತ್ರಕಾರರೂ ಒಪ್ಪಿಕೊಂಡಿದ್ದಾರೆ. ಹುಟ್ಟುಜನಿವಾರಗಳನ್ನು ಕಿತ್ತೊಗೆದು ಕಾಷಾಯವಸ್ತ್ರಗಳನ್ನು ಧರಿಸಿ ಸಂನ್ಯಾಸಿಗಳಾದವರು ತಮ್ಮ ಎಲ್ಲ ಬಂಧುವರ್ಗದವರ ಸಂಬಂಧವನ್ನೂ ಕತ್ತರಿಸಿಕೊಂಡರೆಂದು ಹೇಳುವರಷ್ಟೆ. ಅದು ನಿಜ. ಮಗನು ಸಂನ್ಯಾಸಿಯಾದನೆಂದರೆ ತಂದೆಯಾದರೂ ಅವನ ಪಾದದ ಮೇಲೆ ಹಣೆಯನ್ನಿಡಬೇಕು. ಉಳಿದವರ ಮಾತೇನ್ನೇನು? ಆದರೂ ಆ ಸಂನ್ಯಾಸಿಗೆ ತಾಯ ಸಂಬಂಧವು ಮಾತ್ರ ಹೋಗುವದಿಲ್ಲ. ಮಗನು ಮಹಾವ್ಯಾಖ್ಯಾನಸಿಂಹಾಸನಾಧೀಶ್ವರನೆನಿಸಿ ಜಗದ್ಗುರುವಾಗಿದ್ದರೂ ತಾಯ ದರ್ಶನವಾದಾಗ ಆಕೆಗೆ ಅವನು ನಮಸ್ಕರಿಸಬೇಕಾಗುವದು. ತಾಯಿಗಿಂತ ದೊಡ್ಡ ವಸ್ತು ಈ ಸೃಷ್ಟಿಯಲ್ಲಿ ಯಾವದೂ ಇಲ್ಲ. ಪರಮಪೂಜ್ಯರಾದ ಶ್ರೀ ಶಂಕರಾಚಾರ್ಯರ ಚರಿತ್ರೆಯನ್ನು ನೋಡಿರಿ. ಶಂಕರಾಚಾರ್ಯರಿಗೆ ಚಿಕ್ಕಂದಿನಲ್ಲಿಯೇ ಸಂನ್ಯಾಸದ ಬಾಯಾರಿಕೆ ಬಹಳವಾಗಿತ್ತು. ಆದರೆ ಸೊಸೆಯು ಮನೆಗೆ ಬಂದು ಒಗೆತನವನ್ನು ಮಾಡಿದ್ದನ್ನು ನೋಡಬೇಕೆಂದು ತಾಯ ಕುತೂಹಲವು ಹೆಚ್ಚಾಗಿತ್ತು. ಇದೆರಡರ ತಿಕ್ಕಾಟದ ಸಮಯದಲ್ಲಿ ಆಚಾರ್ಯರು ಸ್ನಾನಾರ್ಥವಾಗಿ ನದಿಗೆ ಹೋಗಿದ್ದಾಗ ಒಂದು ಮೊಸಳೆ ಅವರನ್ನು ಹಿಡಿದೆಳೆಯಿತೆಂದೂ ಸಂನ್ಯಾಸದ ಆಸೆಯು ತೀರಿದರೆ ಪ್ರಾಣತ್ಯಾಗವು ಸರಾಗವಾಗುವದರಿಂದ ಅದಕ್ಕೆ ಆಗಲಾದರೂ ಸಮ್ಮತಿಯನ್ನು ಕೊಡಬೇಕೆಂದು ಅವರು ತಾಯನ್ನು ಪ್ರಾರ್ಥಿಸಿದರೆಂದೂ ಉಪಾಯಾಂತರವಿಲ್ಲದ್ದರಿಂದ ತಾಯಿ ಮಗನಿಗೆ ಹೇಗಾದರೂ ಸುಖವಾದರೆ ಸಾಕೆಂದು ಅನುಮತಿಸಿದಳೆಂದೂ ಆಗ ಆಚಾರ್ಯರು ಮನಸ್ಸಿನಲ್ಲಿ ಆಪತ್ಸಂನ್ಯಾಸವನ್ನು ಸಂಕಲ್ಪಮಾಡುತ್ತಲೆ ಮೊಸಳೆ ಬಿಟ್ಟಿತೆಂದೂ ಆಮೇಲೆ ಅವರು ಕ್ರಮಸಂನ್ಯಾಸವನ್ನೆ ಮಾಡಿದರೆಂದೂ ಅವರ ಇತಿಹಾಸವು ಹೇಳುತ್ತದೆ. ಆಚಾರ್ಯರಿಗೆ ಸಂನ್ಯಾಸದ ಮೇಲೆ ಎಷ್ಟೇ ಉತ್ಕಟವಾದ ಇಚ್ಛೆ ಇದ್ದರೂ ತಾಯ ಆಜ್ಞೆಯ ಹೊರತು

ಅದನ್ನು ನಡೆಸಲಿಲ್ಲ. ವಿಚಾರದೃಷ್ಟಿಯಿಂದ ನೋಡಿದರೆ ಪ್ರೇಮಪ್ರಧಾನ ಳಾದ ತಾಯಿಗೆ ಸಂನ್ಯಾಸದಿಂದುಂಟಾಗುವ ಲೋಕಹಿತದ ಮತ್ತು ಆತ್ಮ ಹಿತದ ಪೂರದೃಷಿಯು ಇಲ್ಲವೆಂದು ತೋರಿದರೂ ಆಕೆಯ ಒಂದು ನಿಟ್ಟುಸಿರೇ ಮಗನ ಸರ್ವಶ್ರೇಯಸ್ಸನ್ನೂ ಸುಟ್ಟು ಭಸ್ಮಮಾಡಬಲ್ಲ ದಾದ್ದರಿಂದ ಮಕ್ಕಳು ತಾಯ ಸಮಾಧಾನವನ್ನು ಕಾಯುವದು ಅಗತ್ಯ. ಯಾವ ದೇಹದಲ್ಲಿದ್ದು ತಾನು ಲೋಕಹಿತವನ್ನಾಗಲಿ ಅತ್ಮಹಿತವನ್ನಾಗಲಿ ಸಾಧಿಸುವದಕ್ಕೆ ಹೋಗುವನೊ ಆ ದೇಹದ ಮೇಲಿನ ಪೂರ್ಣಾಧಿಕಾರವು ತಾಯಿಗಿರುವಾಗ ಆ ತಾಯನ್ನು ಕಡೆಗಾಣುವದು ಹೇಗೆ ಯೋಗ್ಯ ವಾದೀತು? ಶ್ರೀಮಧ್ವಾಚಾರ್ಯರು ಕೂಡ ತಮ್ಮ ಸಂನ್ಯಾಸಕ್ಕೆ ಮುಂಚೆ ತಾಯ ಅನುಜ್ಞೆಯನ್ನು ಪಡೆದಿರುತ್ತಾರೆ. ಶ್ರೀ ಮಧ್ವಾಚಾರ್ಯರು ಮನೆ ಯನ್ನು ಬಿಟ್ಟು ಹೋಗುತ್ತಲೆ ತಂದೆಯು ಅವರನ್ನು ಹುಡುಕಿಕೊಂಡು ಬಂದು ಮಗನನ್ನು ಕಾಣದ ತಾಯ ಗೋಳಾಟವನ್ನು ತಿಳಿಸಲು ಆಚಾ ರ್ಯರು ಮತ್ತೊಬ್ಬ ಮಗನಾಗುವವರೆಗೂ ಸಂನ್ಯಾಸಿಯಾಗುವದಿಲ್ಲವೆಂದು ಮಾತು ಕೊಟ್ಟು ಅದರಂತೆ ಇದ್ದು ಅವರಿಗೆ ದ್ವಿತೀಯಪುತ್ರನಾದ ಮೇಲೆ ಸಂನ್ಯಾಸಿಗಳಾಗಿರುತ್ತಾರೆ.

ಶ್ರೀ ಶಂಕರಾಚಾರ್ಯರ ಚರಿತ್ರೆಯಲ್ಲಿ ತಾಯ ವಿಚಾರವು ಇನ್ನೂ ಮುಂದೆ ಸಾಗಿದೆ. ಸಂನ್ಯಾಸಿಗಳಾಗುವಾಗ ಆಚಾರ್ಯರು ತಾಯಿಗೆ "ನೀನು ನೆನೆಸಿದಾಗ ಬರುತ್ತೇನೆ" ಎಂದು ಮಾತು ಕೊಟ್ಟು ಹೊರಬಿದ್ದರು. ಈ ಮಾತು ಬೀಸುವ ದೊಣ್ಣೆಯ ಹೊಡೆತವನ್ನು ತಪ್ಪಿಸಿಕೊಳ್ಳುವ ಮಾತ್ರಕ್ಕೆ ಹೇಳಿದ್ದಲ್ಲ. ಮುಂದೆ ಭರತಖಂಡದಲ್ಲೆಲ್ಲ ದಿಗ್ವಿಜಯವನ್ನು ಮಾಡಿ ಶೃಂಗೇರಿಯಲ್ಲಿದ್ದ ಆಚಾರ್ಯರು ಮನಸ್ಸಿ ನಲ್ಲಿ ಏನೋ ಸ್ಫೂರ್ತಿಗೊಂಡವರಾಗಿ ಅಲ್ಲಿಂದ ಹೊರಟು ಪಯಣದ ಮೇಲೆ ಪಯಣದಿಂದ ಕಾಲಟಿಗೆ ಬಂದರು. ಆಗ ಅವರ ತಾಯಿ ಮರ ಣೋನ್ಮುಖಳಾಗಿದ್ದಳು. ಮಗನ ದರ್ಶನದಿಂದ ತಾಯಿಗೆ ಚೇತನವು ಉಕ್ಕಿ ಬಂದು ಆಕೆಯ ಕಣ್ಣುಗಳಿಂದ ಆನಂದಾಶ್ರು ಕೋಡಿ ಇಟ್ಟಿತು. ಆಗ ಆಚಾರ್ಯರು ಆಕೆಗೆ ತಿಳಿಮಾತಿನಲ್ಲಿ ಜ್ಞಾನೋಪದೇಶವನ್ನು ಮಾಡಿ ಸದ್ಗತಿಯಾಗುವಂತೆ ತಮ್ಮ ತಪಸ್ಸಾಮರ್ಥ್ಯವನ್ನು ವಿನಿಯೋಗಿಸಿದರು.

ಮಾತೃಋಣವು ತೀರತಕ್ಕದ್ದಲ್ಲವೆಂದು ಹಿಂದೆ ಹೇಳಿದೆಯಷ್ಟೆ. ಅದು ಸಾಮಾನ್ಯವಾದ ನಿಯಮ. ಋಣವೆಂದ ಮೇಲೆ ಅದು ಎಂದಾದರೂ ಒಂದು ದಿನ ತೀರತಕ್ಕದ್ದೇ ಆಗಿರಬೇಕು. ಹಾಗೆ ತೀರುವದಾದರೆ ಆ ಉಪಾಯವು ಈಗ ನಮ್ಮ ಆಚಾರ್ಯರು ಮಾಡಿದ ಉಪಾಯ ಒಂದೇ ಸರಿ. ನಮಗೆ ಜನ್ಮವನ್ನು ಕೊಟ್ಟಂಥ ತಾಯಿಗೆ ಮತ್ತೆ ಜನ್ಮಮರಣ ಗಳಿಲ್ಲದಂತೆ ನಾವು ಮಾಡಿದರೆ ಆಗ ಆಕೆಯ ಸಾಲವು ತೀರದೆ ಏನು ಮಾಡೀತು? ಆಚಾರ್ಯರು ತಾಯ ಆತ್ಮಕ್ಕೆ ಸದ್ಗತಿಯನ್ನು ಕೊಟ್ಟು ಆಕೆಯ ದೇಹಸಂಸ್ಕಾರದ ವಿಷಯಕ್ಕೆ ಮನಸ್ಸು ಹಾಕಿದ್ದನ್ನು ನೋಡಿ ಸಂನ್ಯಾಸಿಯು ಈ ಉದ್ಯೋಗದಲ್ಲಿ ತೊಡಗುವದು ಅಯುಕ್ತವೆಂದು ಉಂಡಾಡಿಗರು ಬೀದಿಯಲ್ಲಿ ಕುಳಿತು ಮಾತಿನ ಸುರಿಮಳೆಯನ್ನು ಸುರಿಸಿದರು. ತಾವೆಲ್ಲರೂ ಅಸಹಕಾರವನ್ನು ಮಾಡಿದರೆ ಆಚಾರ್ಯರವೇನು ನಡೆಯುವದೆಂದು ಅವರಿಗೆ ಹೆಮ್ಮೆ ಇತ್ತು. ಲೌಕಿಕರೊಡನೆ ಅಸಹಕಾರವು ಜಯಶಾಲಿಯಾಗಬಹುದು. ಪಾರಮಾರ್ಥಿಕರೊಡನೆ ಅದರ ಆಟವೇನು ನಡೆದೀತು? ಆಚಾರ್ಯರು ತಮ್ಮ ತಾಯ ದೇಹವನ್ನು ಹಿತ್ತಲಲ್ಲಿ ಬಾಳೆಯ ಕಂದುಗಳ ಮೇಲಿಟ್ಟು ತಮ್ಮ ಮಂತ್ರಶಕ್ತಿಯಿಂದ ದಹನಮಾಡಿದರೆಂದು ಹೇಳುತ್ತಾರೆ. ಆಚಾರ್ಯರ ನಡೆವಳಿಕೆಯು ಶಾಸ್ತ್ರದ ಒಂದು ಸಾಲಿನ ಅಕ್ಷರಕ್ಕೆ ಒಂದು ಪಕ್ಷ ವಿರೋಧವಾಗಿರಬಹುದು. ಆದರೆ ಆಚಾರ್ಯರು ತಾವು ಹಿಂದೆ ತಾಯಿಗೆ ಕೊಟ್ಟ ಮಾತನ್ನು ನಡೆಸಿ ತಮ್ಮ ಆತ್ಮಶಕ್ತಿಯನ್ನು ಪ್ರಕಟಮಾಡುವದಕ್ಕೆ ಎಳ್ಳಷ್ಟೂ ಹಿಂದುಮುಂದು ನೋಡಲಿಲ್ಲ. ಏಕೆಂದರೆ: ಸತ್ಕಾರ್ಯವನ್ನು ಮಾಡಿದವರು ಯಾರೂ ಕೆಟ್ಟ ಗತಿಗೆ ಹೋಗುವದಿಲ್ಲವೆಂದು ಅವರಿಗೆ ಗೊತ್ತಿತ್ತು. ಆದ್ದರಿಂದ ಹೊರಗಣ ಬಾಯಿಬಡಿಕರು ಎಷ್ಟು ಹಾರಾಡಿದರೂ ಆಚಾರ್ಯರು ತಮ್ಮ ಆತ್ಮಶಕ್ತಿಯಿಂದ ಮಾತೃಋಣವನ್ನು ತೀರಿಸುವ ಕಾರ್ಯವನ್ನು ಮಾಡಿಯೇಬಿಟ್ಟರು.

ಸಂನ್ಯಾಸಿಗಳಿಗೆ ಕೂಡ ತಾಯಿಯರ ಸಂಬಂಧ ಹೋಗುವದಿಲ್ಲವೆಂದಮೇಲೆ ಇತರರ ಪಾಡೇನು? ಶ್ರೀ ಸಮರ್ಥರಾಮದಾಸರ ಮಾತೃಪ್ರೇಮವೂ ಅಭಿನಂದನೀಯವಾಗಿದೆ. ಶ್ರೀ ಶಂಕರಾಚಾರ್ಯರ ತಾಯಿಯಂತೆ ರಾಮದಾಸರ ತಾಯಿಗೂ ಮಗನ ಮದುವೆಯನ್ನು ನೋಡಬೇಕೆಂಬ

ಲವಲವಿಕೆ ಬಹಳ ಇತ್ತು. ಅದರಂತೆ ಎಲ್ಲ ಸನ್ನಾಹಗಳೂ ನಡೆದಿರುವಾಗ ಪುರೋಹಿತರು, "ಸುಲಗ್ನ, ಸಾವಧಾನ"–ಎನ್ನುತ್ತಲೇ ರಾಮದಾಸರು ಹಸೆಯ ಜಗುಲಿಯಿಂದಿಳಿದು ತಪ್ಪಿಸಿಕೊಂಡು ಓಡಿ ಹೋಗಿಬಿಟ್ಟರು. ಆಮೇಲೆ ಅವರು ಅನೇಕ ತಪಶ್ಚರ್ಯೆಗಳನ್ನು ಮಾಡಿ ಸಿದ್ಧಿಗಳನ್ನು ಪಡೆದು ಮಹತ್ಕಾರ್ಯಗಳನ್ನು ಸಾಧಿಸಿ ದೇಶೋದ್ಧರಣಕಾರ್ಯದಲ್ಲಿ ಎಷ್ಟೇ ತೊಡಗಿದ್ದರೂ ತಾಯ ವಿಷಯಕ್ಕೆ ಅವರ ಮನಸ್ಸಿನಲ್ಲಿ ಉಪೇಕ್ಷೆ ಇರಲಿಲ್ಲ. ಇಪ್ಪತ್ತನಾಲ್ಕು ವರ್ಷಗಳ ಮೇಲೆ ಅವರು ಮನೆಯ ಮುಂದೆ ಬಂದು ನಿಂತು "ಜಯ ಜಯ ರಘುವೀರಸಮರ್ಥ" ಎಂದು ಜಯಘೋಷವನ್ನು ಮಾಡಿದರು. ಮಗನು ಹೋದಂದಿನಿಂದ ಅತ್ತತ್ತು ಕಣ್ಣು ಕಳೆದುಕೊಂಡು ಅಲ್ಲಿಯೇ ಕೂತಿದ್ದ ತಾಯಿಯು ತನ್ನ ಹಿರಿಯ ಸೊಸೆಯನ್ನು ಕೂಗಿ ಭಿಕ್ಷುಕನಿಗೆ ಭಿಕ್ಷವನ್ನು ಹಾಕೆಂದಳು. ಒಡನೆ ರಾಮದಾಸರು "ಈ ಭಿಕ್ಷುಕನು ಭಿಕ್ಷಕ್ಕೆ ಬಂದಿಲ್ಲ"ವೆಂದು ಜಗುಲಿಯನ್ನು ಹತ್ತಿ ಬಂದು ತನ್ನ ತಲೆಯನ್ನು ತಾಯ ಪಾದದ ಮೇಲಿಟ್ಟು "ಅಮ್ಮ" ಎನ್ನುತ್ತಲೇ ಆ ಸ್ಪರ್ಶದಿಂದಲೂ ಆ ಶಬ್ದದಿಂದಲೂ ಆಕೆಯ ಮೈ ಜುಮ್ಮೆಂದು ಕಂಪಿಸುವದಕ್ಕಾರಂಭಿಸಿ "ಯಾರಪ್ಪ; ನನ್ನ ಮುದ್ದು ನಾರೋಬನಂತೆ ಕಾಣುವದಲ್ಲೊ?" ಎಂದು ದಡದಡನೆ ಕಣ್ಣೀರು ಸುರಿಸಿದಳು. ರಾಮದಾಸರು "ಹೌದಮ್ಮ" ಎನ್ನುತ್ತಲೇ ತಾಯಿ ಮಗನನ್ನು ಬಿಗಿಯಾಗಿ ಆಲಿಂಗನ ಮಾಡಿದಳು. ಮುಂದೆ ಅವರ ಮನಸ್ಸಿನ ಪರಿಸ್ಥಿತಿಗಳೇನಾಗಿದ್ದವೆಂಬುದು ವಿಧಾತನಿಗಾದರೂ ತಿಳಿಯಿತೊ ಇಲ್ಲವೊ ಕಾಣೆ. ಆ ತಾಯಿಮಕ್ಕಳಿಗಂತು ಏನೂ ತಿಳಿದಿರಲಾರದು. ಏಕೆಂದರೆ: ಇಬ್ಬರೂ ಪ್ರೇಮದ ಆವೇಶದಿಂದ ಮೈಮರೆತಿದ್ದರು. ನಾರೋಬನೆಂಬುದು ರಾಮದಾಸರ ಪೂರ್ವದ ಹೆಸರಾದ 'ನಾರಾಯಣ' ಎಂಬುದರ ಮುದ್ದುರೂಪ. ಶ್ರೀಸಮರ್ಥರಾಮದಾಸರೆಂದು ಸಕಲ ಜಗತ್ತಿನವರೂ ಸಾವಿರಾರು ನಾಲಿಗೆಗಳಿಂದ ಸಂಬೋಧಿಸಿದರೂ ಉಬ್ಬದೆ ಇದ್ದ ಮೈ "ನನ್ನ ಮುದ್ದು ನಾರೋಬನೇಸೊ" ಎನ್ನುತ್ತಲೇ ಉಬ್ಬಿ ಹೋಗಿ ಚೈತನ್ಯಪೂರ್ಣವಾಯಿತು. ಆಮೇಲೆ "ನಾರೋಬನನ್ನು ನೋಡುವದಕ್ಕೆ ಕಣ್ಣಿಲ್ಲವಲ್ಲ!" ಎಂದು ತಾಯಿ ದುಃಖಿಸಲು ಆಕೆಗೆ ರಾಮದಾಸರು ದೃಷ್ಟಿಯನ್ನು ಕೂಡ ಕೊಟ್ಟರೆಂದು ಹೇಳು

ತ್ತಾರೆ. ಬರೀ ರಾಮದಾಸರನ್ನು ನೋಡುವ ದೃಷ್ಟಿಯನ್ನೇ ಏಕೆ? ಅವರು ಶ್ರೀರಾಮನನ್ನೇ ನೋಡುವ ದೃಷ್ಟಿಯನ್ನೇ ಕೊಟ್ಟಿರಬಹುದು. ಈ ರೀತಿಯಲ್ಲಿ ದೊಡ್ಡದೊಡ್ಡವರು ಕೂಡ ತಾಯಿಯರ ಅನುಗ್ರಹವನ್ನು ಕಾದುಕೊಂಡಿರುವವನ್ನು ಲಕ್ಷ್ಯದಲ್ಲಿಟ್ಟುಕೊಂಡು ಪ್ರತಿಯೊಬ್ಬರೂ ಮಾತೃಭಕ್ತಿಯನ್ನು ಬೆಳೆಸಿಕೊಳ್ಳಬೇಕು.

# ಸ್ವದೇಶಭಕ್ತಿ

ಮನುಷ್ಯನು ತನ್ನ ಆತ್ಮಶಕ್ತಿಯ ತೇಜಸ್ಸಿನ ಸರ್ವ ಕಿರಣಗಳನ್ನೂ ಪರಮಾತ್ಮಸ್ವರೂಪವಲ್ಲಿ ಕೇಂದ್ರೀಕರಿಸುವದೇ ತನ್ನ ಪರಮಪುರುಷಾರ್ಥವೆಂಬುದನ್ನು ಎಂದೆಂದಿಗೂ ಮರೆಯಬಾರದು. ಅದನ್ನು ಮೈಗೂಡಿಸಿಕೊಳ್ಳುವದಕ್ಕೆ ಸರ್ವಸನ್ನಾಹವನ್ನೂ ಮಾಡುತ್ತಿರುವದೇ ಮನುಷ್ಯನ ಮುಖ್ಯ ಕರ್ತವ್ಯವು. ಆದರೆ ಒಂದೊಂದು ಸಂದರ್ಭದಲ್ಲಿ ಮನುಷ್ಯನು ತನ್ನ ಲಕ್ಷ್ಯವನ್ನು ಫಲಾಂತರದಲ್ಲಿರಿಸಬೇಕಾಗುವದು. ಏಕೆಂದರೆ: ಮನುಷ್ಯನು ತನ್ನ ಮನಸ್ಸನ್ನು ಸಂಪೂರ್ಣವಾಗಿ ಪರಮಾತ್ಮನಲ್ಲಿಡುವದಕ್ಕೆ ಮುಂಚೆ ಹೊರಗಣ ಪರಿಸ್ಥಿತಿಗಳೆಲ್ಲ ಅನುಕೂಲವಾಗಿರಬೇಕಾಗುವದು. ಹೊಟ್ಟೆ ಬಟ್ಟೆಗಳ ಯೋಚನೆಯೊಂದು ಬಾಧಿಸದೆ ಇರಬೇಕು ಮತ್ತು ಸಾತ್ತ್ವಿಕ ವೃತ್ತಿಯ ಉಪಕರಣಗಳು ಸಮೃದ್ಧಿಯಾಗಿರಬೇಕು. ರಾಜಮಾರ್ಗದಿಂದಲೆ ಬಂದು ಮನೆಗಳನ್ನೆಲ್ಲ ಬಾಚಿಕೊಂಡು ಹೋಗುವ ಹಗಲುಗಳ್ಳರ ಹಾವಳಿಯ ಕಾಲದಲ್ಲಿ ಯಾವ ಗೃಹಸ್ಥನ ಮನಸ್ಸು ತಾನೆ ತಳಮಳಗೊಳ್ಳದೆ ಪರಮಾತ್ಮನ ಮೇಲೆ ನಿಲ್ಲಹೋಗುವದು? ಮನುಷ್ಯನ ಮನಸ್ಸು ಧರ್ಮದ ಕಡೆಗೆ ನಿರಾತಂಕವಾಗಿ ಸಾಗಬೇಕಾದರೆ ತನ್ನ ದೇಶದಲ್ಲೆಲ್ಲ ಜನರು ಉಂಡ ತಿಂದು ಧರ್ಮಿಷ್ಠರಾಗಿ ಹಾಯಾಗಿರಬೇಕು. ಹಾಗಿಲ್ಲದೆ ಎಲ್ಲರೂ ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ತಮ್ಮ ತಮ್ಮ ಹೊಟ್ಟೆಬಟ್ಟೆಗೇ ಇಲ್ಲದೆ

ಆಕಾಶದ ಕಡೆಗೆ ತಿರುಗಿ ಕೆಳಲುಗಣ್ಣು ಮೇಲುಗಣ್ಣು ಮಾಡಿ ನಿಟ್ಟು ಸಿರಿಡುತ್ತಿರುವಾಗ ಅವರ ಮನಸ್ಸಿಗೆ ಧರ್ಮದ ಕಲ್ಪನೆಯಾದರೂ ಬರುವ ಬಗೆ ಹೇಗೆ? ಒಂದು ಪಕ್ಷ ಮಳೆಬೆಳೆಗಳಾಗಿ ಎಲ್ಲರ ಮನೆಯ ಹಗೇವುಗಳೂ ಧಾನ್ಯಗಳಿಂದ ತುಂಬಿ ಎಲ್ಲೆಲ್ಲಿಯೂ ಸುಗ್ಗಿಯ ಹಾಡುಗಳೇ ಸೂರೆಯಾಗಿದ್ದರೂ ಮನುಷ್ಯನ ಧಾರ್ಮಿಕಪ್ರವರ್ತನೆಗೆ ಸಾಧನವು ಸಾಕಾಗುವದಿಲ್ಲ. ಇದರ ಮುಂದೆ ಬೇಕಾಗುವದೇನೆಂದರೆ: ಜನರಲ್ಲಿ ಎಲ್ಲರಲ್ಲಿಯೂ ಸ್ವಧರ್ಮಾನುರಾಗ. ಎಲ್ಲೆಲ್ಲಿಯೂ ಸ್ವಧರ್ಮಾನುರಾಗದ ಮಾತುಕಥೆಗಳೆ ನಡೆಯುತ್ತಿದ್ದರೆ ಮತ್ತು ಸ್ವಧರ್ಮಾಚರಣೆಗಳೆ ಸಂಘಟಿಸುತ್ತಿದ್ದರೆ ಯಾರಿಗಾದರೂ ಸ್ವಭಾವವಾಗಿ ಸ್ವಧರ್ಮದಲ್ಲಿ ಪ್ರವೃತ್ತಿಯುಂಟಾಗುವದು; ಹಾಗಿಲ್ಲದೆ ಎಲ್ಲಿ ನೋಡಿದರೂ ಪರಧರ್ಮಾನುರಾಗ, ಪರಧರ್ಮಾಚರಣೆ, ಪರಧರ್ಮದವರ ವೇಷ, ಪರಧರ್ಮದವರ ಭಾಷೆ — ಇವುಗಳೇ ತುಂಬಿ ತುಳುಕುತ್ತಿದ್ದರೆ ಮನುಷ್ಯನಿಗೆ ಸ್ವಭಾವವಾಗಿಯೇ ಪರಧರ್ಮದಲ್ಲಿ ಪ್ರವೃತ್ತಿಯುಟಾಗುವದು. ಏಕೆಂದರೆ: ಮನುಷ್ಯರೆಲ್ಲ ನ್ಯೂನತೆಯುಳ್ಳವರೆ. ನ್ಯೂನತೆಯೆಂದರೇನು? ಆತ್ಮಶಕ್ತಿಯ ನ್ಯೂನತೆಯೇ ನ್ಯೂನತೆ. ಯಾರು ಮನುಷ್ಯರೂಪದಲ್ಲಿದ್ದರೂ ತಮ್ಮ ಆತ್ಮಶಕ್ತಿಯನ್ನು ಚೆನ್ನಾಗಿ ಬೆಳಸಿಕೊಂಡು ತಮ್ಮಲ್ಲಿ ದೇವತ್ವವನ್ನು ತುಂಬಿಕೊಂಡಿರುವರೊ ಅಂಥವರ ಮೇಲೆ ಈ ಹೊರಗಣ ಪರಿಸ್ಥಿತಿಯ ಆಟವೇನೂ ನಡೆಯದೆ ಹೋಗಬಹುದು. ಏಕೆಂದರೆ: ಅವರ ಆತ್ಮಶಕ್ತಿಯು ಹೊರಗಣ ಪರಿಸ್ಥಿತಿಯ ಮೇಲೆ ಅಧಿಕಾರವನ್ನು ನಡೆಸುವ ಸಾಮರ್ಥ್ಯವುಳ್ಳದ್ದಾಗಿರುವದು. ಸಾಮಾನ್ಯರಾದ ಸಾಧಕರ ಮೇಲೆ ಮಾತ್ರ ಅದು ತನ್ನ ಮಂಕುಬೂದಿಯನ್ನು ತಳೆಯದೆ ಬಿಡುವದಿಲ್ಲ. ಒಮ್ಮೆ ಅದರ ಬೇಳುವೆಗೆ ಬೆರಗಾದರೆಂದರೆ ಜಾರಿದವರಿಗೆ ಏರುವದು ಕಷ್ಟವಾಗುವಂತೆ ಅವರಿಗೆ ಏಳುವದೂ ಎಚ್ಚತ್ತುಕೊಳ್ಳುವದೂ ಕಷ್ಟವಾಗುವದು. ಹೊರಗಣ ಪರಿಸ್ಥಿತಿಗಳೆಲ್ಲ ಸ್ವಧರ್ಮಕ್ಕನುಕೂಲವಾಗಿರಬೇಕಾದರೆ ಸ್ವಧರ್ಮದ್ದೇ ಸಾಮ್ರಾಜ್ಯವಿರಬೇಕಾಗುವದು. ಆದಕಾರಣ ಸ್ವಧರ್ಮಾಭಿಮಾನವೆ ಮನುಷ್ಯನ ಅವಶ್ಯಕರ್ತವ್ಯವಾದರೂ ಆ ಧರ್ಮದ ಸುಸ್ಥಿತಿಗಾಗಿ ಸ್ವದೇಶಾಭಿಮಾನವೂ ಅವಶ್ಯಕರ್ತವ್ಯವೇ ಆಗಿರುವದು.

ಈ ಸ್ವದೇಶಾಭಿಮಾನದ ವಿಚಾರವು ಮಾತೃಭಕ್ತಿಯ ಸಮಿಾಪದಲ್ಲಿಯೇ ಬಂದಿರುವದರಲ್ಲಿಯೂ ಒಂದು ವಿಶೇಷವಿದೆ. ಮಾತೃಭಕ್ತಿಯನ್ನು ಹೇಳುವಾಗ ದೇಹದ ರಕ್ತಮಾಂಸಗಳೆಲ್ಲ ತಾಯಿ ರಕ್ತಮಾಂಸಗಳಿಂದಲೇ ವಿಶೇಷವಾಗಿ ಪುಷ್ಟಿಗೊಂಡು ಬೆಳೆದವುಗಳಾದ್ದರಿಂದ ಮಾತೃಭಕ್ತಿಯ ಅಗತ್ಯವೆಂದು ಹೇಳಿದ್ದಾಗಿದೆಯಷ್ಟೆ. ಅದರ ತಾತ್ಪರ್ಯವನ್ನೆ ತನ್ನ ದೇಶದ ಕಡೆಗೆ ಸಾಗಿಸಿದರೆ ತನ್ನ ಜನ್ಮಭೂಮಿಯ ಮೇಲೆಯೂ ಮಾತೃಭಕ್ತಿಯನ್ನು ತೋರಿಸಲೇ ಬೇಕಾಗುವದು. ಏಕೆಂದರೆ: ಮನುಷ್ಯನ ದೇಹವು ಗರ್ಭದಲ್ಲಿದ್ದ ಒಂಬತ್ತು ತಿಂಗಳೂ ಆ ಮೇಲೆ ಕೆಲವು ತಿಂಗಳೂ ತಾಯಂಶದಿಂದ ಪೋಷಣೆಯನ್ನು ಹೊಂದಿದರೂ ಆಮೇಲೆ ಅದು ಬಹುಕಾಲ ಭೂಮಿಯಲ್ಲಿ ಬೆಳೆಸಿದ ದನಸಧಾನ್ಯಗಳಿಂದ ಮೈದುಂಬಿಕೊಳ್ಳುತ್ತದೆ. ಆದ್ದರಿಂದ ಕೇವಲ ಶೈಶವದಲ್ಲಿ ತಾಯಿ ಹೇಗೊ ಹಾಗೆ ಮನುಷ್ಯನ ಉಳಿದ ಜೀವಿತಕಾಲವೆಲ್ಲೆಲ್ಲ ಭೂದೇವಿಯು ಮಾತೃಸ್ವರೂಪಳಾಗಿ ರಕ್ಷಿಸಿದವಳಾಗಿದ್ದಾಳೆ. ಕೇವಲ ಶೈಶವದಲ್ಲಿ ಕೂಡ ಪ್ರಾಣಿಗೆ ಆಹಾರವಾಗಿ ದೊರೆಯುವ ತಾಯಂಶಕ್ಕೂ ಭೂಮಿಯಲ್ಲಿ ಬೆಳೆದ ಧನಸಧಾನ್ಯಗಳೇ ಕಾರಣವಾಗಿರುವದನ್ನು ಲಕ್ಷ್ಯಕ್ಕೆ ತೆಗೆದುಕೊಂಡರಂತು ಭೂದೇವಿಯ ಮಾತೃತ್ವಕ್ಕೆ ಅಗ್ರಸ್ಥಾನವೇ ಪ್ರಾಪ್ತವಾಗುವದು. ಅಂತು ಮನುಷ್ಯನು ಹೆತ್ತತಾಯನ್ನೂ ಭೂಮಾತೆಯನ್ನೂ ಸರಿಜೋಡಿಯೆಂದು ತಿಳಿದು ಮಾತೃಭಕ್ತಿಯನ್ನು ಮಾಡುವ ಅಗತ್ಯವು ಎಂದಿಗೂ ತಪ್ಪಿದ್ದಲ್ಲ. ವಿವೇಕಬಲವಿಲ್ಲದವನು ಯಾವನಾದರೂ ಹೆತ್ತ ತಾಯನ್ನೂ ಭೂಮಾತೆಯನ್ನೂ ಕಡೆಗಂಡು ತಾನು ತನ್ನ ಸುಖೋಪಭೋಗದಲ್ಲಿ ಮಗ್ನನಾದರೆ ಅವನು ಧಿಕ್ಕಾರಕ್ಕೆ ತಕ್ಕವನು. ಹೆತ್ತ ತಾಯನ್ನೂ ಭೂಮಾತೆಯನ್ನೂ ಸೇವಿಸುವದು ಸ್ವರ್ಗಸುಖಕ್ಕಿಂತ ಹೆಚ್ಚಿನದು. ಹೆತ್ತ ತಾಯಿಗೆ ಅಥವಾ ಭೂಮಾತೆಗೆ ಒಬ್ಬನು ದ್ರೋಹಿಯೆನಿಸಿದರೆ ಅವನಿಗೆ ಯಾವ ಸುಖವೂ ಕನಸಿನಲ್ಲಿ ಕೂಡ ಸಿಕ್ಕಲಾರದು. ಆವರಿಂದ ಶಾಪಗ್ರಸ್ತನಾಗಿ ಅವನು ಅಂಧಂತಮಸ್ಸನ್ನು ಸೇರಿ ನಿತ್ಯ ದುಃಖಿಯಾಗುವದೇ ಸರಿ.

ಇನ್ನು ಮಾತೃಭಕ್ತಿಯನ್ನು ತೋರಿಸುವವೆಂದರೇನೆಂಬ ಪ್ರಶ್ನೆ ಬರುವದು. ಹೆತ್ತ ತಾಯಿಗೆ ತೋರಿಸುವ ಭಕ್ತಿಯ ವಿಚಾರವು ಇಲ್ಲಿ ಹೆಚ್ಚಾಗಿ

ಬೇಕಾಗಿಲ್ಲ. ಆಕೆ ಹೇಳಿದಂತೆ ಕೇಳುವದು, ಆಕೆಯ ಪರಿಚರ್ಯೆಯನ್ನು ಮಾಡುವದು, ಆಕೆಯ ಯೋಗಕ್ಷೇಮವನ್ನು ನೋಡಿಕೊಳ್ಳುವದು, ಆಕೆಯ ಸದ್ಗತಿಗೆ ಸಾಧನೆಯನ್ನು ಕಲ್ಪಿಸುವದು—ಹೀಗೆ ಎಷ್ಟೋ ನಡಿವಳಿಕೆಗಳು ಯೋಗ್ಯಮನಸ್ಕರಿಗೆ ತಮ್ಮಷ್ಟಕ್ಕೆ ತಾವೇ ಸ್ಫೂರ್ತಿಯಾಗುವವು. ಆದರೆ ಭೂಮಾತೆಗೆ ಭಕ್ತಿಯನ್ನು ತೋರಿಸುವದು ಹೇಗೆ? ಭೂಮಾತೆಯು ಕಣ್ಣೆದುರಿಗೆ ನಿಂತು ಮಾತಾಡುವವಳಲ್ಲ. ಇಂಥ ಸಂದರ್ಭದಲ್ಲಿ ಶಾಸ್ತ್ರದ ಕಡೆಗೆ ನಿಟ್ಟಿಸಿ ನೋಡಿದರೆ ಭೂಮಾತೆಗೆ ಏನು ಹಿತವೆಂಬುದು ನಮಗೆ ಅಲ್ಲಿ ತಿಳಿಯುವದು. ವಿಚಾರ ಮಾಡಿರಿ. ಪುರಾಣಗಳಲ್ಲಿ ಭೂದೇವಿಯು ಸಂತಾಪಗೊಂಡಿರುವ ಸ್ಥಲಗಳಲ್ಲೆಲ್ಲ ಅಧರ್ಮವೇ ಕಾರಣವಾಗಿರುವದು. ಭೂದೇವಿಯು ತನ್ನ ಮಕ್ಕಳಾದ ನಮ್ಮಿಂದ ಪ್ರಾಪಂಚಿಕವಾದ ಯಾವ ಸುಖಕ್ಕೂ ಸೆರಗೊಡ್ಡುವದಿಲ್ಲ. ನಮ್ಮ ಜನ್ಮಭೂಮಿಗೆ ಅಧಿದೇವತೆಯಾದ ಆಕೆಯು ನಮಗಿಂತ ಪವಿತ್ರವಾದ ದೇವತಾಜನ್ಮದಲ್ಲಿರುವಳು. ಇಂಥ ಆಕೆಗೆ ಪಂಚೇಂದ್ರಿಯಗಳ ಮುಂದೆ ಜೋಳಿಗೆಯನ್ನು ಹಿಡಿದುಕೊಂಡು "ಭಿಕ್ಷಾಂ ದೇಹಿ"ಯೆಂದು ಸುತ್ತಿಸುತ್ತಿ ಸೊರಗುತ್ತಿರುವ ಭಿಕಾರಿಗಳಾದ ನಾವು ಯಾವ ಪ್ರಾಪಂಚಿಕಸುಖವನ್ನು ಕೊಟ್ಟೇವು? ಇಷ್ಟೇ ಅಲ್ಲ. ಆಕೆ ಪ್ರಾಪಂಚಿಕಸುಖಕ್ಕೆ ಬಾಯಿನೀರು ಕರೆಯುವಷ್ಟು ಕ್ಷುದ್ರಳಲ್ಲ. ಆಕೆಯ ಸುಸ್ಥಿತಿಗೆ ಬೇಕಾದದ್ದು ಒಂದೇ ಒಂದು. ಅದೇನೆಂದರೆ ಧರ್ಮ. ಆಕೆಗೆ 'ಸರ್ವಂಸಹಾ' ಎಂದು ಹೆಸರಿರುವದು. ಎಲ್ಲವನ್ನೂ ಸಹಿಸುವಳೆಂದು ಅದರ ತಾತ್ಪರ್ಯ. ಆದ್ದರಿಂದಲೆ ಮಹಾಕವಿಗಳು ಸಹನಗುಣಕ್ಕೆ ಭೂದೇವಿಯನ್ನು ಹೋಲಿಸುವರು. ಆಕೆ ಕುಲಾಚಲಗಳನ್ನೂ ಸಪ್ತಸಮುದ್ರಗಳನ್ನೂ ಎಲ್ಲ ವಸ್ತುಗಳನ್ನೂ ಸಮತ್ವಬುದ್ಧಿಯಿಂದ ಹೊರುವಳಾದರೂ ಅಧರ್ಮಿಷ್ಠರಾದ ಜನರನ್ನು ಹೊರಲಾರಳು. ಈ ಅಭಿಪ್ರಾಯವನ್ನು ಕನಕದಾಸರು ತಮ್ಮದೊಂದು ಪದದಲ್ಲಿ ಪರಿಪುಷ್ಟಿಗೊಳಿಸಿ ಹೇಳಿರುವರು. ನೋಡಿರಿ.

ರಾಗ—ಮುಖಾರಿ: ಝಂಪೆತಾಳ

ಯಾಕೆ ನಡುಗಿದೆ ತಾಯೆ, ಭೂಮಿ, ನಡುರಾತ್ರಿಯೊಳು ।
ಶ್ರೀಕೇಶವನ ರಾಣಿ, ಪರಮಕಲ್ಯಾಣಿ, ॥ ಪ. ॥

ಗುರುಹಿರಿಯರನು ಕಂಡು ಮುರುಕಿಸುವ ಮೋರೆಯನು ।
ಅರೆಮತಿಗಳಿಂದಂಗ ಭಾಷೆಗಳ ಮಾಡಿ ॥
ಚರಣಕೆರಗದ ಮನುಜರಿರಬಾರದೆಂದೆನುತ ।
ಮರಮುರಿದು ಮರಗಿ ಸಾಯಲಿಯೆಂದು ನಡುಗಿದೆಯ? ॥ ೧ ॥
ಉತ್ತಮರ ಹೊಟ್ಟೆಯೊಳು ಬಗುಳ್ವ ಶ್ವಾನನು ಹುಟ್ಟಿ ।
ಹೆತ್ತವರ ನಿರ್ಬಂಧಕೊಳಗುಮಾಡಿ ॥
ಅತ್ತೆಮಾವನ ಕೀರ್ತಿ ಕೊಂಡಾಡದಧಮರನು ।
ಹೊತ್ತಿರುವವಾಗದೇ ಮತ್ತೆ ನಡುಗಿದೆಯ? ॥ ೨ ॥
ಕಳ್ಳತನವನು ಕಲಿತು ಕಾಲೋಚಿತವ ಕೇಳ್ದು ।
ಸುಳ್ಳು ಮಾತುಗಳಾಡಿ ಒಡಲ ಪೊರೆವಾ ॥
ತಳ್ಳುತ್ತ ತನ್ನೊಳಿರ್ಪವಗುಣಂಗಳ ಬಿಡದ ।
ಸುಳ್ಳರನು ಹೊರಲಾರೆನೆಂದು ನಡುಗಿದೆಯ? ॥ ೩ ॥
ಮುರಹರನ ಸ್ಮರಣೆಯನು ಮಾಡದೇ ಕಲಿಯುಗದಿ ।
ಪರಭಕ್ತಿಯಿಂದ ಶಾಸ್ತ್ರವನೋದದೆ ॥
ತರುಣಿಯರ ಮೇಲೆ ದೃಷ್ಟಿಯನಿಡುವ ಹೊಲೆಯರನು ।
ಹೊರಲಾರೆನೆಂದು ನೀನೊಲಿದು ನಡುಗಿದೆಯ? ॥ ೪ ॥
ಧರೆಯೊಳಗೆ ಕರ್ಮಿಗಳು ಹೆಚ್ಚಿ ಕವಿತೆಯ ಕಲಿತು ।
ನರಗುರಿಗಳೆಲ್ಲ ನಡೆಗೆಟ್ಟರೆಂದು ॥
ಗುರುವೆ, ಕೇಳಯ್ಯ ಕನಕಪ್ರಿಯಾ, ತಿರುಪತಿಯ ।
ಗಿರಿಯಾದಿ ಕೇಶವನೆ ಒಲಿದು ನಿಲ್ಲಿಸಿದಾ ॥ ೫ ॥

ಅಧರ್ಮಿಷ್ಠರ ಸ್ಥೂಲದೇಹವೇನೂ ಆಕೆಗೆ ಭಾರವಲ್ಲ. ಅವರ ಅಧರ್ಮವೇ ಆಕೆಗೆ ಭಾರ. ಆದ್ದರಿಂದ ನಾವು ಭೂಮಾತೆಯನ್ನು ತೃಪ್ತಿ ಪಡಿಸುವದೆಂದರೆ ಸ್ವಧರ್ಮದಲ್ಲಿ ನಿರತರಾಗಿರಬೇಕಾಯಿತು. ಆದ್ದರಿಂದ ಯಾರಾದರೂ ಹೊರಗಣ ವ್ಯವಹಾರವನ್ನೆಲ್ಲ ಬಿಟ್ಟು ಧರ್ಮದಲ್ಲಿಯೇ ತೇಲಿ ಮುಳುಗುತ್ತಿದ್ದರೂ ಅದೂ ಭೂಮಾತೆಯ ಸೇವೆಯೇ ಆದರೆ ಬಹುಮಕ್ಕಳಲ್ಲಿ ಒಬ್ಬ ಮಗನು ಮಾತ್ರ ಧರ್ಮಿಷ್ಠನಾಗಿ ತನ್ನಷ್ಟಕ್ಕೆ ತಾನಿದ್ದರೆ ತಾಯಿಗೆ ಉಳಿದ ಮಕ್ಕಳಿಂದಾಗುವ ಸಂತಾಪವೇನಾದರೂ

ಕಡಿಮೆಯಾಗುವದೆ? ಇಲ್ಲ. ಆದ್ದರಿಂದ ಮನುಷ್ಯನು ತಾನೂ ಧರ್ಮಿಷ್ಠ ನಾಗಿರಬೇಕು; ಇತರರನ್ನೂ ಧರ್ಮಮಾರ್ಗಕ್ಕೆ ತರಬೇಕು; ಅವಶ್ಯವಾದ ಸಂದರ್ಭದಲ್ಲಿ ತಮ್ಮ ಧಾರ್ಮಿಕಪ್ರವೃತ್ತಿಗೆ ಪ್ರತಿಬಂಧಕವಾಗಿರುವ ಹೊರ ಗಣ ಪರಿಸ್ಥಿತಿಯನ್ನು ಬದಿಗೊತ್ತಿ ಅನುಕೂಲಪರಿಸ್ಥಿತಿಯನ್ನು ಕಲ್ಪಿಸಿ ಕೊಳ್ಳುವದಕ್ಕೂ ತಕ್ಕಷ್ಟು ಹೆಣಗಬೇಕು. ಹೀಗೆ ಮಾಡುವದೇ ಭೂಮಾ ತೆಯ ಸೇವೆ.

ಸ್ವದೇಶಭಕ್ತಿಯೆಂದರೆ ಭೌತಿಕಸೌಕರ್ಯಗಳನ್ನೆಲ್ಲ ತಮ್ಮಧಿಕಾರ ಕ್ಕೊಳಪಡಿಸಿಕೊಳ್ಳುವದೆಂದು ಸರ್ವಸಾಮಾನ್ಯವಾದ ಜನತೆಯ ಅಭಿ ಪ್ರಾಯವಿರುವದು. ಬರೀ ಈ ಅಭಿಪ್ರಾಯದಿಂದ ಸ್ವರಾಜ್ಯಾರ್ಥವಾದ ಲೌಕಿಕಪ್ರಯತ್ನಗಳನ್ನು ಮುಂದುವರಿಸುವದಾದ ಪಕ್ಷದಲ್ಲಿ ಇದಕ್ಕೆ ಜಯವು ದೊರೆಯುವ ಸಂಭವವು ಕಡಿಮೆ. ಏಕೆಂದರೆ: ಭೂಮಾತೆಯೆಂದರೆ ನಮ್ಮೆದುರಿಗೆ ಕಾಣುವ ಕಲ್ಲುಮಣ್ಣಲ್ಲವೆಂದು ಯಾರಿಗೂ ಹೇಳಬೇಕಾಗಿಲ್ಲ. ಆ ಕಲ್ಲುಮಣ್ಣನ್ನು ಯಾರೂ ಎಲ್ಲಿಗೂ ಹೊತ್ತುಕೊಂಡು ಹೋಗುವದೂ ಇಲ್ಲ; ಯಾರೂ ಅವರ ಮೇಲೆ ಅತ್ಯಾಚಾರವನ್ನು ಮಾಡುವದೂ ಇಲ್ಲ. ಪುರಾಣಕಾಲದ ಹಿರಣ್ಯಾಕ್ಷನಂತೆ ನಮ್ಮ ಭೂಮಿಯನ್ನು ಚಾಪೆಯ ಹಾಗೆ ಸುರುಳಿಯನ್ನು ಸುತ್ತಿ ಸಮುದ್ರದಾಚೆಗೆ ಸಾಗಿಸಿಕೊಂಡು ಹೋದ ಸಂದರ್ಭದಲ್ಲಿಯೂ ಅದನ್ನು ಮತ್ತೆ ತಿರುಗಿಸಿಕೊಂಡು ಬರುವದಕ್ಕೆ ಕೂರ್ಮಾವತಾರದಂಥ ಸಾಕ್ಷಾತ್ಪರಮಾತ್ಮನ ಅವತಾರವಾಗಬೇಕೇ ಹೊರತು ಅದು ಮನುಷ್ಯಮಾತ್ರರಿಗೆ ಶಕ್ಯವಲ್ಲ. ಭೂಮಾತೆಯೆಂದರೆ ಭೂಮಿಯ ಅಭಿಮಾನದೇವತೆ. ದೇವತೆಯೆಂಬುದರಿಂದಲೇ ಆಕೆ ಐಹಿಕ ಸುಖಾಭಿಲಾಷೆಯನ್ನು ದಾಟಿದವಳೆಂದು ವ್ಯಕ್ತವಾಗುತ್ತದೆ. ಏಕೆಂದರೆ: ದೇವತ್ವವು ಮನುಷ್ಯತ್ವದ ಮೇಲಿನ ಪದವಿ. ಒಂದು ಪಕ್ಷ ಉಳಿದ ದೇಶಗಳ ಅಭಿಮಾನದೇವತೆಯ ವಿಷಯದಲ್ಲಿ ನಮಗೆ ಆ ಸಂಶಯವು ಬಂದರೂ ಭರತಖಂಡದ ಅಭಿಮಾನದೇವತೆಯ ವಿಷಯದಲ್ಲಿ ಆ ಸಂದೇಹ ವಿಲ್ಲ. ಏಕೆಂದರೆ: ಭರತಖಂಡದ ಸ್ಥೂಲವಾದ ಭೂಮಿಯ ಗುಣವೇ ವೈರಾಗ್ಯವಿಶೇಷದಿಂದ ಕೂಡಿರುವದು. ಭರತಖಂಡದ ಅನ್ನದ ಪ್ರತಿ ಯೊಂದು ಪರಮಾಣುವೂ ವೈರಾಗ್ಯದ ಅಂಕುರವನ್ನೇ ಉಂಟುಮಾಡ

ತಕ್ಕದ್ದಾಗಿರುವದು. ಆದ್ದರಿಂದ ಭರತಭೂಮಾತೆಗೆ ಬರೀ ಭೌತಿಕ ಸೌಕರ್ಯಗಳ ಅಧಿಕಾರಪಲ್ಲಟದಿಂದ ಸಮಾಧಾನವಾಗಲಾರದು. ತನಗೆ ಬಹುಕಾಲದಿಂದ ಒಗ್ಗಿ ಬಂದಿರುವ ಸ್ವಧರ್ಮಾಚರಣೆಯೆ ಆಕೆಯ ಜೀವನಸರ್ವಸ್ವ. ಇದರಿಂದ ನಾವು ಎಷ್ಟೆಷ್ಟು ಸ್ವಧರ್ಮನಿರತರಾಗು ವೆವೊ ಆಕೆ ಅಷ್ಟಷ್ಟು ಹುರಿದುಂಬಿಕೊಳ್ಳುವಳು; ನಾವು ಎಷ್ಟೆಷ್ಟು ಅಧರ್ಮ ನಿರತರಾಗುವೆವೊ ಆಕೆ ಅಷ್ಟಷ್ಟು ಸೊರಗುವಳು. ಆಕೆಯ ಸುಸ್ಥಿತಿಗೂ ನಮ್ಮ ಸ್ವಧರ್ಮಾಚರಣೆಗೂ ಗಂಟು. ಆದ್ದರಿಂದ ಒಂದುಪಕ್ಷ ಲೌಕಿಕಪ್ರಯತ್ನ ಗಳಿಂದ ಭೌತಿಕಸೌಕರ್ಯಗಳ ಮೂಲಸೂತ್ರವನ್ನು ಸಂಪಾದಿಸಿದರೂ ಅವು ಭರತಭೂಮಾತೆಯ ಸಮಾಧಾನಕ್ಕೇನೂ ಕಾರಣವಾಗಲರಿಯದು. ಆದ್ದ ರಿಂದ ಬರೀ ಭೌತಿಕಸೌಕರ್ಯಗಳನ್ನು ಸಂಪಾದಿಸುವದು ಸ್ವದೇಶಭಕ್ತಿಯೆನಿ ಸಲಾರದು; ನಿಜವಾಗಿ ಸ್ವದೇಶಭಕ್ತಿಯನ್ನು ಮಾಡಬೇಕೆನ್ನುವವರು ಸ್ವಧ ರ್ಮೋದ್ಧಾರಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಅದಕ್ಕೆ ಅಂಗವಾಗಿ ಲೌಕಿಕಸೌಕರ್ಯಗಳ ಮೇಲಿನ ಆಳಿಕೆಯನ್ನು ಬಯಸುವವರಾಗಬೇಕು.

ಲೋಕದಲ್ಲಿ ಜನರು ಬರೀ ಐಹಿಕಾರ್ಥಗಳ ಬಾಯಾರಿಕೆಯನ್ನು ಹುಟ್ಟಿಸಿ ಮನಸ್ಸಿನಲ್ಲಿ ಕಲಕಲವನ್ನೆಬ್ಬಿಸುವವರನ್ನು ಒಳ್ಳೇ ದೇಶಭಕ್ತ ರೆಂದು ಆದರಿಸುತ್ತಾರೆ; ಧರ್ಮವೇ ಸರ್ವಸ್ವವೆಂದು ಭಾವಿಸಿ ತನ್ನಷ್ಟಕ್ಕೆ ತಾನು ತನ್ನ ಮನಸ್ಸಿನ ಸಮಾಧಾನವನ್ನು ಕಾದುಕೊಂಡು ತನ್ನ ಉನ್ನತಿ ಯನ್ನು ತಾನು ಸಾಧಿಸಿಕೊಳ್ಳುವವನನ್ನು ದೇಶಾಭಿಮಾನವಿಲ್ಲದ ವಜ್ರ ಹೃದಯನೆಂದು ಕಡೆಗಣ್ಣಿನಿಂದ ನೋಡುತ್ತಾರೆ. ಇದು ಸ್ವದೇಶಭಕ್ತಿಯ ನಿಶ್ಚಯಾರ್ಥವನ್ನು ತಿಳಿಯದ ಅವಿವೇಕಿಗಳ ಅಭಿಪ್ರಾಯ. ಏಕೆಂದರೆ: ಮೇಲಿನ ಇಬ್ಬರಲ್ಲಿ ಎರಡನೆಯವನೇ ನಿಜವಾದ ಸ್ವದೇಶಭಕ್ತನು. ಅವನು ಇತರರ ಉನ್ನತಿಯ ಗೋಜಿಗೆ ಬೀಳದಿದ್ದರೂ ತನ ಉನ್ನತಿಯನ್ನಾದರೂ ತಾನು ಮಾಡಿಕೊಳ್ಳುತ್ತಿರುವನು. ಇದೂ ಸ್ವದೇಶಭಕ್ತಿಯೇ. ಏಕೆಂದರೆ: ಸ್ವಧರ್ಮವನ್ನು ಎಷ್ಟೆಷ್ಟು ಊರ್ಜಿತಗೊಳಿಸಿದರೂ ಅಷ್ಟಷ್ಟು ಸ್ವದೇಶ ಭಕ್ತಿಯೆ. 'ಅಳಿಲ ಭಕ್ತಿ ಮಳಲ ಸೇವೆ'ಯೆಂಬಂತೆ ಅವನು ತನ್ನೊಬ್ಬನ ಉನ್ನತಿಯನ್ನಾದರೂ ಮಾಡಿಕೊಂಡದ್ದರಿಂದ ಭರತಮಾತೆಗೆ ಒಂದಿಷ್ಟಾ ದರೂ ಸಮಾಧಾನಕ್ಕೆ ಕಾರಣವಾಗುವದು. ಇನ್ನೂ ಆಳವಾಗಿ ವಿಚಾರ

ಮಾಡಿ ನೋಡಿದರೆ ಅವನು ಇತರರ ಉನ್ನತಿಯ ಗೋಜನ್ನೂ ಕೊರಳಿಗೆ ಬೀಳಿಸಿಕೊಂಡವನೇ ಆಗಿರುವನು. ಹೇಗೆಂದರೆ: ಅವನು ಬಾಯಿಬಿಟ್ಟು ಇತರರಿಗೆ ಬುದ್ಧಿವಾದವನ್ನು ಹೇಳದಿದ್ದರೂ ಕಾರ್ಯರೂಪದಲ್ಲಿ ಜಗತ್ತಿಗೆ ಉಪದೇಶಕನೇ ಆಗಿರುವನು. ಇತರರು ಅವನನ್ನು ಅನುಕರಣಮಾಡದೆ ಹೋದರೆ ಅವನದೇನು ತಪ್ಪು? ಇರಲಿ. ಒಂದು ಪಕ್ಷ ಅವನನ್ನು ದೇಶ ಭಕ್ತನೆನ್ನದಿದ್ದರೂ ಚಿಂತೆ ಇಲ್ಲ; ಏಕೆಂದರೆ: ಅವನು ಇತರರ ಮುಂದೆ ಮಾತಿನ ಸುರಿಮಳೆಯನ್ನು ಸುರಿಸುವದಿಲ್ಲ; ಮೊದಲನೆಯವನನ್ನು ಮಾತ್ರ ಹೆಚ್ಚಿನ ದೇಶಭಕ್ತನೆನ್ನಕೂಡದು. ಅವನಿಂದ ಸ್ವರಾಜ್ಯಸಿದ್ಧಿಯಾಗ ಬಹುದು; ಆದರೆ ಅದು ನೆಲೆಯಾಗಿ ನಿಲ್ಲುವದಕ್ಕೆ ಸೋಮೇಶ್ವರ ಶತಕದಲ್ಲಿ—

ವೃತ್ತ॥ "ಮರಗಳ್ಪುಟ್ಟವೆ? ನಿಂದುದಿಲ್ಲ. ದಶಕಂಠಗಾಯಿತೇ ಲಂಕೆ? ಸಾ।
ಗರಮೊಳ್ಪೋಗದೆ ದ್ವಾರಕಾನಗರಿ? ಭಿಲ್ಲರ್ಗಾದುದೇ ಗೋಪುರಂ?॥
ದುರುಳರ್ಗಾದುವೆ ಷಟ್ಪುರಂ? ಮಧುರೆಯೊಳ್ಕಂಸಾಸುರಂ
ಬಾಳ್ದನೇ? ।
ಸಿರಿ ಬಂದುಂ ನಿಲೆ ಪುಣ್ಯವೈ! ಹರಹರಾ ಶ್ರೀಚೆನ್ನಸೋಮೇಶ್ವರಾ॥"

ಎಂದು ಹೇಳುವಂತೆ ಆತ್ಮೋನ್ನತಿಯು ಅಗತ್ಯವಾಗುವದು. ಏಕೆಂದರೆ: ಅವನ ಚಿಕಿತ್ಸೆಯು ಭೂಮಾತೆಯ ನಾಡಿಯನ್ನು ಹಿಡಿದು ಮಾಡಿದ್ದಲ್ಲ. ಲೌಕಿಕಸೌಕರ್ಯಗಳ ಬಾಯಾರಿಕೆಯನ್ನು ಹುಟ್ಟಿಸುವದರೊಂದಿಗೆ ಅದ ರಿಂದ ಸಾಧಿಸಬೇಕಾಗಿರುವ ಸ್ವಧರ್ಮವನ್ನು ಉಜ್ಜೀವನಗೊಳಿಸುವವರೇ ನಿಜವಾದ ದೇಶಭಕ್ತರು.

ಇತಿಹಾಸಕಾಲದಲ್ಲಿ ಆಗಿಹೋದ ದೇಶಭಕ್ತರ ನಾಮಮಾಲೆಯನ್ನು ನೆನೆಸಿಕೊಂಡರೆ ಧರ್ಮಸ್ಥಾಪಕರೇ ಮುಂದೆ ಬಂದು ನಿಲ್ಲುವರು. ಏಕೆಂದರೆ: ಧರ್ಮವೇ ಭರತಮಾತೆಯ ಚೈತನ್ಯ. ಸ್ವದೇಶಭಕ್ತಿಯು ಶಿವಾಜಿಯ ರಕ್ತದಲ್ಲಿ ಎಷ್ಟೇ ವೇಗದಿಂದ ಹರಿಯುತ್ತಿದ್ದರೂ ಅದಕ್ಕೆ ಬಣ್ಣ ಬಂದದ್ದು ಶ್ರೀಸಮರ್ಥರಾಮದಾಸರಿಂದ. ರಾಮದಾಸರು ಜನ ರಲ್ಲೆಲ್ಲ ಧರ್ಮಜಾಗೃತಿಯನ್ನುಂಟುಮಾಡದೆ ಇದ್ದರೆ ಮಹಮ್ಮದೀಯರ ತುಳಿದಾಟದಿಂದ ತಪ್ತಳಾಗಿದ್ದ ಭಾರತಮಾತೆಗೆ ಸಮಾಧಾನವಾಗುತ್ತಿರಲಿಲ್ಲ.

ಧರ್ಮಜಾಗೃತಿಯೂ ಬೇಕು; ಅದಕ್ಕೆ ಸಾಧನವಾಗಿ ಲೌಕಿಕಸೌಕರ್ಯ ಗಳೂ ಬೇಕು. ಇವೆರಡರಲ್ಲಿ ಮೊದಲನೆಯದು ಯಾವಾಗಲೂ ಮೊದ ಲನೆಯದೆ; ಎರಡನೆಯದು ಯಾವಾಗಲೂ ಎರಡನೆಯದೆ. ಔಷಧ ಮತ್ತು ಉಪಚಾರ ಎರಡೂ ಸೇರಿದರೆ ಶರೀರಕ್ಕೆ ಸುಸ್ಥಿತಿಯುಂಟಾಗುವಂತೆ ಧರ್ಮಜಾಗೃತಿ ಮತ್ತು ಲೌಕಿಕಸೌಕರ್ಯ—ಇವೆರಡರ ಸಮ್ಮೇಲನದಿಂದ ಭೂಮಾತೆಯ ಸುಸ್ಥಿತಿಯುಂಟಾಗುವದು. ಔಷಧವನ್ನು ಕೊಡದಿದ್ದರೆ ರೋಗದ ಬೀಜವಳಿಯುವದಿಲ್ಲ. ಉಪಚಾರವಿರದಿದ್ದರೆ ಔಷಧವು ನಾಟು ವದಿಲ್ಲ. ಇದರಂತೆಯೆ ಧರ್ಮಜಾಗೃತಿ ಇಲ್ಲದಿದ್ದರೆ ಭೂಮಾತೆಯ ಅಸ ಮಾಧಾನದ ಬೇರು ಕಡಿದುಹೋಗುವದಿಲ್ಲ. ಲೌಕಿಕಸೌಕರ್ಯಗಳಿಲ್ಲ ದಿದ್ದರೆ ಧರ್ಮಜಾಗೃತಿ ನಾಟುವದಿಲ್ಲ. ಅಂತು ಎರಡೂ ಬೇಕು.

ಶ್ರೀಮಾಧವಾಚಾರ್ಯರ ವಿದ್ಯಾಗುರುಗಳು ಅವರ ಅಧ್ಯಯನವನ್ನು ಮುಗಿಸಿ ಅವರನ್ನು ಮನೆಗೆ ಕಳುಹಿಸುವಾಗ ತಮಗೆ ಗುರುದಕ್ಷಿಣೆಯಾಗಿ ಸ್ವರಾಜ್ಯಸ್ಥಾಪನೆಯನ್ನು ಮಾಡೆಂದು ಹೇಳಿದರೆಂದು ವಾರ್ತೆ ಇದೆ. ಅವರು ಸ್ವಧರ್ಮಾಚರಣೆಯನ್ನೆ ಪ್ರಾಮುಖ್ಯವಾಗಿಟ್ಟುಕೊಂಡು ತಮ್ಮ ಆಯುಷ್ಕ್ರಮಣವನ್ನು ಮಾಡುವವರಾಗಿದ್ದರೂ ಆಗಿನ ಕಾಲದಲ್ಲಿ ಮಹ ಮ್ಮದೀಯರ ಹಾವಳಿಯಿಂದ ಧರ್ಮವೆಲ್ಲ ಧೂಳೆದ್ದು ಹೋಗಿದ್ದದ್ದನ್ನು ನೋಡಿ ಕನಿಕರದಿಂದ ಅವರಿಗೆ ಆಗ ಸ್ವರಾಜ್ಯಸ್ಥಾಪನೆಯ ಅವಶ್ಯಕತೆ ತೋರಿಬಂದಿತು. ಹೀಗೆ ಧರ್ಮಕ್ಕೆ ಎಷ್ಟೇ ಪ್ರಾಶಸ್ತ್ಯವಿದ್ದರೂ ಅದಕ್ಕೆ ಉಪಕಾರಕವಾದ ಲೌಕಿಕಸೌಕರ್ಯಗಳ ಸಾಧನೆಯೂ ಎಷ್ಟು ಮಾತ್ರವೂ ಉಪೇಕ್ಷಣೀಯವಲ್ಲ. ಆದ್ದರಿಂದ ದೇಶದ ಅಂತರಂಗವಾದ ಸ್ವಧರ್ಮೋ ದ್ಧಾರವೆಂಬ ಚಕ್ರಕ್ಕೆ ಬಲಗೈಯಿಂದಲೂ ಬಹಿರಂಗವಾದ ಲೌಕಿಕಾಧಿಕಾರ ವೆಂಬ ಚಕ್ರಕ್ಕೆ ಎಡಗೈಯಿಂದಲೂ ಚಲನೆಯನ್ನು ಕೊಡುತ್ತ ಆತ್ಮಶಕ್ತಿ ಯಿಂದ ಸ್ವರಾಜ್ಯರಥವನ್ನು ಮುಂದುವರಿಸಿ ಸ್ವದೇಶಭಕ್ತಿಯನ್ನು ತೋರಿಸು ವದಕ್ಕೆ ಪ್ರತಿಯೊಬ್ಬನೂ ಬದ್ಧನಾಗಿರುವದು ಒಂದು ಕರ್ತವ್ಯವೇ ಆಗಿದೆ.

# ಗೋಭಕ್ತಿ

ಹೆತ್ತ ತಾಯ ಮೇಲೆ ಇಡಬೇಕಾದ ಭಕ್ತಿಯ ವಿಚಾರವನ್ನೂ ಜನ್ಮ ಭೂಮಿಯ ಮೇಲೆ ಇಡಬೇಕಾದ ಭಕ್ತಿಯ ವಿಚಾರವನ್ನೂ ಹೇಳಿದ ಮೇಲೆ ಇತರ ಶೀಲಗಳ ವಿಚಾರವನ್ನೆತ್ತಿಕೊಳ್ಳುವದಕ್ಕೆ ಮೊದಲು ಗೋಭಕ್ತಿಯ ವಿಚಾರವನ್ನು ಹೇಳಬೇಕಾಗುತ್ತದೆ ದೂರದೃಷ್ಟಿಯನ್ನು ಪ್ರಸಾರಮಾಡಿ ನೋಡಿದರೆ ಗೋವಿನಲ್ಲಿ ಹೆತ್ತ ತಾಯ ಸ್ವರೂಪವೂ ಜನ್ಮಭೂಮಿಯ ಸ್ವರೂಪವೂ ಎರಡೂ ಸೇರಿ ಗೋಜಾತಿಯು ದ್ವಿಗುಣವಾದ ಭಕ್ತಿಗೆ ಪಾತ್ರವಾಗಿ ತೋರುತ್ತದೆ. ಹೇಗೆಂದರೆ: ತಾಯ ಮೊಲೆಯಲ್ಲಿ ಹಾಲು ಬರುವದಕ್ಕೆ ಮೊದಲೂ ಮತ್ತು ತಾಯ ಮೊಲೆಯಲ್ಲಿ ಹಾಲು ಕಡಿಮೆಯಾದಾಗಲೂ ಎಲ್ಲರೂ ಸಾಮಾನ್ಯವಾಗಿ ಮಗುವಿಗೆ ಹಸುವಿನ ಹಾಲನ್ನು ಹಾಕುತ್ತಾರೆ. ಈ ಸೃಷ್ಟಿಯಲ್ಲಿ ಉಳಿದ ಎಲ್ಲಾ ಪ್ರಾಣಿಗಳ ಹಾಲಿಗಿಂತಲೂ ಹಸುವಿನ ಹಾಲು ಮನುಷ್ಯಸ್ತ್ರೀಯರ ಹಾಲಿಗೆ ಬಹು ಹೆಚ್ಚಾಗಿ ಹೋಲುತ್ತದೆ. ಮನುಷ್ಯಸ್ತ್ರೀಯ ಮೊಲೆಯ ಹಾಲಿನಲ್ಲಿರುವ ಪೋಷಕವಸ್ತುಗಳೂ ಹಸುವಿನ ಹಾಲಿನಲ್ಲಿರುವ ಪೋಷಕವಸ್ತುಗಳೂ ಸ್ವಲ್ಪ ಹೆಚ್ಚು ಕಡಿಮೆ ಸಮ ಪ್ರಮಾಣದಲ್ಲಿರುತ್ತವೆ. ಇತರ ಪ್ರಾಣಿಗಳ ಹಾಲಿನಲ್ಲಿರುವ ಯಾವ ದೋಷವೂ ಹಸುವಿನ ಹಾಲಿನಲ್ಲಿಲ್ಲ. ಹೀಗೆ ಅದು ನಿರ್ದುಷ್ಟವಾಗಿ ಗುಣಪೂರ್ಣವಾಗಿ ತಾಯ ಮೊಲೆಯ ಹಾಲಿನ ಸಮಾನವಾಗಿರುವದರಿಂದ ಗೋವಿನಲ್ಲಿ ತಾಯ ಸ್ವರೂಪವು ಅಂತರ್ಭೂತವಾಗಿರುವದೆಂದು ತೋರುವದು. ಇನ್ನು ಭೂದೇವಿಯು ತನ್ನ ಹೊಟ್ಟೆಯ ಸಂಕಟವನ್ನು ಹೇಳಿಕೊಳ್ಳುವದಕ್ಕೆ ಬ್ರಹ್ಮನ ಬಳಿಗೆ ಹೋಗುವಾಗಲೆಲ್ಲ ಗೋರೂಪವನ್ನು ಧಾರಣೆಮಾಡಿರುವದು ಪುರಾಣಗಳಲ್ಲಿ ಕಂಡುಬರುವದರಿಂದ ಗೋರೂಪವೆಂದರೆ ಭೂದೇವತೆಯ ಚರರೂಪವಾಗಿರುವದೆಂದು ತಿಳಿಯಬೇಕಾಗುವದು. ಭೂದೇವತೆಯು ಧಾರಣೆ ಮಾಡಿದ ಗೋರೂಪವು ದೇವಲೋಕದ ಗೋರೂಪವೆಂದು ಹೇಳಿದರೂ ಅದೇ ಜಾತಿಯವುಗಳಾಗಿರುವ ಮನುಷ್ಯಲೋಕದ

ಗೋವುಗಳಲ್ಲಿ ಹೆತ್ತ ತಾಯ ಸ್ವರೂಪದ ಮತ್ತು ಜನ್ಮಭೂಮಿಯ ಸ್ವರೂಪದ ಅಂಶವು ಅಸ್ಪಷ್ಟವಾದರೂ ಇಳಿದು ಬಂದಿರುವದಕ್ಕೆ ಸಂಶಯವಿಲ್ಲ. ಆದ್ದರಿಂದ ಗೋಭಕ್ತಿಯ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಡುವದಗತ್ಯ.

ಗೋವುಗಳ ವಿಷಯದಲ್ಲಿ ನಮ್ಮ ಪೂರ್ವಜರಿಗೆ ಎಷ್ಟು ಪೂಜ್ಯಬುದ್ಧಿ ಇತ್ತೆಂಬುದನ್ನು ನಾವು ಮರೆಯಬಾರದು. ಒಮ್ಮೆ ದಿಲೀಪನೆಂಬ ಪ್ರಸಿದ್ಧನಾದ ಸೂರ್ಯವಂಶದ ರಾಜನು ದೇವಲೋಕದಿಂದ ಬರುತ್ತ ಅರಮನೆಯಲ್ಲಿ ತನ್ನ ದಾರಿಯನ್ನು ಕಾಯುತ್ತಿರುವ ಪಟ್ಟಮಹಿಷಿಯ ಮೇಲೆ ಲಕ್ಷ್ಯವಿದ್ದು ಅಲ್ಲಿ ಮೇಯುತ್ತಿದ್ದ ಕಾಮಧೇನುವಿಗೆ ನಮಸ್ಕಾರವನ್ನು ಮಾಡದೆ ಹೋದ ತಪ್ಪಿಗಾಗಿ ಆ ರಾಜನು ಸಂತತಿಯಾಗುವ ಯೋಗವನ್ನು ಕಳೆದುಕೊಂಡು ಎಷ್ಟೋ ಕಾಲ ಕಣ್ಣೀರು ಸುರಿಸಬೇಕಾಯಿತು ಕೊನೆಗೆ ಆ ಶಾಪವಿಮೋಚನೆಯಾಗಬೇಕಾದರೆ ಆ ಗೋವಿಗೇ ಶರಣು ಹೋಗಬೇಕೆಂದು ಕುಲಗುರುಗಳಾದ ವಸಿಷ್ಠರು ಜ್ಞಾನದೃಷ್ಟಿಯಿಂದ ತಿಳಿದು ಹೇಳಿದ ಮೇಲೆ ದಿಲೀಪರಾಜನು ತನ್ನ ಛತ್ರಚಾಮರಾದಿ ವೈಭವಗಳನ್ನೆಲ್ಲ ಹಿಂದಿಟ್ಟು ಕೇವಲ ದೀನನಾಗಿ ಎಷ್ಟೋ ಕಾಲ ಧೇನುವಿನ ಪರಿಚರ್ಯೆಯನ್ನು ಮಾಡಿ ಮತ್ತೆ ಸಂತತಿಯನ್ನು ಪಡೆದನೆಂದು ಕಥೆಯಿದೆ. ದಿಲೀಪನು ಧೇನುವಿನ ಮೇಲೆ ಇಟ್ಟಿದ್ದ ಭಕ್ತಿಯ ಸ್ವರೂಪವನ್ನು ಕೂಡ ನಾವು ಮನಸ್ಸಿನಲ್ಲಿ ಮೂಡಿಸಿ ಇಟ್ಟುಕೊಳ್ಳಬೇಕಾಗಿದೆ. ಅವನು ಆ ಧೇನುವನ್ನು ಹಿಮಾಲಯದ ತಪ್ಪಲಲ್ಲಿ ಮೇಯಿಸುತ್ತಿದ್ದಾಗ ಒಂದು ಭಯಂಕರವಾದ ಸಿಂಹವು ಗರ್ಜಿಸುತ್ತ ಬಂದು ಧೇನುವಿಗೆ ಬಾಯನ್ನು ಹಾಕಿತು. ಧೇನುವು ದೀನವದನದಿಂದ ದಿಲೀಪನನ್ನು ನೋಡಲು ದಿಲೀಪನು ಸಿಂಹದ ಆಹಾರಕ್ಕೆ ತನ್ನ ದೇಹವನ್ನು ಕೊಟ್ಟು ಧೇನುವನ್ನುಳಿಸುವ ಯತ್ನವನ್ನು ಮಾಡಿದನೆಂದು ಅವನನ್ನು ಹೊಗಳುತ್ತಾರೆ. ದಿಲೀಪನಿಗೆ ನಿಜವಾಗಿ ಧೇನುವಿನ ಮೇಲೆ ಪೂಜ್ಯಬುದ್ಧಿ ಇದ್ದದ್ದರಿಂದ ಅವನು ತನ್ನ ಪ್ರಾಣವನ್ನಾದರೂ ಕೊಟ್ಟು ಧೇನುವನ್ನುಳಿಸುವ ಯತ್ನವನ್ನು ಮಾಡಿದನು. ಧರ್ಮರಾಯನು ಸಾಯಂಕಾಲವಾದ ಮೇಲೆ ಕರುಗಳು ತಮ್ಮನ್ನು ಹಡೆದ ಹಸುಗಳ ಮೊಲೆಯುಂಡ ಮೇಲೆ ಮಾತ್ರ ಭೋಜನ ಮಾಡುತ್ತಿದ್ದನೆಂದು ಹೇಳುತ್ತಾರೆ. ಧರ್ಮಾಭಿಮಾನಿಗಳಾದ ಇಂಥ ಪೂರ್ವಜರ

ಪರಂಪರೆಯವರಾದ ನಾವು ಈ ವಿಷಯವನ್ನು ಉಪೇಕ್ಷೆಮಾಡುವದು ಹೇಗೆ ಯೋಗ್ಯವೆನಿಸೀತು? ಪೂರ್ವಜರ ತೃಪ್ತಿಗಾಗಿ ನಾವು ಶ್ರಾದ್ಧ ಮೊದಲಾದವುಗಳನ್ನು ಮಾಡುತ್ತೇವಲ್ಲ! ಅವರು ಪರಮಪೂಜ್ಯವೆಂದು ಭಾವಿಸಿದ್ದ ಗೋವುಗಳನ್ನು ನಾವು ಕಣ್ಣೆತ್ತಿ ನೋಡದೆ ಬರೀ ಸಮಾಜದ ನಿಯಮವನ್ನು ಕಾಪಾಡುವ ಶ್ರಾದ್ಧಗಳನ್ನೆಷ್ಟು ಮಾಡಿದರೇನು? ಅದು ಹಕ್ಕಿಯನ್ನು ಹಾರಬಿಟ್ಟು ಪಂಜರವನ್ನು ಜೋಪಾನಮಾಡಿದಂತೆ.

ಮನುಷ್ಯಲೋಕದ ಗೋವುಗಳಲ್ಲಾದರೂ ದೇವತ್ವದ ಅಂಶವು ಇದ್ದೇ ಇರುವದೆಂದು ಕಾಣುವದು. ಹೇಗೆಂದರೆ: ದೇವಲೋಕದಲ್ಲಿ ಅಮ ಕಾಮಧೇನು ಸಮಸ್ತ ಇಷ್ಟಾರ್ಥಗಳನ್ನು ಕೊಡತಕ್ಕದ್ದು. ನಮ್ಮ ಭರತಖಂಡಕ್ಕಂತೂ ಗೋವುಗಳು ಕಾಮಧೇನುಗಳೆ. ಏಕೆಂದರೆ: ಭರತಖಂಡದವರ ಸಮಸ್ತ ಇಷ್ಟಾರ್ಥಗಳೂ ಗೋವುಗಳಿಂದಲೆ ದೊರೆಯಬೇಕಾಗಿರುವದು. ಭರತಖಂಡವು ವಿಶೇಷವಾಗಿ ವ್ಯವಸಾಯಪ್ರಧಾನವಾದ ದೇಶ. ವ್ಯವಸಾಯಕ್ಕಾದರೂ ಭೂಮಿಯ ಹೊಟ್ಟೆಯೊಳಗಿನ ಕರುಳನ್ನೂ ಕೀಳುವಷ್ಟು ಒಳಗೆ ನೆಡುವ ವಿದೇಶದ ನೇಗಿಲುಗಳು ನಮ್ಮ ಭೂಮಿಗೆ ತಕ್ಕವುಗಳಲ್ಲ. ನಮ್ಮ ಭೂಮಿಯನ್ನು ಮೇಲೆ ಮೇಲೆ ಸ್ವಲ್ಪ ಕೆರೆದರೂ ಸಾಕು; ಅದು ಫಲಿಸುವದು. ದೇವರು ನಮ್ಮ ದೇಶದ ಮಣ್ಣನ್ನು ಸ್ವಭಾವವಾಗಿಯೇ ಈ ರೀತಿಯಾಗಿ ಮಾಡಿರುವನು. ನಿಸ್ಸಾರವಾದ ಪರದೇಶದ ಮಣ್ಣಿಗೆ ಆಳವಾದ ಉಳುಮೆ ಬೇಕಾಗಬಹುದು ಸಾರವತ್ತಾದ ನಮ್ಮ ಭೂಮಿಯನ್ನು ಸುಮ್ಮಸುಮ್ಮನೆ ಏಕೆ ಗಾಸಿಮಾಡಬೇಕು! ಉಗುರಿಂದಾಗುವ ಕೆಲಸಕ್ಕೆ ಕೊಡಲಿ ಏಕೆ? ನಮ್ಮ ದೇಶದ ಭೂಮಿಯನ್ನು ಉಳುವದಕ್ಕೆ ನಮ್ಮ ಬಡ ಎತ್ತುಗಳು ಎಳೆಯುವ ಮರದ ನೇಗಿಲು ಸಾಕು. ಹೀಗೆ ಉಳಬಲ್ಲ ಹೋರಿಗಳನ್ನು ಹಡೆಯುವದರ ಮೂಲಕ ಗೋವುಗಳು ನಮಗೆ ದವಸಧಾನ್ಯಗಳನ್ನು ಕೊಡುವದಿಷ್ಟೇ ಅಲ್ಲ; ನಮಗಾಗಿ ದವಸಧಾನ್ಯಗಳನ್ನು ಬೆಳೆದು ಶಕ್ತಿಹೀನತೆಯನ್ನು ಪಡೆದ ಭೂಮಿಗೆ ಗೊಬ್ಬರವನ್ನೂ ಕೊಟ್ಟು ಪುಷ್ಟಿಗೊಳಿಸುವವು. ಹಸುವಿನ ಸಗಣಿ, ಗಂಜಲ— ಮೊದಲಾದವುಗಳು ಕೂಡ ಒಳ್ಳೇ ವಿಷಕೃಮಿನಾಶಕಗಳೆಂದು ಪಾಶ್ಚಾತ್ಯ ಪಂಡಿತರೂ ಒಪ್ಪುವರು. ನಾವು ಒಪ್ಪುವದಂತು ನಮಗೆ ಸ್ವಭಾವವೇ

ಆಗಿದೆ. ನಮ್ಮ ಭಾವನೆ ಹಾಗಿರುವದರಿಂದಲೆ ಹಸುವಿನ ಹಾಲು, ಮೊಸರು, ತುಪ್ಪ, ಸಗಣಿ, ಗಂಜಲ—ಈ ಐದೂ ಸೇರಿ ಪಂಚಗವ್ಯವೆಂಬ ಹೆಸರಿನಿಂದ ಪ್ರಾಯಶ್ಚಿತ್ತಪಾನೀಯವಾಗಿರುವದು. ಇವು ಹೊರಗಣ ದೇಹವನ್ನು ಶುದ್ಧಿ ಮಾಡುವವೆಂದಿಷ್ಟೆ ಅಲ್ಲ; ನಮ್ಮ ಪಾಪಗಳನ್ನು ಪರಿಹಾರಮಾಡಿ ಮನಸ್ಸನ್ನು ಶುದ್ಧಿಮಾಡುವವೆಂದು ಕೂಡ ನಮ್ಮ ನಂಬಿಕೆ. ಯಾವದರ ದೇಹದಿಂದ ಹೊರಬಿದ್ದ ಪದಾರ್ಥಗಳು ನಮ್ಮ ಶರೀರವನ್ನೂ ಕೂಡ ಪವಿತ್ರವಾಗಿ ಮಾಡಬಲ್ಲವೋ ಅಂಥ ಗೋವುಗಳ ಮೇಲೆ ಭಕ್ತಿಯನ್ನು ತೋರಿಸದೆ ಇರುವದು ನಮ್ಮ ಅಧರ್ಮವಾಗುವದಲ್ಲವೆ? ಆ ಗೋವುಗಳು ನಮ್ಮ ಸಕಲೇಷ್ಟಗಳನ್ನೂ ಕೊಡುವದರಿಂದಲೂ ನಮ್ಮ ಪಾಪವನ್ನು ಪರಿಹಾರಮಾಡುವದರಿಂದಲೂ ಅವುಗಳಲ್ಲಿ ದೇವತ್ವವು ವ್ಯಕ್ತವಾಗುವದು.

ಇನ್ನೊಂದು ದೃಷ್ಟಿಯಿಂದ ವಿಚಾರಮಾಡಿದರೆ ಮಾತ್ರ ನಮ್ಮ ಗೋವುಗಳಲ್ಲಿ ಕಾಮಧೇನುತ್ವವು ಕಾಣದೆ ಹೋಗಬಹುದು. ಯಾವ ವಸ್ತುವನ್ನಾದರೂ ಎರಡು ಕಡೆಯಿಂದಲೂ ನೋಡಿದರೇನೆ ಅದರ ವಿಚಾರವು ಪೂರ್ಣವಾಗುವದರಿಂದ ಈಗ ಇನ್ನೊಂದು ದೃಷ್ಟಿಯಿಂದಲೂ ನೋಡಬೇಕಾಗಿರುವದು. ವಸಿಷ್ಠರಲ್ಲಿದ್ದ ಕಾಮಧೇನು ತನಗೆ ಅಪಚಾರ ಮಾಡುವದಕ್ಕೆ ಬಂದ ವಿಶ್ವಾಮಿತ್ರನನ್ನು ತನ್ನ ಹೂಂಕಾರಮಾತ್ರದಿಂದಲೇ ಸೇನಾಸಹಿತನಾಗಿ ದಿಕ್ಕುಗೆಡಿಸಿ ತನ್ನ ಪ್ರಭಾವವನ್ನು ಪ್ರಕಾಶಮಾಡಿತು. ನಮ್ಮ ಗೋವುಗಳಲ್ಲಿ ಆ ಸಾಮರ್ಥ್ಯವೇನೂ ಕಾಣಬರುವದಿಲ್ಲ. ಆದರೂ ಇದೇನೂ ಅವರ ಪೂಜ್ಯತೆಗೆ ಭಂಗಕಾರಿಯಲ್ಲ. ನಮ್ಮ ಪೂರ್ವಿಕರು ಹಿಂದಿನ ಕಾಲದಲ್ಲಿ ಧೇನುವಿನ ಮೇಲೆ ಪೂಜ್ಯಬುದ್ಧಿಯನ್ನಿಟ್ಟಿದ್ದದ್ದು ಅದರ ಭಯಂಕರವಾದ ಪ್ರತಾಪದ ಹೆದರಿಕೆಯಿಂದಲ್ಲ. ಹೆದರಿಕೆಗೆ ಉಪ್ಪು ಹಾಕುವದು ಭಕ್ತಿಯೆನಿಸಿಕೊಳ್ಳುವದಿಲ್ಲ. ಅಷ್ಟೇ ಅಲ್ಲ. ಹೆದರಿ ಭಕ್ತಿಯನ್ನು ತೋರಿಸುವದು ಆತ್ಮಶಕ್ತಿಗೆ ಘಾತಕವಾಗಿರುವದು. ನಮ್ಮ ಪೂರ್ವಿಕರು ಧೇನುವಿನಲ್ಲಿದ್ದ ಪಾವಿತ್ರ್ಯಗುಣವನ್ನು ನೋಡಿ ಪೂಜ್ಯಬುದ್ಧಿಯನ್ನಿಟ್ಟಿದ್ದರು. ಆ ಗುಣವು ಈಗಲೂ ಅಂಶರೂಪವಲ್ಲಿಯಾದರೂ ಕಂಡುಬರುವದು. ಹೀಗಿರುವಾಗ ಇದರ ಕಡೆಗೆ ಕಣ್ಣು ಹಾಕದೆ ಅದರ ಕೈ ನಮ್ಮ ಮೇಲೆ ಸಾಗಲಾರದೆಂಬದನ್ನು ಮುಂದು ಮಾಡಿಕೊಂಡು ಅದರ ಮೇಲಿನ ಪೂಜ್ಯಬುದ್ಧಿಯನ್ನು ತಗ್ಗಿಸುವದು ಮೂರ್ಖತನವೇ ಸರಿ.

ಗೋವುಗಳ ಮಲಮೂತ್ರಗಳ ಪವಿತ್ರತೆಯ ವಿಷಯದಲ್ಲಿ ಯಾರಾದರೂ ಹಿಂದುಮುಂದು ನೋಡಿದರೂ ಹಾಲಿನ ಶ್ರೇಷ್ಠತ್ವದ ವಿಷಯದಲ್ಲಿ ಎರಡನೆಯ ಮಾತಿಲ್ಲ. ಹಸುವಿನ ಹಾಲು, ಮೊಸರು, ತುಪ್ಪ—ಇವು ಭಗದ್ವಿಗ್ರಹದ ಅಭಿಷೇಕಕ್ಕೂ ಹೋಮಕ್ಕೂ ಪ್ರಶಸ್ತವಾಗಿರುವವು. ಈ ವೈದಿಕಧರ್ಮದ ಮಾತು ಹಾಗಿರಲಿ. ಪೂರ್ವಕಾಲದಲ್ಲಿ ಹಸುವಿನ ಹಾಲನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದದ್ದರಿಂದ ಮಹಾಮಹಾಬುದ್ಧಿಶಾಲಿಗಳಾಗಿ ಹೋದರು. ಹಸುವಿನ ಹಾಲು ಇವತ್ತಾದರೂ ಸಾತ್ತ್ವಿಕ ವೃತ್ತಿಯನ್ನು ಬೆಳೆಸುವಂಥದ್ದಾಗಿದೆ. ಈಚೀಚೆಗೆ ಪ್ರತಿಭಾಶಾಲಿಗಳಾದ ಪಂಡಿತರು ಹುಟ್ಟದೆ ಇರುವದಕ್ಕೂ ಜನರು ರಜೋಗುಣಪ್ರಧಾನರಾದದ್ದಕ್ಕೂ ಹಸುವಿನ ಹಾಲಿನ ಅಭಾವವೇ ಕಾರಣ. ಹೀಗೆ ಗೋವುಗಳೇ ನಮ್ಮ ದೇಶದ ಜೀವನಸರ್ವಸ್ವವಾದ್ದರಿಂದ ಪೂರ್ವಿಕರು ಗೋವರ್ಗವನ್ನು ಚೆನ್ನಾಗಿ ವೃದ್ಧಿಮಾಡಿದ್ದರು. ಗೋವುಗಳ ಅಭಿವೃದ್ಧಿಯ ಮೇಲೆ ದೇಶದ ಅಭಿವೃದ್ಧಿಯ ಲೆಕ್ಕವನ್ನು ಹಿಡಿಯುತ್ತಿದ್ದರು. ಗೋಸೇವೆಯು ನಮ್ಮ ಅವಶ್ಯಕರ್ತವ್ಯವೆಂಬುದನ್ನು ಉಪದೇಶಮಾಡುವದಕ್ಕಾಗಿಯೆ ಶ್ರೀಕೃಷ್ಣನು ಗೋಪಾಲಕನಾಗಿ ತನ್ನ ವ್ಯವಹಾರವನ್ನು ತೋರಿಸಿರುವನು. ಇಷ್ಟು ಗೋಸಮೃದ್ಧಿಯಿದ್ದ ದೇಶದಲ್ಲಿ ಈಗ ಹೇಗಿದೆ? ನಾಲ್ಕು ಕಡೆಗೂ ಕಣ್ಣುಹಾಕಿ ನೋಡಿರಿ. ಹಸುವಿನ ಹಾಲಂತು ಸ್ವಪ್ನಪ್ರಾಯವಾಗುತ್ತ ಬಂದಿದೆ. ಇಷ್ಟೇ ಅಲ್ಲ. ಎಲ್ಲ ಹಾಲಿಗೂ ಅಭಾವವೇ ಆಗುತ್ತ ಬರುತ್ತಿದೆ. ಅಲ್ಪಸ್ವಲ್ಪ ಸಿಕ್ಕುವವರಲ್ಲಿಯೂ ಎಷ್ಟೋ ಕಡೆ ಹಾಲಿನಿಂದಲೆ ಪರದೇಶೀಯರಿಗಾಗಿ ಬೆಣ್ಣೆಯನ್ನು ಕಡೆದು ತೆಗೆಯುಕೊಳ್ಳುವವರಿಂದ— ಮಕ್ಕಳಿಗೆ ಬೇಕೆಂದರೆ ಕೂಡ—ಶುದ್ಧವಾದ ಹಾಲಿಗೆ ಕೊರತೆ ಬಂದಿರುವದಲ್ಲ! ಯಾವ ದೇಶದಲ್ಲಿ ಜನ್ಮವೆತ್ತಿದ ಉಪಮನ್ಯು ತನ್ನ ತಪಃಪ್ರಭಾವದಿಂದ ಕ್ಷೀರಸಾಗರಕ್ಕೆ ಅಭಿಮಾನದೇವತೆಯಾದನೊ ಆ ದೇಶದಲ್ಲಿ ಮಕ್ಕಳು ಹಸಿವಾದಾಗ ಪರದೇಶದಿಂದ ಬಂದ ಘನೀಭೂತಕ್ಷೀರ (Condensed Milk)ದ ಡಬ್ಬಿಯ ಕಡೆಗೆ ಕೈಮಾಡುವ ಕಾಲ ಬಂದಿದೆಯಲ್ಲ! ಇದನ್ನು ವಿಚಾರಕ್ಕೆ ತೆಗೆಯುಕೊಳ್ಳದೆ ಹೋದರೆ ನಮ್ಮ ದೇಶವು ಹೇಗೆ ಅಭ್ಯುದಯವನ್ನು ಪಡೆದೀತು?

ಪೂರ್ವದಲ್ಲಿ ಪ್ರತಿಯೊಂದು ಮನೆಯಲ್ಲಿಯೂ ಆಕಳಿಲ್ಲದೆ ಇರಲಿಲ್ಲ; ಬೆಳಗಾಗುತ್ತಲೇ ಎದ್ದು ಯಾರೂ ಆಕಳ ದರ್ಶನವನ್ನು ಮಾಡದೆ ಇರುತ್ತಿರಲಿಲ್ಲ; ಊಟದ ಕಾಲದಲ್ಲಿ ಬಡವರಾದರೂ ಗೋಗ್ರಾಸವನ್ನು ತೆಗೆದಿಡದೆ ಇರುತ್ತಿರಲಿಲ್ಲ; ಗೋವು ಮನೆಯ ಬಾಗಿಲಿಗೆ ಬಂದರೆ ಧನಲಕ್ಷ್ಮಿಯೇ ಬಂದಳೆಂದು ಅದಕ್ಕೆ ಸತ್ಕಾರಮಾಡದೆ ಇರುತ್ತಿರಲಿಲ್ಲ. ನಮ್ಮ ಪೂರ್ವಿಕರು ಗೋವುಗಳಿಗಾಗಿ ಒಂದು ಪರ್ವವನ್ನೇ ಗೊತ್ತುಮಾಡಿ ಆ ದಿನ ಗೋಪೂಜೆಯನ್ನು ವಿಶೇಷವಾಗಿ ಮಾಡುವ ಪದ್ಧತಿಯನ್ನು ಹಾಕಿದರು. ನಮ್ಮ ಹಿರಿಯರಿಂದ ಇಷ್ಟು ಪೂಜ್ಯತೆಯನ್ನು ಹೊಂದಿದ ಗೋವರ್ಗವು ಈಗ ಎಷ್ಟು ಶೋಚನೀಯವಾದ ಸ್ಥಿತಿಗೆ ಬಂದಿದೆ! ಗೋವುಗಳಿಗೆ ಆಶ್ರಯದಾತರು ಕಟುಕರ ಹೊರತು ದಿಕ್ಕಿಲ್ಲವಾಗಿದೆ. ಕೆಲವು ಮನೆಗಳಲ್ಲಿ ಗೋವುಗಳಿದ್ದರೂ ಅವುಗಳಿಗೆ ತಕ್ಕ ಉಪಚಾರದ ಅಭಾವದಿಂದ ಅವು ಹಾಗೂ ಹೀಗೂ ಆಯುಷ್ಕ್ರಮಣವನ್ನು ಮಾಡುತ್ತಿವೆ. ಯಾವ ದೇಶದಲ್ಲಿ ಗೋವುಗಳ ಮೇವಿಗಾಗಿ ವಿಸ್ತಾರವಾದ ಹುಲ್ಲುಗಾವಲು ಮೀಸಲಾಗಿ ಉಳಿದಿರುತ್ತಿತ್ತೊ ಆ ದೇಶದಲ್ಲಿ ಆ ಭೂಮಿಗಳೆಲ್ಲ ಜನರ ಧನಾರ್ಜನೆಗೆ ಉಪಕರಣಗಳಾಗಿ ಹೋಗಿ ಗೋಗಳ ಮೂಗಿಗೆ ಬುಟ್ಟಿಯನ್ನು ಕಟ್ಟಿದ ಹಾಗಾಗಿದೆ. ಯಾವ ದೇಶದಲ್ಲಿ ಗೋವಿನ ಅಂಗದಲ್ಲಿ ಸಮಸ್ತದೇವತೆಗಳೂ ವಾಸಿಸುವರೆಂಬ ಭಾವನೆ ಇದೆಯೊ ಮತ್ತು ಈಯುವ ಗೋವಿನ ಪ್ರದಕ್ಷಿಣೆಯಿಂದ ಭೂಪ್ರದಕ್ಷಿಣೆಯ ಫಲವು ದೊರೆಯುವದೆಂಬ ಶ್ರದ್ಧೆ ಇದೆಯೊ ಅಂಥ ದೇಶದಲ್ಲಿ ಆ ಗೋವುಗಳು ತಮ್ಮನ್ನು ಆದರಿಸುವವರನ್ನು ಕಾಣದೆ ಕಟುಕರ ಮನೆಯ ದಾರಿಯನ್ನೂ ತಮ್ಮನ್ನು ಭಕ್ಷ್ಯವಾಗಿ ನಿರೀಕ್ಷಿಸುತ್ತಿರುವ ಪರದೇಶದ ದಾರಿಯನ್ನೂ ಹಿಡಿಯುವದನ್ನು ನೋಡಿದರೂ ನಮ್ಮ ಹೃದಯದಲ್ಲಿ ತಳಮಳವು ಹುಟ್ಟದ ಮೇಲೆ ನಾವು ನಮ್ಮ ಪೂರ್ವಜರ ಪರಂಪರೆಯವರೆಂದು ಏತರ ಮೇಲಿಂದ ತಿಳಿಯಬೇಕು? ಯಾವ ಕೋಡುಗಳ ಮಧ್ಯಭಾಗವು ನಮ್ಮ ಇಷ್ಟಾರ್ಥಸಿದ್ಧಿಯ ಹೆಬ್ಬಾಗಿಲೆಂದು ನಮ್ಮ ಪೂರ್ವದ ಕವಿಗಳು ಬಾಯಿತುಂಬ ಹೊಗಳಿದ್ದರೊ ಆ ಕೋಡುಗಳನ್ನು ಹಿಡಿದು ನಿರ್ದಯದಿಂದ ವಧ್ಯಸ್ಥಾನಕ್ಕೆಳೆಯುವದು ನಮ್ಮ ತಾಯ ಮುಂದಲೆಯನ್ನು ಹಿಡಿದೆಳೆದಂತೆ ಭಾಸವಾಗದೆ ಹೋದ ಮೇಲೆ ನಮ್ಮ

ಆತ್ಮಶಕ್ತಿಯು ಎಷ್ಟು ಹಳಸಿ ಹೋಗಿರಬಹುದು! ನಿಜವಾಗಿ ಗೋವುಗಳ ಮರಣದ ಮೂಲಕವಾಗಿ ನಮ್ಮ ಸರ್ವಸ್ವದ ಮರಣವೂ ಆಗಿರುವದು. ಜನನಿಯ ಸ್ವರೂಪವೂ ಜನ್ಮಭೂಮಿಯ ಸ್ವರೂಪವೂ ಒಟ್ಟುಗೂಡಿರುವ ಗೋಮಾತೆಯ ವಿಯೋಗದಿಂದ ನಾವು ತಾಯಿ ಸತ್ತ ಮಕ್ಕಳಂತೆ ಅನಾಥರಾಗಿರುವೆವು. ಗೋವರ್ಗದ ಹಾನಿಯು ನಮ್ಮ ಅಭ್ಯುದಯವನ್ನು ಹಾಳು ಮಾಡಿರುವದಲ್ಲದೆ ನಿಃಶ್ರೇಯಸವನ್ನು ಕೂಡ ಹಿಂಪಕ್ಕೆ ಹಾಕಿರುವದು. ಹೊಟ್ಟೆಗಾಗಿ ಭೂಮಿಯು ಬೇಕಾದಷ್ಟು ಆಹಾರದ್ರವ್ಯಗಳನ್ನು ಕೊಡುತ್ತಿರುವಾಗ ಜನರು ಮಾಂಸವನ್ನೇ ಏಕೆ ಬಯಸಬೇಕು? ಅಥವಾ ವಧ್ಯಮೃಗಗಳನೇಕವಿರುವಾಗ ಮಾಂಸಾಹಾರಿಗಳ ವಕ್ರದೃಷ್ಟಿಯು ಗೋವುಗಳ ಮೇಲೆಯೇ ಪ್ರಸರಿಸುವದು ಭಾರತೀಯರ ದುರ್ದೈವವೇ ಸರಿ.

ಪುರಾಣಕಾಲದ ರಾಜರುಗಳನ್ನು ಬಿಟ್ಟರೆ ಗೋಭಕ್ತಿಯನ್ನು ತೋರಿಸಿದ ರಾಜರಲ್ಲಿ ಶಿವಾಜಿಯು ಅಗ್ರಗಣ್ಯನಾಗಿರುವನು. ಶಿವಾಜಿಯ ತಾಯಿಯು ಪ್ರತಿದಿನವೂ ಗೋಪೂಜೆಯನ್ನು ಮಾಡುತ್ತಿದ್ದದ್ದನ್ನು ನೋಡಿದ್ದರಿಂದ ಶಿವಾಜಿಯ ಮನಸ್ಸಿನಲ್ಲಿ ಗೋಭಕ್ತಿಯುಂಟಾಗಿ ಅದು ಅವನಲ್ಲಿ ಸ್ವಾಭಾವಿಕವಾಗಿದ್ದ ಧಾರ್ಮಿಕಬುದ್ಧಿಯ ಉತ್ತೇಜನೆಯಿಂದ ಪರಿಪುಷ್ಟಿಗೊಂಡಿತು. ಚಿಕ್ಕಂದಿನಲ್ಲಿ ಚಿಗಿತುಕೊಂಡ ಈ ಗೋಪ್ರೇಮವು ಎಷ್ಟು ಸಜೀವವಾಗಿತ್ತೆಂಬದನ್ನು ನೋಡಿರಿ. ಶಿವಾಜಿಯು ವಿಜಾಪುರದಲ್ಲಿದ್ದಾಗ ಒಮ್ಮೆ ಒಬ್ಬ ಕಟುಕರವನು ಗೋವಿನ ಮೇಲೆ ತನ್ನ ಕತ್ತಿಯನ್ನೆತ್ತಿದ್ದು ದೂರದಿಂದ ಅವನಿಗೆ ಕಂಡುಬಂತು. ಒಡನೆ ಅವನು ಸಿಂಹದಂತೆ ಹಾರಿ ಬಂದು ಕಟುಕನ ಕೈಹಿಡಿದು ಗೋವನ್ನು ಉಳಿಸಿದನು. ಒಮ್ಮೆ ಗೋವನ್ನು ಉಳಿಸುವ ಸಡಗರವಲ್ಲ. ಅದರ ಮೇಲೆತ್ತಿದ ಕತ್ತಿಯನ್ನು ಕಟುಕನ ಕೊರಳಿಗೇ ತಿರುಗಿಸಿದನು. ಇಷ್ಟು ದೂರ ಹೋಗಬಾರದೆಂದು ತಂದೆತಾಯಿಗಳು ಹೇಳಲು ಗೋವಧೆಯು ತನಗೆ ಎಷ್ಟು ಮಾತ್ರವೂ ಸಹ್ಯವಲ್ಲವೆಂದೂ ಗೋವಿಗೆ ಉಪಹತಿಯೊದಗುವದನ್ನು ನೋಡಿದರೆ ತನಗೆ ಎಚ್ಚರ ತಪ್ಪುವದೆಂದೂ ಶಿವಾಜಿಯು ಹೇಳಿದನು. ಇದನ್ನು ಕೇಳಿದ ಅಲ್ಲಿಯ ಸುಲ್ತಾನನು ಜನರ ಮನಸ್ಸಿಗೆ ಇಷ್ಟು ನೋವಾಗುತ್ತಿದ್ದರೆ ತನ್ನ ದೇಶದಲ್ಲಿ ಗೋವಧೆಯೇ ಆಗಬಾರದೆಂದು ಶಾಸನವನ್ನು ಮಾಡಿದನು.

ಇಲ್ಲಿ ತಿಳಿಯಬೇಕಾದದ್ದೇನೆಂದರೆ: ಗೋವುಗಳ ಮರಣಕ್ಕೆ ಮಾಂಸಾಹಾರಿಗಳ ಬಯಕೆಯೇ ಮುಖ್ಯ ಕಾರಣವಲ್ಲ; ಅವುಗಳ ವಿಷಯದಲ್ಲಿ ನಮಗೆ ಅನಾದರಬುದ್ಧಿಯುಂಟಾಗಿರುವದೇ ಕಾರಣ. ಇತರರನ್ನು ಬಯ್ದು ಫಲವೇನು? ನಮ್ಮನ್ನು ನಾವು ತಿದ್ದಿಕೊಂಡರೆ ಇತರರು ತಮ್ಮನ್ನು ತಾವೇ ತಿದ್ದಿಕೊಳ್ಳುವರು. ಆದ್ದರಿಂದ ಪ್ರತಿಗೃಹದಲ್ಲಿಯೂ ಪ್ರತಿದಿನವೂ ಗೋಸೇವೆ ನಡೆಯುವ ಕಾಲವು ಒದಗಿ ಗೋವರ್ಗವು ನಿರ್ಭಯವಾಗಿ ವೃದ್ಧಿಯಾದ ಹೊರತು ನಮ್ಮ ದೇಶಕ್ಕೆ ಉಳಿಗಾಲವಿಲ್ಲ. ಇದನ್ನರಿತ ಪ್ರತಿಯೊಬ್ಬರೂ ಗೋಭಕ್ತಿಯನ್ನು ಬೆಳೆಸಿಕೊಳ್ಳುವ ಯತ್ನವನ್ನು ಮಾಡಬೇಕು.

# ಮಾತೃಭಾಷಾಭಕ್ತಿ

ಶಿಶುವಿಗೆ ಭೂಪತನವಾಗುತ್ತಲೆ ಪ್ರಥಮಪರಿಚಯವಾಗುವ ಪವಿತ್ರವಸ್ತು ತಾಯಿಯೆಂಬ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಮೊದಲು ಮಾತೃಭಕ್ತಿಯನ್ನು ಹೇಳಿದಾಯಿತು. ಮತ್ತು ಆ ಮಾತೃವಿನ ಪ್ರಕಾರಾಂತರಗಳಾಗಿರುವ ಸ್ವದೇಶಭಕ್ತಿಯನ್ನೂ ಗೋಭಕ್ತಿಯನ್ನೂ ನೆನಪುಗೊಟ್ಟದ್ದಾಯಿತು. ಹೀಗಾಗಿ ಮೇಲಿನ ಮೂರು ಪ್ರಕರಣಗಳೂ ಬೇರೆ ಬೇರೆ ಮಾತುಗಳಿಂದ ಮಾತೃಭಕ್ತಿಯೆಂಬ ಒಂದೇ ವಿಷಯದ ವ್ಯಾಖ್ಯಾನಗಳಾಗಿರುವವು. ಆದರೂ ಅದೇ ವಿಷಯದಲ್ಲಿ ಇನ್ನೊಂದು ಪ್ರಕರಣವನ್ನು ಹೇಳದೆ ಆ ವಿಷಯವನ್ನು ಕೈಬಿಡುವದಕ್ಕೆ ಬರುವ ಹಾಗಿಲ್ಲ. ಅದು ಯಾವದೆಂದರೆ: ಮಾತೃಭಾಷಾಭಕ್ತಿ. ಮನುಷ್ಯನಿಗೆ ಮೊದಲು ತಾಯಿಯ ಪರಿಚಯ, ಆಮೇಲೆ ತಾಯ ಧ್ವನಿಯ ಪರಿಚಯ, ಅದಾದ ಮೇಲೆ ತಾಯ ಭಾಷೆಯ ಪರಿಚಯ. ಎಷ್ಟು ಅಳುತ್ತಿರುವ ಮಕ್ಕಳಾದರೂ ತಾಯ ಧ್ವನಿಯನ್ನು ಕೇಳಿದೊಡನೆ ಸುಮ್ಮನಾಗುವದನ್ನು ನಾವು ಎಷ್ಟೋ

ವೇಳೆ ನೋಡುತ್ತೇವೆ. ಪ್ರಪಂಚದಲ್ಲಿ ಬೆಲೆಯುಳ್ಳ ಇತರ ಎಲ್ಲ ವಸ್ತುಗಳಿಗಿಂತಲೂ ತಾಯ ಧ್ವನಿಗೆ ಅಷ್ಟು ಬೆಲೆ. ಉಳಿದ ಎಲ್ಲ ವಸ್ತುಗಳಿಂದ ಆಗುವ ಸುಖಕ್ಕಿಂತಲೂ ತಾಯ ಧ್ವನಿಯಿಂದ ಆಗುವ ಸುಖವು ಹೆಚ್ಚಿನದು. ಇದು ನಮ್ಮ ಅನುಭವದಲ್ಲಿದೆ. ಇದನ್ನೇ ಇನ್ನಷ್ಟು ಮುಂದುವರಿಸಿ ಮಾತೃಭಾಷೆಗೆ ಹಚ್ಚಬೇಕು. ಏಕೆಂದರೆ: ಮಾತೃಧ್ವನಿಯು ಪರಿಣಾಮವೆ ಮಾತೃಭಾಷೆಯಲ್ಲಿ ಮುಂದುವರಿದು ಕಾಣುವದು ಯೋಗ್ಯವಾಗಿದೆ. ಧ್ವನಿಗೂ ಭಾಷೆಗೂ ವ್ಯತ್ಯಾಸವೇನೆಂದರೆ: ಧ್ವನಿಗೆ ಅರ್ಥವಿಲ್ಲ, ಭಾಷೆಗೆ ಅರ್ಥವುಂಟು—ಎಂದರೆ ಧ್ವನಿಯು ಪರಿಪುಷ್ಟಿಗೊಂಡು ಭಾಷೆಯಾಗಿ ತನ್ನ ಬೇಕಾಯಿತು. ಈ ದೃಷ್ಟಿಯಿಂದ ನೋಡಿದರೆ ಮಾತೃಭಾಷಾಶ್ರವಣದಿಂದ ನಮ್ಮ ಸರ್ವಸಂತಾಪಗಳೂ ಅಡಗಬೇಕು; ಮತ್ತು ಉಳಿದ ಎಲ್ಲಾ ವಿಷಯಗಳಿಂದಾಗುವ ಸುಖದ ಪರಿಣಾಮಕ್ಕಿಂತಲೂ ಮಾತೃಭಾಷಾಶ್ರವಣದಿಂದಾಗುವ ಸುಖದ ಪರಿಣಾಮವು ಹೆಚ್ಚಾಗಿರಬೇಕು.

ಇದು ಬರೀ ಆಕಾಶಪುರಾಣದ ಮಾತಲ್ಲ; ಅನುಭೂತವಿಷಯ. ಹಿಂದೆ ಒಂದಾನೊಂದು ಕಾಲದಲ್ಲಿ ವೇದದ ಅರ್ಥಜ್ಞಾನವಿಲ್ಲದೆ ಜನರೆಲ್ಲ ಕೇವಲ ಕರ್ಮಜಡರಾಗಿದ್ದು ಅವುಗಳ ಪ್ರತ್ಯಕ್ಷಫಲವನ್ನು ಕಾಣದೆ ಸುವ್ಯಸನ ತಳಮಳಿಸುತ್ತಿದ್ದಂಥ ಕಾಲ ಬಂದಿತ್ತು. ಸಂಸ್ಕೃತಭಾಷೆಯ ನಾಡಿಯು ಮಂದಗತಿಯಾಗುತ್ತ ಹೋಗಿತ್ತು. ಇದೇ ಸಮಯದಲ್ಲಿಯೇ ಸಂಸ್ಕೃತದಲ್ಲಿರುವ ಧರ್ಮತತ್ತ್ವಾಮೃತವನ್ನು ದೇಶಭಾಷೆಯೆಂಬ ಪಾತ್ರೆಗೆ ಸುರಿದುಕೊಳ್ಳುವದು ಅಪವಿತ್ರವೆಂಬ ಭಾವನೆಯು ಜನರಲ್ಲಿ ಹಬ್ಬಿಕೊಂಡಿದ್ದದ್ದರಿಂದ ಯಾರೂ ಆ ಕೆಲಸಕ್ಕೆ ಧೈರ್ಯವನ್ನು ಮಾಡದೆ ಇದ್ದರು. ಇಂಥ ಸಂಧಿಕಾಲದಲ್ಲಿ ಬುದ್ಧನು ಅವತಾರಮಾಡಿ ಅಗಾಧವಾದ ಸಂಸ್ಕೃತವೆಂಬ ಸಮುದ್ರದ ಒಂದು ಕೊಲ್ಲಿಯಿಂದ ತನಗೆ ಚೆನ್ನಾಗಿ ಕಂಡ ಕೆಲವು ಮಾತುಗಳನ್ನು ತನ್ನ ಹೃದಯಕ್ಕೆ ತುಂಬಿಕೊಂಡು ಅವುಗಳಿಗೆ ಮಾತೃಭಾಷೆಯ ರೂಪಾಂತರವನ್ನು ಕೊಟ್ಟು ಜನರಿಗೆ ಬಡಿಸುತ್ತಲೇ ಹಸಿದು ಕಂಗಾಲಾಗಿ ಕಣ್ಣುಕಣ್ಣು ಬಿಡುತ್ತಿದ್ದ ಜನರು ಅತಿಕುತೂಹಲದಿಂದ ನಾನು ಮುಂದು ತಾನು ಮುಂದೆಂದು ಮುಂದಕ್ಕೆ

ನುಗ್ಗಿಬಂದು ಆ ಧರ್ಮಾಮೃತವನ್ನು ಬಹು ಅಕ್ಕರೆಯಿಂದ ಹೀರಿದರು. ಇದರಿಂದ ಬೌದ್ಧಧರ್ಮವು ಒಮ್ಮೆಗೇ ಭೂತನಂತೆ ಮಹದಾಕೃತಿಯನ್ನು ತಾಳಿತು. ಅಶೋಕನು ಭರತಖಂಡದ ಪ್ರಥಮಚಕ್ರವರ್ತಿಯಾಗಿ ದೇಶ ಭಾಷೆಯ ಮೂಲಕ ಕಾಡುಮೇಡುಗಳಲ್ಲಿ ಕೂಡ ಧರ್ಮಪ್ರಸಾರವನ್ನು ಮಾಡುತ್ತಲೆ ಬೌದ್ಧಧರ್ಮವು ಪೂರ್ಣತೆಯನ್ನು ಪಡೆಯಿತು.

ಮಾತೃಧ್ವನಿಯಿಂದಾಗುವ ಉಪದೇಶವು ಎಂದೆಂದಿಗೂ ಸ್ಥಿರವಾಗಿರ ತಕ್ಕದ್ದು. ಆದರೆ ಈ ನಿಯಮವು ಬೌದ್ಧಧರ್ಮದ ವಿಚಾರಕ್ಕೆ ಮಾತ್ರ ಹತ್ತಲಿಲ್ಲ. ಮಾತೃಭಾಷೆಯ ರೂಪದಿಂದ ಬಂದ ಕಾರಣದಿಂದ ಉನ್ನತಿ ಯನ್ನು ಪಡೆದ ಬೌದ್ಧಧರ್ಮವು ಅದರಲ್ಲಿದ್ದ ನ್ಯೂನತೆಯ ದೆಸೆಯಿಂದ ಅವನತಿಯನ್ನು ಪಡೆಯಿತು. ಮಾತೃಭಾಷಾಪ್ರಕರಣದಲ್ಲಿ ಆ ನ್ಯೂನತೆಯ ವಿಷಯವನ್ನು ಹೆಚ್ಚಾಗಿ ಹೇಳುವದಕ್ಕವಕಾಶವಿಲ್ಲದಿದ್ದರೂ—ಅಧಿಕಪ್ರಸಂಗ ವೆಂದರೂ ಹೆದರದೆ—ಆ ನ್ಯೂನತೆಯನ್ನು ಸ್ವಲ್ಪದರದಲ್ಲಿಯೇ ಮನಗಾಣಿಸಿ ಮಾತೃಭಾಷಾಪ್ರಾಶಸ್ತ್ಯವನ್ನು ಸುರಕ್ಷಿತವಾಗಿಡಬೇಕೆಂದು ಇಲ್ಲಿ ಆ ವಿಷಯ ವನ್ನು ತೆಗೆದುಕೊಳ್ಳುತ್ತೇನೆ. ಅದೇನೆಂದರೆ, ಬುದ್ಧನು ಸಂಸ್ಕೃತಭಾಷೆ ಯಲ್ಲಿದ್ದ ಧರ್ಮಗ್ರಂಥಗಳ ತಲವನ್ನು ಕಲಕಿ ಅವನ್ನು ತುಂಬಿಕೊಳ್ಳ ಲಿಲ್ಲ. ಅವನು ತುಂಬಿಕೊಂಡದ್ದು ಒಂದು ಕಡೆ ತಿಳಿಯಾಗಿ ನಿಂತಿದ್ದ ನೀರು. ಇದು ಬಾಧಕವೇಕೆ ಆಯಿತೆಂಬವನ್ನು ತಿಳಿಯಬೇಕಾದರೆ ಒಂದು ಔಷಧದ ಉದಾಹರಣೆಯನ್ನು ನೆನಪಿಗೆ ತಂದುಕೊಳ್ಳಬೇಕು. ವೈದ್ಯನು ನೀರಿನಲ್ಲಿ ಒಂದು ಪುಡಿಯನ್ನು ಹಾಕಿ ಅದನ್ನು ಕುಡಿಯ ಹೇಳುತ್ತಾನೆ. ರೋಗಿಯು ಅದನ್ನು ಅಲ್ಲಾಡಿಸಿ ಕಲಕಿ ಕುಡಿಯಬೇಕು. ಇಲ್ಲದಿದ್ದರೆ ಔಷಧವು ತಲದಲ್ಲಿಯೇ ಉಳಿಯುತ್ತದೆ, ಅವನು ಕುಡಿದದ್ದು ಬರೀ ನೀರಾಗಿರುತ್ತದೆ. ರೋಗಿಯು ಔಷಧಿಗಾಗಿ ನೀರು ಕುಡಿಯಬೇಕಾಗಿತ್ತೇ ಹೊರತು ಬಾಯಾರಿಕೆಗಾಗಿ ಅಲ್ಲ. ಸಂಸ್ಕೃತಸಮುದ್ರದಿಂದ ಬುದ್ಧನು ತುಂಬಿಕೊಂಡದ್ದು ಅಹಿಂಸಾ ಮೊದಲಾದ ರೂಪವಾದ ಬರೀ ನೀರು. ಭಾರವಾಗಿ ತಲದಲ್ಲಿ ಉಳಿದುಕೊಂಡಿದ್ದ ಆತ್ಮತತ್ತ್ವಗಳ ಅಂಶವು ಅವನ ನೀರೊಳಗೆ ಸೇರಿ ಬರಲಿಲ್ಲ. ಆತ್ಮತತ್ತ್ವಾರ್ಥವನ್ನು ಜೀರ್ಣಿಸಿ ಕೊಳ್ಳುವದಕ್ಕೆ ಅಹಿಂಸಾದಿಧರ್ಮಗಳು ಬೇಕೇ ಹೊರತು ಬರೀ ಅವುಗಳಿಗೇ

ಹೆಚ್ಚಿನ ಬೆಲೆ ಇಲ್ಲ. ಆದ್ದರಿಂದ ಅವನ ಧರ್ಮೋಪದೇಶವು ಔಷಧಿಯ ಪುಡಿ ಇಲ್ಲದ ನೀರಿನಂತಾಗಿ ಜನರ ಆತ್ಮಕ್ಕೆ ನಿಜವಾದ ಆರೋಗ್ಯವು ದೊರೆಯದೆ ಹೋಯಿತು. ಕುಮಾರಿಲಭಟ್ಟರೆಂಬುವರು ಈ ಬರೀ ನೀರಿನ ನಿಸ್ಸಾರತೆಯನ್ನು ತೋರಿಸಿಕೊಟ್ಟ ಮೇಲೆ ಜನರು ತಮ್ಮ ಮೌಢ್ಯವನ್ನು ತಿಳಿದು ಬಾಯಿಬಾಯಿ ಬಿಡುತ್ತಿದ್ದಾಗ ಶ್ರೀ ಶಂಕರಾಚಾರ್ಯರು ಅವತರಿಸಿ ಸಂಸ್ಕೃತಧರ್ಮಗ್ರಂಥಗಳ ತಲದಲ್ಲಿದ್ದ ಸಾರಭೂತವಾದ ವೇದಾಂತವೆಂಬ ಔಷಧವನ್ನು ಮೇಲಕ್ಕೆತ್ತಿ ಜನರನ್ನುದ್ಧಾರಮಾಡಿದರು. ಅಂತು ಮಾತೃಭಾಷೆಯ ಮೂಲಕ ಧರ್ಮನೀತಿಗಳ ಉಪದೇಶವನ್ನು ಮಾಡಿದರೆ ಅದರ ಪರಿಣಾಮವು ಎಷ್ಟು ತೀವ್ರವಾಗಿರುವದೆಂಬದನ್ನು ಬೌದ್ಧಧರ್ಮವು ತೋರಿಸಿಕೊಟ್ಟು ಹೋಗಿರುವದು.

ಅಕ್ಬರನ ಬಳಿಯವರಿಗೆ ಬೆರಗಾಗಿ ಅತಿರಥಮಹಾರಥರ ವಂಶಜರಾದ ರಾಜಪುತ್ರರು ಕೂಡ ತಮ್ಮ ದೇಹಗಳನ್ನು ಮಾರಿಕೊಂಡ ನಡೆವಳಿಕೆಯು ಅಂಟುಜಾಡ್ಯವಾಗಿ ಎಲ್ಲೆಲ್ಲಿಯೂ ಹರಡಿ ಎಲ್ಲರ ಮನಸ್ಸನ್ನೂ ದುರ್ಬಲವಾಗಿ ಮಾಡುತ್ತಿದ್ದಾಗ ಮಹಾವೀರನಾದ ಪ್ರತಾಪಸಿಂಹನು ದೇಶಭಾಷೆಯ ರಾಷ್ಟ್ರಗೀತಗಳಿಂದ ಅವರ ರಕ್ತನಾಳಗಳಿಗೆಲ್ಲ ಕಾವೇರಿಸಿ ಅವರ ಸಹಾಯವನ್ನು ಪಡೆಯುತ್ತಿದ್ದನು. ಹೀಗೆ ಮಾತೃಭಾಷೆಯು ಉತ್ಸಾಹವನ್ನು ಉಜ್ಜೀವನಗೊಳಿಸುವದರಲ್ಲಿ ತನ್ನ ಪರಾಕ್ರಮವನ್ನು ತೋರಿಸಿದಂತೆ ಜನರಿಗೆ ಶಾಂತಿಯನ್ನು ತಂದುಕೊಡುವದರಲ್ಲಿಯೂ ತನ್ನ ಅಪ್ರತಿಮಪ್ರಭಾವವನ್ನು ತೋರಿಸುವದು. ಸಂಸ್ಕೃತದಲ್ಲಿ ಶೈವಪುರಾಣಗಳೆಂದೂ ವೈಷ್ಣವಪುರಾಣಗಳೆಂದೂ ಬೇರೆಬೇರೆ ಇರುವವಷ್ಟೆ. ಇವೆಲ್ಲ ಒಂದೊಂದು ಉಪಾಸನಾರ್ಥವಾದ ದೇವತಾವಿಚಾರದ ಪಕ್ಷವನ್ನು ಹಿಡಿದಂಥವುಗಳು. ಇಂಥವುಗಳಲ್ಲಿ ಒಂದು ಪಕ್ಷವನ್ನು ಅಟ್ಟಕ್ಕೇರಿಸಿ ಹೇಳುವಾಗ ಇನ್ನೊಂದು ಪಕ್ಷವನ್ನು ತೀರ ತಲಕ್ಕೆ ತುಳಿಯುವದುಂಟು. ಈ ಎರಡು ಬಗೆಯ ಪುರಾಣಗಳ ಕರ್ತರೂ ವ್ಯಾಸರೊಬ್ಬರೆ ಎಂಬುದನ್ನು ವಿಚಾರಕ್ಕೆ ತೆಗೆದುಕೊಂಡರೆ ಯಾವ ದೇವತೆಯನ್ನು ತಲಕ್ಕೆ ತುಳಿಯುವದೂ ಅವರಿಗೆ ಸಮ್ಮತವಿಲ್ಲವೆಂದೂ ಆಯಾ ದೇವತೆಯ ಉಪಾಸನಾರ್ಥವಾಗಿ ಅದರ ಪ್ರಾಶಸ್ತ್ಯವನ್ನು ಬೆಳೆಸಿ ಹೇಳಿರುವರೆಂದೂ ವ್ಯಕ್ತ

ವಾಗುವದು. ಒಂದು ದೇವತಾಸ್ವರೂಪವನ್ನು ತಲಕ್ಕೆ ತುಳಿಯುವದು ಅವರ ತಾತ್ಪರ್ಯವಾಗಿದ್ದರೆ ಅವರು ಯಾವ ಪುರಾಣವನ್ನೂ ಬರೆಯುತ್ತಲಿ ಇರಲಿಲ್ಲ; ಏಕೆಂದರೆ: ಕಡಿಮೆಯ ತರಗತಿಯದನ್ನು ಬೆಳೆಸಿ ಹೇಳುವದಕ್ಕೆ ಅವರಿಗೆ ಹೇಗೆ ಮನಸ್ಸು ಬಂದೀತು? ಅವರು ಎಲ್ಲ ಪುರಾಣಗಳನ್ನೂ ಬರೆದು ಒಂದೊಂದು ದೇವತೆಯನ್ನು ಒಂದೊಂದರಲ್ಲಿ ಏರಿಸಿರುವದರಿಂದ ಅವರಿಗೆ ಎಲ್ಲ ದೇವತೆಗಳ ವಿಷಯದಲ್ಲಿಯೂ ಪೂಜ್ಯಬುದ್ಧಿಯು ಸಮಪ್ರಮಾಣದಲ್ಲಿರುವದೆಂದು ಸ್ಪಷ್ಟವಾಯಿತು. ಆದರೂ ಈ ಗುಟ್ಟನ್ನು ತಿಳಿಯುವ ಕಾರಣದಿಂದ ಒಂದು ಕಾಲದಲ್ಲಿ ಏಕಪಕ್ಷದ ಬುದ್ಧಿಯು ಜನರಲ್ಲಿ ಹೆಚ್ಚಾಗಿ ಹರಡಿಕೊಂಡಿತು. ಇವುಗಳ ತಾತ್ಪರ್ಯವಾದ ಸಮತ್ವಬುದ್ಧಿಯು ವೇದಾಂತವು ಪುರಾಣ ಭಾಷೆಯಲ್ಲಿಲ್ಲದ್ದರಿಂದ ಹಿಂದುಳಿದು ಜನದಲ್ಲಿ ಪರಸ್ಪರನ್ವೇಷಮ್ಯವೇ ಮಸಗಿ ಆ ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಜನತೆಯಲ್ಲೆಲ್ಲ ಹಾಹಾಕಾರವು ಹೆಚ್ಚಿತು. ಈ ರೋಗನಿದಾನವನ್ನು ತಿಳಿದು ಜ್ಞಾನೇಶ್ವರರೆಂಬ ಸಾಧುಗಳು ದೇಶಭಾಷೆಯಾದ ಮಹಾರಾಷ್ಟ್ರದಲ್ಲಿ ಭಗವದ್ಗೀತಗೆ ಜ್ಞಾನೇಶ್ವರಿಯೆಂಬ ಟೀಕೆಯನ್ನು ಬರೆದು ಸಂಸ್ಕೃತದಲ್ಲಿ ತಲವನ್ನು ಹಿಡಿದಿದ್ದ ವೇದಾಂತದ ಎಷ್ಟೋ ರಹಸ್ಯಾರ್ಥಗಳನ್ನೆಲ್ಲ ಹೊರಗೆಡವಿದರು. ಇದು ಕಣ್ಣಿಗೆ ಬಿದ್ದ ಮೇಲೆ ಜನರ ಅಂತಃಕಲಹಗಳೆಲ್ಲ ಅಲ್ಲಲ್ಲಿಯೇ ಮುಗ್ಗಿಹೋದವು. ಜ್ಞಾನೇಶ್ವರರು ಈ ಉದ್ಯೋಗವನ್ನು ನಡೆಸದೆ ಇದ್ದರೆ ಜನತೆಯ ಸ್ಥಿತಿಯು ಬಹಳ ಅನರ್ಥಕ್ಕೆ ಕಾರಣವಾಗುತ್ತಿತ್ತು.

ಒಂದು ದೇಶದ ಅಭಿವೃದ್ಧಿಯು ಆ ದೇಶದ ಮಾತೃಭಾಷೆಯ ಅಭಿವೃದ್ಧಿಯನ್ನು ಅವಲಂಬಿಸಿಕೊಂಡಿರುವದು. ಹಿಂದೆ ಒಂದಾನೊಂದು ಕಾಲದಲ್ಲಿ ಭರತಖಂಡದ ಒಳರಾಷ್ಟ್ರಗಳಲ್ಲೆಲ್ಲ ಕರ್ಣಾಟಕವೇ ವಿಸ್ತಾರವಾಗಿತ್ತೆಂದು ಇತಿಹಾಸಜ್ಞರು ಹೇಳುವರು. ಆಗ ಅನಾಮಧೇಯಗಳಾಗಿದ್ದ ರಾಜ್ಯಗಳೆಲ್ಲ ಈಗ ಉನ್ನತಸ್ಥಿತಿಗೆ ಬಂದು ನಮ್ಮ ಕರ್ಣಾಟಕವು ಫಲಪುಷ್ಪಭರಿತವಾದ ವೃಕ್ಷಗಳ ನಡುವಣ ಮೋಟುಮರದಂತೆ ಇರುವದಕ್ಕೆ ಕಾರಣವೇನು? ಮಾತೃಭಾಷಾಪ್ರಸಾರದ ಅಭಾವವೇ ಕಾರಣ. ಈಗ ಅಭಿವೃದ್ಧಿಯಲ್ಲಿರುವ ರಾಷ್ಟ್ರಗಳಲ್ಲೆಲ್ಲ ಮಾತೃಭಾಷೆಯ ಅಭಿವೃದ್ಧಿ

ಎದ್ದು ಕಾಣುತ್ತಿರುವದು. ಮಹಾರಾಷ್ಟ್ರದಲ್ಲಿ ನೋಡಿರಿ. ಜ್ಞಾನೇಶ್ವ
ರೊಬ್ಬರೇ ಅಲ್ಲ; ಅಸಂಖ್ಯಾಕ ಅಭಂಗಗಳನ್ನು ಮಾಡಿ ಧರ್ಮಾಮೃತದ
ಕಾಲುವೆಯನ್ನು ಪ್ರತಿಯೊಂದು ಗುಡಿಸಲಿನ ಮೂಲೆಮೂಲೆಗೂ ಪ್ರತಿ
ಯೊಬ್ಬ ಮಹಾರಾಷ್ಟ್ರೀಯನ ಪ್ರತಿಯೊಂದು ರೋಮಕೂಪಕ್ಕೂ ಹರಿಸಿ
ರುವ ತುಕಾರಾಮ ಸಾಧುಗಳಿರುವರು; ಮಹಾರಾಷ್ಟ್ರವೇದವೆಂದು ಪೂಜ್ಯ
ತೆಯನ್ನು ಪಡೆದಿರುವ ಪ್ರಾಸಾದಿಕವಾಣಿಯುಳ್ಳ ಭಾಗವತವ್ಯಾಖ್ಯಾನವನ್ನು
ಮಾಡಿರುವ ಏಕನಾಥಸಾಧುಗಳಿರುವರು; ಧರ್ಮಚಕ್ರವೂ ವ್ಯವ್ಯಹಾರ
ಚಕ್ರವೂ ಸಮಾನಗತಿಯಿಂದ ಸಾಗುವಂಥ ಸಮರ್ಪಕವಾದ ಸದುಪ
ದೇಶಗಳುಳ್ಳ ದಾಸಬೋಧವೆಂಬ ಗ್ರಂಥವನ್ನು ರಚಿಸಿರುವ ರಾಮದಾಸರೂ
ಇನ್ನೂ ಎಷ್ಟೋ ಮಹನೀಯರೂ ಇರುವರು. ಹೀಗೆ ಮಾತೃಭಾಷೆ
ಬೆಳೆದ ಮೇಲೆ ಮಹಾರಾಷ್ಟ್ರವು ಮುಂದಕ್ಕೆ ಬಂದದ್ದೇನು ದೊಡ್ಡ ಮಾತು!
ಇನ್ನು ನಮ್ಮ ಕರ್ಣಾಟಕವನ್ನು ಕಿಸುಗಣ್ಣಿನಿಂದ ನೋಡಿರಿ. ಪುರಂದರ
ದಾಸರು, ಕನಕದಾಸರು, ಸರ್ವಜ್ಞಪ್ಪನವರು, ನಿಜಗುಣರು ಮೊದಲಾದ
ಕೆಲವು ಹೆಸರುಗಳಿದ್ದರೂ ಅವರ ಗ್ರಂಥಗಳ ಪ್ರಚಾರವು ಆಗಬೇಕಾದಷ್ಟು
ಆಗಿಲ್ಲ. ಮಹಾರಾಷ್ಟ್ರದೇಶದಲ್ಲಿ ಪ್ರತಿಯೊಂದು ಗ್ರಂಥದ ಎಷ್ಟೋ
ಮುದ್ರಣಗಳಾಗಿ ಹೋಗಿದ್ದರೂ ನಮ್ಮಲ್ಲಿ ನೆಟ್ಟಗೆ ಒಬ್ಬರ ಗ್ರಂಥಕ್ಕಾದರೂ
ನಿರ್ದುಷ್ಟವಾದ ಮತ್ತು ಪೂರ್ಣವಾದ ಪ್ರಥಮ ಮುದ್ರಣಕ್ಕೇ ದಾರಿ
ಯಿಲ್ಲ.

ಯಾರು ಎಷ್ಟೇ ಗ್ರಂಥಗಳನ್ನು ಬರೆದರೂ "ಅಂತೂ ಇಂತೂ
ಕುಂತೀ ಮಕ್ಕಳಿಗೆ ರಾಜ್ಯವಿಲ್ಲ"ವೆಂಬಂತೆ ಹಳೇ ಜನರ ಅಂಧಶ್ರದ್ಧೆಯು
ಮತ್ತು ಹೊಸ ಜನರ ಅಶ್ರದ್ಧೆಯು ಸಡಗರದಲ್ಲಿ ನಮ್ಮ ಕನ್ನಡನುಡಿಗೆ
ತಲೆ ಎತ್ತುವದಕ್ಕೇ ಮಾರ್ಗವಿಲ್ಲದೆ ಹೋಗಿದೆ. ಅದೇನೆಂದರೆ: ಧರ್ಮಾ
ಮೃತವು ಮಾತೃಭಾಷೆಯೆಂಬ ಪಾತ್ರೆಗೆ ಬಿದ್ದರೆ ಕಿಲುಬುವದೆಂಬ ಕಲ್ಪ
ನೆಯು ಬಹುಕಾಲದಿಂದ ಬಂದಿರುವ ಪಾಶ್ಚರ್ಯವಾಯುವಾಗಿರುವದು.
ಆದ್ದರಿಂದ ಮಾತೃಭಾಷೆಯೆಂದರೆ ಹಳೇ ಜನರಿಗೆ ಉಪೇಕ್ಷೆ. ಕೆಲವು
ಜನರು ಮಡಿಯಲ್ಲಿರುವಾಗ ಸಂಸ್ಕೃತದ ಹೊರತು ಎರಡನೆ ಭಾಷೆಯನ್ನಾಡ
ಬಾರದೆಂಬ ನಿಯಮವನ್ನು ಕೂಡ ಮಾಡಿಕೊಂಡಿರುವದುಂಟು. ಸಂಸ್ಕೃತ

ವನ್ನು ತಿಳಿದುಕೊಂಡು ಆ ಪಾತ್ರೆಯಲ್ಲಿಯೆ ಆ ಅಮೃತದ ಸವಿಯನ್ನು ನೋಡುವದುತ್ತಮವೆಂಬ ವಿಷಯಕ್ಕೆ ನಮ್ಮದು ಎರಡನೆ ಮಾತಿಲ್ಲ. ಸಂಸ್ಕೃತದಲ್ಲಿ ಬೇಕಾದಷ್ಟು ಪೂಜ್ಯತೆ ಇರಲಿ. ಮಾತೃಭಾಷೆಯ ವಿಷಯದಲ್ಲಿ ತುಚ್ಛಬುದ್ಧಿಯಿರಬಾರದು. ಯಾರಾದರೂ ಅವಿವೇಕದಿಂದ ಈ ತುಚ್ಛತೆಯನ್ನು ಪ್ರಕಾಶಮಾಡಿದರೆ ಆತ್ಮಶಕ್ತಿವಂತರು ಅದನ್ನು ಶಾಂತ ರೀತಿಯಿಂದ ಸಹನಮಾಡಿಕೊಂಡು ತಮ್ಮ ಉದ್ಯಮದಲ್ಲಿ ಮುಂದುವರಿಯಬೇಕೇ ಹೊರತು ಹಿಂದಡಿಯಿಡಬಾರದು. ತುಲಸೀದಾಸರು ಕಾಶಿಯಲ್ಲಿ ಕುಳಿತು ಹಿಂದೀಭಾಷೆಯಲ್ಲಿ ರಾಮಾಯಣವನ್ನು ಬರೆದರು. ಒಮ್ಮೆ ಅವರು ಗಂಗಾಸ್ನಾನಕ್ಕೆ ಬಂದಿದ್ದಾಗ ಒಬ್ಬ ಪಂಡಿತನು ಆ ಮಾತೃಭಾಷಾ ಗ್ರಂಥದ ವಿಷಯಕ್ಕೆ ತುಚ್ಛತ್ವವನ್ನು ಪ್ರಕಾಶಮಾಡಲು ತುಲಸೀದಾಸರು "ಪಂಡಿತರೇ, ಸಂಸ್ಕೃತವನ್ನು ಕಲಿತು ನಾಯಿಕಾನಾಯಕರ ವರ್ಣನೆಯನ್ನು ಮಾಡುವ ಉದ್ಯೋಗಕ್ಕಿಂತಲೂ ಮಾತೃಭಾಷೆಯಲ್ಲಿ ಧರ್ಮಗ್ರಂಥಗಳನ್ನು ಬರೆಯುವದು ನನಗೇನೂ ಕೀಳೆನಿಸುವದಿಲ್ಲ" ಎಂದು ಹಂಗಿಸಿ ಕಳುಹಿಸಿದರಂತೆ. ತುಕಾರಾಮನ ಚರಿತ್ರೆಯಲ್ಲಿ ಪಂಡಿತರ ಮಾತೃಭಾಷಾ ದ್ವೇಷವು ಇನ್ನೂ ಪರಿಪುಷ್ಟಿಗೊಂಡು ವ್ಯಕ್ತವಾಗುತ್ತದೆ. ತುಕಾರಾಮನು ವೇದಾರ್ಥವನ್ನೆಲ್ಲ ಮಾತೃಭಾಷೆಯಲ್ಲಿ ಪ್ರಕಾಶಮಾಡಿದ್ದು ಒಬ್ಬ ಪಂಡಿತನಿಗೆ ಹೊಟ್ಟೆಗೆ ನೊಣಹೊಕ್ಕಷ್ಟು ಸಂಕಟವಾಯಿತು. ರಾಜಕೀಯಾಧಿಕಾರಿಯ ಅನುಗ್ರಹಕ್ಕೆ ಪಾತ್ರನಾದ ಆ ಪಂಡಿತನು ತುಕಾರಾಮನಿಗೆ ಊರನ್ನು ಬಿಟ್ಟೇ ಹೋಗಬೇಕಾದ ಪ್ರಸಂಗವನ್ನು ತಂದಿಟ್ಟು ಅವನು ತನಗೆ ಶರಣು ಬರುವಂತೆ ಮಾಡಿಕೊಂಡನು. ನಿರಭಿಮಾನಿಯಾದ ತುಕಾರಾಮನು ಶರಣುಬರುತ್ತಲೆ ಅವನ ಅಭಂಗಗಳನ್ನೆಲ್ಲ ಇಂದ್ರಾಯಣಿಯ ನದಿಯಲ್ಲಿ ಮುಳುಗಿಸಿ ಬಿಟ್ಟರೆ ಮಾತ್ರ ಕ್ಷಮಿಸುವೆನೆಂದು ಬ್ರಾಹ್ಮಣನು ಹೇಳಿದನು. ತುಕಾರಾಮನು ತನ್ನ ನಿರಭಿಮಾನತ್ವದ ಪರಮಾವಧಿಯನ್ನು ತೋರಿಸಿ ತನ್ನ ಗ್ರಂಥಗಳನ್ನೆಲ್ಲ ನದಿಗೊಗೆದು ಬಿಟ್ಟನು. ದೈವಸಂಕಲ್ಪವು ಅನುಕೂಲವಾಗಿದ್ದದ್ದರಿಂದ ಆ ಗ್ರಂಥಗಳು ಮತ್ತೆ ತೇಲಿಕೊಂಡು ಬಂದು ಉಳಿದುಕೊಂಡವೆನ್ನುತ್ತಾರೆ. ಆ ಮಾತು ಇರಲಿ. ಈ ರೀತಿಯಲ್ಲಿ ಮಾತೃಭಾಷೆಯ ಪ್ರಾಶಸ್ತ್ಯಕ್ಕೆ ಪ್ರತಿಪಕ್ಷವಿದ್ದರೂ

ಆತ್ಮಶಕ್ತಿವಂತರು ತಮ್ಮ ಪ್ರಯತ್ನವನ್ನು ನಿಲ್ಲಿಸದೆ ಆತ್ಮಶಕ್ತಿಯಿಂದ ಮುಂದುವರಿಯಬೇಕೆಂಬುದನ್ನು ಮನಸ್ಸಿನಲ್ಲಿಡತಕ್ಕದ್ದು.

ಮೇಲೆ ಹೇಳಿದ್ದು ಹಳೇ ಜನರ ಅಂಧಶ್ರದ್ಧೆಯ ಮಾತಾಯಿತು. ಇನ್ನು ಹೊಸ ಜನರ ಅಶ್ರದ್ಧೆಯ ಮಾತು ಹೇಳುವ ಪ್ರಸಂಗವು ಬಂದಿದೆ. ಮುಂದಿನ ವಿಷಯವನ್ನು ಹಿಂದಿನ ವಿಷಯದೊಡನೆ ತುಲನೆಮಾಡಿ ಹೇಳುವದು ಹೆಚ್ಚು ಪರಿಣಾಮಕಾರಕವಾಗುವದರಿಂದ ಆ ಕಾರ್ಯವನ್ನು ಇಲ್ಲಿ ಮಾಡಬೇಕಾಗಿದೆ. ಕನ್ನಡವು ಜೀವಿಸಿರಬೇಕಾದರೆ ನೆಲಹಿಡಿದು ಕುಟುಕುಜೀವವನ್ನು ಹಿಡಿದುಕೊಂಡಿರಲೆಂದು ಅಭಿಪ್ರಾಯಪಡುವ ವಿಷಯದಲ್ಲಿ ಇಬ್ಬರೂ ಸಮಾನಧರ್ಮಿಗಳೆ. ಆದ್ದರಿಂದ ಇಬ್ಬರೂ ಕನ್ನಡಕುವರಿಯ ತಲೆಯ ಮೇಲೆ ಮುಟ್ಟುವವರೆ. ಆದರೆ ಹಳೇಜನರ ಮುಟ್ಟು ಕನ್ನಡ ನುಡಿಗೆ ತಲೆನೋವನ್ನು ಮಾತ್ರ ತರುವದು; ಹೊಸ ಜನರ ಮುಟ್ಟು ಪ್ರಾಣಾಂತಕಾಲವನ್ನೆ ತರುವದು. ಹಳೇಜನರು ಎಷ್ಟಾದರೂ ಹಳೇ ಜನರು. ಕಾದಾರಿದ ನೀರಿನಂತೆ ಅವರ ಉದ್ವೇಗದ ಉಲ್ಬಣವು ಇಳಿಮುಖವಾಗಿರುವದರಿಂದ ಅವರು ಮರಣಕಾರಕವಾಗಿ ಮುಟ್ಟುವದಿಲ್ಲ. ಹೊಸ ಜನರ ಹೃದಯವು ಹೊಗೇಬಂಡಿಯಲ್ಲಿ ಕುದಿಯುತ್ತಿರುವ ನೀರಿನಂತೆ ತಳಮಳಿಸುತ್ತಿದ್ದು ತಾಪಕರವಾದ ಅವರ ಆವಿಯು ಹೊಗೆಯಂತೆ ಅವರ ನಿಃಶ್ವಾಸವು ಬಿಸಿಯಾಗಿರುವದರಿಂದ ಅವರ ನಿರ್ದಾಕ್ಷಿಣ್ಯಪೂರ್ವಕವಾದ ಮುಟ್ಟು ಕರ್ಣಾಟಕಭಾಷಾಕುಮಾರಿಗೆ ಮರಣವನ್ನೇ ತರುವದು. ಏಕೆಂದರೆ: ಹಳೇ ಜನರದು ಅಂಧಶ್ರದ್ಧೆಯಷ್ಟೆ? ಎಂದರೆ ಅವರಿಗೆ ಶ್ರದ್ಧೆಯುಂಟು; ಕಣ್ಣಿಲ್ಲ. ಹೊಸ ಜನರ ಅಶ್ರದ್ಧೆಯಲ್ಲಿ ಶ್ರದ್ಧೆಯೇ ಇಲ್ಲ. ಇಲ್ಲಿ ತಿಳಿಯಬೇಕಾದದ್ದೇನೆಂದರೆ: ಹಳೇಜನರಿಗೆ ಎಲ್ಲ ವಿಚಾರಗಳೂ ಸಂಸ್ಕೃತದಲ್ಲಿ ಮಾತ್ರ ವೀರ್ಯವತ್ತರವೆಂಬ ಅಂಧಶ್ರದ್ಧೆಯಿಂದ ಕನ್ನಡದ ಮೇಲೆ ಕಿರುಗಣ್ಣು; ಹೊಸ ಜನರಿಗೆ ಇಂಗ್ಲೀಷಿನ ಹೊರತು ಬೇರೆ ಯಾವ ಭಾಷೆಯಲ್ಲಿಯೂ ವಿಚಾರಗಳಿಗೆ ಜೀವವೇ ಇಲ್ಲವೆಂಬ ಅಶ್ರದ್ಧೆಯಿಂದ ಕನ್ನಡದ ಮೇಲೆ ಕಿಸುಗಣ್ಣು. ಆದ್ದರಿಂದ ಕನ್ನಡಕ್ಕೆ ಹಳೇಜನರ ಪ್ರತಿಪಕ್ಷಕ್ಕಿಂತಲೂ ಹೊಸಜನರ ಪ್ರತಿಪಕ್ಷವು ಹೆಚ್ಚು ಘಾತಕವಾಗಿರುವದು. ಹೇಗೆಂದರೆ: ಹಳೇಜನರ ಕಣ್ಣಿನ ಸರ್ವೇ

ತೆಗೆದರೆ ಅವರ ಅಂಧತೆ ಹೋಗುವದು; ಹೊಸಜನರಿಗೇನು ಮಾಡ ಬೇಕು?

ಹೊಸಜನರ ಪ್ರತಿಪಕ್ಷಕ್ಕೆ ಪರಿಹಾರವನ್ನು ಕಂಡುಹಿಡಿಯುವದಕ್ಕೆ ಮುಂಚೆ ಅದರ ಉತ್ಪತ್ತಿಕಾರಣವನ್ನು ತಿಳಿಯುವದಗತ್ಯ. ರೋಗದ ಉತ್ಪತ್ತಿಯ ಕಾರಣವು ತಿಳಿದರೆ ಅದಕ್ಕೆ ತಕ್ಕ ಪರಿಹಾರವು ಸ್ಫೂರ್ತಿ ಯಾಗುವದು. ಹೊಸಜನರ ಅಶ್ರದ್ಧೆಗೆ ಕಾರಣವೇನೆಂಬದನ್ನು ವಿಚಾರಿ ಸಿದರೆ ಕನ್ನಡಭಾಷೆಯನ್ನು ಮೂಲೆಗೊತ್ತಿ ಮುಂದೆ ಬಂದ ಆಂಗ್ಲ ಭಾಷೆಯ ವಿಲಾಸವೆಂದು ವ್ಯಕ್ತವಾಗುವದು. ಇಂಗ್ಲೀಷು ಜನರು ಈ ರಾಜ್ಯವನ್ನು ಗೆದ್ದ ಮೇಲೆ ಭಾರತೀಯರಿಗೆ ಜ್ಞಾನಾಧಿಕ್ಯವನ್ನುಂಟುಮಾಡು ವದಕ್ಕಾಗಿ ಇಂಗ್ಲೀಷು ಭಾಷೆಯನ್ನು ಇಲ್ಲಿಗೆ ತಂದರೆಂಬ ತಿಳುವಳಿಕೆಯು ಪ್ರತ್ಯಕ್ಷರವೂ ತಪ್ಪಾಗಿರುವದು. ಮೊದಲನೆಯದೇನೆಂದರೆ: ಇಂಗ್ಲೀಷರು ಈ ಭಾಷೆಯನ್ನು ತರುವದಕ್ಕೆ ಮುಂಚೆ ರಾಜ್ಯಸೂತ್ರವು ಅವರ ಕೈಗೆ ಹೋಗಿದ್ದರೂ ಆ ಗೆಲುವು ಗೆಲುವಾಗಿರಲಿಲ್ಲ. ಎಂದು ಅವರು ಇಲ್ಲಿ ಸರಕಾರದ ದಾಸ್ಯತ್ವ ಮೊದಲಾದ ಒಣಕಾಳುಗಳನ್ನು ಚೆಲ್ಲಿ ಇಂಗ್ಲೀಷು ಭಾಷೆಯ ಬಲೆಯನ್ನು ನಮ್ಮ ಮೇಲೆ ಬೀಸಿದರೊ ಅಂದಿನಿಂದ ಅವರ ಗೆಲುವು ಆರಂಭವಾಯಿತು. ಭರತಖಂಡದಂಥ ವಿಸ್ತಾರವಾದ ರಾಜ್ಯ ವನ್ನು ತೋಳ ಬಲದಿಂದ ಹಿಡಿಯೊಳಗೆ ಅಡಗಿಸಿಕೊಳ್ಳುವದು ಆಗದ ಮಾತೆಂದು ಅವರಿಗೆ ಗೊತ್ತಿತ್ತು. ಭರತಖಂಡದ ಜೀವನವು ಧರ್ಮದ ನಾಡಿಯಿಂದ ಸಾಗುತ್ತಿರುವದೆಂದು ಅವರು ಕಂಡುಹಿಡಿದಿದ್ದರು. ಆದ್ದ ರಿಂದ ಭಾರತೀಯರನ್ನು ನಿಮ್ಮ ಸಹಧರ್ಮಿಗಳನ್ನಾಗಿ ಮಾಡಿಕೊಳ್ಳಿರೆಂದು ಇಂಗ್ಲೀಷರಿಗೆ ಅವರ ಮನಸ್ಸಾಕ್ಷಿಯು ಹೇಳಿತು. ಈ ಕಾರ್ಯಕ್ಕೆ ಇಂಗ್ಲೀಷು ಭಾಷೆಯೇ ತಕ್ಕ ಸಾಧನವೆಂದು ನಿಶ್ಚಯವಾಯಿತು. ಇದು ವಿವೇಕಪೂರ್ವಕವಾದ ಸಿದ್ಧಾಂತವೇ ಸರಿ. ಏಕೆಂದರೆ: ಒಂದು ಜನಾಂಗದ ಭಾಷೆಯು ಆ ಜನಾಂಗದ ಸರ್ವಸಂಸ್ಕಾರಗಳ ಮೂಲಮಂತ್ರ ವಾಗಿರುವದು. ಆದ್ದರಿಂದ ತಮ್ಮ ಧರ್ಮತತ್ತ್ವಗಳನ್ನು ಪ್ರತ್ಯಕ್ಷವಾಗಿ ಹೇಳುವದಕ್ಕಿಂತಲೂ ತಮ್ಮ ಭಾಷೆಯನ್ನು ತಂದರಾಯಿತೆಂದು ಅವರಿಗೆ ತಿಳಿದದ್ದು ಸಯುಕ್ತಿಕವಾಗಿದೆ. ಏಕೆಂದರೆ: ಅದು ಆ ಕೆಲಸವನ್ನು ಮಾಡಿ

ಬಿಡುವದು. ಇಂಗ್ಲೀಷು ಭಾಷೆಯು ನಮ್ಮ ದೇಶದಲ್ಲಿ ಈ ಕೆಲಸವನ್ನು ಮಾಡಿದೆ. ಭರತಖಂಡದಲ್ಲಿ ಕ್ರಿಸ್ತನ ಧರ್ಮಪಂಥವನ್ನೇ ಹರಡ ಬೇಕೆಂದು ಪಾಶ್ಚಾತ್ಯರು ಬೇಕಾದಷ್ಟು ದ್ರವ್ಯವ್ಯಯವನ್ನು ಮಾಡಿ ಉಪ ದೇಶಕರನ್ನು ಇಟ್ಟರು; ಕನ್ನಡದಲ್ಲಿಯೇ ಬೇಕಾದಷ್ಟು ಗ್ರಂಥಗಳನ್ನೂ ಬರೆದರು ಮತ್ತು ಪಾಠಶಾಲೆಗಳನ್ನಿಟ್ಟು ವಿದ್ಯೆಯನ್ನೂ ಕಲಿಸಿದರು. ಕ್ರಿಸ್ತಧರ್ಮದಿಂದ ನಮ್ಮನ್ನುದ್ಧರಮಾಡಿ ಅವರಿಗೆ ಆಗಬೇಕಾದದ್ದೇ ನಿತ್ತು? ನಮ್ಮನ್ನುದ್ಧಾರಮಾಡುವದೂ ನಮ್ಮ ಭಾಷೆಯನ್ನು ಬೆಳೆಸುವದೂ ನಮಗೆ ವಿದ್ಯೆಯನ್ನು ಕೊಡುವದೂ ಅವರ ಉದ್ದೇಶವಲ್ಲ. ನಮ್ಮ ಮನೋಧರ್ಮವನ್ನು ಅಧೀನಪಾಗಿ ಮಾಡಿಕೊಳ್ಳುವದೇ ಅವರ ಉದ್ದೇಶ. ಈ ಉದ್ದೇಶವು ಕ್ರಿಸ್ತಧರ್ಮದ ಉಪದೇಶಕರಿಂದಲೂ ಸಾಕಾದಷ್ಟು ಆಗ ಲಿಲ್ಲ. ಏಕೆಂದರೆ: ವಜ್ರದ ಮುಂದೆ ಕಲ್ಲಿದ್ದಲ ಕತ್ತಿಯದೇನು ನಡೆ ದೀತು? ಅವರು ದೇಶಭಾಷೆಯಲ್ಲಿ ಬರೆದ ಪುಸ್ತಕಗಳೂ ಅವರ ಉತ್ಸಾಹ ವನ್ನು ಹೆಚ್ಚಿಸಲಿಲ್ಲ. ಏಕೆಂದರೆ. ಅಂಧಶ್ರದ್ಧೆಯವರಾದ ನಮ್ಮ ಜನರು ಅವುಗಳನ್ನು ಆದರಿಸಲಿಲ್ಲ. ನಮಗೆ ಕೊಟ್ಟ ವಿದ್ಯೆಯೂ ಅವರ ಇಚ್ಛೆ ಯನ್ನು ಪೂರ್ಣಮಾಡಲಿಲ್ಲ. ಹೇಗೆಂದರೆ: ಅವರು ಎಷ್ಟೋ ಕಡೆ ಶಾಲೆಗಳನ್ನಿಟ್ಟಿರುವರಷ್ಟೆ? ಅಲ್ಲಿ ಓದುವ ಜನರು ವಿದ್ಯೆಯ ಪ್ರಯೋಜನ ವನ್ನು ಮಾತ್ರ ತೆಗದುಕೊಂಡು ಧರ್ಮನೀತಿಗಳ ಉಪದೇಶವನ್ನು ಒಂದು ಕಿವಿಯಲ್ಲಿ ಕೇಳಿ ಇನ್ನೊಂದು ಕಿವಿಯಲ್ಲಿ ಬಿಡುವರು. ಹೀಗಾಗಿ ಅವರ ಆ ಉಪಾಯಗಳು ಯಾವವೂ ನೆರವೇರಲಿಲ್ಲ. ಅವರ ಇಂಗ್ಲೀಷು ಭಾಷೆಯು ಅವರಿಗೆ ಸರ್ವಾರ್ಥವನ್ನೂ ಸಾಧ್ಯಮಾಡಿಕೊಟ್ಟಿತು. ಪಾಶ್ಚಾ ತ್ಯಧರ್ಮತತ್ತ್ವಗಳನ್ನು ಸಾಕ್ಷಾತ್ತಾಗಿ ತಿಳಿದುಕೊಳ್ಳದಿದ್ದರೂ ಆ ಭಾಷೆಗೆ ಜನರು ತಮ್ಮನ್ನು ತಾವು ಸಾಕುಕೊಟ್ಟ ಪ್ರಭಾವದಿಂದ ಪಾಶ್ಚಾತ್ಯಸಂಸ್ಕೃತಿ ಗಳನ್ನು ಮೈದುಂಬಿಸಿಕೊಂಡು ಇಂಗ್ಲೀಷರಿಗೆ ರಾಜನಿಷ್ಠಪ್ರಜೆಗಳಾಗುತ್ತ ಬಂದ ಹಾಗೆಲ್ಲ ಇಂಗ್ಲೀಷು ರಾಜ್ಯವು ಬೇರು ಬಿಟ್ಟುಕೊಂಡಿತು. ಈಗ ನಮ್ಮ ದೇಶದಲ್ಲಿ ಎಷ್ಟೋ ಜನರು ಕ್ರಿಸ್ತೀಜ್ಞಾನಸ್ನಾನವನ್ನು ಪಡೆಯದೆ ಇದ್ದರೂ ಅವರು ಬರೀ ವೇಷದಿಂದ ಹಿಂದುಗಳೆ ಹೊರತು ಮನಸ್ಸಿನಿಂದ ಇಂಗ್ಲೀಷರೆ. ಇಂಗ್ಲೀಷು ತಲೇ ಎತ್ತಿದ ಮೇಲೆ ನಮ್ಮ ಆರ್ಯಭಾಷೆ

ಯಾದ ಸಂಸ್ಕೃತವು ಗುಟುಕುನೀರು ಕುಡಿಯಿತು; ನಮ್ಮ ಆರ್ಯಸಂಪ್ರದಾಯಗಳು ಸ್ಮೃತಿಪಥದಲ್ಲಿ ಕೂಡ ನಿಲ್ಲದೆ ಹಾರಿಹೋದವು; ನಮ್ಮ ಮಾತೃಭಾಷಾಶ್ರವಣವು ಕಿವಿಗೆ ಸೀಸವನ್ನು ಕಾಸಿ ಹೊಯ್ದಂತೆ ಆಯಿತು; ನಮ್ಮ ಪೂರ್ವಿಕರು ನಮ್ಮ ಕಣ್ಣಮುಂದೆ ಮೂಢಶಿರೋಮಣಿಗಳೆನಿಸಿಕೊಂಡು ತಲೆಬಗ್ಗಿಸಬೇಕಾಯಿತು; ತ್ರಿಗುಣಾತೀತರಾದ ಮಹರ್ಷಿಗಳಿಂದ ನಿಬಿಡವಾಗಿದ್ದ ನಮ್ಮ ದೇಶವು ತಾಮಸರ ತವರುಮನೆಯೆನಿಸಿಕೊಂಡಿತ್ತು. ಇಷ್ಟೆಲ್ಲಾ ಏತರಿಂದ? ಮಾತೃಭಾಷೆಯ ಉಪೇಕ್ಷೆಯಿಂದ ಮತ್ತು ಇಂಗ್ಲೀಷು ಭಾಷೆಯ ಅಪೇಕ್ಷೆಯಿಂದ. ಹೀಗಾದದ್ದರಿಂದಲೆ ಇಂಗ್ಲೀಷರಿಗೆ ಇಲ್ಲಿಯ ಆಳಿಕೆ ಸರಾಗವಾಗಿರುವದು. ಹೀಗೆ ಇಂಗ್ಲೀಷು ತಮ್ಮವರಿಗೆ ಜಯವಾದ ಮೇಲೆ ಬಂದ ಭಾಷೆಯಲ್ಲ; ತಾನು ಮುಂದಾಗಿ ಬಂದು ತಮ್ಮವರಿಗೆ ಜಯವನ್ನು ತಂದುಕೊಟ್ಟ ಭಾಷೆ. ಎರಡನೆಯದೇನೆಂದರೆ: ನಮ್ಮ ಜ್ಞಾನವನ್ನು ಹೆಚ್ಚಿಸುವ ಉದ್ದೇಶದಿಂದ ಬಂದದ್ದೂ ಅಲ್ಲ. ಸರ್ವಜ್ಞಾನಗಳಿಗೂ ಮೂಲಭಂಡಾರವು ಭರತಖಂಡವೆಂದು ಪಶ್ಚಿಮದಿಕ್ಕಿನವರೂ ಒಪ್ಪಿಕೊಂಡಿದ್ದಾರೆ. ಈಶ್ವರನಿಗೆ ಪಂಚಾಕ್ಷರಿಯನ್ನುಪದೇಶಿಸುವದಕ್ಕೆ ಹೊರಗಣಿಂದ ಬರಬೇಕೆ? ಒಂದು ಪಕ್ಷ ನಮ್ಮ ಜ್ಞಾನವನ್ನು ಹೆಚ್ಚಿಸುವದಕ್ಕೆ ಇಂಗ್ಲೀಷನ್ನು ತಂದರೆಂದರೂ ಅವರ ಉದ್ದೇಶವು ಸಫಲವಾಗಲಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದು. ಏಕೆಂದರೆ: ನೂರಾರು ವರ್ಷಗಳ ಹಿಂದೆ ಎಂಥೆಂಥ ಪಂಡಿತರೂ ಜ್ಞಾನಿಗಳೂ ಆಗಿಹೋದರೊ ಅವರದೊಂದಲ್ಪಾಂಶವುಳ್ಳವರು ಕೂಡ ಈಗ ವಿರಳ. ಇನ್ನೇನು? ನಮ್ಮ ಉನ್ನತಿಗೆ ಸಾಧನವಾದ ಇತರ ಜ್ಞಾನಗಳು ಹೆಚ್ಚದಿದ್ದರೂ ಇಂಗ್ಲೀಷುಭಾಷಾಜ್ಞಾನವೇನೋ ಹೆಚ್ಚಾಯಿತೆಂಬುದಕ್ಕೆ ಸಂಶಯವಿಲ್ಲ. ಇದರ ಪರಿಣಾಮವೇನು? ಸರಕಾರದ ಉದ್ಯೋಗವನ್ನು ಸುಲಲಿತವಾಗಿ ಮಾಡಿಕೊಡುವಂಥ ಕರಣೀಕರೂ ವಕೀಲರೂ ಉಂಟಾದರು. ಹೀಗೆ ಇಂಗ್ಲೀಷು ಭಾಷೆಯು ಇಂಗ್ಲೀಷು ರಾಜ್ಯದ ಅಡಿಗಲ್ಲಾಯಿತೇ ಹೊರತು ಭಾರತೀಯರ ಉನ್ನತಿಗೇನೂ ನೆರವಾಗಲಿಲ್ಲ. ಇಷ್ಟೇ ಅಲ್ಲ. ಕನ್ನಡವನ್ನು ಹಿಂದಕ್ಕೆ ದಬ್ಬಿ ನಮ್ಮ ಅವನತಿಗೆ ಅಂಕುರಾರ್ಪಣವನ್ನು ಮಾಡಿತು.

"ರೋಗದ ಉತ್ಪತ್ತಿಯ ಕಾರಣವು ತಿಳಿದಂತಾಯಿತು. ಇನ್ನು ಪರಿಹಾರವೇನು? ಇಂಗ್ಲೀಷುಭಾಷೆಯನ್ನು ನಿರ್ಮೂಲಮಾಡಿಬಿಡಬೇಕೋ?" ಎಂದರೆ ಹಾಗೆ ಮಾಡುವದು ಯೋಗ್ಯವಲ್ಲ. ಪ್ರೇಮವನ್ನು ಮಾಡುವದು ನಮ್ಮ ಕರ್ತವ್ಯವೇ ಹೊರತು ದ್ವೇಷವನ್ನು ಮಾಡಿ ಹೊರಗೆ ಹಾಕುವದು ಎಂದಿಗೂ ನಮ್ಮ ಧರ್ಮವೆನಿಸಲಾರದು. ನಾವು ಇಂಗ್ಲೀಷುಭಾಷೆಯನ್ನೇ ಸರ್ವಸ್ವವಾಗಿಟ್ಟುಕೊಂಡಿರುವದನ್ನು ಮಾತ್ರ ಖಂಡಿತವಾಗಿ ಬಿಡಬೇಕು. ನಮ್ಮ ಮಾತೃಭಾಷೆಯೇ ನಮ್ಮ ಸರ್ವಸ್ವವಾಗಬೇಕು. ಅನೇಕ ಉಪಯುಕ್ತ ವಿಷಯಗಳು ಇಂಗ್ಲೀಷಿನಲ್ಲಿರಬಹುದು. ಅವುಗಳನ್ನೆಲ್ಲ ಕನ್ನಡಿಸುವ ಪ್ರೌಢಿಮೆಯನ್ನು ಪಡೆಯಬೇಕು. ಆ ಉದಾತ್ತವಿಚಾರಗಳನ್ನು ಮಾತೃಭಾಷೆಯ ಮೂಲಕ ಹಳ್ಳಿಹಳ್ಳಿಗೂ ಪ್ರತಿಯೊಂದು ಗುಡಿಸಲಿಗೂ ಒಯ್ಯಬೇಕು. ಮಾತೃಭಾಷೆಯಲ್ಲಿ ಬರೆದ ವಿಚಾರಗಳು ಬಹು ಬೇಗಪ್ರಸಾರವಾಗುವವೆಂಬವಕ್ಕೆ ಮೇಲೆ ಎಷ್ಟೋ ನಿದರ್ಶನಗಳಿರುವವು. ನಮ್ಮ ಮನೋಭೂಮಿಯನ್ನು ಇಂಗ್ಲೀಷುಭಾಷೆಯ ವಿಕಟತಾಂಡವದಿಂದ ಧೂಳೆಬ್ಬಿಸದೆ ಮಾತೃಭಾಷೆಯೆಂಬ ಮಾನಿನಿಯ ವಿಹಾರಭೂಮಿಯಾಗಿ ಮಾಡಬೇಕು. ಭಾಷೆಯೆಂಬುದು ಸಂಪುಟದಂತೆ; ಧರ್ಮ, ನೀತಿ, ರಾಜ್ಯ—ಇವೆಲ್ಲ ಅದರೊಳಗಿನ ರತ್ನಗಳಂತೆ. ನಮ್ಮ ಧರ್ಮ, ನಮ್ಮ ನೀತಿ, ನಮ್ಮ ಜನಾಂಗ, ನಮ್ಮ ರಾಜ್ಯ, ನಮ್ಮ ಸಂಸ್ಕೃತಿ, ನಮ್ಮ ಮಹಿಮೆ—ಎಲ್ಲ ನಮ್ಮ ಭಾಷೆಯಲ್ಲಿರುವವು. ಮಕ್ಕಳ ದುಃಖವನ್ನು ತಾಯ ಧ್ವನಿಯು ಹೇಗೆ ನಿಲ್ಲಿಸುವದೊ ಹಾಗೆ ನಮ್ಮ ದುಃಖವನ್ನು ಕಳೆಯುವದಕ್ಕೆ ನಮ್ಮ ಮಾತೃಭಾಷೆಯೊಂದೆ ಸಮರ್ಥವಾಗಿರುವದು. ಆದ್ದರಿಂದ ಮಾತೃಭಕ್ತಿಯಾಗಲಿ, ಸ್ವದೇಶಭಕ್ತಿಯಾಗಲಿ, ಮಾತೃಭಾಷಾಭಕ್ತಿಯಿಂದಲೆ ಪೂರ್ಣವಾಗುವದೆಂಬದನ್ನು ಮರೆಯಬಾರದು. ಆದ್ದರಿಂದ ಪ್ರತಿಯೊಬ್ಬನೂ ತನ್ನ ಆರ್ಯಸಂಸ್ಕೃತಿಯ ಊರ್ಜಿತಸ್ಥಿತಿಗಾಗಿ ಆತ್ಮಶಕ್ತಿಯ ಬೀಜಮಂತ್ರವಾಗಿರುವ ಕನ್ನಡದಲ್ಲಿ ಸಿದ್ಧಿಯನ್ನು ಪಡೆಯಲೇಬೇಕು.

ಇಂಗ್ಲೀಷು ಬಂದದ್ದರ ಧಕ್ಕೆ ಭರತಖಂಡದ ಎಲ್ಲ ದೇಶಭಾಷೆಗಳಿಗೂ ಬಡಿಯಿತು. ಆದರೆ ಇತರ ದೇಶಗಳು ಬೇಗ ಬೇಗ ಚೇತರಿಸಿ

ಕೊಂಡು ಎಚ್ಚತ್ತವು. ನಮ್ಮ ಕರ್ನಾಟಕವು ಮಾತ್ರ, "ಹುಟ್ಟಿದವರಿಗೆ ಅಣ್ಣ, ಬೆಳೆಯುವವರಿಗೆ ತಮ್ಮ" ಎಂಬ ದುರ್ದಶೆಗೆ ಈಡಾಗಿದೆ. ಇಂಗ್ಲೀಷು ಕಲಿತವರಿಗೆ ಕನ್ನಡವೆಂದರೆ ಮುಖವು ಸೊಟ್ಟಾಗುತ್ತದೆ. ಕನ್ನಡವು ನಮ್ಮನ್ನು ಚಿಕ್ಕಂದಿನಲ್ಲಿ ಬಹಳ ಸಂತಯಿಸಿದ ಭಾಷೆಯೆಂದರೆ ಅವರಿಗೆ ಆಶ್ಚರ್ಯವೆನಿಸುತ್ತದೆ. ಕನ್ನಡದ ಪುಸ್ತಕವನ್ನು ಓದುವುದೆಂದರೆ ಅವರಿಗೆ ಅಗೌರವ. ಅಥವಾ ಓದಿದರೂ ಅವರಿಗೇನು ಪ್ರಯೋಜನ? ಕನ್ನಡವು ಬೇಗ ಅವರಿಗೆ ಅರ್ಥವಾಗುವದಿಲ್ಲ. ಕನ್ನಡದ ಗ್ರಂಥಗಳ ಮಾತೊಂದು ಕಡೆ ಇರಲಿ, ನೆಟ್ಟಗೆ ಬರೀ ಕನ್ನಡದಲ್ಲಿ ಮಾತಾಡಬೇಕೆಂದರೆ ಕೂಡ ಅವರಿಗೆ ಶಕ್ಯವಿಲ್ಲ. ಈ ಸ್ಥಿತಿಯಲ್ಲಿ ಅವರು ಕನ್ನಡವೆಂದರೆ ಮುಸುಡಿಯನ್ನು ಮುದುರಿಕೊಳ್ಳುವದೇನು ತಪ್ಪು? ಇನ್ನು ಇಂಗ್ಲೀಷು ಬರದವರ ಸ್ಥಿತಿಯನ್ನು ನೋಡಿದರ ಅವರಿಗೆ ಇಂಗ್ಲೀಷು ಬರುವದಿಲ್ಲವೆಂದಿಷ್ಟೇ ಅಲ್ಲ; ಅವರಿಗೆ ಯಾವದನ್ನೂ ಓದುವ ರುಚಿಯೇ ಇಲ್ಲ. ಆಯಾ ದಿನಗಳ ಇಂದ್ರಿಯಾರ್ಥಗಳನ್ನು ಪೂರೈಸಿಕೊಂಡು ಅವರು ಕೃತಾರ್ಥರಾಗುತ್ತಿರುವರು. ಇನ್ನು ಗ್ರಂಥಕರ್ತರು ಗ್ರಂಥಗಳನ್ನು ಯಾರಿಗಾಗಿ ಬರೆಯಬೇಕು? ಸುದೈವದಿಂದಲೋ ದುರ್ದೈವದಿಂದಲೋ ಕನ್ನಡದಲ್ಲಿ ಉತ್ತಮಗ್ರಂಥಕರ್ತರ ಸಂಖ್ಯೆಯೂ ಹೆಚ್ಚಾಗಿಲ್ಲ. ಇದಕ್ಕೆ ಕಾರಣವಿಲ್ಲದೆ ಇಲ್ಲ. ಓದುವವರಿದ್ದರಷ್ಟೆ ಬರೆಯುವವರಿಗೆ ಉತ್ಸಾಹ! ಹೀಗಾಗಿ ಕನ್ನಡಕುವರಿಯು ಅಪ್ಪನೂ ಅಮ್ಮನೂ ಇಬ್ಬರೂ ಇಲ್ಲದ ಅನಾಥಬಾಲೆಯಾಗಿ ಸೊರಗಿದ್ದಾಳೆ. ಈ ದುರ್ದೈವಕ್ಕೇನು ಮಾಡಬೇಕು? ಈ ಉದ್ಗಾರವನ್ನೇ ಶ್ರೀ ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳೂ ಒಂದು ಕಡೆ ವ್ಯಕ್ತಗೊಳಿಸಿರುವರು.

ಕಂ|| ಲೌಕಿಕವಿದ್ಯಾನಿಪುಣ ।
ರ್ಗೀ ಕನ್ನಡಮಾಯ್ತುಲಕ್ಷ್ಯಮಿತರರರಿಯದಿ ||
ರ್ಪಾ ಕುಂದಿರ್ದಪುದಿಂತಿರ ।
ಲೀ ಕಾಲದೆ ತಾಂ ಸ್ವದೇಶಭಾಷೆಗೆ ಗತಿಯೇಂ? ||"

ಮುಂದೇನು? ಮತ್ತೇನೂ ಇಲ್ಲ "ಶಾಂತಂ ಪಾಪಂ, ಶಾಂತಂ ಪಾಪಂ" ಎಂದು ಹೇಳಿ ಮಾತೃಭಾಷೆಯ ಕಡೆಗೆ ಮನಸ್ಸನ್ನು ತಿರು

ಗಿಸುವ ಆತ್ಮಶಕ್ತಿಯನ್ನು ಕೊಡೆಂಬು ದೇವರ ಮುಂದೆ ನಿಟ್ಟಿಸಿರಿಡುವದು; ಇಷ್ಟೆ.

## ರಾಜಭಕ್ತಿ

ಮನುಷ್ಯನು ಮಾತೃ, ಮಾತೃಭೂಮಿ, ಮಾತೃಭಾಷೆ, ಪಿತೃ, ಗುರು, ಅತಿಥಿ—ಮೊದಲಾದ ಎಷ್ಟೋ ಜನರ ಮೇಲೆ, ಬರೀ ವ್ಯಾವಹಾರಿಕದೃಷ್ಟಿಯಿಂದ ಮಾತ್ರವೇ ಅಲ್ಲ, ಧರ್ಮದೃಷ್ಟಿಯಿಂದ ಕೂಡ ಪ್ರೇಮವನ್ನು ಮಾಡುವದಕ್ಕೆ ಬದ್ಧನಾಗಿರುತ್ತಾನೆ. ಅವುಗಳಲ್ಲಿ ಹೆಚ್ಚು ಲಕ್ಷ್ಯವನ್ನು ಆಕರ್ಷಿಸುವಂಥ ಕೆಲವು ವಿಷಯಗಳನ್ನು ಆರಿಸಿ ಮೇಲೆ ದಿಗ್ದರ್ಶನಾರ್ಥವಾಗಿ ಹೇಳಿದ್ದಾಯಿತು. ಇನ್ನು ಮನುಷ್ಯನ ಆತ್ಮಶಕ್ತಿಯು ಜೀವಳಿಗೆಯು ಸಂಬಂಧವಾದ ವಿವಿಧವಿಚಾರಗಳನ್ನಾರಂಭಿಸಬಹುದಾದರೂ ಪ್ರೇಮದ ಪಾತ್ರತೆಯ ಸಂಬಂಧವಾದ ಇನ್ನೊಂದು ವಿಷಯವನ್ನು ಉಲ್ಲೇಖಿಸುವದಕ್ಕೆ ಲೇಖನಿಯು ತವಕಗೊಳ್ಳುತ್ತಿದೆ. ಆದ್ದರಿಂದ ಅದೊಂದು ವಿಷಯವನ್ನು ಮುಗಿಸಿ ಮುಂದೆ ವಿಷಯಾಂತರವನ್ನಾರಂಭಿಸುತ್ತೇವೆ. ಈಗ ಹೇಳಬೇಕಾಗಿ ಉಳಿದಿರುವ ವಿಷಯವು ರಾಜಭಕ್ತಿ. ರಾಜಭಕ್ತಿಯೆಂಬ ಮಾತು ಇತರದೇಶಗಳಲ್ಲಿಯೂ ಕಂಡುಬಂದರೂ ಭರತಖಂಡದ ರಾಜಭಕ್ತಿಗೂ ಇತರದೇಶಗಳ ರಾಜಭಕ್ತಿಗೂ ಅಜಗಜಾಂತರವಿದೆ. ಇತರದೇಶಗಳಲ್ಲಿರುವ ರಾಜಭಕ್ತಿಯು 'ವ್ಯವಹಾರದೃಷ್ಟಿಯಿಂದ ಅಗತ್ಯವಾಗುವಂಥದ್ದು. ಅಂಥ ಭಕ್ತಿಯದೇನು ಹೆಚ್ಚುಗಾರಿಕೆ? ಅದು ಭಯದಿಂದ ಹುಟ್ಟಿದ ಭಕ್ತಿ. ಈ ಬಗೆಯ ಭಕ್ತಿಯು ಪಶುಗಳಲ್ಲಾದರೂ ಕಂಡುಬರುವದು. ನಮ್ಮ ದೇಶದ ಭಕ್ತಿಯು ಅದಲ್ಲ. ಆದಕ್ಕೆ ನಾವು ಭಕ್ತಿಯೆಂಬ ಪವಿತ್ರವಾದ ಶಬ್ದವನ್ನು ಉಪಯೋಗಿಸುವದಿಲ್ಲ. ನಮ್ಮ ಭಕ್ತಿಯೆಂಬ ಶಬ್ದಕ್ಕೆ ಪ್ರೇಮಭಕ್ತಿಯೆಂದೇ ಅರ್ಥ.

ಅದು ಬರೀ ವ್ಯವಹಾರದ ಅಗತ್ಯದಿಂದಲ್ಲ; ಧರ್ಮದೃಷ್ಟಿಯಿಂದಲೂ ಅದು ಅಗತ್ಯ. ರಾಜಭಕ್ತಿಗೆ ಧರ್ಮಸ್ವರೂಪವು ಈ ಭರತಖಂಡದಲ್ಲಿ ಹೊರತು ಬೇರೆ ಯಾವ ದೇಶದಲ್ಲಿಯೂ ಇಲ್ಲ.

ಧರ್ಮಕ್ಕೂ ರಾಜಭಕ್ತಿಗೂ ಸಂಬಂಧವೇನೆಂಬುದು ಇಲ್ಲಿ ತಿಳಿಯತಕ್ಕ ವಿಷಯವಾಗಿದೆ. ಈಗ ನಮ್ಮ ದೇಶದಲ್ಲಿ ಎಷ್ಟೋ ಕಾಲದಿಂದ ರಾಜನಿಗೂ ಧರ್ಮಕ್ಕೂ ಸಂಬಂಧವಿಲ್ಲವೆಂಬ ತಿಳಿವಳಿಕೆ ಬಂದಿದೆ. ಪರಧರ್ಮದ ರಾಜರು ಬರೀ ತಮ್ಮ ಸುಖೋಪಭೋಗಕ್ಕಾಗಿ ಆಳುವ ಪಕ್ಕೆ ಮೊದಲು ಮಾಡಿದ್ದೆ ಇದಕ್ಕೆ ಕಾರಣ. ನಮ್ಮ ರಾಜಭಕ್ತಿಗೆ ವಿಷಯರಾದ ರಾಜರು ನಮ್ಮ ಧರ್ಮದ ಪೋಷಕರು. ಅವರ ಕರ್ತವ್ಯವು ಪ್ರಜೆಗಳ ವ್ಯವಹಾರದ ಸುವ್ಯವಸ್ಥಿತಿಯನ್ನು ಕಾಯುವದೊಂದೆ ಅಲ್ಲ; ವ್ಯವಹಾರದ ಸುವ್ಯವಸ್ಥಿತಿಯಿಂದ ಸಾಧಿಸಬೇಕಾದ ಧರ್ಮೋನ್ನತಿಯನ್ನು ಕಾಯುವದೂ ಅವರ ಕೊರಳಿಗೇ ಬಿದ್ದದ್ದು. ಏಕೆಂದರೆ: ಭರತಖಂಡದಲ್ಲಿ ಬರೀ ಐಹಿಕವೆ ಮುಖ್ಯಧ್ಯೇಯವಲ್ಲ; ಮುಖ್ಯಧ್ಯೇಯವು ಧರ್ಮ. ಆದ್ದರಿಂದ ಅದರ ಸಂರಕ್ಷಕನಾಗದವನು ಎಂಥ ರಾಜನು? ಆ ರಾಜನಿಂದ ಪ್ರಜೆಗಳ ಉನ್ನತಿ ಹೇಗಾದೀತು? ಪೂರ್ವದ ನಮ್ಮ ಆರ್ಯವಂಶದ ರಾಜರೆಲ್ಲ ಧರ್ಮವನ್ನೂ ವ್ಯವಹಾರವನ್ನೂ ಕೂಡ ಪಾಲಿಸುವಂಥವರಾಗಿದ್ದರು; ಆದ್ದರಿಂದ ನಮ್ಮ ಧರ್ಮಶಾಸ್ತ್ರಕಾರರು ರಾಜಭಕ್ತಿಯನ್ನು ಧರ್ಮದ ಅಂಗವಾಗಿ ಮಾಡಿದರು. ನಮ್ಮ ಪೂರ್ವಿಕರು ಧರ್ಮದ ಸಂಬಂಧವಿಲ್ಲದೆ ಬರೀ ವಿಷಯಸುಖದ ಸುಸ್ಥಿತಿಗೆ ಮಾತ್ರ ನೆರವಾದವರಿಗೆ ಭಕ್ತಿಯನ್ನು ತೋರಿಸಬೇಕೆಂದು ಎಂದಿಗೂ ಹೇಳಲಾರರು. ಏಕೆಂದರೆ: ವಿಷಯಸುಖಗಳೆಲ್ಲ ಅವರಿಗೆ ತುಚ್ಛವಾದವುಗಳು. ಇನ್ನೇನು! ವಿಷಯಸುಖದ ಸುಸ್ಥಿತಿಗೆ ನೆರವಾದವರ ಮೇಲೆ ಕೂಡ ಪ್ರೇಮವನ್ನು ತೋರಿಸತಕ್ಕದ್ದೆ. ವ್ಯವಹಾರದೃಷ್ಟಿಯಿಂದ ಅಗತ್ಯವಾದ ಇದು ಸರ್ವಸಾಧಾರಣವಾಗಿ ತನಗೆ ತಾನೇ ನಡೆಯುವದು. ಇದನ್ನು ಹೇಳುವ ಶ್ರಮೆಯು ಶಾಸ್ತ್ರಕ್ಕೇಕೆ? ವ್ಯವಹಾರದಲ್ಲಿ ಸರ್ವಸಾಧಾರಣವಾದ ಮಾತುಗಳನ್ನೆಲ್ಲ ಹೇಳುತ್ತ ಹೋದರೆ ಶಾಸ್ತ್ರಕ್ಕೆ ಪಾರವೆಲ್ಲಿ? ಎಲ್ಲಿ ವ್ಯವಹಾರದೃಷ್ಟಿಗೆ ಪರೆ ಬರುವದೊ ಆ ಕೇಲನ್ನು ನೋಡಿ ಶಾಸ್ತ್ರವು

ಅಲ್ಲಿ ತನ್ನ ಶಸ್ತ್ರಪ್ರಯೋಗವನ್ನು ಮಾಡುವುದು. ಆದ್ದರಿಂದ ನಮ್ಮ ಧರ್ಮಶಾಸ್ತ್ರಕಾರರ ದೃಷ್ಟಿಯಿಂದ ರಾಜನೆಂದರೆ ನಮ್ಮ ಧರ್ಮವನ್ನು ರಕ್ಷಿಸುವವನೆಂದರ್ಥ. ಪ್ರಜೆಗಳ ಧರ್ಮಾಚರಣೆಗೆ ಪ್ರೋತ್ಸಾಹವನ್ನು ಕೊಟ್ಟು ಅವರ ಧರ್ಮಮಾರ್ಗದಲ್ಲಿ ಅಡ್ಡಬರುತ್ತಿದ್ದ ಎಡರುಗಳನ್ನೆಲ್ಲ ಕಡಿದು ಧರ್ಮಾಭಿವೃದ್ಧಿಗೆ ಸೌಕರ್ಯಗಳನ್ನು ಕಲ್ಪಿಸುವ ರಾಜನ ಮೇಲೆ ಭಕ್ತಿಯನ್ನು ಮಾಡಬೇಕೆಂದು ಹೇಳುವದು ಶಾಸ್ತ್ರಕ್ಕೆ ಭೂಷಣವಾಗಿದೆ. ಈ ರಾಜಭಕ್ತಿಗೆ ಪಾತ್ರನಾದ ರಾಜನು ಪ್ರಜೆಗಳ ವ್ಯಾವಹಾರಿಕ ಸುಖಸೌಕರ್ಯಗಳ ಯೋಗಕ್ಷೇಮವನ್ನು ನೋಡುವದು ತನ್ನ ಪ್ರಜೆಗಳ ಪರಮಾರ್ಥಮಾರ್ಗದ ಪ್ರತಿಬಂಧಗಳನ್ನು ಕಳೆಯುವದಕ್ಕಾಗಿರುವದೆ ಹೊರತು ತನ್ನ ದೇಹೇಂದ್ರಿಯಾದಿಗಳ ವೈಭವವನ್ನು ಬೆಳೆಸಿಕೊಂಡು ಮೆರೆಯುವದಕ್ಕಾಗಿರುವದಿಲ್ಲ. ಹಾಗೆ ಸ್ವಾರ್ಥೈಕಪರಾಯಣನಾದ ರಾಜನು ತನ್ನ ಸ್ವಾರ್ಥವನ್ನು ಪ್ರತಿಕ್ಷಣದಲ್ಲಿಯೂ ಪಡೆಯುತ್ತಲೆ ಹೋಗುತ್ತಿರುವದರಿಂದ ಅವನ ಕೃಪೆಯ ಫಲವು ಅದರಲ್ಲಿಯೇ ಮುಗಿದು ಹೋಗುವದು. ಅವನು ತನ್ನ ಮೇಲೆ ಪ್ರಜೆಗಳ ಕಡೆಯಿಂದ ಭಕ್ತಿಯನ್ನು ನಿರೀಕ್ಷಿಸುವದಕ್ಕೆ ದಾರಿ ಎಲ್ಲಿದೆ? ಸ್ವಾರ್ಥವೂ ಭಕ್ತಿಯೂ ಎರಡೂ ಎಂದೆಂದಿಗೂ ಒಂದು ಕಡೆ ಸೇರುವದಿಲ್ಲ. ಅವೆರಡರ ಸಂಬಂಧವು ಎಣ್ಣೆಯ ಮತ್ತು ಸೀಗೇಕಾಯಿಗಳ ಸಂಬಂಧವನ್ನು ಹೋಲುವದು. ಆದ್ದರಿಂದ ರಾಜನಿಗೆ ಪ್ರಜೆಗಳ ಕಡೆಯಿಂದ ಪಡೆಯುವ ಭಕ್ತಿಯ ಆಶೆ ಇದ್ದರೆ ಸ್ವಾರ್ಥವನ್ನು ಬಿಡಬೇಕು; ಸ್ವಾರ್ಥದ ಆಶೆಯಿದ್ದರೆ ಭಕ್ತಿಯ ಆಶೆಯನ್ನು ಬಿಡಬೇಕು.

ನಮ್ಮ ಆರ್ಯರು 'ರಾಜ' ಎಂಬ ಶಬ್ದವನ್ನು ಪಯೋಗಿಸಿರುವದರಲ್ಲಿಯೇ ಅದರ ಅರ್ಥವಿದೆ. 'ರಾಜ'ನೆಂದರೆ ಜನರ ಮನಸ್ಸನ್ನು ರಂಜನೆಗೊಳಿಸುವವನೆಂದರ್ಥ. ಧರ್ಮಭೂಮಿಯಾದ ಭರತಖಂಡದಲ್ಲಿ ಧರ್ಮಾಭಿವೃದ್ಧಿಯ ಹೊರತು ಬೇರೆ ಯಾವದು ಜನರ ಮನಸ್ಸನ್ನು ರಂಜನೆಗೊಳಿಸೀತು? ಧರ್ಮಪ್ರೋತ್ಸಾಹಕರಾದ ರಾಜರು ಬರೀ ಪುರಾಣಕಾಲದಲ್ಲಿ ಮಾತ್ರವೇ ಇದ್ದರೆಂತಲ್ಲ; ಇತಿಹಾಸಕಾಲದಲ್ಲಿ ಕೂಡ ಎಷ್ಟೋ ಜನರು ಆಗಿಹೋದರು. ಯುಗಧರ್ಮಕ್ಕನುಸರಿಸಿ ಬರಬರುತ್ತ ಧರ್ಮ

ಪ್ರೋತ್ಸಾಹಕರು ಕಡಿಮೆಯಾಗಬಹುದೆಂಬ ಊಹೆಯೂ ಸಯುಕ್ತಿಕವಲ್ಲ. ಏಕೆಂದರೆ, ಕೃತತ್ರೇತಾದ್ವಾಪರಗಳಲ್ಲಿಯೂ ಒಂದೊಂದು ವೇಳೆ ಕಲಿಯಂತ ನಿಷಿದ್ಧಕರ್ಮಾಚರಣೆ ನಡೆದಿರುವದುಂಟು. ಕಲಿಯುಗದಲ್ಲಾದರೂ ಕೃತಯುಗದಂತೆ ಸತ್ಕರ್ಮಾಚರಣೆ ನಡೆದಿರುವದೂ ಉಂಟು. ಆದ್ದರಿಂದ ದೃಷ್ಟಿಯಿಂದ ಒಂದು ಕಾಲಕ್ಕೆ ಯಾವ ಯುಗದ ಹೆಸರಿದ್ದರೂ ರಾಜರು ಧರ್ಮದ ಯೋಗಕ್ಷೇಮವನ್ನು ನಡಿಸಿ ಅದನ್ನು ಪೋಷಿಸುವದರಿಂದ ಅದು ಕೃತಯುಗವೆನಿಸಿಕೊಳ್ಳುವದಕ್ಕೆ ಸಂಶಯವಿಲ್ಲ. ಕಲಿಯುಗದಲ್ಲಿಯೆ ಆಗಿದ್ದ ಅಶೋಕನ ಆಳಿಕೆಯ ಪರೀಕ್ಷವನ್ನು ನೋಡಿರಿ. ಅವನು ನಿರಪರಾಧಿಗಳಾದ ಪಶುಪಕ್ಷಿಗಳ ವಧೆಯನ್ನು ತಡೆಗಟ್ಟಿದನು; ಪ್ರಜೆಗಳು ತಮ್ಮ ರೋಗಪರಿಹಾರಕ್ಕಾಗಿ ಪರದೇಶದ ಔಷಧಿಗಳ ಕಡೆಗೆ ನಿಲುಕಿಸಿಕೊಂಡು ನೋಡಬೇಕಾಗಿಲ್ಲವಂತೆ ಅಲ್ಲಲ್ಲಿಯೇ ಸಿಕ್ಕುವ ಮೂಲಿಕೆಗಳಿಂದ ಆಗುವ ವಿಶ್ವಸನೀಯವಾದ ಚಿಕಿತ್ಸೆಗಳನ್ನು ಅವುಗಳ ಅನುಪಾನದೊಡನೆ ಎಲ್ಲರಿಗೂ ತಿಳಿಯುವಂತೆ ಎಲ್ಲ ಕಡೆಯಲ್ಲಿಯೂ ಕಲ್ಲುಗಳ ಮೇಲೆ ಬರೆಸಿದನು; ತನ್ನ ದೇಶದಲ್ಲಿ ಎಲ್ಲೆಲ್ಲಿಯೂ ಬೌದ್ಧರ ಚೈತ್ಯಗಳನ್ನು ನಿರ್ಮಿಸಿ ತಲೆಯೆತ್ತಿದ ಕಡೆ ಬೌದ್ಧಧರ್ಮೋಪದೇಶಗಳು ಕಣ್ಣಿಗೆ ಬೀಳುವಂತೆ ಮಾಡಿದನು; ಅಸಂಖ್ಯಾತರಾದ ಉಪದೇಶಕರನ್ನು ಸಿದ್ಧಗೊಳಿಸಿ ಅವರನ್ನು ಹತ್ತುದಿಕ್ಕುಗಳಿಗೂ ಹರಡಿದನು; ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೂ ಮಗಳಿಗೂ ಒಳ್ಳೇ ವಿವಾಹಾರ್ಹವಾದ ವಯಸ್ಸಿನಲ್ಲಿ ಸಂನ್ಯಾಸವನ್ನು ಕೊಟ್ಟು ಅವರನ್ನು ಬೌದ್ಧಧರ್ಮದೇವತೆಯ ಸೇವೆಗೆ ಧಾರೆಯೆರೆದನು; ದೇಶಹಿತಕ್ಕಾಗಿ ಆಗಬೇಕಾದ ಈ ಬಗೆಯ ಕಾರ್ಯಗಳಿಗೆ ಹಣವೆಲ್ಲ ವೆಚ್ಚವಾಗಿ ಬರಿಗೈಯಾಗಲು ತಾನು ಉಣ್ಣುತ್ತಿದ್ದ ಚಿನ್ನದ ತಟ್ಟೆಯನ್ನು ಕೂಡ ಮಾರಿದನು.

ಮೊನ್ನೆ ಮೊನ್ನೆ ಆಗಿಹೋದ ಅಹಲ್ಯಾಬಾಯಿಯ ಚರಿತ್ರೆಯನ್ನು ನೋಡಿರಿ. ಆಕೆಯ ನಡೆವಳಿಕೆಯು ಸೋಮೇಶ್ವರಶತಕದ ಈ ಕೆಳಗಿನ ಪದ್ಯವನ್ನು ನೆನಪುಗೊಡುವದು.

ವೃ॥ “ಬಲವಂತರ್ಬಲವಾಗಲಿಕ್ಕೆಲದವರ್ಮಿತ್ರತ್ವಮಂ ಮಾಡಲುಂ।
ನೆಲನೆಲ್ಲಂ ಬೆಸಲಾಗೆ ಧಾನ್ಯತತಿಯಂ ನಿಷ್ಕಾರಣಂ ದಂಡಮಂ।

ಕೊಳವೆಲ್ಲರ್ಸುಖಿರಾಗೆ ನಂಬುಗೆಗಸ್ತೋಹಂ ಬಾರದಾಳಲ್ಕಿಜಂ ।
ಬಲುಭಾಗ್ಯಂ ದೊರೆಗಸ್ತುದೈ ಹರಹರಾ ಶ್ರೀಚೆನ್ನ
ಸೋಮೇಶ್ವರಾ ॥”

ಇದನ್ನು ಅಹಲ್ಯಾಬಾಯಿಗೆ ಅನ್ವಯಿಸಿಕೊಳ್ಳಿರಿ. ತನ್ನ ಅಧಿಕಾರಿಯು ಅಪುತ್ರಳಾದ ಒಬ್ಬ ವಿಧವೆಯ ಆಸ್ತಿಯನ್ನು ಬಾಕಿ ಭಂಡಾರಕ್ಕೆ ಸೇರಿಸಿಕೊಂಡಿದ್ದನ್ನು ಅರಿಯುತ್ತಲೆ ಅಹಲ್ಯಾಬಾಯಿಯು ಆ ಅಧಿಕಾರಿಗೆ ತಕ್ಕ ಬುದ್ಧಿಯನ್ನು ಹೇಳಿ ಆ ಆಸ್ತಿಯನ್ನು ಆಕೆಗೆ ಹಿಂದಕ್ಕೆ ಕೊಡಿಸಿ ಪತಿಯ ಸದ್ಗತಿಗಾಗಿ ವಿನಿಯೋಗಿಸೆಂದು ಆಕೆಗೆ ಉಪದೇಶವನ್ನು ಮಾಡಿದಳು. ಒಮ್ಮೆ ಮತ್ತೊಬ್ಬ ವಿಧವೆಯು ತಾನಾಗಿ ತನ್ನ ಅಪಾರವಾದ ಆಸ್ತಿಯನ್ನು ತಂದು ಮುಂದಿಟ್ಟರೂ ಅದನ್ನು ಮೂಸಿ ನೋಡದ ಆ ಹಣದ ವೆಚ್ಚವನ್ನು ಆಕೆಯಿಂದಲೆ ಮಾಡಿಸಿ ನರ್ಮದಾ ನದಿಗೆ ಸೋಪಾನಗಳನ್ನು ಕಟ್ಟಿಸಿದಳು. ಯಾತ್ರಿಕರಿಗೆ ಯಮದೂತಪ್ರಾಯರಾಗಿದ್ದ ಭಿಲ್ಲರೆಂಬ ಕಾಡುಜನರನ್ನು ನಿಗ್ರಹಿಸಿ ಅವರನ್ನು ದಾರಿಗೆ ತಂದು ಯಾತ್ರಿಕರ ಯೋಗಕ್ಷೇಮದ ಸಂರಕ್ಷಣೆಯ ಭಾರವನ್ನು ಅವರ ಮೇಲೆಯೇ ಹೊರಿಸಿ, ಅವರು ವ್ಯವಸಾಯ ಮೊದಲಾದ ಸದ್ವೃತ್ತಿಗಳಿಂದ ಸುಖಜೀವನವನ್ನು ಮಾಡಿಕೊಂಡಿರುವಂತೆ ಮಾಡಿದಳು. ತನ್ನ ಭಂಡಾರದ ಬಾಯಿ ತುಂಬಿದ್ದನ್ನು ನೋಡಬೇಕೆಂಬ ಇಚ್ಛೆ ಇಲ್ಲದೆ ತನ್ನ ಪ್ರಜೆಗಳ ಕಿರುಮನೆಗಳಲ್ಲಿ ನವನಿಧಿಗಳು ನಾಟ್ಯವಾಡುತ್ತಿರಲೆಂದು ಆಕೆಯ ಹಂಬಲಿಕೆ ಇತ್ತು. ಪ್ರಜೆಗಳು ಬೆವರು ಸುರಿಸಿಕೊಂಡು ದುಡಿದು ಕೊಟ್ಟ ಹಣವನ್ನು ತನ್ನ ಪಾಂಚಭೌತಿಕದೇಹದ ಪುಷ್ಟಿಗೆ ವಿನಿಯೋಗಿಸದೆ ಪ್ರಜೋಪಕಾರಕವಾದ ದುರ್ಗಗಳು, ಮಾರ್ಗಗಳು, ದೇವಾಲಯಗಳು, ಕೆರೆಕಟ್ಟೆಗಳು, ಸತ್ರಗಳು, ಘಟ್ಟಗಳು, ಅರವಟ್ಟಿಗೆಗಳು— ಮುಂತಾದ ಧರ್ಮಕಾರ್ಯಗಳನ್ನು ಮಾಡಿದಳು.

ಶಿವಾಜಿಯ ಧರ್ಮನಿಷ್ಠೆಯೂ ಸ್ತೋತ್ರಾರ್ಹವಾಗಿದೆ. ತನ್ನ ಸೈನಿಕರು ಒಮ್ಮೆ ಒಂದು ಹಳ್ಳಿಯಲ್ಲಿ ಒಬ್ಬ ಬಡವೆಯ ಮನೆಯನ್ನು ಸೂರೆಮಾಡಿಕೊಂಡರಂತೆ. ಕಿವಿಗೆ ಬೀಳುತ್ತಲೆ ಶಿವಾಜಿಯು ಆ ಮುದುಕಿಯನ್ನು ತನ್ನ ಕಡೆಗೆ ಬರಮಾಡಿಕೊಂಡು ತನ್ನವರ ತಪ್ಪ

ನಯಕ್ಕೆ ಮನ್ನಣೆಯನ್ನು ಬೇಡಿ ಆಕೆಗಾಗಿದ್ದ ನಷ್ಟವನ್ನೆಲ್ಲ ತುಂಬಿ ಕೊಟ್ಟನು.

ಅಕ್ಬರನ ಚರಿತ್ರೆಯಲ್ಲಿಯೂ ಧರ್ಮದೃಷ್ಟಿಯು ಉಜ್ಜ್ವಲವಾಗಿ ಕಾಣುತ್ತಿದೆ; ನೋಡಿರಿ. ಅವನು ವೃಂದಾವನಕ್ಕೆ ಬರುತ್ತಿದ್ದ ಯಾತ್ರಿಕರ ಮೇಲಿನ ತೆರಿಗೆಯನ್ನೂ ಎಲ್ಲಾ ಹಿಂದುಗಳ ಮೇಲಿನ ತಲೇತೆರಿಗೆಯನ್ನೂ ತೆಗೆದು ಅವರ ಧರ್ಮಕ್ಕೇ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟನು; ಗೋವಧೆಯನ್ನು ಸಂಪೂರ್ಣವಾಗಿ ನಿಲ್ಲಿಸಿದನು, ಮದ್ಯಪಾನದ ವಾಸನೆ ಕೂಡ ಇರದಂತೆ ಮಾಡಿದನು; ಮಾಂಸಾಹಾರವನ್ನು ನಿಷೇಧಿಸಿದನು; ಸಿಂಹಾಸನದ ಮೇಲೆ ಧಿಟ್ಟತನದಿಂದ ಹತ್ತದೆ ಅದರ ಮೇಲೆ ಭಗವಂತನು ಪಟ್ಟಾಭಿಷಿಕ್ತನಾಗಿರುವನೆಂದು ತಿಳಿದು ತಾನು ಒಂದು ಪಕ್ಕದಲ್ಲಿ ನಿಂತು ಪರಿಚಾರಕನಂತೆ ರಾಜ್ಯಭಾರವನ್ನು ಮಾಡುತ್ತಿದ್ದನು; ಅವನು ವಿದ್ಯಾರ್ಥಿಗಳಿಗೂ ಅಂಗಹೀನರಿಗೂ ಬಡವರಿಗೂ ಯತಿಗಳಿಗೂ ರಾಜ್ಯದಲ್ಲಿ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿದನು; ಯಾವ ಸಾಧುಸಂತರನ್ನಾದರೂ ಸನ್ಮಾನಿಸುತ್ತಿದ್ದನು, ಸಹಗಮನಕ್ಕೆ ಮುಂದುವರಿಯುವ ಸ್ತ್ರೀಯರನ್ನು ಬಲಾತ್ಕರಿಸಕೂಡದೆಂದು ಮಾಡಿದನು; ಸೂರ್ಯೋಪಾಸನೆಯನ್ನೂ ನಡೆಸಿದನು; ಸರ್ವಧರ್ಮಗಳನ್ನೂ ಸಂಭಾವಿಸಿದನು

ಈ ರೀತಿಯಲ್ಲಿ ಇವರೆಲ್ಲರೂ ತಮ್ಮ ದೇಹೇಂದ್ರಿಯಾದಿಗಳ ಸುಖದ ದುರಾಶೆಯ ಪಿಶಾಚಿಗೆ ವಶರಾಗದೆ ಹೋದದ್ದು ಇವರ ಆತ್ಮಶಕ್ತಿಯನ್ನು ವ್ಯಕ್ತಪಡಿಸುತ್ತದೆ. ಹೀಗೆ ಆತ್ಮಶಕ್ತಿಯಿಂದ ಧರ್ಮವನ್ನು ಹಿಡಿದು ನಡೆಯುವ ರಾಜನಿಗೆ ಯಾವನಾದರೂ ರಾಜಭಕ್ತಿಯನ್ನು ತೋರಿಸದೆ ಹೋದರೆ, ಅದಕ್ಕಾಗಿ ಆ ರಾಜನು ಅವನನ್ನು ಶಿಕ್ಷಿಸಲಿ ಬಿಡಲಿ, ಧರ್ಮದೃಷ್ಟಿಯಿಂದ ಅವನಿಗೆ ಪರಲೋಕದ ಶಿಕ್ಷೆ ತಪ್ಪುವದಿಲ್ಲ.

ರಾಜಭಕ್ತಿಯನ್ನು ಧರ್ಮದೃಷ್ಟಿಯಿಂದ ಕರ್ತವ್ಯವೆಂದು ಮಾಡಿದ ನಮ್ಮ ಪೂರ್ವಿಕರು ಅಧರ್ಮಪರನಾದ ರಾಜನನ್ನು ಹೆಸರು ಕೂಡ ಇಲ್ಲದಂತೆ ಮಾಡುವದಕ್ಕೂ ಹಿಂದೆ ಮುಂದೆ ನೋಡಲಿಲ್ಲ. ವೇಮನೆಂಬ ರಾಜನು ರಾಜ್ಯವನ್ನು ತನ್ನ ಭೋಗೋಪಕರಣವಾಗಿ ಮಾಡಿಕೊಂಡು ಕಾಲಿಗೆ ಸರಪಳಿ ಇಲ್ಲದ ಮದ್ದಾನೆಯಂತೆ ಸ್ವೇಚ್ಛೆಯಿಂದ ವಿಹರಿಸುತ್ತ

ಧರ್ಮಕ್ಕೆ ಹಾನಿಯನ್ನುಂಟುಮಾಡುತ್ತಿರಲು ಪರಮಸಾತ್ತ್ವಿಕಶಿರೋಮಣಿಗಳಾದ ಋಷಿಗಳೇ ತಮ್ಮ ಕೋಪಾಗ್ನಿಯಿಂದ ಅವನನ್ನು ಭಸ್ಮೀಭೂತನನ್ನಾಗಿ ಮಾಡಿದರೆಂದು ಪುರಾಣದಲ್ಲಿ ಕಥೆಯಿದೆ. ರಾಜನ ಉಪಭೋಗಕ್ಕೆ ರಾಜ್ಯವಲ್ಲ; ರಾಜ್ಯದ ಸುಸ್ಥಿತಿಗಾಗಿ ರಾಜ. ನೀತಿಶಾಸ್ತ್ರಕಾರರ ಮಾತನ್ನು ನೋಡಿರಿ.

ಕಂ|| ಮಡದಿಯ ಮಂಗಲಸೂತ್ರದ ।
ದೃಢತ್ವದಿಂ ಪುರುಷನಾಯಿಸಂ ವರ್ಧಿಪವೊಲ್ ||
ನುಡಿಯಲ್ಲ ಜೆಗಳ ಸುಸ್ಥಿತಿ ।
ಯೊಡನಿರ್ಪುದು ಜನಪರಭ್ಯುದಯಸರ್ವಸ್ವಂ ||

ರಾಜನು ತಾನು ಏನುಮಾಡಿದರೂ ದಕ್ಕುವದೆಂದು ಬರೀ ಲೌಕಿಕ ದೃಷ್ಟಿಯಿಂದ ತಿಳಿದು ಮನಸ್ಸು ಬಂದಂತೆ ವರ್ತಿಸುವದು ತಪ್ಪು. ಅವನ ಹೃದಯದಲ್ಲಿ ಪಾಪಭೀತಿಯು ಪ್ರತಿಕ್ಷಣದಲ್ಲಿಯೂ ಜಾಗರೂಕವಾಗಿರಬೇಕು ಒಮ್ಮೆ ಅಶೋಕನ ಕಾಲದಲ್ಲಿ ಅವನ ಮಂತ್ರಿಯು ಬೌದ್ಧಭಿಕ್ಷುಗಳಿಂದ ಒಂದು ಕಾರ್ಯವನ್ನು ಮಾಡಿಸಬೇಕಾದಾಗ ಅವಿವೇಕದಿಂದ ಕೆಲವರನ್ನು ಕೊಂದನು. ಮಂತ್ರಿಯ ತಪ್ಪಿನಿಂದ ರಾಜನಿಗೇನಾದರೂ ಪಾಪ ತಟ್ಟೀತೆಂದು ಸಾಮಾನ್ಯವಾಗಿ ಯಾರೂ ಹೆದರಲಾರರಷ್ಟೆ. ಹೀಗಿದ್ದರೂ ಆ ವಾರ್ತೆಯನ್ನು ಕೇಳಿದ ಕೂಡಲೆ ಅಶೋಕನು ಎದೆಯೊಡೆದವನಾಗಿ ತನಗಿನ್ನೇನುಗತಿಯೆಂದು ಅನ್ನನೀರನ್ನು ಬಿಟ್ಟು ಅದರ ಪರಿಹಾರಕ್ಕಾಗಿ ಗುರುವಿಗೆ ಶರಣುಹೋದನು. ಮುಂದೆ ಗುರು ಅವನನ್ನು ಸಮಾಧಾನಗೊಳಿಸಿದನು. ಆ ಮಾತು ಹಾಗಿರಲಿ. ಎಲ್ಲ ರಾಜರಿಗೂ ಈ ಪಶ್ಚಾತ್ತಾಪದ ನಡೆವಳಿಕೆಯು ಅನುಕರಣೀಯವಾಗಿದೆ. ದುಷ್ಕೃತ್ಯಗಳನ್ನು ಸಾಕ್ಷಾತ್ತಾಗಿ ಮಾಡುವವರು ಅಧಿಕಾರಿಗಳಾದರೂ ಅವರು ರಾಜನ ಬೆಂಬಲದಿಂದಲೆ ಮಾಡುತ್ತಾರೆ. ಆದ್ದರಿಂದ ರಾಜನು ಅಧಿಕಾರಿಗಳ ದುರ್ವರ್ತನದ ಫಲಕ್ಕೆ ದೂರನಾಗುವದಿಲ್ಲ. ಆ ದುಷ್ಟಾಧಿಕಾರಿಗೆ ತಕ್ಕ ಶಾಸನವನ್ನು ಮಾಡಿ ಆದ ಅನ್ಯಾಯವನ್ನು ತಿದ್ದಿದರೆ ಮಾತ್ರ ಅವನು ಅದರ ಅಪವಾದದಿಂದ ಪಾರಾಗಬಹುದೆ ಹೊರತು ತನ್ನವರ ದುಷ್ಕಾರ್ಯಗಳನ್ನು ಕೇಳಿಯೂ ಎಮ್ಮೆಯ ಮೇಲೆ ಮಳೆಗರೆದಂತೆ ಇದ್ದರೆ ಧರ್ಮದೇವತೆಯು ಅವನ

ಕಣ್ಣಿಗೆ ಧೂಳನ್ನು ಎರಚದೆ ಇರುವದಿಲ್ಲ. ಧರ್ಮದ ಮುಂದೆ ಅರಸನು ದೊಡ್ಡವನಲ್ಲ; ತಿರುಕನು ಚಿಕ್ಕವನಲ್ಲ. ಈ ಪಾಪಕ್ಕೆ ಹೆದರಿಯೆ ನಮ್ಮ ಪೂರ್ವದ ರಾಜರೆಲ್ಲರೂ ತಮ್ಮ ಪ್ರತಿಯೊಂದು ಪ್ರಧಾನಕಾರ್ಯಕ್ಕೂ ತಕ್ಕ ಆಲೋಚನೆಯನ್ನು ಹೇಳುವದಕ್ಕಾಗಿ ಗುರುಗಳ ಆಶ್ರಯವನ್ನು ಪಡೆದುಕೊಂಡಿರುತ್ತಿದ್ದರು. ವ್ಯವಹಾರದೃಷ್ಟಿಯಿಂದ ನೋಡಿದರೆ ರಾಜನು ಹೊರಗಣ್ಣಿಗೆ ಸರ್ವತಂತ್ರಸ್ವತಂತ್ರನಾಗಿ ಕಂಡುಬಂದರೂ ಒಳಗಣ್ಣಿಗೆ ಅವನು ಗುರ್ವಾಜ್ಞಾಪರತಂತ್ರನಾಗಿಯೆ ಕಾಣುತ್ತಿದ್ದನು. ಈ ಗುರುಸತ್ತಾಧೀನರಾಜ್ಯವು ಬರೀ ಪುರಾಣಕಾಲಕ್ಕೆ ಮುಗಿಯಲಿಲ್ಲ. ಮಹಾರಾಷ್ಟ್ರದ ಶಿವಾಜಿಯ ಸ್ವರಾಜ್ಯದ ಸೂತ್ರವು ಶ್ರೀ ಸಮರ್ಥ ರಾಮದಾಸರಲ್ಲಿತ್ತು. ಕರ್ಣಾಟಕದ ಹುಕ್ಕಬುಕ್ಕರ ಸ್ವರಾಜ್ಯದ ಬೀಗದ ಕೈ ಶ್ರೀ ವಿದ್ಯಾರಣ್ಯಸ್ವಾಮಿಗಳಲ್ಲಿತ್ತು. ಈ ಗುರುಸತ್ತಾಪ್ರಭಾವದಿಂದಲೆ ಆ ರಾಜ್ಯಗಳಲ್ಲಿ ಅಧರ್ಮಗಳು ಸಂಘಟಿಸದೆ ಅವು ಆದರ್ಶಗಳಾಗಿ ಪರಿಣಮಿಸಿದವು ಭರತಖಂಡದಲ್ಲಿಯೆ ಇನ್ನೂ ಎಷ್ಟೋ ರಾಜ್ಯಗಳು ಕಣ್ಣುಬಿಟ್ಟು ಮುಚ್ಚಿರಬಹುದು. ಅವುಗಳ ಹೆಸರು ಕೂಡ ಉಳಿಯದೆ ಇವೆರಡೂ ಎಲ್ಲರ ಕಣ್ಣ ಮುಂದೆಯೂ ಬಂದು ನಿಲ್ಲುವದಕ್ಕೆ ಆ ರಾಜ್ಯಗಳು ಗುರುಸತ್ತಾಧೀನತೆಯ ಪವಿತ್ರತೆಯನ್ನು ಪಡೆದಿದ್ದವೆ ಕಾರಣ. ಧರ್ಮಸರ್ವಸ್ವರಾದ ಗುರುಗಳ ಉಪದೇಶವಿಲ್ಲದೆ ಬರೀ ಲೌಕಿಕದೃಷ್ಟಿಯಿಂದ ಮಾಡುವ ಆಳಿಕೆಯಲ್ಲಿ ಪಾಪಲೇಪವು ಹೇಗೆ ತಪ್ಪೀತು? ಲೌಕಿಕರ ಮನಸ್ಸು ಲೌಕಿಕವಿಚಾರದಿಂದ ಕಶ್ಮಲವಾಗಿ ಪಾಪದ ಪಾಪತ್ವವನ್ನೇ ತಿಳಿಯಲಾರದಾಗಿರುವದು. ಆತ್ಮವಿಚಾರಪರರಾದ ಗುರುಗಳಿಗೆ ಪಾಪವು ಬಿಳೀ ಗೋಡೆಯ ಮೇಲಿನ ಕರೀ ಚುಕ್ಕೆಯಂತೆ ಎದ್ದು ಕಾಣುವದು. ಇಂಥ ಗುರುಗಳ ಆಜ್ಞೆಯಂತೆ ನಡೆಯುವ ರಾಜ್ಯವು ಪ್ರಜೆಗಳ ಮನಸ್ಸಿನಲ್ಲಿ ಒಳ್ಳೇ ಆತ್ಮಶಕ್ತಿಯ ತೇಜಸ್ಸನ್ನು ತುಂಬುವಂಥದ್ದಾಗಿರುವದು.

ಭಕ್ತಿಯು ದೇವರ ಸಂಬಂಧವಾಗಿರಬೇಕೆಂಬ ವಿಷಯದಲ್ಲಂತು ಸಂದೇಹವಿಲ್ಲ. ತಾಯಿ, ಸ್ವದೇಶ, ಗೋವು, ಸ್ವಭಾಷೆ—ಇವುಗಳಲ್ಲಿ ಕೂಡ ದೇವತ್ವವಿರುವದೆಂದು ಕಂಡುಬಂದದ್ದರಿಂದ ಇವುಗಳ ಮೇಲೆ ಭಕ್ತಿಯನ್ನು ಮಾಡುವದೂ ಯೋಗ್ಯವಾಯಿತು. ರಾಜನಲ್ಲಿ ಅಂಥದ್ದೇನಿದೆ?

ಎಂದರೆ ವಿಷ್ಣುವಿನ ಅಂಶವಿಲ್ಲದವನು ರಾಜನಾಗಲಾರನೆಂದು ಒಂದು ವಾಕ್ಯವಿದೆ. ನಮಗೆ ಯಾವ ರಾಜನಲ್ಲಿ ವಿಷ್ಣುವಿನ ಅಂಶವು ಕಾಣುವದೋ ಅವನು ನಮ್ಮ ಶಾಸ್ತ್ರಸಿದ್ಧನಾದ ರಾಜ. ಅವನಲ್ಲಿ ತೋರುವ ವಿಷ್ಣುತ್ವಕ್ಕಾಗಿಯೇ ಅವನ ಮೇಲೆ ನಾವು ಭಕ್ತಿಯನ್ನು ಮಾಡಬೇಕು. ವಿಷ್ಣುತ್ವವನ್ನು ನಾವು ಹೇಗೆ ಗುರ್ತು ಹಿಡಿಯಬೇಕು ? ವಿಷ್ಣುವೆಂದರೆ ವ್ಯಾಪಕನೆಂದರ್ಥ. ಒಬ್ಬ ರಾಜನು ತನ್ನ ರಾಜ್ಯವನ್ನೆಲ್ಲ ತನ್ನಂತೆ ನೋಡಿದರೆ--- ಪ್ರಜೆಗಳ ಸುಖದುಃಖವನ್ನೆಲ್ಲ ತನ್ನ ಸುಖದುಃಖದಂತೆ ಭಾವಿಸಿದರೆ ಅದೇ ಅವನ ವಿಷ್ಣುತ್ವವಾಗಿರುವದು. ಅವನ ದೇಹವು ಎಂಟೇ ಗೇಣಿನದಾಗಿದ್ದರೂ ಅವನ ಅಭಿಮಾನವು ರಾಜ್ಯವನ್ನೆಲ್ಲ ವ್ಯಾಪಿಸಿಕೊಂಡಿರಬೇಕು. ಮತ್ತೊಂದೇನೆಂದರೆ: ವಿಷ್ಣು ಸತ್ತ್ವಪ್ರಧಾನನಾದವನು. ಆದದರಿಂದ ರಾಜರಲ್ಲಿರುವ ಸತ್ತ್ವಗುಣವೇ ವಿಷ್ಣುತ್ವವನ್ನು ಪ್ರಕಟಮಾಡುವದು. ಹೊರಗಣ ಅಟ್ಟಹಾಸದಿಂದ ತೃಪ್ತನಾಗುವ ರಜೋಗುಣದ ಅಥವಾ ಇತರರನ್ನು ಮುರಿಬಡಿದು ತನ್ನ ಮೇಲ್ಮೆಯನ್ನು ಮಾಡಿಕೊಳ್ಳ ಹೋಗುವ ತಮೋಗುಣದ ರಾಜರಲ್ಲಿ ವಿಷ್ಣುತ್ವವು ತೋರದೆ ಹೋಗಬಹುದು. ಇದಕ್ಕೆ ಉಪಾಯವಿಲ್ಲ. ಸತ್ತ್ವಗುಣವೇ ವಿಷ್ಣುತ್ವದ ಲಕ್ಷಣ. ಇದನ್ನು ಕೂಡ ಪುರಾಣಕಾಲದ ಮಾತೆನ್ನಬಾರದು. ಶಿವಾಜಿಯ ಸತ್ತ್ವಗುಣವನ್ನು ನೋಡಿರಿ. ಲೋಕದಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ರಾಜ್ಯವನ್ನು ಸಂಪಾದಿಸುವ ಬಾಯಾರಿಕೆ ಬಾಧಿಸುತ್ತಿರುವದು ; ಮತ್ತು ಹಾಗೆ ಸಂಪಾದಿಸಿದ ಮೇಲಂತು, ಅದನ್ನು ಅದರ ನಿಜವಾದ ಅಧಿಕಾರಿಗಳಿಗೆ ಬಿಟ್ಟುಕೊಡಬೇಕೆಂದರೂ ಕೂಡ ಮನಸ್ಸು ಎಷ್ಟುಮಾತ್ರವೂ ಸಡಿಲವಾಗುವದಿಲ್ಲ. ಇದು ರಾಜಸಿಕರ ಮತ್ತು ತಾಮಸಿಕರ ಲಕ್ಷಣ. ಒಮ್ಮೆ ಶಿವಾಜಿಯು ತನ್ನ ಬಾಹುಬಲದಿಂದಲೆ ದೊಡ್ಡದೊಂದು ರಾಜ್ಯವನ್ನು ಸಂಪಾದಿಸಿದನಷ್ಟೆ. ಶ್ರೀ ಸಮರ್ಥರಾಮದಾಸರು ಭಿಕ್ಷಕ್ಕೆ ತನ್ನ ಮನೆಯ ಮುಂದಕ್ಕೆ ಬಂದಾಗ ಅವನು ಅಂಥ ದೊಡ್ಡವರಿಗೆ ತಾನು ಕೊಡಬಹುದಾದದ್ದೇನೆಂಬದನ್ನು ಕ್ಷಣಕಾಲ ವಿಚಾರಮಾಡಿ ಒಡನೆ ತನ್ನ ಸಂಪೂರ್ಣರಾಜ್ಯವನ್ನು ಮನಸ್ಸಿನಲ್ಲಿಯೆ ದಾನಮಾಡಿ ದಾನಪತ್ರವನ್ನು ಬರೆದು ತಂದು ಅವರ ಜೋಳಿಗೆಯಲ್ಲಿ ಹಾಕಿದನು. ಗುರುತ್ವವನ್ನು ಕಂಡೊಡನೆ ಹೀಗೆ ಸರ್ವಸ್ವ ತನ್ನ

ವನ್ನೂ ದಾನಮಾಡಿ ಅವರ ಹಿಂದೆ ಭಿಕ್ಷೆಗೆಕೂಡ ಹೊರಡುವದಕ್ಕೆ ಸನ್ನದ್ಧ ನಾದದ್ದಕ್ಕಿಂತ ಸತ್ತ್ವೋತ್ಕರ್ಷತೆಯ ಪ್ರದರ್ಶನಕ್ಕೆ ಇನ್ನೇನು ಬೇಕು ? ಶಿವಾಜಿಗೆ ತಕ್ಕ ಗುರುಗಳು ರಾಮದಾಸರು; ರಾಮದಾಸರಿಗೆ ತಕ್ಕ ಶಿಷ್ಯ ಶಿವಾಜಿ. ಸಮರ್ಥರು ತಮಗೆ ಈ ತೊಡಕು ಬೇಡವೆಂದು ಅದನ್ನು ಹಿಂದಕ್ಕೆ ಕೊಡಹೋಗಿ ತಮ್ಮ ವೈರಾಗ್ಯಸ್ವರೂಪವಾದ ಆತ್ಮಶಕ್ತಿಯನ್ನು ತೋರಿಸಿ ದರು; ಒಮ್ಮೆ ಕೊಟ್ಟದ್ದನ್ನು ಮತ್ತೆ ತೆಗೆದುಕೊಳ್ಳಲು ಒಪ್ಪದೆ ಶಿವಾಜಿಯು ತನ್ನ ಧರ್ಮೋತ್ಕರ್ಷತೆಯ ಆತ್ಮಶಕ್ತಿಯನ್ನು ತೋರಿಸಿದನು. ಕೊನೆಗೆ ರಾಮದಾಸರು ಶಿವಾಜಿಯನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡು ತಮ್ಮ ಸೇವಕನಾಗಿ ನೀನೇ ಆಳುತ್ತಿರೆಂದು ಅವನಿಗೆ ಕಟ್ಟುಮಾಡಿದರು. ಇಷ್ಟಾದ ಮೇಲೆ ಶಿವಾಜಿಯು ಶ್ರೀಸಮರ್ಥರ ಕಾವಿಯ ಶಾಟಿಯನ್ನು ತನ್ನ ಧ್ವಜ ವಾಗಿ ಮಾಡಿಕೊಂಡು ತನ್ನ ಆಳಿಕೆಯನ್ನು ಸಾಗಿಸಿದನು. ಗುರುಸತ್ತೆ ಯನ್ನು ಇಷ್ಟು ಗೌರವಿಸುವ ಆತ್ಮಶಕ್ತಿಯೇನು ಸಾಮಾನ್ಯವೆ ? ಇದಕ್ಕಿಂತ ಸತ್ತ್ವಗುಣವು ಇನ್ನು ಹೇಗೆ ವ್ಯಕ್ತವಾಗಬೇಕು ! ಇಂಥ ರಾಜಭಕ್ತಿಯನ್ನು ತೋರಿಸದೆ ಹೋದರೆ ಧರ್ಮಭ್ರಷ್ಟತೆಯುಂಟಾಗದೆ ಹೇಗೆ ಬಿಟ್ಟೀತು ? ಇಂಥವರ ಮೇಲೆ ತೋರಿಸುವ ಪ್ರೇಮವೇ ರಾಜಭಕ್ತಿ. ಪರಂಪರಾಗತವಾದ ಕ್ಷಾತ್ರತೇಜಸ್ಸನ್ನು ಊರ್ಜಿತಗೊಳಿಸಬೇಕೆಂದು ಪ್ರತಾಪನು ರಣಾಂಗಣ ದಲ್ಲಿ ಹೆಣಗುತ್ತಿರುವಾಗ ಒಮ್ಮೆ ಅವನಿಗೆ ಮೈತುಂಬ ಗಾಯಗಳಾಗಿ ಶಕ್ತಿ ಕುಂದಿತು ; ಅವನಲ್ಲಿ ನಿಜವಾದ ರಾಜತ್ವವನ್ನು ಮನಗಂಡಿದ್ದ ಮಾನ್ನಾ ಎಂಬ ರಾಜಭಕ್ತಿಪರಾಯಣನು ರಾಜಚಿಹ್ನವಾದ ಛತ್ರಿಯನ್ನು ತನ್ನ ಮೇಲೆ ಹಿಡಿಸಿಕೊಂಡು, ಶತ್ರುಸೇನೆಯನ್ನೆಲ್ಲ ತನ್ನ ಕಡೆಗೆ ಆಕರ್ಷಣೆ ಮಾಡಿ, ಪ್ರತಾಪನು ಉಳಿದುಕೊಳ್ಳುವದಕ್ಕೆ ಅವಕಾಶವನ್ನು ಮಾಡಿ ಕೊಟ್ಟು ರಣದೇವತೆಗೆ ತನ್ನ ತಲೆಯನ್ನು ಅರ್ಪಿಸಿ, ತನ್ನ ಆತ್ಮಶಕ್ತಿ ಯನ್ನು ಪ್ರಕಟಮಾಡಿದನು.

ಪ್ರತಾಪನ ತಂದೆಯಾದ ಉದಯಸಿಂಗನು ಬಾಲ್ಯದಲ್ಲಿ ರಕ್ಷಕರಿಲ್ಲದೆ ಇದ್ದದ್ದನ್ನು ನೋಡಿ ಒಬ್ಬ ಅಧಿಕಾರಿಯು ಅವನನ್ನು ಕೊಂದು ತಾನು ಸಿಂಹಾಸನವನ್ನೇರಬೇಕೆಂದು ಒಳಸಂಚು ನಡೆಸಿದನು. ಆಗ ಧರ್ಮದೃಷ್ಟಿ ಯಿಂದ ಉದಯಸಿಂಗನು ಯೋಗ್ಯನಾದ ಅಧಿಕಾರಿಯಾಗಿದ್ದದ್ದನ್ನು ವಿಚಾರ

ಮಾಡಿ ರಾಜಭಕ್ತಿನಿಷ್ಠಳಾದ ಪನ್ನೆಯೆಂಬ ವೀರದಾಸಿಯು ಉದಯ ಸಿಂಗನ ಬದಲಾಗಿ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನು ಬಲಿಗೊಟ್ಟು ಉದಯಸಿಂಗನೊಡನೆ ಆ ಸ್ಥಲವನ್ನು ಬಿಟ್ಟು ಪಾರಾಗಿ ತನ್ನ ಆತ್ಮಶಕ್ತಿಯನ್ನು ಪ್ರಕಾಶವಾಡಿದಳು ಷಾಯಿಸ್ತೆಖಾನನೆಂಬುವನು ಚಾಕಣವೆಂಬ ಕೋಟೆಯನ್ನು ಹಿಡಿದುಕೊಂಡಾಗ ಶಿವಾಜಿಯ ಕಡೆಯವನಾಗಿ ಅದನ್ನು ರಕ್ಷಿಸುವದಕ್ಕೆ ಮಹಾಪರಾಕ್ರಮವನ್ನು ತೋರಿಸಿದ ಪಿರಂಗಜಿ ಎಂಬವನನ್ನು ತನ್ನ ಸೇನೆಗೆ ಸೇರಿಸಿಕೊಳ್ಳಬೇಕೆಂದು ಖಾನನು ಅವನ ಮುಂದೆ ತನ್ನ ಮಾತಿನ ಜೆಡಗನ್ನೆಲ್ಲ ತೋರಿಸಿದನು. ಶಿವಾಜಿಯಲ್ಲಿ ವಿಷ್ಣುತ್ವವನ್ನು ಮನಗಂಡಿದ್ದ ಪಿರಂಗಿಜಿಯು ಷಾಯಿಸ್ತೆಖಾನನ ಬೇಳುವೆಯ ಮಾತಿಗೆ ಮರುಳಾಗದೆ ತನ್ನ ಅತ್ಮಶಕ್ತಿಯಿಂದ ಶಿವಾಜಿಯ ಮೇಲಿನ ರಾಜಭಕ್ತಿಯನ್ನೇ ಪ್ರಕಟಮಾಡಿದನು.

ರಾಜಭಕ್ತಿಯನ್ನು ಒಂದು ಧರ್ಮವಾಗಿ ಭಾವಿಸಿರುವ ಭರತಖಂಡದಲ್ಲಿ ರಾಜಭಕ್ತಿಗೆ ಎಂದೆಂದೂ ಕೊರತೆ ಬರುವದಿಲ್ಲ. ಇನ್ನು ಕೆಲವು ರಾಜರ ಮೇಲೆ ಜನರು ರಾಜಭಕ್ತಿಯನ್ನು ತೋರಿಸದಿದ್ದರೆ ಅದು ಜನರ ತಪ್ಪಲ್ಲ. ರಾಜನಲ್ಲಿ ವಿಷ್ಣುತ್ವವನ್ನು ಕಂಡರೆ ಅವರು ಅದನ್ನು ಗೌರವಿಸದೆ ಬಿಡುವದಿಲ್ಲ. ರಾಜಭಕ್ತಿಗೆ ಪಾತ್ರರಾಗದ ರಾಜರನ್ನೇ, ವಿಷ್ಣುತ್ವವಿಲ್ಲದ್ದರಿಂದ, ದುರ್ದೈವಿಗಳೆನ್ನಬೇಕು. ಅಂಥವರ ಸಂಬಂಧವನ್ನು ಪಡೆಯಬೇಕಾದರೆ ಭಾರತೀಯರ ಪ್ರಾಕ್ತನದಲ್ಲಿಯೂ ಒಂದು ದೋಷವಿರಬೇಕಾಗುವದರಿಂದ ಮಾತ್ರ ಜನರೂ ದುರ್ದೈವಿಗಳು. ಕಬೀರನು ತನ್ನ ದೈವೀಸಂಪತ್ತಿನಿಂದ ಮುಂದೆ ಬರುತ್ತಿರಲು, ಅದನ್ನು ನೋಡಿ ಸಹಿಸಲಾರದ ಕೆಲವರು ಕುಹಕರು ಅವನ ಮೇಲೆ ಕಾಶೀರಾಜನಿಗೆ ಚಾಡಿಯನ್ನು ಹೇಳಿದರು. ಆಗ ಅರಸನಾಗಿದ್ದ ಸಿಕಂದರಲೋಡಿಯು ತನ್ನ ಆಳುಗಳ ಮೂಲಕ ಕಬೀರನನ್ನು ಆಸ್ಥಾನಕ್ಕೆ ಬರಮಾಡಿಕೊಂಡನು. ಆಗ ಅಲ್ಲಿಗೆ ಬಂದ ಕಬೀರನು ಲೋಡಿಗೆ ವಂದನೆಯನ್ನು ಮಾಡದೆ ಸ್ವಸ್ಥನಾಗಿದ್ದನು. ರಾಜನಿಗೆ ವಂದಿಸೆಂದು ಅಲ್ಲಿದ್ದವರು ಹೇಳಲು ಕಬೀರನು ತಾನು ಪಂಚೇಂದ್ರಿಯಗಳ ಮುಂದೆ ಭಿಕ್ಷೆಯನ್ನು ಬೇಡುವ ಭಿಕಾರಿಗೆ ವಂದಿಸುವವನಲ್ಲವೆಂದನು. ಈ ದಿಟ್ಟತನವನ್ನು ನೋಡಿ ಲೋಡಿಯು ಅವನನ್ನು ಕಾಶಿಯಿಂದಲೆ ಹೊರಕ್ಕೆ ಹಾಕಿದನು. ಇಂಥ

ಧರ್ಮದ್ವೇಷಿಗಳಿರುವ ಕಡೆ ಇರುವವಕ್ಕಿಂತಲೂ ಕಗ್ಗಾಡಾವರೂ ಮೇಲೆಂದು ಕಬೀರನು ಅಲ್ಲಿಂದ ಹೊರಟೇಹೋದನು : ಮತ್ತೆ ಬರಲಿಲ್ಲ. ವಿಷ್ಣುತ್ವವಿರುವ ಕಡೆ ತನುಮನಧನಗಳನ್ನೆಲ್ಲ ಅರ್ಪಣೆಮಾಡಿ ರಾಜಭಕ್ತಿಯನ್ನು ತೋರಿಸುವದು ಹೇಗೆ ಆತ್ಮಶಕ್ತಿಯೊ ಅನರ್ಹವಾದ ಕಡೆಗಳಲ್ಲಿ ರಾಜಭಕ್ತಿಯನ್ನು ಪ್ರಕಾಶಮಾಡದೆ ಇರುವದೂ ಹಾಗೆಯೇ ಆತ್ಮಶಕ್ತಿ. ವಿಷ್ಣುತ್ವವಿರುವ ಕಡೆ ರಾಜಭಕ್ತಿಯನ್ನು ತೋರಿಸದಿರುವದು ತಪ್ಪಾಗುವದು.

# ಬ್ರಹ್ಮಚರ್ಯ

ಹಿಂದಿನ ಪ್ರಕರಣದಲ್ಲಿ ಸೂಚನೆ ಮಾಡಿದಂತೆ ಆತ್ಮಶಕ್ತಿಯ ವಿವಿಧ ಸ್ವರೂಪಗಳಲ್ಲಿ ಒಂದೊಂದನ್ನು ತೆಗೆದುಕೊಂಡು ಅದರ ವಿಚಾರವನ್ನು ನಡೆಸಬೇಕಾಗಿರುವದಷ್ಟೆ. ವ್ಯಾವಹಾರಿಕವ್ಯಕ್ತಿಗಳಲ್ಲಿ ದೇವತ್ವದ ಕಡೆಗೆ ಲಕ್ಷ್ಯವನ್ನು ಕೊಟ್ಟಾಗ ಮಾತೃಸ್ವರೂಪವು ಮುಂದೆ ಬಂದು ನಿಂತಂತೆ ಆತ್ಮಶಕ್ತಿಯ ವಿವಿಧಸ್ವರೂಪಗಳಲ್ಲಿ ಪ್ರಾಶಸ್ತ್ಯವನ್ನು ನೋಡಿ ಆರಿಸಿದಾಗ ಬ್ರಹ್ಮಚರ್ಯವು ಮುಂದೆ ಬಂದು ನಿಲ್ಲುವದು. ಏಕೆಂದರೆ: ಬ್ರಹ್ಮಚರ್ಯವು ನಿಜವಾಗಿ ಆತ್ಮಶಕ್ತಿಯ ಸರ್ವಸ್ವರೂಪಗಳ ಮಾತೃಸ್ಥಾನವು. ಬ್ರಹ್ಮಚರ್ಯಸ್ವರೂಪವಾದ ಆತ್ಮಶಕ್ತಿಯು ಎಷ್ಟರಮಟ್ಟಿಗೆ ಮೈಗೂಡಿಕೊಳ್ಳುವದೊ ಅದರ ಉಳಿದ ಸ್ವರೂಪಗಳೂ ಅಷ್ಟರ ಮಟ್ಟಿಗೆ ತಮ್ಮಷ್ಟಕ್ಕೆ ತಾವೇ ಪುಷ್ಟಿಗೊಳ್ಳುವವು. ಹೀಗೆ ಬ್ರಹ್ಮಚರ್ಯಸ್ವರೂಪವು ಆತ್ಮಶಕ್ತಿಯ ಉಳಿದ ಎಲ್ಲ ಸ್ವರೂಪಗಳಿಗೂ ಚೈತನ್ಯಪ್ರದವಾಗಿರುವದರಿಂದ ಅದರ ವಿಚಾರವು ಇಲ್ಲಿ ಮೊದಲುಮಾಡಲಾಗುವದು.

ಬ್ರಹ್ಮಚರ್ಯವೆಂದರೆ ದ್ವಿಜರಲ್ಲಿರುವ ನಾಲ್ಕು ಆಶ್ರಮಗಳಲ್ಲಿ ಮೊದಲನೆಯದೆಂದು ಒಂದರ್ಥವು ಗೊತ್ತಿದೆ. ದ್ವಿಜರಲ್ಲಿ ಹುಟ್ಟಿದ ಯಾವನಿಗೂ ಬ್ರಹ್ಮಚಾರಿಯಾಗದೆ ಗೃಹಸ್ಥನಾಗುವದಕ್ಕೂ ವಾನಪ್ರಸ್ಥನಾಗುವದಕ್ಕೂ

ಷುತಿಯಾಗುವದಕ್ಕೂ ಬರುವದಿಲ್ಲ. ಒಬ್ಬನು ಗೃಹಸ್ಥನೂ ವಾನಪ್ರಸ್ಥನೂ ಆಗದೆ ಯತಿಯಾಗಬಹುದು; ಆದರೆ ಬ್ರಹ್ಮಚಾರಿಯಾಗದೆ ಯತಿಯಾಗುವದಕ್ಕೆ ಅವಕಾಶವಿಲ್ಲ. ಬ್ರಹ್ಮಚಾರಿಯಾಗದೆಹೋದರೆ ದ್ವಿಜತ್ವವೇ ಉಳಿಯುವದಿಲ್ಲ. ಬ್ರಹ್ಮಚಾರಿಯಾಗುವದೆಂದರೇನು? ಬಾಲ್ಯಾವಸ್ಥೆಯು ಕಳೆಯುತ್ತಲೇ ದ್ವಿಜನು ಬ್ರಹ್ಮೋಪದೇಶವನ್ನು ಪಡೆದು ಆಮೇಲೆ ಗುರುಕುಲವಾಸವನ್ನು ಮಾಡಿ ಅದರ ಅನುಭವವನ್ನು ಪಡೆಯುವದು. ಬ್ರಹ್ಮವೆಂದರೆ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾದ ಭಗವತ್ಸ್ವರೂಪ. "ಈ ಆಶ್ರಮಸಂಸ್ಕಾರವು ದ್ವಿಜವರ್ಗಕ್ಕೆಂದಮೇಲೆ ಉಳಿದವರಿಗೆ ಇಲ್ಲವೆಂದಾಯಿತು. ಹಾಗಾದರೆ ದ್ವಿಜರಲ್ಲದವರಿಗೆ ಆತ್ಮಶಕ್ತಿಯ ಸೌಲಭ್ಯವೇ ಇಲ್ಲವಾಗುವದಲ್ಲ!" ಎಂದರೆ ಹೊರಗಣ ಸಂಸ್ಕಾರದ ದೃಷ್ಟಿಯಿಂದ ಉಳಿದವರಿಗೆ ಆ ಸೌಲಭ್ಯವು ಇಲ್ಲದೆಹೋದರೂ ಅದರ ತತ್ತ್ವಾರ್ಥವನ್ನು ಅನುಕರಣಮಾಡುವದಕ್ಕೆ ಬಾರದ ಹಾಗೆ ಇಲ್ಲ. ದ್ವಿಜನು ತನಗೆ ಉಪದಿಷ್ಟವಾದ ಬ್ರಹ್ಮವಸ್ತುವಿನ ಸ್ವರೂಪಜ್ಞಾನವನ್ನು ಮಾಡಿಕೊಳ್ಳುವದಕ್ಕಾಗಿ ಗುರುವಿನ ಬಳಿಗೆ ಹೋಗಿ ವೇದಾಂತಶ್ರವಣ ಮಾಡಬೇಕಾಗುತ್ತದೆ. ಶಾಸ್ತ್ರಪದ್ಧತಿಯಿಂದ ಅದನ್ನು ಚೆನ್ನಾಗಿ ಜೀರ್ಣಿಸಿಕೊಳ್ಳಬೇಕಾದರೆ ವಿದ್ಯಾರ್ಥಿಯು ತರ್ಕ, ವ್ಯಾಕರಣ ಮೊದಲಾದ ಶಾಸ್ತ್ರಗಳನ್ನು ಓದುವದೂ ಎಷ್ಟೋ ವೇಳೆ ಅಗತ್ಯವಾಗುತ್ತದೆ. ಆದರೆ ವಿದ್ಯಾರ್ಥಿಯ ಮುಖ್ಯ ಧ್ಯೇಯವು ಬ್ರಹ್ಮಸಾಕ್ಷಾತ್ಕಾರದ ಕಡೆಗೆ ಇರಬೇಕು. ಮನುಷ್ಯಜನ್ಮವು ಬಂದಿರುವದು ತರ್ಕ, ವ್ಯಾಕರಣ ಮೊದಲಾದವುಗಳ ಪಾಂಡಿತ್ಯವನ್ನು ಪಡೆಯುವದಕ್ಕಲ್ಲ; ಬ್ರಹ್ಮಸ್ವರೂಪವನ್ನು ಕಣ್ಣಾರೆ ಕಾಣುವದಕ್ಕೆ. ತರ್ಕ, ವ್ಯಾಕರಣ ಮೊದಲಾದವುಗಳು ವೇದಾಂತಜ್ಞಾನಕ್ಕೆ ಸಾಧನಮಾತ್ರದವುಗಳಾಗಿರುವವು. ಕೆಲವರು ತರ್ಕವ್ಯಾಕರಣಗಳ ಜ್ಞಾನಮಾತ್ರದಿಂದಲೇ ತಮ್ಮ ಅಧ್ಯಯನವನ್ನು ಮುಗಿಸುತ್ತಾರೆ. ಇದು ಇಲ್ಲಿ ಉದಾಹರಣೆಗೆ ಯೋಗ್ಯವಲ್ಲ. ವಿಚಾರದೌರ್ಬಲ್ಯವುಳ್ಳವರ ನಡೆವಳಿಕೆಯು ನಮಗೆ ಅನುಕರಣೀಯವಲ್ಲ. ಆದ್ದರಿಂದ ಶಿಷ್ಯನು ಗುರುವಿನ ಬಳಿಯಲ್ಲಿ ವೇದಾಂತಜ್ಞಾನವನ್ನು ಪಡೆಯುವವೇ ಮುಖ್ಯ. ಇಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಬ್ರಹ್ಮಚರ್ಯಾಶ್ರಮವಾಗುತ್ತಲೆ ಗೃಹಸ್ಥಾಶ್ರಮವಾದ್ದರಿಂದ

ಗೃಹಸ್ಥಾಶ್ರಮದಲ್ಲಿ ಬೇಕಾಗುವ ಸುಖಸೌಕರ್ಯಗಳ ಸಂಪಾದನೆಗೆ ತಕ್ಕ ಯೋಗ್ಯತೆಯನ್ನು ಪಡೆಯುವದೆ ಬ್ರಹ್ಮಚರ್ಯಾಶ್ರಮದ ಗುರುಕುಲದಿಂದಾಗಬೇಕಾದ ಕಾರ್ಯವೆಂದು ಕೆಲವರಿಗೆ ತೋರಬಹುದು. ಬ್ರಹ್ಮಚರ್ಯಾಶ್ರಮವು ಬರೀ ಗೃಹಸ್ಥಾಶ್ರಮಕ್ಕೇ ಏಕೆ? ಉಳಿದ ಎಲ್ಲಾ ಆಶ್ರಮಗಳಿಗೂ ಸಾಧನವಾದದ್ದೆಂಬದೇನೋ ನಿಜ. ಆದರೆ ಗೃಹಸ್ಥಾಶ್ರಮದಲ್ಲಿ ಬೇಕಾಗುವ ಸುಖಸೌಕರ್ಯಗಳನ್ನು ಸಂಪಾದಿಸುವದು ಬ್ರಹ್ಮಚರ್ಯಾಶ್ರಮದ ಉದ್ದೇಶವಲ್ಲ. ಬರೀ ಅಷ್ಟರ ಯೋಗ್ಯತೆಯನ್ನು ಪಡೆಯುವದಕ್ಕೆ ಗುರುಕುಲವಾಸದಂಥ ಕಠಿನಸಾಧನವು ಬೇಕಾಗಿಲ್ಲ. ಗುರುಕುಲವಾಸದ ಕಷ್ಟಕ್ಕೆ ಮೈಗೊಡದೆ ಮನೆಯಲ್ಲಿ ಸ್ವೇಚ್ಛೆಯಿಂದ ಉಂಡುತಿಂದು ಗೃಹಸ್ಥಾಶ್ರಮದ ಸೌಕರ್ಯಗಳ ಸಂಪಾದನೆಯ ಯೋಗ್ಯತೆಯನ್ನು ಪಡೆದವರು ನಮ್ಮ ಕಣ್ಣಮುಂದೆಯೇ ಎಷ್ಟೋ ಜನರಿದ್ದಾರೆ. ಹಾಗಾದರೆ ಗುರುಕುಲವಾಸದಿಂದ ಗೃಹಸ್ಥಾಶ್ರಮಕ್ಕೆ ಆಗುವ ಸಹಾಯವೇನು? ಅದನ್ನು ಹೇಳುವದಕ್ಕೆ ಮೊದಲು ಇನ್ನೊಂದು ಮಾತನ್ನು ನಡುವೆ ಹೇಳಬೇಕಾಗಿದೆ. ಲೌಕಿಕಸುಖಸೌಕರ್ಯಗಳನ್ನು ಒದಗಿಸುವ ಯುಕ್ತಿಯನ್ನು ಹೇಳುವಂಥ ಕ್ಷುದ್ರಕಾರ್ಯಕ್ಕೆ ಶಾಸ್ತ್ರವೆಂದೆಂದಿಗೂ ಕೈಹಾಕುವದಿಲ್ಲ. ಲೌಕಿಕಜನರ ಬುದ್ಧಿಗೆ ನಿಲುಕದಂಥ ತಿಳಿವಳಿಕೆಯನ್ನು ತಿಳಿಸುವದೇ ಶಾಸ್ತ್ರದ ಶಾಸ್ತ್ರತ್ವ. ಈ ದೃಷ್ಟಿಯಿಂದ ಬ್ರಹ್ಮಚರ್ಯಾಶ್ರಮದ ಗುರುಕುಲವಾಸವು ಗೃಹಸ್ಥಾಶ್ರಮಕ್ಕೆ ಅನ್ಯಾದೃಶವಾದ ಸಹಕಾರಿಯಾಗುವದು. ಹೇಗೆಂದರೆ: ಮನುಷ್ಯನು ಮದುವೆಯಾಗುತ್ತಲೆ ಪ್ರಪಂಚವ್ಯವಹಾರವೆಂಬ ಸಮುದ್ರದಲ್ಲಿ ಬಿದ್ದವನಾಗುತ್ತಾನೆ. ಸಮುದ್ರದಲ್ಲಿ ತೆರೆಗಳಮೇಲೆ ತೆರೆ ಬರುವಂತೆ ಪ್ರಪಂಚವ್ಯವಹಾರದಲ್ಲಿ ಸುಖದುಃಖಗಳ ಮೇಲೆ ಸುಖದುಃಖಗಳು ಬರುತ್ತಿರುತ್ತವೆ. ಅಲೆಗಳ ಬಡಿತಕ್ಕೆ ತಲೆಗೊಡುವ ಯೋಗ್ಯತೆಯನ್ನು ಪಡೆಯಬೇಕಾದರೆ ಅವನಿಗೆ ಈಸುವದು ಬರಬೇಕಾಗುತ್ತದೆ. ಅದರಂತೆ ಪ್ರಪಂಚದ ಸುಖಕಷ್ಟಗಳ ಉಲ್ಬಣವನ್ನು ತಡೆದುಕೊಳ್ಳಬೇಕಾದರೆ ಅವನಿಗೆ ಭಗವತ್ಸ್ವರೂಪಜ್ಞಾನದ ಬೆಂಬಲವಿರಬೇಕಾಗುತ್ತದೆ. ಈ ಜ್ಞಾನವು ಬ್ರಹ್ಮಚರ್ಯಾಶ್ರಮದಲ್ಲ ದೊರೆಯುತ್ತದೆ. ಆದ್ದರಿಂದ ಬ್ರಹ್ಮಚರ್ಯಾಶ್ರಮವು ಗೃಹಸ್ಥಾಶ್ರಮಕ್ಕೆ ಉಪಕಾರವಾಗುವದು. ಭಗವತ್ಸ್ವರೂಪಜ್ಞಾನವನ್ನು ಪಡೆದು

ಪ್ರಪಂಚವ್ಯವಹಾರದಲ್ಲಿ ಬೀಳುವದು ಈಸು ಬಂದವನು ಸಮುದ್ರದಲ್ಲಿ ಧುಮುಕಿದಂತೆ ಆಗುವದು; ಭಗವತ್ಸ್ವರೂಪಜ್ಞಾನವಿಲ್ಲದವನು ಪ್ರಪಂಚ ವ್ಯವಹಾರದಲ್ಲಿ ಬೀಳುವದು ಈಸು ಬರದವನು ಸಮುದ್ರದಲ್ಲಿ ಜಾರಿಬಿದ್ದಂತೆ ಆಗುತ್ತದೆ. ಹೀಗೆ ಭಗವತ್ಸ್ವರೂಪಜ್ಞಾನವು ಪ್ರಪಂಚವ್ಯವಹಾರದ ಸುಖದುಃಖಗಳ ಹೆದರಿಕೆಯನ್ನು ತಪ್ಪಿಸುವದು. ಈ ಹೆದರಿಕೆ ಯನ್ನು ತಪ್ಪಿಸುವದು ಯಾವ ಸುಖಸೌಕರ್ಯಕ್ಕೂ ಸಾಧ್ಯವಲ್ಲ. ದುಃಖ ವೊಂದೇ ಹೆದರಿಸುವದೆಂತ ಅಲ್ಲ; ಸುಖವೂ ಹೆದರಿಸುವಂಥದ್ದೇ. ಸುಖವು ತಾನು ಕಣ್ಮರೆಯಾಗುವಾಗ ದುಃಖವನ್ನು ತಂದು ಮುಂದಿಟ್ಟೇ ಇಡುವದು. ಭಗವತ್ಸ್ವರೂಪಜ್ಞಾನದ ಬೆಂಬಲವಿದ್ದರೆ ಸುಖದುಃಖಗಳ ಹಣೆಯ ಬರಹವೆ ಇಷ್ಟೆಂದು ಸಮಾಧಾನವನ್ನಾದರೂ ಮಾಡಿಕೊಳ್ಳುವದ ಕ್ಕಾಗುವದು; ಅಥವಾ ಭಗವಂತನ ಅನುಗ್ರಹವನ್ನು ಪಡೆದು ಬೇಕುಬೇಕಾದ ಸುಖಸಾಧನಗಳನ್ನು ಪಡೆಯುವದಕ್ಕಾದರೂ ಆಗುವದು. ಆದ್ದರಿಂದ ಗೃಹ ಸ್ಥಾಶ್ರಮಕ್ಕೆ ಬ್ರಹ್ಮಚರ್ಯಾಶ್ರಮವೆಂಬ ವೈದಿಕಸಂಸ್ಕಾರವನ್ನು ಪಡೆಯ ದಿದ್ದರೂ ಅದರ ತತ್ತ್ವಾರ್ಥವಾದ ಭಗವತ್ಸ್ವರೂಪಜ್ಞಾನವನ್ನು ಪುರಾಣ ಕೀರ್ತನಾದಿಗಳಿಂದ ಪಡೆದುಕೊಳ್ಳುವದಕ್ಕೆ ಅಡ್ಡಿ ಇಲ್ಲ. ವೇದಮೂಲಕ ವಾದ ಜ್ಞಾನಕ್ಕೂ ಪುರಾಣಕೀರ್ತನಾದಿಗಳ ಮೂಲಕವಾದ ಜ್ಞಾನಕ್ಕೂ ಸ್ವರೂಪದಲ್ಲೇನೂ ವ್ಯತ್ಯಾಸವಿಲ್ಲ. ವೈದಿಕಸಂಸ್ಕಾರವು ದ್ವಿಜರಿಗಿರುವ ಒಂದು ಸಾಮಾಜಿಕನಿಯಮವೇ ಹೊರತು ಮತ್ತೇನೂ ಅಲ್ಲ.

ಬ್ರಹ್ಮಚರ್ಯವೆಂದರೆ ಪತ್ನೀಸಂಬಂಧವಿಲ್ಲದಿರುವದೆಂಬ ಇನ್ನೊಂದು ಅರ್ಥವು ರೂಢಿಯಲ್ಲಿದೆ. ಭಗವತ್ಸ್ವರೂಪಜ್ಞಾನವನ್ನೇ ತಮ್ಮ ಸರ್ವಸ್ವ ವೆಂದು ಭಾವಿಸಿರುವ ಕೆಲವರು ಮದುವೆಯ ಗೋಜಿಗೇ ಬೀಳದೆ ಇದ್ದವರಿ ದ್ದಾರೆ. ಶ್ರೀ ಶಂಕರಾಚಾರ್ಯರೂ ಶ್ರೀ ಮಧ್ವಾಚಾರ್ಯರೂ ಮೊದಲಾದ ವರು ಗೃಹಸ್ಥಾಶ್ರಮಿಗಳಾಗದೆ ಬ್ರಹ್ಮಚರ್ಯಾಶ್ರಮದಿಂದ ಸಂನ್ಯಾಸವನ್ನೇ ತೆಗೆದುಕೊಂಡು ಅದರಲ್ಲಿಯೆ ತಮ್ಮ ಆಯುಷ್ಯಕ್ರಮಣವನ್ನು ಮಾಡಿದವ ರಾಗಿದ್ದಾರೆ. ಶ್ರೀ ಸಮರ್ಥ ರಾಮದಾಸರು ಸಾಯುವವರೆಗೂ ಬಹ್ಮಚರ್ಯ ಯಲ್ಲಿಯೆ ಇದ್ದವರಾಗಿದ್ದಾರೆ. ಮದುವೆಯಾದರೆ ಮನುಷ್ಯನು ತಾನು' ತನ್ನ

ದೊಂದು ಸಣ್ಣ ಕುಟುಂಬದ ಸ್ವತ್ತಾಗಿ ಆಗಬೇಕಾಗುತ್ತದೆ. ಮದುವೆ ಯಾದವನು ತನ್ನ ಕುಟುಂಬದ ಪರಿಮಿತಿಯನ್ನು ಹಿಗ್ಗಿಸಿ ತನ್ನ ಸಾಹಸವನ್ನು ಬಹುಜನರ ಹಿತಕ್ಕೆ ಬಳಸುವದಕ್ಕೆ ಪ್ರತಿಬಂಧಕಗಳು ಬಹಳವಾಗಿರುವವು. ಇವನ್ನರಿತು ಧರ್ಮವ ಮೂಲಕವಾಗಿ ದೇಶೋದ್ಧರಣಕಾರ್ಯವನ್ನು ಕೈಗೊಳ್ಳ ಬೇಕೆಂವೆ ಶ್ರೀ ಶಂಕರಾಚಾರ್ಯರೂ ಶ್ರೀ ಮಧ್ವಾಚಾರ್ಯರೂ ಮೊದಲಾದ ವರು ಸಂನ್ಯಾಸದೀಕ್ಷೆಯನ್ನೆ ಕೈಗೊಂಡರು. ಶ್ರಿ ಸಮರ್ಥರು ಗೃಹಸ್ಥಾಶ್ರಮದ ತೊಡಕೇ ಬೇಡವೆಂದು ಅದಕ್ಕೆ ದೂರವಾಗಿ ಬ್ರಹ್ಮಚರ್ಯವಲ್ಲಿಯೆ ನಿಂತರು. ಮದುವೆಯೆಂಬುದು ಮನುಷ್ಯನ ಮನಸ್ಸನ್ನು ಬಹಳವಾಗಿ ಸೆಳೆಯುವಂಥ ಬಹು ಮೋಹಕವಿಚಾರ. ಲೋಕದಲ್ಲಿ ಒಂದೊಂದು ಮದುವೆಯಾದವರ ಮಾತೊಂದು ಕಡೆಇರಲಿ; ಒಬ್ಬೊಬ್ಬರೇ ಬಹಳ ಮದುವೆ ಮಾಡಿಕೊಂಡವರು ಎಷ್ಟೋ ಉಂಟು. ಅಂತು ಶುದ್ಧಬ್ರಹ್ಮಚರ್ಯದಲ್ಲಿ ಉಳಿಯುವದು ಸಾಮಾ ನ್ಯರಿಗೆ ದಕ್ಕುವ ಮಾತಲ್ಲ. ಹೀಗಿದ್ದರೂ ಶ್ರೀ ಸಮರ್ಥ ರಾಮದಾಸರಿಗೆ ಚಿಕ್ಕಂದಿನಲ್ಲಿಯೆ ಮದುವೆಯೆಂದರೆ ಎದೆಯೊಡೆಯುತ್ತಿತ್ತು. ತನ್ನ ಶರೀರ ಸಾಮರ್ಥ್ಯವನ್ನೂ ಆತ್ಮಶಕ್ತಿಯನ್ನೂ ಒಬ್ಬ ಹೆಂಗಸಿನಲ್ಲಿ ಒತ್ತೆ ಇಡುವದೆಂದರೆ ಅವರಿಗೆ ಬಹಳ ಸಿಂದ್ಯವೆನಿಸುತ್ತಿತ್ತು. ಆದ್ದರಿಂದ ತನ್ನ ತಾಯಿಯು ತನ್ನ ಲಗ್ನದ ಮಾತನ್ನು ನಡೆಸುತ್ತಿರುವಳೆಂದು ಕೇಳುತ್ತಲೆ ಮದುವೆಯಾಗಿ ಮನುಷ್ಯನ ದೇಹವನ್ನು ಮಾರಿಕೊಳ್ಳುವದಕ್ಕಿಂತ ಬಾವಿಯಲ್ಲಿ ಬಿದ್ದು ಮರ ಣವನ್ನು ಪಡೆಯುವದೇ ಲೇಸೆಂದು ಅವರು ಒಂದು ಬಾವಿಯಲ್ಲಿ ಧುಮುಕಿ ಯೇಬಿಟ್ಟರು. ದೈವಯೋಗದಿಂದ ಯಾರೂ ಕಂಡು ಅವರನ್ನು ಹೊರಕ್ಕೆ ತೆಗೆದರು. ಆಗ ಅವರ ಹಣೆಯ ಮೇಲೆ ಆದ ಗಾಯವು ಸಾಯುವವರೆಗೂ ಅವರ ವಿರಕ್ತಿಯ ಧ್ವಜಪಟವಾಗಿ ವಿರಾಜಿಸುತ್ತಲೆ ಇತ್ತು. ವಿವಾಹದ ತೊಡಕಿಗೆ ಬೀಳವೆ ಇರುವದಕ್ಕೆ ಶ್ರೀ ಸಮರ್ಥರು ಇಷ್ಟು ದೊಡ್ಡ ಸಾಹಸ ವನ್ನು ಮಾಡಿದ್ದು ಬಹಳ ಹೆಚ್ಚಾಯಿತು. ಇತರರಿಗೆ ಇದು ಎಷ್ಟು ಮಾತ್ರವೂ ಅನುಕರಣೀಯವಲ್ಲ. ಆದರೂ ವಿವಾಹದ ವಿಷಯದಲ್ಲಿ ಅವರ ವಿರೋಧಬುದ್ಧಿಯು ಬಹು ತೀವ್ರವಾದದ್ದರಿಂದ ಆ ಕೃತಿ ನಡೆದುಹೋ ಯಿತು ಯತ್ನವಿಲ್ಲ. ಆಮೇಲೆ ಅವರ ತಾಯಿಯು ಅವರನ್ನು ಹಾಗೂ ಹೀಗೂ ತನ್ನ ಕಡೆಗೆ ಒಲಿಸಿಕೊಂಡು ಅಂತೂ ಮದುವೆಯ ಸಮಾರಂಭವನ್ನು

ಹೂಡಿದಳು. ಆದರೇನು ಪ್ರಯೋಜನ? ಬ್ರಾಹ್ಮಣರು "ಸುಲಗ್ನ ಸಾವಧಾನ" ಎನ್ನುತ್ತಲೇ ರಾಮದಾಸರು ಹಸೆಯ ಜಗಲಿಯಿಂದಿಳಿದು ಪಲಾಯನಸೂಕ್ತವನ್ನು ಹೇಳಿದರು. ವಿವಾಹದ ಬಲೆಗೆ ಬೀಳದೆ ಇರಬೇಕೆಂದ ಶ್ರೀ ಸಮರ್ಥರ ಆತ್ಮಶಕ್ತಿಯ ವೇಗವು ಅವರನ್ನು ಹಸೆಯ ಮಣೆಯ ಮೇಲೆ ಎಷ್ಟುಮಾತ್ರವೂ ಇರಗೊಡಲಿಲ್ಲ.

ಇನ್ನು ಕೆಲವರು ಮದುವೆಯನ್ನು ಮಾಡಿಕೊಂಡರೂ ಮಾಡಿಕೊಳ್ಳದೆ ಇದ್ದವರಂತೆ ವ್ಯವಹರಿಸಿದವರುಂಟು. ಭಗವಾನ್ ಶ್ರೀ ರಾಮಕೃಷ್ಣ ಪರಮ ಹಂಸರಿಗೆ ಪೂರ್ವಾಶ್ರಮದಲ್ಲಿ ಲಗ್ನವಾಗಿತ್ತು. ಆದರೆ ಅವರು ಸಂನ್ಯಾಸ ಮಾಡಿ ಪತ್ನೀಸಂಬಂಧವನ್ನು ಬಿಟ್ಟರು. ಆದರೂ ಆಕೆ ತಮಗೇ ಶರಣು ಬಂದವಳೆಂದು ಅವರು ಆಕೆಯನ್ನು ಶಿಷ್ಯರಲ್ಲೊಬ್ಬಾಕೆಯನ್ನಾಗಿ ಮಾಡಿಕೊಂಡರು; ಆದರೆ ಆಕೆಯೊಡನೆ ವಿವಾಸಂಬಂಧವನ್ನು ಮಾತ್ರ ಬಳಸುತ್ತಿರಲಿಲ್ಲ. ಭಗವಾನ್ ಬುದ್ಧನಿಗೆ ಪೂರ್ವಾಶ್ರಮದಲ್ಲಿ ಮದುವೆಯಾಗಿ ಒಬ್ಬ ಮುದ್ದು ಮಗನೂ ಹುಟ್ಟಿದನು. ಬುದ್ಧನು ಬುದ್ಧಸ್ಥಿತಿಯನ್ನು ಪಡೆದು ಬಂದ ಮೇಲೆ ಆ ಹೆಂಡತಿಯು ಅವನ ಆಶ್ರಯವನ್ನು ಬಯಸಲು ಅವನು ಆಕೆಯನ್ನು ತನ್ನ ಶಿಷ್ಯಸಮೂಹದಲ್ಲಿ ಸೇರಿಸಿಕೊಂಡನು. ಆದರೆ ಅದು ವಿವಾಹಸಂಬಂಧದ ಮಮತೆಯಿಂದ ಅಲ್ಲ. ಮತ್ತೆ ಕೆಲವರು ಮದುವೆಯಾಗಿ ಹೆಂಡತಿಯೊಡನೆ ವಿವಾಹಸಂಬಂಧವನ್ನು ಧರ್ಮದಿಂದ ಕಾಪಾಡಿಕೊಂಡಿದ್ದು ಪರಸ್ತ್ರೀಯರನ್ನು ಮಾತೃಪತ್ಸಂಭಾವನೆ ಮಾಡಿದವರುಂಟು. ಬ್ರಹ್ಮಚರ್ಯ ವೆಂದರೆ ಸ್ತ್ರೀಸಂಬಂಧವೇ ಇಲ್ಲದಿರುವ ಆತ್ಮಶಕ್ತಿಪ್ರಭಾವವೆಂದು ಮುಖ್ಯಾರ್ಥವಿದ್ದರೂ ಸ್ವಸ್ತ್ರೀಯಲ್ಲಿ ಮಾತ್ರ—ಅದೂ ಧರ್ಮನಿಯಮಕ್ಕೊಳಪಟ್ಟು—ವಿವಾಹಸಂಬಂಧದ ಉಪಯೋಗವನ್ನು ಮಾಡಿಕೊಂಡು ಪರನಾರಿಯರನ್ನು ತಾಯಿಯರಂತೆ ಕಾಣುವ ಆತ್ಮಶಕ್ತಿಯನ್ನು ಬ್ರಹ್ಮಚರ್ಯವೆಂದೇ ಶಾಸ್ತ್ರಕಾರರೂ ಸಂಭಾವಿಸುತ್ತಾರೆ. ಏಕೆಂದರೆ; ಅದು ಕೂಡ ಅಷ್ಟು ಕಠಿನವಿಷಯವೇ. ಪಾಪಾಸಕ್ತಿಯನ್ನು ತಡೆಯುವುದೇ ಮನುಷ್ಯನಿಗೆ ಕಷ್ಟಸಾಧ್ಯ. ಕಡಿವಾಣವನ್ನು ಕಡಿದು ಹಾಕಿ ಸ್ವೇಚ್ಛೆಯಿಂದ ನುಗ್ಗಬೇಕೆಂದು ಹಲ್ಲುಕಡಿಯುವ ತುಂಟ ಕುದುರೆಯಂತೆ ಮನಸ್ಸು ಧರ್ಮದ ಕಟ್ಟನ್ನು ಕಳಚಿಕೊಂಡು ತನ್ನ ಇಷ್ಟ ಬಂದ ಕಡೆ ಹಾಯಬೇಕೆಂದು ಪ್ರತಿಕ್ಷಣವೂ ಹೆಣಗುತ್ತದೆ. ಅದನ್ನು

ನಿಗ್ರಹಿಸುವದು ಬಹು ಸಾಹಸದ ಮಾತಾಗುವದು. ವಿವಾಹವನ್ನೆ ಮಾಡಿಕೊಳ್ಳದೆ ಅಥವಾ ಮಾಡಿಕೊಂಡು ಜೊತೆಯಲ್ಲಿದ್ದರೂ ಮಾಡಿಕೊಂಡ ಹಾಗಿರದೆ ಇರುವದು ಹೇಗೆ ಕಠಿನವೋ ಧರ್ಮಪತ್ನಿಯ ಹೊರತು ಉಳಿದ ಸ್ತ್ರೀಯರ ವಿಷಯದಲ್ಲಿ ಯಾವ ವಿಕಲ್ಪಾಭಿಪ್ರಾಯವನ್ನೂ ತಂದುಕೊಳ್ಳದೆ ಇರುವದೂ ಹಾಗೆಯೇ ಕಠಿನ. ಆದ್ದರಿಂದ ಅದು ಹೇಗೆ ಬ್ರಹ್ಮಚರ್ಯವೋ ಇದೂ ಹಾಗೆಯೇ ಬ್ರಹ್ಮಚರ್ಯ. ಇದರ ಪರೀಕ್ಷೆಯಲ್ಲಿ ಉತ್ತೀರ್ಣನಾಗುವದು ಕೂಡ ಸಾಮಾನ್ಯವಲ್ಲ.

ಕಬೀರನು ಮುಸಲ್ಮಾನನಿದ್ದು ಭಗವದ್ಭಕ್ತರಲ್ಲಿ ಅಗ್ರಗಣ್ಯನಾಗುತ್ತ ಬಂದದ್ದು ಕೆಲವರಿಗ ಸಹನವಾಗಲಿಲ್ಲ. ಜನರಿಗೆ ಅವನಲ್ಲಿ ತುಚ್ಛಬುದ್ಧಿಯನ್ನುಂಟುಮಾಡಬೇಕೆಂದು ಅವರು ಅವನ ಬ್ರಹ್ಮಚರ್ಯವನ್ನು ಕೆಡಿಸ ಹೇಳಿ ಅವನ ಬಳಿಗೆ ಒಬ್ಬ ವೇಶ್ಯೆಯನ್ನು ಕಳುಹಿಸಿದರು. ಆಕೆ ಬಂದು ಅವನ ಮುಂದೆ ತನ್ನ ಹಾವಭಾವಗಳ ಅಂಗಡಿಯನ್ನು ಬಿಚ್ಚಿದಳು. ಆಗ ಕಬೀರನು ಈ ವಿದ್ಯವನ್ನು ಪಾಮರನಾದ ತನ್ನ ಮುಂದೆ ಪ್ರದರ್ಶನ ಮಾಡುವದಕ್ಕಿಂತಲೂ ರಸಿಕಶಿರೋಮಣಿಯಾದ ಭಗವಂತನ ಮುಂದೆ ತೋರಿಸೆಂದು ಉಪದೇಶಮಾಡಿ ಆಕೆಯ ಮನಸ್ಸನ್ನೆ ಬ್ರಹ್ಮಚರ್ಯದ ಕಡೆಗೆ ತಿರುಗಿಸಿದನು. ಕೇವಲ ಭಕ್ತಿಮಾರ್ಗವನ್ನು ಹಿಡಿದ ಕಬೀರನ ಮಾತೂ ಇರಲಿ. ಧರ್ಮಾಭಿಮಾನಿಗಳಾದ ವ್ಯಾವಹಾರಿಕರಲ್ಲಿಯೂ ಬ್ರಹ್ಮಚರ್ಯವು ವ್ಯಕ್ತವಾಗುವದು ಒಮ್ಮೆ ಶಿವಾಜಿಯ ಅಧಿಕಾರಿಗಳಲ್ಲೊಬ್ಬನಾದ ಸೋನದೇವನೆಂಬವನು ತನಗೆ ಸೆರೆಸಿಕ್ಕಿದ ಒಬ್ಬ ಸುಂದರಸ್ತ್ರೀಯನ್ನು ಶಿವಾಜಿಗೆ ಕಾಣಿಕೆಯಾಗಿ ಕೊಟ್ಟರೆ ತನ್ನ ಬಾಳು ಮೇಲಕ್ಕೇಳುವದೆಂದು ಯತ್ನವನ್ನು ಮಾಡಿದನು. ಶಿವಾಜಿಯು ಆಕೆಯನ್ನು ನೋಡುತ್ತಲೆ "ಈಕೆಯು ನನ್ನ ತಾಯಿಯಾಗಿದ್ದರೆ ನಾನೂ ಬಹು ಸುಂದರನಾಗುತ್ತಿದ್ದೆನಲ್ಲ!" ಎಂದು ಆಕೆಯನ್ನು ಮಾತೃವತ್ಸಂಭಾವನೆ ಮಾಡಿ, ಬಳೆಯನ್ನು ತೊಡಿಸಿ, ಅರಸಿನಕುಂಕುಮವನ್ನು ಕೊಟ್ಟು, ನಂಬಿಕೆಯಾದ ಕಾವಲುಗಾರನೊಡನೆ ಆಕೆಯ ಪತಿಯ ಬಳಿಗೆ ಕಳುಹಿಸಿಕೊಟ್ಟನು. ಪರನಾರೀಸಹೋದರತ್ವವನ್ನು ಶಿವಾಜಿಯು ತೋರಿಸಿರುವದೂ ಒಂದು ಕಡೆ ಇರಲಿ; ಅವನ ಭಟರಲ್ಲೊಬ್ಬನಾದ ಚಿಮಣಾಜಿ ಎಂಬುವನು ಕೂಡ ಅದನ್ನು ಚೆನ್ನಾಗಿ ಪ್ರಕಾಶಮಾಡಿರುವನು.

ಚಿಮಣಾಜಿಯು ಒಂದು ಸಲ ಪೋರ್ಚುಗೀಸರಿಗೆ ಸೇರಿದ ಒಂದು ಕೋಟೆ ಯನ್ನು ಹಿಡಿದುಕೊಳ್ಳುವದಕ್ಕೆ ಹೋಗಿದ್ದನು. ಆಗ ಅಲ್ಲಿಯ ಪೋರ್ಚುಗೀಸ ಮುಖ್ಯಾಧಿಕಾರಿಯ ಹೆಂಡತಿ ದೋಣಿಯಲ್ಲಿ ಕುಳಿತು ಸಮುದ್ರದಲ್ಲಿ ವಿಹರಿಸು ತ್ತಿದ್ದಳು. ಉತ್ಕಟರಾದ ಮಹಾರಾಷ್ಟ್ರಭಟರು ಆಕೆಯನ್ನು ಸೆರೆಹಿಡಿದು ತಂದು ಚಿಮಣಾಜಿಗೊಪ್ಪಿಸಿದರು. ಆ ಸಮಯದಲ್ಲಿ ಚಿಮಣಾಜಿಯು ಎಳ್ಳಷ್ಟೂ ದುಷ್ಟಕಲ್ಪನೆಯನ್ನು ತಂದುಕೊಳ್ಳದೆ, ತನ್ನ ಆತ್ಮಶಕ್ತಿಯಿಂದ ಆಕೆಯಲ್ಲಿ ಮಾತೃಭಾವನೆಯನ್ನಿಟ್ಟು, ಆಕೆಗೆ ತಕ್ಕ ಗೌರವವನ್ನು ತೋರಿಸಿ, ಆಕೆಯು ಸುರಕ್ಷಿತಳಾಗಿ ತನ್ನ ಪತಿಸಾನ್ನಿಧ್ಯವನ್ನು ಪಡೆಯುವಂತೆ ಮಾಡಿದನು. ಇಂಥವರೇ ಲೋಕದಲ್ಲಿ ಊರ್ಜಿತಸ್ಥಿತಿಯನ್ನು ಪಡೆಯುವರು. ಉಳಿದವ ರೆಲ್ಲಾ ಮಣ್ಣುಮುಕ್ಕಿ ಹೊಗುವದೇ ಸರಿ ಈ ಅಭಿಪ್ರಾಯವನ್ನು ಕನಕದಾ ಸರು ಹೇಳಿರುವರು.

ರಾಗ—ಭೈರವಿ; ಝಂಪೆತಾಳ.

ನೋಡಿ ಮರುಳಾಗದಿರು ಪರಸತಿಯರ ।
ನಾಡೊಳಗೆ ಕೆಟ್ಟವರ ಪರಿಯ ನೀನರಿತು ॥ಪ॥

ಶತಮುಖವ ಮಾಡಿ ಸುರಸಭೆಗೈದುತಿಹ ನಹುಷ ।
ಸತಿಯಾಗಿ ಶಚಿಗೆ ಮನಸೋತು ಭ್ರಮಿಸಿ ॥
ಅತಿಬೇಗ ಚಲಿಸೆಂದು ಜೆಸಸಲಾ ಮುನಿಯಿಂದ ।
ಗತಿಗೆಟ್ಟು ಉರಗನಾದಾ ಪರಿಯನರಿತು ॥ ೧ ॥

ಸುರಪತಿಯು ಗೌತಮನ ಸತಿಗಾಗಿ ಕಪಟದಿಂ ।
ಧರೆಗೆ ಮಾಯಾವೇಷ ಧರಿಸಿ ಬಂದು ।
ಪರಮಮುನಿಶಾಪದಿಂದಂಗದೊಳಗೆಲ್ಲ ಸಾ ।
ವಿರಕಣ್ಣನಾಗಿದ್ದ ಪರಿಯ ನೀನರಿತು ॥ ೨ ॥

ಸ್ಮರನ ಶರತಾಪವನು ಪರಿಹರಿಸಲರಿಯದೆ ।

ದುರುಳ ಕೀಚಕನು ದ್ರೌಪದಿಯ ಕೆಣಕಿ ||
ಮರುತಸುತಭೀಮನಿಂದಿರುಳೊಳಗೆ ಹತನಾದ |
ನರಗುರಿಯೆ, ನಿನ್ನ ಪಾಡೇನು ಧರೆಯೊಳಗೆ || ೩ ||

ಹರನ ವರವನು ಪಡೆದು ಶರಧಿಮಧ್ಯದೊಳಿದ್ದು |
ದುರುಳದಶಶಿರನು ಜಾನಕಿಯನೊಯ್ದು ||
ಧುರದೊಳಗೆ ರಘುವರನ ಶರದಿಂದಲೀರ್ಸೈದು |
ಶಿರಗಳನೆ ಕಳೆಕೊಂಡ ಪರಿಯನರಿತು || ೪ ||

ಇಂತಿಂಥವರು ಕೆಟ್ಟು ಹೋದರೆಂಬುದನರಿತು |
ಭ್ರಾಂತಿಯನೆ ಬಿಟ್ಟು ಭಯಭಕ್ತಿಯಿಂದ ||
ಅಂತರಾತ್ಮಕ ಕಾಗಿನೆಲಯ ಕೇಶವನನು ನಿ |
ರಂತರವಿ ಭಜಿಸಿ ನೀನಿತ್ತ ಸುಖಿಯಾಗು || ೫ ||

ಇಲ್ಲಿ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಮೇಲೆಲ್ಲ ಪುರುಷರು ಸ್ತ್ರೀಯರನ್ನು ಮಾತೃವತ್ಸಂಭಾವನೆ ಮಾಡಿದ ಉದಾರಣೆಗಳೆ ಬಂದಿರುವವು ಇದರಿಂದ ಬ್ರಹ್ಮಚರ್ಯದ ಉಪದೇಶವು ಸ್ತ್ರೀವರ್ಗಕ್ಕಿಲ್ಲವೆಂದು ಯಾರೂ ತಿಳಿಯಬಾರದು. ಪುರುಷರು ಹೇಗೆ ಸ್ತ್ರೀಯರಿಂದ ಅಲಿಪ್ತರಾಗಿರಬೇಕೊ ಸ್ತ್ರೀಯರೂ ಹಾಗೆಯೇ ಪುರುಷರಿಂದ ಅಲಿಪ್ತರಾಗಿರಬೇಕು. ಆದರೂ ಶಾಸ್ತ್ರಗಳಲ್ಲಿ ಪುರುಷರು ಅಲಿಪ್ತರಾಗಿರಬೇಕಾದ ವಿಚಾರವೆ ತುಂಬಿವೆ ಶಾಸ್ತ್ರಗಳೆಲ್ಲ ವಿಶೇಷವಾಗಿ ಪುರುಷರನ್ನು ಉದ್ದೇಶಮಾಡಿಕೊಂಡು ಹೊರಟಿರುವವೇ ಇದಕ್ಕೆ ಕಾರಣವೇ ಹೊರತು ಇದರ ಸಂಬಂಧವು ಸ್ತ್ರಿಯರಿಗೆ ಇಲ್ಲವೆಂತ ಅಲ್ಲ. ಇದು ಪುರುಷರಿಗೆ ಹೇಗೊ ಸ್ತ್ರೀಯರಿಗೂ ಹಾಗೆಯೆ ಅನ್ವಯಿಸುವದು.

ಬ್ರಹ್ಮಚರ್ಯಸ್ಥಿತಿಯಿಂದ ಚ್ಯುತರಾಗುವದು ಪುರುಷರಿಗೂ ಕೆಟ್ಟದು, ಸ್ತ್ರೀಯರಿಗೂ ಕೆಟ್ಟದು. ಬಹ್ಮಚರ್ಯವು ಶಿಥಿಲವಾಯಿತೆಂದರೆ ಅವರ ಸರ್ವಶಕ್ತಿಯೂ ಶಿಥಿಲವಾಯಿತೆಂದೇ ತಾತ್ಪರ್ಯ. ಬ್ರಹ್ಮಚರ್ಯವನ್ನು

ಸಂರಕ್ಷಣೆಮಾಡಿಕೊಂಡಷ್ಟೂ ಅದರ ತೇಜಸ್ಸು ಶರೀರವನ್ನೆಲ್ಲ ವ್ಯಾಪಿಸಿ ಅವನಿಂದ ಅಸಾಧಾರಣಕಾರ್ಯಗಳನ್ನು ಲೀಲಾವಿಶೇಷವಾಗಿ ಮಾಡಿಸಿ ಬಿಡುವದು. ಮಾರುತಿಯು ಮಹಾಮಹಾಕುಲಪರ್ವತಗಳನ್ನು ಅತ್ತಿಯ ಹಣ್ಣಿನಂತೆ ಹಿಡಿದೊಗೆಯುತ್ತಿದ್ದದ್ದು ಬ್ರಹ್ಮಚರ್ಯದ ಬೆಂಬಲದಿಂದಲೆ. ದೇವತಾವರ್ಗಕ್ಕೆ ಸೇರಿದವನೆಂದು ಮಾರುತಿಯನ್ನು ಬಿಟ್ಟು ನೋಡೋಣ. ಮನುಷ್ಯರಿಗಿಂತ ಎಷ್ಟೋ ಕೀಳಾದ ಪಶುಗಳಿಗೆ ಹೆಚ್ಚಿನ ಕಷ್ಟಕ್ಕೆ ತಡೆಯು ವಂಥ ಸಾಮರ್ಥ್ಯವುಂಟಾಗುವಕ್ಕೆ ಕೂಡ ಅವುಗಳು ತಮ್ಮ ರಕ್ತಬಲವನ್ನು ಕ್ಷಪ್ರಮನುಷ್ಯರಂತೆ ಸೂರೆ ಮಾಡದೆ ಇರುವದೇ ಕಾರಣ. ಯುಕ್ತಾ ಯುಕ್ತಜ್ಞಾನವಿಲ್ಲದ ಪಶುಗಳು ಕೂಡ ಈ ನಿಯಮವನ್ನು ಪಾಲಿಸುತ್ತಿರು ವವು. ವಿವೇಕಿಯನಾದ ಮನುಷ್ಯನು ಪರಸ್ತ್ರೀಯರನ್ನು ಮಾತೃವತ್ಸಂಭಾವನೆ ಮಾಡಿದರೂ ಸ್ವಸ್ತ್ರೀಯಲ್ಲಿ ಅತ್ಯಾಸಕ್ತಿಯನ್ನು ಹೊಂದದೆ ಇರಲಾರದವನಾಗಿ ಶರೀರದೌರ್ಬಲ್ಯವನ್ನೂ ಮನೋದೌರ್ಬಲ್ಯವನ್ನೂ ಪಡೆಯುತ್ತಿದ್ದಾನೆ. ಮನ ಷ್ಯನ ಜೀವನಸರ್ವಸ್ವವಾಗಿರುವ ರಕ್ತಬಲವನ್ನು ಸ್ತ್ರೀಪುರುಷರ ಪರಸ್ಪರ ಕಾಮುಕತೆಗೆ ದುರ್ವಿನಿಯೋಗ ಮಾಡುವದು ಧರ್ಮದೃಷ್ಟಿಯಿಂದ ಪಾಪ ವೆಂಬ ಮಾತೊಂದು ಕಡೆ ಇರಲಿ. ವ್ಯವಹಾರದೃಷ್ಟಿಯಿಂದ ಕೂಡ ಅದು ಕೆಟ್ಟದೆಂದು ಅದರ ದುಷ್ಪರಿಣಾಮದ ಅನುಭವವನ್ನು ಪ್ರತಿಯೊಬ್ಬರಿಗೂ ಅವ ರವರ ಮನಸಾಕ್ಷಿಯೆ ಹೇಳುತ್ತದೆ. ಆದರೂ ಅದನ್ನು ನಿಗ್ರಹಿಸುವ ಆತ್ಮ ಶಕ್ತಿಯಿಲ್ಲದೆ ಮನುಷ್ಯರು ದುಸ್ಥಿತಿಯನ್ನು ಪಡೆಯುತ್ತಿದ್ದಾರೆ. ಬ್ರಹ್ಮ ಚರ್ಯದ ಬಲವುಳ್ಳವನು ಮಹಾಮಹಾಬಲಶಾಲಿಗಳನ್ನಾದರೂ ನೆಲಕ್ಕೆ ತುಳಿ ಯುವದನ್ನು ಲೀಲೆಯೆಂದು ಭಾವಿಸುವಷ್ಟು ಶರೀರಸಾಮರ್ಥ್ಯವನ್ನು ಪಡೆ ದಿರುವನೆಂಬದಿಷ್ಟೇ ಅಲ್ಲ; ಅವನ ಆತ್ಮಶಕ್ತಿಪ್ರಭಾವದಿಂದ ಪ್ರತಿಪಕ್ಷಿಯ ಎಂಥ ಕೆಚ್ಚಿನೆಯಾದರೂ ಜಳ್ಳಾಗಿ ಹೋಗುವಂತಾಗುವದು. ಚಿಮಣಾಜಿ ಯಿಂದ ಸತ್ಕೃತಳಾಗಿ ಪತಿಸಾನ್ನಿಧ್ಯವನ್ನು ಪಡೆದ ಪೋರ್ಚುಗೀಸ ಸ್ತ್ರೀಯು ತನ್ನ ಪತಿಯನ್ನು ಕುರಿತು "ಪ್ರಿಯನೇ, ಚಿಮಣಾಜಿಯನ್ನು ಹಣಿಯುತ್ತೇ ನೆಂಬ ಹೆಮ್ಮೆಯನ್ನು ಬಿಡು. ಅವನು ತನ್ನ ಮನಸ್ಸನ್ನು ಕೂಡ ಜಯಿಸಿದಂ ಥವನು. ಮನಸ್ಸನ್ನು ನಿಗ್ರಹಿಸಬಲ್ಲವರ ಮುಂದೆ ಯಾರ ಆಟವೂ ಸಾಗುವ ದಿಲ್ಲ" ಎಂದಳು. ಆ ಅಧಿಕಾರಿಯು ಅದರ ತಿರುಳನ್ನು ಗ್ರಹಿಸಿ ಚಿಮಣಾಜಿ

ಯೊಡನೆ ಒಪ್ಪಂದಕ್ಕೆ ಒಲಿದನು. ಹೀಗೆ ಬ್ರಹ್ಮಚರ್ಯದ ಮಹತ್ತ್ವವು ಎಲ್ಲರ ಮನಸ್ಸಿಗೂ ಗೊತ್ತಿರುವದು.

ಅವನ್ನು ಆಚರಣೆಯಲ್ಲಿಟ್ಟುಕೊಳ್ಳುವ ಆತ್ಮಶಕ್ತಿಯದೊಂದೇ ಕೊರತೆ. ಜುಟ್ಟು ಕೈವಶವಾದರೆ ಪೂರ್ಣಮನುಷ್ಯನೇ ಕೈವಶನಾದಂತೆ ಬ್ರಹ್ಮಚರ್ಯದ ಸಾಧನೆಯೊಂದಾದರೆ ಸಮಸ್ತವಾದ ಆತ್ಮಶಕ್ತಿಗಳ ಸಾಧನೆಯೂ ಪೂರ್ಣವಾದಂತಾಗುವವು. ಮದುವೆಯ ವಾಸನೆಯನ್ನೇ ಕಾಣದೆ ಪೂರ್ಣಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳುವದು ಉತ್ತಮಪಕ್ಷ. ಅದು ಶಕ್ಯವಾಗದಿದ್ದರೆ ಮಾತ್ರ ಸ್ವಸ್ತ್ರೀಮಾತ್ರದಲ್ಲಿಯೇ ಆದರೂ ನಿಯಮದಿಂದ ವರ್ತಿಸುವದು ಎರಡನೆಯ ಪಕ್ಷ.

ಬರೀ ಬ್ರಹ್ಮಚರ್ಯಸ್ವರೂಪವನ್ನು ತಿಳಿದುಕೊಂಡ ಮಾತ್ರದಿಂದ ಅದರ ನಿಯಮವನ್ನು ಪಾಲಿಸುವದು ಶಕ್ಯವಾಗಲಾರದು. ಏಕೆಂದರೆ ಅದರ ಅಷ್ಟು ಸುಲಭಸಾಧ್ಯವಲ್ಲ. ಬ್ರಹ್ಮಚರ್ಯವನ್ನು ಮೈಗೂಡಿಸಿಕೊಳ್ಳಬೇಕೆಂಬ ಮನುಷ್ಯನಿಗೆ ಅಗತ್ಯವಾಗಿ ಹೊರಗಣ ಅನುಕೂಲಪರಿಸ್ಥಿತಿಯೂ ಬೇಕು. ಈಗ ಬ್ರಹ್ಮಚರ್ಯದ ಇಚ್ಛೆಯುಳ್ಳವರು ಎಷ್ಟೋ ಜನರು ಸಿಕ್ಕಬಹುದು; ಆದರೆ ಅನುಕೂಲಪರಿಸ್ಥಿತಿ ಇಲ್ಲ. ಅನುಕೂಲಪರಿಸ್ಥಿತಿ ಇಲ್ಲವೆಂಬುದೂ ಅಷ್ಟು ಹೆಚ್ಚು ದುಃಖಕರವಲ್ಲ; ಪ್ರತಿಕೂಲಪರಿಸ್ಥಿತಿ ಮಿತಿಮೀರಿ ಹೋಗುತ್ತಿರುವದು ಮಾತ್ರ ಅತ್ಯಂತಶೋಚನೀಯವಾಗಿದೆ. ಪೂರ್ವದಲ್ಲಿ ಅನುಕೂಲಪರಿಸ್ಥಿತಿ ಹೆಚ್ಚಾಗಿದ್ದದ್ದರಿಂದ ಹೆಚ್ಚು ಜನರು ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳುವದಕ್ಕೆ ಸಾಧ್ಯವಾಗಿತ್ತು. ಆಗಿನ ಅನುಕೂಲಪರಿಸ್ಥಿತಿಗಳಿಗೆ ಆಗಿನ ಅರಸುತನಗಳೇ ಕಾರಣ. ಹಿಂದೆ ವೈದಿಕಧರ್ಮಾಭಿಮಾನಿಗಳಾದ ಅರಸರಿದ್ದದ್ದರಿಂದ ದೇಶದಲ್ಲಿ ಧರ್ಮಕ್ಕಿದ್ದ ಹಾಗೆ ವಿಷಯಸುಖಸೌಕರ್ಯಗಳಿಗೆ ಪ್ರಾಶಸ್ತ್ಯವಿರಲಿಲ್ಲ; ಭಗವದ್ವಿಚಾರಗಳಿಗೆ ಪ್ರಾಧಾನ್ಯವಿದ್ದ ಹಾಗೆ ಮನೋರಂಜಕವಿಷಯಗಳಿಗೆ ಮುಖ್ಯತ್ವವಿರಲಿಲ್ಲ. ಹೀಗಾಗಿ ಪರಿಪರಿಯ ವಿಷಯಸುಖಗಳು ಕ್ಷಣಕ್ಕೊಂದೊಂದು ರೂಪವನ್ನು ತಾಳಿ ಬಂದುಬಂದು ಮುಂದೆ ನಿಂತು ಬಾಯಿನೀರು ಕರೆಸುತ್ತಿರಲಿಲ್ಲ. ಇದ್ದ ಅಲ್ಪಸ್ವಲ್ಪ ಸುಖಸಾಧನಗಳು ಭಗವದ್ವಿಚಾರದ ಮುಂದೆ ಬಾಲಮುದುರಿಕೊಂಡು ಹಿಂದಕ್ಕೆ ಸರಿಯುತ್ತಿದ್ದವು.

ಅಶೋಕನ ಕಾಲದಲ್ಲಿ ನೋಡಿ. ಯಾವ ಸಂದಿನಲ್ಲಿ ನೋಡಿದರೂ ಧರ್ಮೋಪದೇಶಗಳ ಘೋಷ; ಎಲ್ಲೆಲ್ಲಿ ನೋಡಿದರೂ ವಿರಕ್ತರ ವೇಷ; ಎತ್ತ ಕಡೆಗೆ ದೃಷ್ಟಿಯನ್ನು ಹಾಕಿದರೂ ಧರ್ಮೋಪದೇಶಗಳ ಶಿಲಾಲಿಪಿ; ಯಾವ ದಿಕ್ಕಿಗೆ ನೋಡಿದರೂ ಚೈತ್ಯಗಳು; ಯಾರ ಮಾತನ್ನು ಕೇಳಿದರೂ ನೀತಿಯ ವಿಚಾರ; ಯಾರ ಮನಸ್ಸನ್ನು ನೋಡಿದರೂ ಪ್ರಾಪಂಚಿಕವಿಷಯಗಳಿಂದ ವಿಮುಖತೆ. ಅರಸರು ತಾವೇ ವಿರಕ್ತಶಿಖಾಮಣಿಗಳಾಗಿ ಸ್ತ್ರೀಯರಿಗೂ ಪುರುಷರಿಗೂ ಧರ್ಮದೀಕ್ಷೆಯನ್ನು ಕೊಟ್ಟು ಅವರ ಯೋಗಕ್ಷೇಮಕ್ಕೆ ತಾವೆ ಸೊಂಟವನ್ನು ಕಟ್ಟಿ ನಿಂತರೆ ಪ್ರಜೆಗಳಲ್ಲಿ ಬ್ರಹ್ಮಚರ್ಯವು ಮೈಗೂಡಿಕೊಳ್ಳದೆ ಏನು ಮಾಡೀತು? ಹೀಗೆ ಅಶೋಕನ ಕಾಲವಲ್ಲಿ ಶೋಕರಹಿತವಾಗಿದ್ದ ದೇಶವು ಈಗ ಬ್ರಹ್ಮಚರ್ಯವನ್ನು ಕಳೆದುಕೊಂಡು ನಿರ್ಜೀವಮುಖಗಳನ್ನುಳ್ಳ ಪ್ರಜೆಗಳಿಂದ ಸಶೋಕವಾಗಿರುವದಕ್ಕೆ ಕಾರಣವನ್ನು ಇನ್ನು ಬಹುದೂರ ಹುಡುಕಬೇಕಾಗಿಲ್ಲ. ಪೂರ್ವದ ದೇಶಸ್ಥಿತಿಯನ್ನು ಈಗ ಹಿಮ್ಮುಖವಾಗಿ ಮಾಡಿದರಾಯಿತು. ಈಗಿನ ಕಾಲವಲ್ಲಿ ನೋಡಿ. ಯಾವ ಸಂದಿಯಲ್ಲಿ ನೋಡಿದರೂ ಶರೀರದ ಸುಸ್ಥಿತಿಗೆ ವಿಘಾತಕವಾದ ಭಕ್ಷ್ಯಗಳ ಮಾರಾಟದ ಘೋಷ; ಎಲ್ಲೆಲ್ಲಿ ನೋಡಿದರೂ ಪ್ರಾಪಂಚಿಕ ಬುದ್ಧಿಯಿಂದ ಜನಮನೋರಂಜನೆಯನ್ನು ಮಾಡುವ ವೇಷ; ಎತ್ತ ಕಡೆಗೆ ದೃಷ್ಟಿಯನ್ನು ಹಾಕಿದರೂ "ಬಿಸಿಬಿಸಿ ಚಹಾ ಕುಡಿಯಿರಿ; ಹೊಸದಾಗಿ ಕರಿದ ಪದಾರ್ಥಗಳು ಇಲ್ಲಿ ದೊರೆಯುವವು; ಉತ್ತಮವಾದ ಫಲಾಹಾರದ ಅಂಗಡಿ; ಮದರಾಸ ನಶ್ಯದ ಪುಡಿ; ಗದಗಿನ ಬೀಡಿಗಳು; ಬ್ರಾಹ್ಮಣರ ಸೋಡಾ ಕಂಪೆನಿ; ಬ್ರಾಹ್ಮಣರ ರೊಟ್ಟಿಬಿಸ್ಕಟ್ಟುಗಳ ಕಂಪೆನಿ; ಹೊಸದಾಗಿ ತರಿಸಿದ ವಿಲಾಯಿತಿಯ ಉತ್ತಮತರಗತಿಯ ಮಾದಕದ್ರವ್ಯಗಳು; ದೇಶೀಯ ಹೆಂಡದ ಅಂಗಡಿ; ವೀರ್ಯಸ್ತಂಭಕಕಾಮೋದ್ದೀಪಕ ಗುಳಿಗೆಗಳು; ಮನೋಮೋಹಕ ಸಿನೀಮಾ; ಶೃಂಗಾರಸಾರಸರ್ವಸ್ವನಾಟಕಮಂಡಲಿ; ಸೌಂದರ್ಯಸಾರಕಾದಂಬರೀಸಂಗ್ರಹಶಾಲೆ ಮೊದಲಾದ ಶಾಸನಗಳನ್ನು ದೊಡ್ಡಕ್ಷರದಲ್ಲಿ ಬರೆದಿರುವ ಹಲಿಗೆಗಳು. ಯಾವ ದಿಕ್ಕಿಗೆ ನೋಡಿದರೂ ತರುಣಜನರ ವಿಹಾರಗೃಹ; ಯಾರ ಮಾತನ್ನು ಕೇಳಿದರೂ ಹೊಸದಾಗಿ

ಕಂಡು ಹಿಡಿದಿರುವ ಸುಖಸಾಧನಗಳ ವಿಚಾರ; ಯಾರ ಮನಸ್ಸನ್ನು ನೋಡಿದರೂ ಭಗವದ್ವಿಚಾರದಿಂದ ವಿಮುಖತೆ. ಅರಸರು ಈ ಸ್ಥಿತಿಗೆ ಉತ್ತೇಜಕರಾಗಿ ಕಂಕಣವನ್ನು ಕಟ್ಟಿಕೊಂಡಿರುವಾಗ ಈ ವಿಷಯಸುಖ ಸಾಧನಗಳ ತಾಂಡವನರ್ತನವು ಬೆಳೆಯದೆ ಹೇಗೆ ಬಿಟ್ಟೀತು ? ಬ್ರಹ್ಮಚರ್ಯವನ್ನು ಶಿಥಿಲಮಾಡಬಲ್ಲ ಇವೆಲ್ಲ ನಮಗೆ ಪಶ್ಚಿಮದೇಶದ ಪ್ರಸಾದಗಳು. ಪಶ್ಚಿಮದೇಶದವರಿಗೆ ಧರ್ಮದ ಬಂಧನವಿಲ್ಲದಿರುವ ದೊಂದು, ಅವರದು ಶೀತದೇಶವಾಗಿರುವದೊಂದು.—ಹೀಗಾಗಿ ಮೇಲಿನ ಪದ್ಧತಿಗಳು ಅವರಿಗೆ ವಿಘಾತಕಗಳಾಗದೆ ಇರಬಹುದು. ಧರ್ಮಸರ್ವಸ್ವ ರಾಗಿರತಕ್ಕ ಮತ್ತು ಉಷ್ಣದೇಶದವರಾಗಿರತಕ್ಕ ನಮಗೆ ಅವು ಸಂಪೂರ್ಣ ಘಾತಕಗಳೇ ಸರಿ. ಪಶ್ಚಿಮದೇಶದ ಮಾತಾಡುವಾಗ ಧರ್ಮವನ್ನೊಂದು ಕಡೆ ಇಡೋಣ. ಏಕೆಂದರೆ: ಅದು ಅವರಿಗೆ ಸಂಬಂಧಪಡದೆ ಇರುವ ವಿಷಯ. ವ್ಯವಹಾರದೃಷ್ಟಿಯಿಂದಲೆ ನೋಡಿದರೂ ದೇಹದಲ್ಲಿ ಉಷ್ಣತೆಯನ್ನು ಹೆಚ್ಚಿಸುವ ಆಹಾರಗಳನ್ನು ತಿನ್ನುವದೂ, ಪಾನೀಯಗಳನ್ನು ಕುಡಿಯುವದೂ, ಸ್ತ್ರೀಪುರುಷರು ತೆಕ್ಕೆ ಹಾಕಿಕೊಂಡು ವಿಹರಿಸುವದೂ-ಇವುಗಳೆಲ್ಲ ಶೀತ ದೇಶದಲ್ಲಿ ಬಾಧೆಯನ್ನು ಮಾಡದೆ ಸಾಧಕವೇ ಆದರೂ ಉಷ್ಣದೇಶವಾದ ಇಲ್ಲಿ ಸಾಧಕವೆಷ್ಟು ಮಾತ್ರವೂ ಆಗದೆ ತಪ್ಪದೆ ಬಾಧಕವಾಗಿಯೇ ತೀರುವದು. ನಮ್ಮಲ್ಲಿ ಮಾದಕದ್ರವ್ಯಗಳು ಉಚ್ಚತರಗತಿಯವರಲ್ಲಿ ಸರ್ವಸಾಮಾನ್ಯವಾಗಿ ಸಾಕ್ಷಾತ್ತಾಗಿ ಹೆಚ್ಚು ಪ್ರಸಾರವಾಗದಿದ್ದರೂ ಅವರ ಮರಿಯಾಗಿ ಅವರ ಬೀಜಗಳನ್ನೆಲ್ಲ ಒಳಕೊಂಡಿರುವ ಕಾಫಿ ಮತ್ತು ಚಹಾ ಮೊದಲಾದ ಪಾನೀಯಗಳು ಬ್ರಹ್ಮಚರ್ಯಕ್ಕೆ ತಿಲತರ್ಪಣವನ್ನು ಕೊಡ ತಕ್ಕನೀರಾಗಿರುವವು. ನಮ್ಮಲ್ಲಿ ಇನ್ನೂ ಸ್ತ್ರೀಪುರುಷರು ತೆಕ್ಕೆ ಹಾಕಿಕೊಂಡು ತಿರುಗದಿದ್ದರೂ ಇಂಗ್ಲೀಷು ಪ್ರೌಢಪಾಠಶಾಲೆಗಳಲ್ಲಿ ಹುಡುಗರೂ ಹುಡುಗಿ ಯರೂ ಪ್ರೇಮದಿಂದ ಕಲೆತು ಅದರ ಪರಿಣಾಮವನ್ನು ಹೊಂದುತ್ತಿರುವರು. ಶೀತದೇಶದಲ್ಲಿ ಇಂಥ ನಡವಳಿಕೆಗಳು ಬಾಧಕವಾದ ಉಷ್ಣವಿಕಾರಗಳನ್ನು ಮಾಡದಿರಬಹುದು. ಆದರೆ ಅದರಂತೆ ನಾವು ಮಾಡುವದರಿಂದ ಸ್ವಭಾವವಾಗಿಯೇ ಉಷ್ಣಪ್ರಕೃತಿಯವರಾದ ನಮ್ಮ ರಕ್ತವು ಕಾಮ ಉಕ್ಕಿ ಅನರ್ಥವನ್ನು ಮಾಡದೆ ಎಂದಿಗೂ ಬಿಡುವದಿಲ್ಲ. ಹೀಗಾದ ನಮ್ಮನ್ನು

ನೋಡಿದರೆ ಪುಕ್ಕವನ್ನು ತರಿದುಕೊಂಡ ಕೆಂಬೂತದಂತೆ ನಮ್ಮ ಸ್ಥಿತಿಯಾಗಿವೆ. ಆದ್ದರಿಂದ ಮನಸ್ಸಿನಲ್ಲಿ ಪ್ರಾಪಂಚಿಕಸುಖದ ವಿಕಾರವನ್ನುಂಟು ಮಾಡುವಂಥ ಈ ಸೌಕರ್ಯಸಮೃದ್ಧಿಯು ತಲೆಮೇಲೆ ಗುದ್ದೀ ಹಾಕಿಕೊಂಡು ಹಿಮ್ಮೆಟ್ಟುವವರೆಗೂ ನಮ್ಮ ಬ್ರಹ್ಮಚರ್ಯವು ತಲೆಎತ್ತುವದಕ್ಕೆ ಅವಕಾಶವಿಲ್ಲ. ಆದ್ದರಿಂದ ಈ ಪ್ರತಿಕೂಲಪರಿಸ್ಥಿತಿಯು ತಲೆಯ ಮೇಲೆ ಆದಷ್ಟು ಬಲವಾಗಿ ಮೆಟ್ಟಬೇಕು. ಮತ್ತು ಮೆಟ್ಟಬೇಕು.

ಪ್ರತಿಕೂಲಪರಿಸ್ಥಿತಿ ಹೋದ ಮೇಲೆ ಅದನ್ನು ಬೆಳೆಸಿಕೊಳ್ಳುವ ಮಾತು. ರೋಗವು ಹೋದಮೇಲಲ್ಲವೆ ಪುಷ್ಟಿಯ ವಿಚಾರ? ಆದರೂ ಸಮಯ ಬಂದಾಗ ಉಪಯೋಗಬೀಳಲೆಂದು ಇಲ್ಲಿ ಅದರ ವಿಚಾರವನ್ನು ಸ್ವಲ್ಪ ಮಾಡಲಾಗುವದು. ಈ ಸಾಧನವನ್ನು ನಾವು ಬೇರೆ ಇನ್ನೆಲ್ಲಿಂದಲೂ ಕಂಡು ಹಿಡಿಯಬೇಕಾಗಿಲ್ಲ. ಬ್ರಹ್ಮಚರ್ಯವೆಂಬ ಶಬ್ದವೇ ಇದನ್ನು ಹೇಳಿಕೊಡುವದು. ಬ್ರಹ್ಮಚರ್ಯವೆಂದರೆ ಭಗವತ್ಸ್ವರೂಪವಿಚಾರವೆಂದು ಒಂದು ಅರ್ಥವೂ ಮದುವೆಯೇ ಇಲ್ಲದಿರುವ ಅಥವಾ ಪತ್ನಿಯೊಡನೆ ನಿಯಮದಿಂದ ವರ್ತಿಸುವ ಸ್ಥಿತಿಯೆಂದು ಒಂದು ಅರ್ಥವೂ ಹಿಂದೆ ಹೇಳಿದ್ದಾಗಿದೆಯಷ್ಟೆ. ಇವೆರಡರ್ಥವೂ ಒಂದನ್ನೊಂದು ಬಿಟ್ಟಿಲ್ಲ. ಆದರೂ ಮೊದಲನೆ ಅರ್ಥವನ್ನು ಅವಲಂಬಿಸಿಕೊಂಡೆ ಎರಡನೆ ಅರ್ಥವು ಸಿದ್ಧಿಯಾಗುವದು. ಮದುವೆಯನ್ನೇ ಮನಸ್ಸಿಗೆ ತಂದುಕೊಳ್ಳದೆ ಇರುವದಾಗಲಿ ಅಥವಾ ಮದುವೆಯಾದ ಧರ್ಮಪತ್ನಿಯಲ್ಲಿ ಮಾತ್ರವೆ ನಿಯಮದಿಂದ ವರ್ತಿಸುವದಾಗಲಿ ಭಗವದ್ವಿಚಾರಪರನಲ್ಲದವನಿಗೆ ಎಂದಿಗೂ ದಕ್ಕುವ ಮಾತಲ್ಲ. ಯಾರಾದರೂ ಈಗ ಭಗವದ್ವಿಚಾರವನ್ನು ಮಾಡದೆ ಎರಡನೆ ಅರ್ಥದ ಬ್ರಹ್ಮಚರ್ಯವನ್ನು ಸಾಧಿಸುತ್ತಿದ್ದರೆ ಅವನು ಕೊನೆಗೆ ಪೂರ್ವಜನ್ಮದಲ್ಲಾದರೂ ಭಗವದ್ವಿಚಾರವನ್ನು ಮಾಡಿ ಆತ್ಮಶಕ್ತಿಯನ್ನು ಪಡೆದುಕೊಂಡವನೆಂದು ಹೇಳಬೇಕಾಗುತ್ತದೆ. ಎರಡನೆ ಅರ್ಥದ ಬ್ರಹ್ಮಚರ್ಯವನ್ನು ಸಾಧಿಸುವದಕ್ಕೆ ಬಹು ಹೆಚ್ಚಿನ ಆತ್ಮಶಕ್ತಿ ಬೇಕು. ಆ ಶಕ್ತಿಯು ಮೊದಲನೆ ಅರ್ಥದ ಬ್ರಹ್ಮಚರ್ಯದಲ್ಲಿ, ಎಂದರೆ ಭಗವದ್ವಿಚಾರದಲ್ಲಿಯೆ, ಮೀಸಲಾಗಿರುವದು. ಭಗವತ್ಸ್ವರೂಪವು ಸರ್ವಸಾತ್ತ್ವಿಕಶಕ್ತಿಗಳ ತವರುಮನೆಯಾಗಿರುವದು. ಮನುಷ್ಯನು ತನ್ನ ಮನಸ್ಸನ್ನು ಅದರಲ್ಲಿ ಅದ್ದುವದ

ರಿಂದ ಆ ಶಕ್ತಿಗಳ ತಂಪು ಮನಸ್ಸಿನೊಳಗೆ ತುಂಬಿಕೊಂಡು ಎರಡನೆ ಅರ್ಥದ ಬ್ರಹ್ಮಚರ್ಯಕ್ಕೆ ನೆರವಾಗುವವು. ಆದ್ದರಿಂದ ಈಗಿನ ವಿದ್ಯಾರ್ಥಿಗಳು ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳಬೇಕೆಂದಿದ್ದರೆ ಮೊದಲು ಪ್ರತಿಕೂಲಪರಿಸ್ಥಿತಿಯಾದ ವಿಷಯಸುಖಸಮೃದ್ಧಿಗೆ ದೂರರಾಗಿರಬೇಕು. ಏಕೆಂದರೆ. ನಾವು ಎಷ್ಟೇ ಜಾಗರೂಕರಾಗಿದ್ದರೂ ನಮಗರಿವಿಲ್ಲದಂತೆ ನಮ್ಮ ಮನಸ್ಸು ಅವುಗಳ ಬಲೆಗೆ ಬೀಳಬಹುದು ಒಮ್ಮೆ ಬಿದ್ದಿತೆಂದರೆ ಏಳುವದು ಕಷ್ಟ. ಎರಡನೆಯದೇನೆಂದರೆ: ಭಗವದ್ವಿಚಾರದ ಜಾಗರೂಕತೆಯನ್ನು ಚೆನ್ನಾಗಿಟ್ಟುಕೊಳ್ಳಬೇಕು. ಇದು ಇದ್ದರೆ ಒಂದು ವೇಳೆ ಬಿದ್ದವರನ್ನು ಕೂಡ ಎಬ್ಬಿಸುವದು.

ಮೀರಾಬಾಯಿಯ ಇತಿಹಾಸವನ್ನು ನೋಡಿರಿ. ಆಕೆ ಭಗವತ್ಸಂಕೀರ್ತನದಲ್ಲಿ ಮಗ್ನಳಾಗಿರುತ್ತಿದ್ದದ್ದರಿಂದ ತನ್ನ ಮೇಲೆ ರಾಜಪುತ್ರಯುವಕರು ಏಕೆ ಪ್ರೀತಿಮಾಡುತ್ತಾರೆಂಬ ಅರ್ಥದ ಕಲ್ಪನೆಯೆ ಆಕೆಯ ಮನಸ್ಸಿಗೆ ಹೊಳೆಯಲಿಲ್ಲ. ಆಕೆಯನ್ನು ಮದುವೆಯಾದ ಗಂಡನು ಆಕೆ ಸಂಸಾರ ಸುಖಕ್ಕೆ ತಕ್ಕವಳಲ್ಲವೆಂದು ಹೊರಕ್ಕೆ ಹಾಕಿದರೂ ಅವಳ ಮನಸ್ಸಿಗೆ ಭೇದವೇ ತೋರಲಿಲ್ಲ. ಚಿತ್ತೂರಿನ ರಾಣಿಯಾಗಿದ್ದ ಆಕೆಯು ಹೊರಗೆ ಸರ್ವಸಾಮಾನ್ಯರಂತೆ ಜೀವವನ್ನು ಹೊರೆಯಬೇಕಾಗಿ ಬಂದರೂ ಆಕೆಗೆ ಪತಿಯ ವಿರಹದ ರಹಸ್ಯವೆ ತಿಳಿಯಲಿಲ್ಲ. ಆಕೆಗೆ ಪತಿಯ ಮೇಲೆ ಪ್ರೇಮವಿರಲಿಲ್ಲವೆಂತ ಅಲ್ಲ. ಆಕೆಯ ಸಹೃದಯಕ್ಕೆ ಪರವಶನಾದ ಪತಿಯು ಒಮ್ಮೆ ಹೇಳಿಕಳುಹುತ್ತಲೆ ಪತಿಯೆ ತನ್ನ ಸರ್ವಸ್ವವೆಂದು ಆಕೆ ಬಂದೇಬಿಟ್ಟಳು. ತಾನು ಬಹಿಷ್ಕೃತಳಾಗಿ ತಿರುಗುವಾಗಲೂ ಪತಿಯೆ ತನ್ನ ಸರ್ವಸ್ವವೆಂದು ಹೇಳುತ್ತಿದ್ದಳು. ಆದರೆ ಆಕೆಗೆ ಆಜನ್ಮಸಿದ್ಧವಾಗಿ ಬಂದಿದ್ದ ಪರಮಾತ್ಮಸಂಕೀರ್ತನದ ಆವೇಶದ ಭರದಲ್ಲಿ ಪತಿಪತ್ನೀಸಂಬಂಧದ ಕಲ್ಪನೆಗೆ ಮಾತ್ರ ತಲೆಯನ್ನೆತ್ತುವದೆ ಆಗಲಿಲ್ಲ. ಆದ್ದರಿಂದ ಮನಸ್ಸಿನಲ್ಲಿ ಕ್ಷುದ್ರವಾದ ವಿಷಯಸುಖೇಚ್ಛೆಯ ಕಲ್ಪನೆಯ ಕುಡಿಯನ್ನು ಚಿವುಟಿಹಾಕುವದಕ್ಕೆ ಭಗವದ್ವಿಚಾರವೊಂದಕ್ಕೆ ಸಾಮರ್ಥ್ಯವಿರುವದೆ ಹೊರತು ಇನ್ನೊಂದಕ್ಕಿಲ್ಲ. ಆದ್ದರಿಂದ ನಮ್ಮ ದೇಶದಲ್ಲಿ ಆತ್ಮಶಕ್ತಿವಂತರು ಹೆಚ್ಚಬೇಕಾದರೆ ನಮ್ಮ ವಿದ್ಯಾರ್ಥಿಗಳೆಲ್ಲರೂ ಆದಷ್ಟು ಭಗವದ್ವಿಚಾರತತ್ಪರರಾಗಬೇಕು. ದುರ್ದೈವ

ದಿಂದ ಪುನಸ್ಸಿಗೆ ಅದರ ಚಟವು ಬೇಗ ಹತ್ತಿದಿದ್ದರೂ ಸರ್ವಪ್ರಯತ್ನ ದಿಂದಲೂ ಬ್ರಹ್ಮಚರ್ಯದ ಪ್ರತಿಕೂಲಪರಿಸ್ಥಿತಿಗೆ ದೂರವಾಗಿ ಇದ್ದು ಭಗವದ್ವಿಚಾರವನ್ನು ಮೈಗೂಡಿಸಿಗೊಳ್ಳುತ್ತ ಹೋಗಬೇಕು.

ಬ್ರಹ್ಮಚರ್ಯವಿರಬೇಕಾದರೆ ಅದರ ಪ್ರತಿಕೂಲಪರಸ್ಥಿತಿಯ ಸಂಪರ್ಕವಿರಬಾರದೆಂಬವರ ಕಡೆಗೆ ನಮ್ಮ ಹಿರಿಯರು ಹೆಚ್ಚು ಲಕ್ಷ್ಯವನ್ನು ಕೊಡುತ್ತಿದ್ದರು. ಪಾತಿವ್ರತ್ಯಕ್ಕೆ ಹೆಚ್ಚು ಬೆಲೆಯುಳ್ಳ ನಮ್ಮ ದೇಶದಲ್ಲಿ ಸ್ತ್ರೀಯರಿಗೆ ಪುನರ್ವಿವಾಹವನ್ನು ನಿಷೇಧಮಾಡಿದ ನಮ್ಮ ಹಿರಿಯರು ಪತಿ ವಿಯೋಗವಾದ ಸ್ತ್ರೀಯರಿಗೂ ಭಗವದ್ವಿಚಾರದ ದೀಕ್ಷೆಯನ್ನು ತೆಗೆದು ಕೊಳ್ಳುವ ಪುರುಷರಿಗೂವಿರಕ್ತವೇಷವನ್ನೂ ವೈರಾಗ್ಯವೃತ್ತಿಯನ್ನೂ ವಿಧಿಸಿರು ವದೇ ಇದಕ್ಕೆ ದೃಷ್ಟಾಂತವು. ಅವೆರಡೂ ಇಲ್ಲದೆ ಸ್ತ್ರೀಪುರುಷಸಂಬಂಧವನ್ನು ಮಿತವಾಗಿ ಬಳೆಸಲಿಚ್ಛಿಸುವವರಾದರೂ ಅದನ್ನೆ ಅನುಕರಣ ಮಾಡತಕ್ಕದ್ದು. ಪ್ರಪಂಚವ್ಯವಹಾರವೆಂಬ ಸಮುದ್ರದಲ್ಲಿ ಹಾಯಾಗಿ ತೇಲಾಡಿಸುವಂಥ ಭಗವದ್ವಿಚಾರವನ್ನು ಮನಗಾಣುವದೇ ವಿದ್ಯಾರ್ಥಿವೃತ್ತಿಯ ಧ್ಯೇಯವೆಂಬು ದನ್ನು ಎಂದಿಗೂ ಮರೆಯಬಾರದು. ಬರೀ ತರ್ಕವ್ಯಾಕರಣಗಳ ಪಾಠ ದಲ್ಲಿಯೇ ನಿಂತರೂ ಅಥವಾ ಬರೀ ಭೌತಿಕವಿಚಾರಜ್ಞಾನದಿಂದಲೆ ಕೇಕೆ ಯನ್ನು ಹಾಕಿದರೂ ವಿದ್ಯಾರ್ಥಿತ್ವವು ಸಾರ್ಥಕವಾಗಲಿಲ್ಲ. ಇವುಗಳೆಲ್ಲ ಆತ್ಮಶಕ್ತಿಯನ್ನು ಹೆಚ್ಚಾಗಿ ಹುರಿದುಂಬಿಸಲಾರವು. ಆತ್ಮಶಕ್ತಿಯ ಪರಮಾವಧಿಯನ್ನು ಮುಟ್ಟುವಂತೆ ಬೆಳೆಸುವ ಸಾಮರ್ಥ್ಯವು ಭಗವದ್ವಿಚಾರ ಸ್ವರೂಪವಾದ ಬ್ರಹ್ಮಚರ್ಯಕ್ಕೆ ಮಾತ್ರ ಇರುವದರಿಂದ ಅದರ ಪ್ರಾಪ್ತಿಗೆ ಸರ್ವಸಹಾಸವನ್ನೂ ಮಾಡಬೇಕು.

# ಧೈರ್ಯ.

ಬ್ರಹ್ಮಚರ್ಯವು ಎಲ್ಲ ಬಗೆಯ ಆತ್ಮಶಕ್ತಿಗಳ ಕೇಂದ್ರಸ್ಥಾನವಾಗಿ ಅಥವಾ ಬೀಜವಾಗಿ ಇರುವದೆಂದು ಹಿಂದೆ ಹೇಳಿದ್ದಾಯಿತಷ್ಟೆ.

ಬೀಜವು ಮೊದಲು ಅಂಕುರಿಸಿ ಆಮೇಲಿ ಬಹುರೂಪವಾಗಿ ಬೆಳೆದು ಮರವಾಗುತ್ತದೆ. ಬ್ರಹ್ಮಚರ್ಯವೆಂಬ ಬೀಜಕ್ಕೆ ಧೈರ್ಯವೆಂಬ ಗುಣವೆ ಅಂಕುರ. ಮೊದಲು ಧೈರ್ಯ ಬಂದ ಮೇಲೆಯೆ ಬಗೆಬಗೆಯ ಆತ್ಮಶಕ್ತಿಗಳು ರೂಪುಗೊಳ್ಳುವವು. ಆದ್ದರಿಂದ ಅಂಕುರಪ್ರಾಯವಾದ ಧೈರ್ಯದ ವಿಚಾರವನ್ನು ಇಲ್ಲಿ ತಗೆದುಕೊಳ್ಳುವದು ಯುಕ್ತವಾಗಿರುವದು. ಧೈರ್ಯವೆಂದರೆ ಕೆಚ್ಚೆದೆಯತನ. ಅಪಾಯಕ್ಕೆ ಎದೆಗುಂದದೆ ಮುಂದೆ ನುಗ್ಗುವದೊಂದೆ ಧೈರ್ಯವಲ್ಲ; ಮೋಹಕವಸ್ತುಗಳು ನಮ್ಮನ್ನು ಎಷ್ಟು ಸೆಳೆದರೂ ಅವುಗಳ ಬೇಳುವೆಗೆ ಬೆರಗಾಗದಿರುವದೂ ಧೈರ್ಯವೆ. ಒಬ್ಬ ಒಳ್ಳೇ ಬಲಶಾಲಿಯು ಇನ್ನೊಬ್ಬ ದುರ್ಬಲನನ್ನು ನೆಲಾಕಚ್ಚುವಂತೆ ಬಡಿದರೆ ಅವನನ್ನು ಒಳ್ಳೆ ಧೀರನೆಂದು ಹೇಳುವದುಂಟು. ಆದರೆ ಧೀರನೆಂಬ ಮಾತು ಅವನಿಗೆ ಒಪ್ಪುವದಿಲ್ಲ. ಅವನು ತೋರಿಸಿದ್ದು ಶೌರ್ಯ. ಶೌರ್ಯದ ವಾಸಸ್ಥಾನವು ಶರೀರ. ಧೈರ್ಯದ ವಾಸಸ್ಥಾನವು ಬುದ್ಧಿ. ಮೇಲೆ ದುರ್ಬಲನನ್ನು ಹಣಿದ ಶೂರನೇ ಪ್ರತಿಪಕ್ಷಿಯ ದೌರ್ಬಲ್ಯವನ್ನು ನೋಡಿ ಅವನ ಮೇಲೆ ಕೈಮಾಡುವದು ತನ್ನ ಯೋಗ್ಯತೆಗೆ ಕೊರತೆಯನ್ನುಂಟು ಮಾಡುವದೆಂದು ತಿಳಿದು ಆ ದುರ್ಬಲನನ್ನು ಮನ್ನಿಸಿ ತನ್ನ ಮನಸ್ಸನ್ನು ಸಮಾಧಾನಮಾಡಿಕೊಂಡಿದ್ದರೆ ಆಗ ಅವನನ್ನು ಧಾರಾಳವಾಗಿ ಧೀರನೆಂದು ಹೇಳಬಹುದಾಗಿತ್ತು. ಬುದ್ಧಿಶಕ್ತಿಯು ಮನಸ್ಸನ್ನು ತನ್ನಾಳಿಕೆಗೊಳಪಡಿಸಿಕೊಂಡು ಅದನ್ನು ಒಳ್ಳೆ ದಾರಿಯಲ್ಲಿಯೆ ಮುಂದುವರಿಯುವಂತೆ ನಿಯಮನ ಮಾಡಿದರೆ ಅದಕ್ಕೆ ಧೈರ್ಯವೆನ್ನಬೇಕು. ಮೇಲಿನ ಉದಾಹರಣೆಯಲ್ಲಿ ಆ ದುರ್ಬಲನು ಯೋಗ್ಯಕಾರಣಕ್ಕಾಗಿ ಬಲಿಷ್ಠನ ಮೇಲೆ ಕೈ ಎತ್ತಿದರೆ ಅವನು ಕೊನೆಗೆ ಸೋತು ಮಲಗಿದರೂ ಧೀರನೆ. ಏಕೆಂದರೆ: ಅವನು ಬಲಿಷ್ಠನ ಬಾಹುಬಲಕ್ಕೆ ಸಪ್ಪುಹಾಕದೆ ತನ್ನ ಮನಸ್ಸು ಪ್ರತಿಪಕ್ಷಿಯನ್ನು ನಿಗ್ರಹಿಸುವದಕ್ಕೆ ಪ್ರವರ್ತಿಸುವಂತೆ ಮಾಡಿದನು. ಲೋಕದಲ್ಲಿ ಜಯವೆಲ್ಲ ವಿಶೇಷವಾಗಿ ಶೌರ್ಯಕ್ಕಿಂತಲೂ ಹೆಚ್ಚಾಗಿ ಧೈರ್ಯವನ್ನವಲಂಬಿಸಿರುವದು. ಧೀರನಾದ ಪುರುಷನು ಶರೀರದೃಷ್ಟಿಯಿಂದ ದುರ್ಬಲನಾಗಿದ್ದರೂ ಮನುಶ್ಯಕ್ತಿಯ ದೃಷ್ಟಿಯಿಂದ ಒಳ್ಳೆ ಬಲಿಷ್ಠನಾಗಿರುವನು. ಇಬ್ಬರಿಗೂ ನಡೆಯುವ ಯುದ್ಧವು ವಿಶೇಷವಾಗಿ ಶರೀರವನ್ನೇ ಅವಲಂಬಿಸಿಕೊಂಡಿರುವ ಹಾಗೆ ಹೊರಕ್ಕೆ

ಕಂಡರೂ ಎಷ್ಟೋ ಸಂದರ್ಭಗಳಲ್ಲಿ ಜಯಾಪಜಯಗಳು ಅವರವರ ಆತ್ಮ ಶಕ್ತಿಯಿಂದಲೇ ಸಿದ್ಧವಾಗುವವು. ಉತ್ಕೃಷ್ಟವಾದ ಆತ್ಮಶಕ್ತಿಯು ಮಹತ್ತ್ವ ಭಾವವನ್ನುಂಟುಮಾಡಿದ್ದು ಶರೀರದೃಷ್ಟಿಯಿಂದ ನಿಕೃಷ್ಟನಾಗಿರುವ ಮನುಷ್ಯ ನೆದುರಿಗೆ ನಿಂತಾಗ ಮಹಾಬಾಹುಬಲದಿಂದ ಮದೋನ್ಮತ್ತನಾದ ಮನುಷ್ಯ ನಿಗೆ ಕೂಡ ಎದೆಯು ಡವಡವ ಹೊಡೆದು ಕೊಳ್ಳುವದಕ್ಕಾರಂಭಿಸುವದು. ಏಕೆಂದರೆ: ಆತ್ಮಶಕ್ತಿವಂತನ ಮನಸ್ಸಿನ ಮುಂದೆ ಬರೀ ಬಾಹುಬಲದವನ ಮನಸ್ಸು ತಲೆ ಎತ್ತಲಾರದಾಗುವದು. ಆತ್ಮಶಕ್ತಿಯ ಆವೇಶವುಂಟಾಯಿ ತೆಂದರೆ ಹುಲ್ಲುಕಡ್ಡಿಯಂಥ ಮನುಷ್ಯನು ಕೂಡ ವಜ್ರಾಯುಧಪ್ರಾಯ ನಾಗುವನು. ಶರೀರಕ್ಕಿಂತ ಮನಸ್ಸು ಉತ್ಕೃಷ್ಟಪದಾರ್ಥವೆಂದು ಶಾಸ್ತ್ರಗಳೂ ಹೇಳುವವು; ವಿವೇಕಿಗಳಾದ ಸಮಸ್ತರೂ ಒಪ್ಪುವರು. ಆ ಉತ್ಕೃಷ್ಟಪದಾರ್ಥದ ಶಕ್ತಿಯ ಮುಂದೆ ನಿಕೃಷ್ಟಪದಾರ್ಥದ್ದೇನು ಸಾಗೀತು? ಪೂರ್ವದಲ್ಲಿ ಋಷ್ಯಾಶ್ರಮದಲ್ಲಿ ಪ್ರಾಣಿಗಳು ಪರಸ್ಪರ ದ್ವೇಷಭಾವವನ್ನು ಬಿಟ್ಟು ವರ್ತಿಸುತ್ತಿದ್ದವೆಂಬ ಮಾತು ಅತ್ಯುಕ್ತಿ ಯೆಂದು ಹೇಳಬಾರದು. ಏಕೆಂದರೆ: ಋಷಿಗಳಲ್ಲಿ ಅಹಿಂಸಾತತ್ತ್ವವು ಪರಮಾವಧಿಯ ಸ್ಥಿತಿಯಲ್ಲಿ ಮೈಗೂಡಿತೆಂದರೆ ಅವರ ಸಾನ್ನಿಧ್ಯಪ್ರಭಾವವು ಸಮಸ್ತಪ್ರಾಣಿಗಳ ಮೈತ್ರಿಯ ರೂಪದಲ್ಲಿ ಪರಿಣಮಿಸುವದೇನೂ ಅಸಾಧ್ಯ ವಲ್ಲ. ಆದ್ದರಿಂದ ಲೋಕದಲ್ಲಿ ಜಯಶೀಲನಾಗಬೇಕೆಂದಪೇಕ್ಷಿಸುವವನು ಧೈರ್ಯವೆಂಬ ಆತ್ಮಶಕ್ತಿಯನ್ನು ಮೈಗೂಡಿಸಿಕೊಳ್ಳಬೇಕು.

ಆ ಧೈರ್ಯವೆಂಬ ಆತ್ಮಶಕ್ತಿಯು ಮೊದಲು ಸ್ವಾಭಿಮಾನರೂಪ ವಾಗಿ ಒಡೆದುಮೂಡುವದು. ಸ್ವಾಭಿಮಾನವೆಂದರೆ ಪರಂಪರಾಗತವಾದ ತನ್ನ ಕುಲದ ತೇಜಸ್ಸನ್ನು ಮಾಸಗೊಡದೆ ಮತ್ತಷ್ಟು ಉಜ್ಜ್ವಲವಾಗಿಯೆ ಮಾಡಬೇಕೆಂಬ ದೃಢನಿಶ್ಚಯ. ಯಾವದಾದರೊಂದು ಕಾರ್ಯವನ್ನು ಸಾಧಿಸಬೇಕಾದರೆ ಆ ಮನುಷ್ಯನಿಗೆ ಅದನ್ನು ತಾನು ಮಾಡಿಯೆ ಮುಗಿಸತಕ್ಕ ವನೆಂಬದೊಂದಭಿಮಾನವಿರಬೇಕು. ಪ್ರತಿಯೊಂದು ಸಂದರ್ಭದಲ್ಲಿಯೂ ತಾನೆಷ್ಟರವನೆಂದು ತನ್ನಲ್ಲಿ ತನಗೇ ಕೀಳುಬುದ್ಧಿಯಿದ್ದರೆ ಅವನಿಂದ ಯಾವ ಕೆಲಸವೂ ಆಗುವದಿಲ್ಲ. ದೊಡ್ಡವರ ಮುಂದೆ ತಾನೆಷ್ಟರವನೆಂಬ ವಿನಯವಿರಬೇಕು. ಅದು ಭೂಷಣ. ಉಳಿದವರೊಡನೆ ಮಾಡುವ

ವ್ಯವಹಾರದಲ್ಲಿ ಮಾತ್ರ ಅದು ಕಾರ್ಯಕಾರಿಯಲ್ಲ. ಅಭಿಮಾನವಿಲ್ಲದೆ ಯಾವ ವ್ಯವಹಾರವೂ ಸಾಗುವದಿಲ್ಲ. ಅಭಿಮಾನವಿದ್ದರೆ ಮಾತ್ರ ಅವನು ಅದನ್ನು ಉಳಿಸಿಕೊಳ್ಳುವದಕ್ಕಾಗಿ ತನ್ನ ಕಾರ್ಯವನ್ನು ಕೊನೆಮುಟ್ಟುವ ರೆಗೂ ಮಾಡುವನು. ಶಿವಾಜಿಯು ಚಿಕ್ಕವನಾಗಿದ್ದಾಗ ಒಮ್ಮೆ ವಿಜಾಪುರದ ಸುಲ್ತಾನನ ಆಸ್ಥಾನಕ್ಕೆ ಹೊಗಬೇಕಾಗಿ ಬಂತು. ಆ ಪ್ರಕಾರ ಅವನು ಅಲ್ಲಿಗೆ ಹೋದನು. ಅಲ್ಲಿ ಎಲ್ಲರೂ ಸುಲ್ತಾನನಿಗೆ ಬಗ್ಗಿ ಸಲಾಂ ಮಾಡುವ ಪದ್ಧತಿ ಇತ್ತು. ಶಿವಾಜಿಯು ಮುಸಲ್ಮಾನರೆಂದರೆ ವಿಷವನ್ನು ಕಕ್ಕುವ ಸ್ವಭಾವ ದವನು. ಅವರು ಗೋವಧೆಯನ್ನು ಮಾಡುತ್ತಿದ್ದದ್ದೂ ಹಿಂದುಗಳ ರಾಜ್ಯ ವನ್ನು ಆಕ್ರಮಿಸಿ ಅಲ್ಲಿ ತಮ್ಮ ಪ್ರತಿಷ್ಠೆಯನ್ನು ಬೆಳೆಸುತ್ತಿದ್ದದ್ದೂ ಶಿವಾಜಿಯ ಮನಸ್ಸಿನಲ್ಲಿ ಪ್ರತಿಕ್ಷಣವೂ ಉದ್ವೇಗವನ್ನುಂಟುಮಾಡುತ್ತಿದ್ದವು. ಆದರೂ ಹೊತ್ತು ಬಂದಂತೆ ಕೊಡೆಯನ್ನು ಹಿಡಿಯುವ ಮನಸ್ಸನ್ನು ಮಾಡಿಕೊಂಡಿದ್ದ ಅವನ ತಂದೆಯಾದ-ಶಹಾಜಿಯು ತನ್ನ ಮಗನಿಗೆ ಬುದ್ಧಿಯನ್ನು ಹೇಳಿ ಸುಲ್ತಾನನಿಗೆ ಸಲಾಂ ಮಾಡುವಂತೆ ಒಡಂಬಡಿಸಿ ಅವನನ್ನು ತನ್ನೊಡನೆ ಆಸ್ಥಾನಕ್ಕೆ ಕರೆದೊಯ್ದನು. ಏನಾದರೂ ಹಿಂದೂಧರ್ಮವೃಕ್ಷಕ್ಕೆ ಕುಠಾರಪ್ರಾಯನಾದವನಿಗೆ ಗೌರವವನ್ನು ತೋರಿಸುವದು ಮಹಾಧರ್ಮಾಭಿ ಮಾನಿಯಾದ ಶಿವಾಜಿಗೆ ಒಗ್ಗದ ಮಾತಾಗಿತ್ತು. ಆದ್ದರಿಂದ ಶಿವಾಜಿಯು ತಂದೆಯ ಮಾತಿಗೆ ಗೌರವವನ್ನು ಕೊಡುವದಕ್ಕಾಗಿ ಆ ಸುಲ್ತಾನನಿಗೆ ಹಾಗೂ ಹೀಗೂ ಸಲಾಮಿನ ಶಾಸ್ತ್ರವನ್ನು ಮುಗಿಸಿದನೇ ಹೊರತು ಮನಮುಟ್ಟಿ ಅದಕ್ಕೆ ಪೂರ್ಣಸ್ವರೂಪವನ್ನು ಕೊಡಲಿಲ್ಲ. ಮನೆಗೆ ಬಂದ ಮೇಲೆ ತಂದೆಯು ಇದರ ಕಾರಣವನ್ನು ಕುರಿತು ಮಗನನ್ನು ಕೇಳಲು ಶಿವಾ ಜಿಯು ತನ್ನ ದೇಹವು ಆ ತನ್ನ ಮಾತನ್ನು ಕೇಳಲೊಲ್ಲದೆಂದು ಹಾರಿಸಿ ಬಿಟ್ಟನು. ಶಿವಾಜಿಯ ಸ್ವಾಭಿಮಾನರೂಪವಾದ ಆತ್ಮಶಕ್ತಿಯು ಇಷ್ಟು ಬೇರೂರಿತ್ತು. ಅದು ದೇಹವನ್ನು ಕೂಡ ತನ್ನ ವಶವರ್ತಿಯಾಗಿ ಮಾಡಿ ಕೊಂಡಿತ್ತು. ಶಿವಾಜಿಯ ಸ್ವಾಭಿಮಾನವು ಮತ್ತೊಂದು ವೇಳೆಯೂ ಬಹು ಚೆನ್ನಾಗಿ ಕಂಡುಬಂದಿದೆ. ಒಮ್ಮೆ ಶಿವಾಜಿಯು ಔರಂಗಜೇಬನ ಆಸ್ಥಾನಕ್ಕೆ ಹೋಗುವ ಪ್ರಸಂಗ ಬಂದಿತ್ತು. ಅಲ್ಲಿ ಶಿವಾಜಿಯ ಸ್ಥಾನವು ಸಾಮಾನ್ಯ ರಾಜರ ಸಾಲಿನಲ್ಲಿ ಸೇರಿತ್ತು. ಶಿವಾಜಿಯು ತನ್ನ ಸ್ಥಲಕ್ಕೆ ಹೋಗಿ ಸುತ್ತು

ನುತ್ತು ತನ್ನ ದೃಷ್ಟಿಯನ್ನು ಪ್ರಸಾರಮಾಡಿ ನೋಡಿದನು. ಅವನ ದೃಷ್ಟಿಗೆ ಆ ಸಾಲಿನ ರಾಜರೆಲ್ಲ ಕ್ಷುದ್ರರಾಗಿ ಕಂಡರು. ಆಗ ಶಿವಾಜಿಯು ಯೋಗ್ಯಾಯೋಗ್ಯತೆಯ ವಿವೇಚನೆ ಇಲ್ಲದಂಥ ಸಂತೆಯಲ್ಲಿ ನಾನು ಕೂಡಲಾರೆನೆಂದು ಹೇಳಿ ಆ ಸ್ಥಲವನ್ನು ಬಿಟ್ಟು ಹೊರಟೇ ಹೊರಟನು. ಎಲ್ಲರೂ ಬೆಪ್ಪಾಗಿ ನೋಡಿದರು. ಧೀರನಾದ ಶಿವಾಜಿಗೆ ತನ್ನನ್ನು ತಾನು ಕಡಿಮೆಯವನನ್ನಾಗಿ ಮಾಡಿಕೊಳ್ಳುವದು ಎಷ್ಟು ಮಾತ್ರವೂ ಸಹನವಾಗಲಿಲ್ಲ. ಹೀಗೆ ಯಾರ ಮನಸ್ಸಾಕ್ಷಿಯಲ್ಲಿ ಸ್ವಾಭಿಮಾನವು ಜಾಗರೂಕವಾಗಿರುವದೊ ಅಂಥವರು ಮಾತ್ರ ಮಹತ್ಕಾರ್ಯಗಳನ್ನು ಸಾಧಿಸಬಲ್ಲರು. ಶಿವಾಜಿಯಲ್ಲಿ ಆ ಯೋಗ್ಯತೆ ಇದ್ದದ್ದರಿಂದಲೆ ಪ್ರಬಲವಾದ ಪ್ರತಿಕೂಲಪರಿಸ್ಥಿತಿಯ ಪ್ರವಾಹವನ್ನು ಬದಿಗೊತ್ತಿ ಅವನು ತನ್ನ ಸ್ವರಾಜ್ಯವನ್ನು ಸ್ಥಾಪಿಸುವವನಾದನು.

ಸ್ವಾಭಿಮಾನವುಳ್ಳ ಮನುಷ್ಯನು ಮಾತ್ರವೆ ತನಗೆ ಹಾನಿಯನ್ನುಂಟುಮಾಡುವದಕ್ಕೆ ಬಂದ ಪ್ರತಿಕಕ್ಷಿಯನ್ನು ಅಡ್ಡಗಟ್ಟುವದಕ್ಕೆ ಸಮರ್ಥನಾಗುತ್ತಾನೆ. ಪ್ರತಿಕಕ್ಷಿಯ ಕೈ ತನ್ನ ಮೇಲೆ ಸಾಗದಂತೆ–ಪ್ರತಿಕಕ್ಷಿಯಿಂದ ತನಗೆ ಹಾನಿಯಾಗದಂತೆ–ತನ್ನ ಸ್ಥಿತಿಯನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳುವದು ಧೀರತೆಯು. ಈ ಬಗೆಯ ಧೈರ್ಯಕ್ಕೆ ಉದಾಹರಣೆಗಳು ಬೇಕಾದಷ್ಟು ಸಿಕ್ಕುವವು. ಆದ್ದರಿಂದ ಅಗ್ಗವಾದ ವಿಷಯಕ್ಕೆ ಹೋಗುವದು ಇಲ್ಲಿ ನಮಗೆ ಬೇಡ. ಮೇಲೆ ಹೇಳಿದ ಧೀರತೆಗಿಂತಲೂ ಹುರಿಗೊಂಡ ಧೀರತೆಯೊಂದುಂಟು. ಅದೇನೆಂದರೆ: ಯಾವನಾದರೊಬ್ಬನು ತನಗೆ ಹಾನಿಯನ್ನುಂಟುಮಾಡುವದಕ್ಕೆ ಬಂದರೆ ಅವನಿಂದ ಆ ಕಾರ್ಯವಾಗುವಂತೆ ಇಲ್ಲದಿದ್ದರೂ ಕೂಡ ಆ ಹಾನಿಯನ್ನು ಪಡೆಯುವದರಿಂದ ತನ್ನ ಧರ್ಮೋನ್ನತಿಯಾಗುವದೆಂದು ತಿಳಿದರೆ ತನ್ನ ಆತ್ಮಶಕ್ತಿಯಿಂದ ತಾನೆ ಆ ಹಾನಿಯನ್ನು ಮಾಡಿಕೊಳ್ಳುವ ಧೈರ್ಯವು ಇಲ್ಲಿ ಉದಾರಣೆಗೆ ಯೋಗ್ಯವಾದದ್ದು. ಅಶೋಕನಿಗೆ ಕುನಾಲನೆಂಬೊಬ್ಬ ಮಗನಿದ್ದನು. ಕುನಾಲ ಎಂಬ ಪಕ್ಷಿಯ ಕಣ್ಣುಗಳಂತೆ ಅವನ ಕಣ್ಣುಗಳು ಅಂದವಾಗಿದ್ದದ್ದರಿಂದ ಆ ಹೆಸರು ಬಂತೆಂದು ಹೇಳುವಂತೆ ಅವನು ಬಹುಮನೋಹರನಾಗಿದ್ದನು. ಅವನ

ಸೌಂದರ್ಯವು ಅವನ ಮಲತಾಯಿಯಾದ ತಿಷ್ಯರಕ್ಷಿತೆಯೆಂಬ ತರುಣಿಗೆ ಬಹುಮೋಹಕವಾಗಿ ಪರಿಣಮಿಸಿತು. ಮಗನಾದ ಕುನಾಲನ ಮುಂದೆ ಮಲತಾಯಿಯಾದ ತಿಷ್ಯರಕ್ಷಿತೆಯು ತನ್ನ ಮನೋವಿಕಾರವನ್ನು ಅಡಗಿಸಿ ಕೊಳ್ಳಲಾರದೆ ಹೋದಳು. ಆಕೆ ಎಷ್ಟು ಕಾಮಚೇಷ್ಟೆಗಳನ್ನು ತೋರಿಸಿದರೂ ವಿರಕ್ತನಾಗಿದ್ದ ಕುನಾಲನಿಗೆ ಅವುಗಳ ಅರ್ಥವಾಗಲೆ ಇಲ್ಲ. ಕೊನೆಗೆ ಕುನಾಲನು ಕಣ್ಮರೆಯಾದ ಹೊರೆತು ತನ್ನ ತಾಪವು ಶಾಂತವಾಗ ಲಾರದೆಂದು ಯೋಚಿಸಿ ಒಂದು ದಿನದ ವಿನೋದಕಾಲಕ್ಷೇಪದಲ್ಲಿ ಉಪಾಯ ದಿಂದ ರಾಜಮುದ್ರೆಯನ್ನು ತನ್ನ ವಶಮಾಡಿಕೊಂಡು ಅಶೋಕನ ಆಜ್ಞಾ ಪತ್ರದಂತೆ ಒಬ್ಬ ಅಧಿಕಾರಿಗೆ ನಿರೂಪವನ್ನು ಬರೆದು, ಮುದ್ರೆಯನ್ನೊತ್ತಿ, ಆ ನಿರೂಪದೊಡನೆ ರಹಸ್ಯವಾಗಿ ದೂತರು ಕುನಾಲನನ್ನು ಅಧಿಕಾರಿಯ ಬಳಿಗೆ ಕರೆದುಕೊಂಡು ಹೋಗುವಂತೆ ಸಂಚುಮಾಡಿದಳು. ಅದರಂತೆ ನಡೆಯಿತು. ಅಲ್ಲಿ ಅಧಿಕಾರಿಯು ಪತ್ರವನ್ನು ಓದಿ ನೋಡಿದಾಗ ಕುನಾಲನ ಕಣ್ಣುಗಳನ್ನು ಕಿತ್ತು ಅವನನ್ನು ದೇಶದಿಂದ ಹೊರಕ್ಕೆ ಹಾಕತಕ್ಕದ್ದೆಂದು ಬರೆದಿತ್ತು. ಅಧಿಕಾರಿಯು ಇದರ ಕಾರಣವನ್ನು ತಿಳಿಯದೆ ಬೆರಗಾದನು; ಮತ್ತು ಈ ಕೆಲಸವು ತನ್ನ ಕೈಯ್ಯಿಂದಾಗಲಾರದೆಂದು ಹಿಂದು ಮುಂದು ನೋಡುತ್ತ ಕುಳಿತನು. ಈ ವಿಷಯವು ಕುನಾಲನಿಗೆ ತಿಳಿಯಿತು. ಆಗ ಕುನಾಲನು ಆ ಅಧಿಕಾರಿಯನ್ನು ಕುರಿತು “ ಈ ಕಾರ್ಯವನ್ನು ನೀನು ಅಗತ್ಯವಾಗಿ ಮಾಡು. ನೀನ ಮಾಡದಿದ್ದರೆ ತಂದೆಯ ಆಜ್ಞೆಯನ್ನು ಬಹುಮಾನಿಸುವದಕ್ಕಾಗಿ ನಾನಾದರೂ ಮಾಡಿಸಿಕೊಳ್ಳುವೆನು” ಎಂದು ಹೇಳಿ, ಅಧಿಕಾರಿಯ ತಾಟಸ್ಥ್ಯವನ್ನು ಕಂಡು ಒಬ್ಬ ಚಂಡಾಲನ ಮೂಲಕ ತನ್ನ ಕಣ್ಣುಗಳನ್ನು ತಾನೇ ಕೀಳಿಸಿಕೊಂಡನು. ಚಂಡಾಲನು ಕಿತ್ತ ಕಣ್ಣು ಗಳನ್ನು ಕುನಾಲನ ಕೈಯ್ಯಲ್ಲಿಟ್ಟಾಗ “ ಎಲೆ, ಮಾಂಸಪಿಂಡವೆ, ನೀನು ನನ್ನನ್ನು ಬಿಟ್ಟು ಹೊರಬಿದ್ದದ್ದು ಎಷ್ಟೋ ಮೇಲಾಯಿತು. ಏಕೆಂದರೆ: ನೀನು ಒಂದು ಕಡೆ ನಿಲ್ಲದೆ ಕ್ಷಣಕ್ಕೊಂದೊಂದು ವಸ್ತುವಿನ ಮೇಲೆ ಹೋಗಿ ಅವುಗಳ ಜ್ಞಾನವನ್ನೆ ಮನಸ್ಸಿನೊಳಕ್ಕೆ ತುಂಬುವದರ ಮೂಲಕ ಹೆಚ್ಚಿನ ವಿಚಾರಕ್ಕೆ ಅವಕಾಶವೆ ಇಲ್ಲದಂತೆ ಮಾಡುತ್ತಿದ್ದದ್ದು ನನಗೊಂದು ದೊಡ್ಡ ಪ್ರತಿಬಂಧಕವಾಗಿತ್ತು. ನೀನು ಹೋಗುವದರ ಮೂಲಕ ಪಿತ್ರಾಜ್ಞಾಪರಿ

ಪಾಲನೆಯು ಆಯಿತು; ಪ್ರತಿಬಂಧಕ್ಷಯವೂ ಆಯಿತು. ನೀನು ಹೋಗುವದರಿಂದ ನನಗೆ ಹಾನಿಯೇನೂ ಇಲ್ಲ. ಏಕೆಂದರೆ: ನಾನು ಪ್ರಾಪಂಚಿಕಸುಖಾಸಕ್ತನಲ್ಲ. ನನಗೆ ಬೇಕಾದದ್ದು ನಿರ್ವಾಣ. ಅದಕ್ಕೆ ಬೇಕಾದ ಸಾಧನವು ನನಗೆ ಇದ್ದೇ ಇದೆ." ಎಂದು ಹೇಳಿ ಆನಂದದಿಂದ ಮುಂದೆ ಸಾಗಿದನು. ಇಂಥ ಧೀರತೆಯು ಅತ್ಯಂತಪ್ರಶಂಸನೀಯವಾದದ್ದು.

ಪ್ರತಿಕಕ್ಷಿಗಳೊಡನೆ ಹೋರಾಡುವಾಗ ಧೈರ್ಯವನ್ನು ಉಪಯೋಗ ಮಾಡುವವರಲ್ಲಿ ಒಂದು ಬಗೆಯ ವಿವೇಕವು ಬೇಕಾಗುವದು. ಧೈರ್ಯದಿಂದ ಶತ್ರುವಿನ ಮಗ್ಗಲನ್ನು ಮುರಿಯುವದಕ್ಕೆ ನಿಂತಾಗ ಬರೀ ಶೌರ್ಯವನ್ನೇ ಅವಲಂಬಿಸುವ ಮಾತ್ರದಿಂದಲೆ ಧೈರ್ಯವೆನಿಸಲಾರದು. ಶತ್ರುವೆಂದರೆ ಅಧರ್ಮದ ಪಕ್ಷವನ್ನು ಹಿಡಿದವನೆಂದೇ ನಮ್ಮ ಅರ್ಥವಿರುವದು. ಏಕೆಂದರೆ: ಧರ್ಮದ ಪಕ್ಷದ ಮೇಲೆ ಪ್ರತಿಭಟಿಸುವದಕ್ಕೆ ಯಾರಿಗೂ ಅಧಿಕಾರವಿಲ್ಲ. ಲೋಕದ ಸುಸ್ಥಿತಿಗಾಗಿ ಅಧರ್ಮನನ್ನು ಹಿಮ್ಮೆಟ್ಟಿಸುವದಕ್ಕೆ ಪ್ರಯತ್ನಮಾಡುವ ಪಕ್ಷವೇ ಯೋಗ್ಯಪಕ್ಷವು. ಅಧರ್ಮವನ್ನು ಅವಲಂಬಿಸಿರುವ ಶತ್ರುವು ಯಾವ ಕಾಲಕ್ಕೆ ಯಾವ ಕುಹಕೋಪಾಯವನ್ನು ಮಾಡುವನೆಂಬ ನೆಲೆ ಇರುವದಿಲ್ಲ. ಧರ್ಮದ ಪಕ್ಷವನ್ನು ಹಿಡಿದವನು ಕೇವಲ ಸರಳವಾದ ಮಾರ್ಗವನ್ನೇ ಹಿಡಿಯುವವನಾದರೆ ಅಧರ್ಮದವನು ಧರ್ಮದವನನ್ನು ಲೀಲಾಮಾತ್ರದಿಂದ ಪಾತಾಲಕ್ಕೆ ತುಳಿದುಬಿಡುವನು. ಇದರಿಂದ ಅಧರ್ಮಿಷ್ಠರ ವಿನಾಶದ ಆಸೆಯೆ ಅಳಿದುಹೋಗುವದು. ಹೀಗೆಂದು ಧರ್ಮಪಕ್ಷವನ್ನು ಹಿಡಿದ ಯಾರೂ ತಾವು ಮೊದಲು ಕುಹಕೋಪಾಯವನ್ನು ಹೂಡುವದಕ್ಕೆ ಹೋಗಬಾರದು. ಕುಹಕೋಪಾಯವು ಯೋಗ್ಯವಾದದ್ದಲ್ಲ. ಆದರೆ ಕುಹಕೋಪಾಯದ ಸೆಲೆಯೆ ಇಲ್ಲದಷ್ಟು ಶುದ್ಧವಾಗಿ ಪ್ರಪಂಚದ ವ್ಯವಹಾರವು ಸಾಗುವದಿಲ್ಲ. ಆದ್ದರಿಂದ ಅಧರ್ಮಿಷ್ಠರ ಕುಹಕೋಪಾಯಕ್ಕೆ ಉತ್ತರರೂಪವಾಗಿ ಮುಂದು ಮಾಡುವದಕ್ಕೆ ಧರ್ಮಿಷ್ಠರೂ ತಮ್ಮ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಸಿದ್ಧತೆಯು ಕುಹಕವೆನಿಸಿಕೊಳ್ಳುವದಿಲ್ಲ. ಪ್ರಪಂಚದ ಸುಸ್ಥಿತಿಯ ದೃಷ್ಟಿಯಿಂದ ಇದು ಅಗತ್ಯವೆ ಆಗಿರುವದು. ಈ ಸಿದ್ಧತೆಯು ವಿಶೇಷವಾಗಿ ಮನುಷ್ಯನ ಧೈರ್ಯವನ್ನವಲಂಬಿಸಿರುವದು. ಅಧೀರರಾದ ಮನುಷ್ಯರಿಗೆ ಶತ್ರುಗಳ

ಗಡಿಬಿಡಿ ಕಂಡಕೂಡಲೆ ದಿಕ್ಕುತೋಚದಂತಾಗುವದು. ಹೀಗಾದವರು ತಮ್ಮ ಸಿದ್ಧತೆಯನ್ನು ಹೇಗೆ ಮಾಡಿಕೊಳ್ಳಲಾದೀತು ? ಸುಮ್ಮನೆ ಸತ್ತು ವೀರಸ್ವರ್ಗವನ್ನು ಪಡೆಯುವೆನೆಂಬುದು ಧೈರ್ಯವಲ್ಲ. ವೀರಸ್ವರ್ಗವು ಅಷ್ಟು ಅಗ್ಗವಲ್ಲ. ವೀರತ್ವವೆಂದರೇನು ? ಬರೀ ಶೂರತ್ವವಲ್ಲ; ಶತ್ರುವಿನ ಸರ್ವಪ್ರಯತ್ನಗಳಿಗೂ ಪ್ರತಿಕ್ರಿಯೆಯನ್ನು ಮಾಡುವಿಕೆ. ಕುಹಕೋಪಾಯದ ಶತ್ರುವಿಗೆ ಕುಹಕೋಪಾಯದ್ದೇ ಪ್ರತಿಕ್ರಿಯೆ ಬೇಕಾಗುವದು. ಅಂಥ ಪ್ರತಿಕ್ರಿಯೆಗಳೂ ವಿಫಲವಾಗಿ ಮರಣವಾದರೆ ವೀರಸ್ವರ್ಗ. ಆದ್ದರಿಂದ ಅಧರ್ಮಿಷ್ಠನಿಗೆ ಅಧಃಪಾತವನ್ನು ಮಾಡಬೇಕೆನ್ನುವವನು ಬರೀ ಶೂರತ್ವದ ಹೆಮ್ಮೆಯಲ್ಲಿ ಮೈಮರೆಯದೆ ಎಂಥ ಬಿಕ್ಕಟ್ಟಿನ ಪ್ರಸಂಗದಲ್ಲಾದರೂ ಮನಸ್ಸನ್ನು ಸಮಾಧಾನವಾಗಿಟ್ಟುಕೊಂಡು ಶತ್ರುವಿನ ಕುಹಕೋಪಾಯಗಳಿಗೆ ಯೋಗ್ಯವಾದ ಪ್ರತಿಕ್ರಿಯೆಗಳ ಸಿದ್ಧತೆಯನ್ನು ಮಾಡಿಕೊಳ್ಳುವದರಲ್ಲಿಯೆ ಅವನ ಧೈರ್ಯದ ಬಣ್ಣವು ಎದ್ದು ಕಾಣುವದು

ಶಿವಾಜಿಯು ಸ್ವರಾಜ್ಯವನ್ನು ವಿಸ್ತರಿಸುತ್ತ ಮುಸಲ್ಮಾನರಿಗೆ ಗುಟುಕು ನೀರು ಕುಡಿಸುತ್ತಿರಲು ವಿಜಾಪುರದ ಆದಿಲ್‌ಶಹನು ಅವನನ್ನು ನಿಗ್ರಹಿಸಬೇಕೆಂದು ತನ್ನಲ್ಲಿ ಯುಕ್ತಿಪರನಾಗಿ ಸೇನಾಪತಿಯಾಗಿದ್ದ ಅಫಜುಲಖಾನನನ್ನು ನಿಯೋಗಿಸಿದನು. ಅಫಜುಲಖಾನನು ತನ್ನ ಬಾಹುಬಲದಿಂದ ದಾರಿಯಲ್ಲಿದ್ದ ಊರುಗಳನ್ನೆಲ್ಲ ಕೊಳ್ಳೇ ಹೊಡೆಯುತ್ತ ಶಿವಾಜಿಯಿದ್ದ ಕಡೆಗೆ ಬಂದನು. ಶಿವಾಜಿಯ ಮುಂದೆ ನಿನ್ನ ದಂಡೋಪಾಯವು ಸಾಗದೆಂದು ಅವನ ಮನಸ್ಸಾಕ್ಷಿಯು ಅವನಿಗೆ ಹೇಳಿತು. ಆಗ ಅವನು ಮೋಸದಿಂದ ಶಿವಾಜಿಯನ್ನು ಮುಗಿಸಿಬಿಡಬೇಕೆಂದು ನಿಶ್ಚಯಿಸಿ ಗೆಳೆತನವನ್ನು ಬೆಳೆಸುವದಕ್ಕಾಗಿ ಬರಹೇಳಿ ಶಿವಾಜಿಗೆ ಆಮಂತ್ರಣವನ್ನು ಕಳುಹಿಸಿದನು. ಈ ಮಾತಿನ ತೂಕವು ಶಿವಾಜಿಗೆ ತಿಳಿಯದೆ ಹೋಗಲಿಲ್ಲ. ಈ ಕಠಿನಪ್ರಸಂಗದಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಅವನು ತನ್ನಲ್ಲಿ ತಾನೆ ಗೊತ್ತುಮಾಡಿಕೊಂಡನು. ಅವರಿಬ್ಬರಿಗೂ ಸಮಾಗಮವಾಗಬೇಕಾಗಿದ್ದ ಸ್ಥಲದಲ್ಲಿ ಅಫಜುಲಖಾನನು ಮೊದಲು ಬಂದು ಕುಳಿತನು. ಏಕೆಂದರೆ: ಶಿವಾಜಿಯನ್ನು ನಿಗ್ರಹಿಸುವ ಕುತೂಹಲವು ಅವನಿಗೆ ಹೆಚ್ಚಾಗಿತ್ತು. ಆಮೇಲೆ ಶಿವಾಜಿಯು ಬಂದು ವಿನಯದಿಂದ 'ಸಲಾಂ ಮಾಡುತ್ತಲೆ ಖಾನನು ಎದ್ದು ಬಂದು ಎಡಗಯ್ಯಿಂದ

ಶಿವಾಜಿಯು ಕತ್ತನ್ನು ಹಿಡಿದು ಬಲಗಯ್ಯಿಂದ ಅವನ ಮೇಲೆ ಕತ್ತಿಯನ್ನು ಪ್ರಯೋಗಿಸಿದನು. ಉಭಯಪಕ್ಷದವರಿಗೂ ಅಲ್ಲಿ ಹೆಚ್ಚು ಪರಿವಾರದವರಿರ ಕೂಡದೆಂದು ಮೊದಲೆ ಗೊತ್ತಾಗಿದ್ದದ್ದರಿಂದ ಶಿವಾಜಿಗೆ ಆಗ ಇತರರ ಸಹಾಯದಿಂದ ಪಾರಾಗುವ ಸಂಭವವಿರಲಿಲ್ಲ. ಬುದ್ಧಿಶಾಲಿಯಾದ ಶಿವಾಜಿಯು ಅಫಜುಲಖಾನನಂಥ ಕುಯುಕ್ತಿಪರನಿಗೆ ಬುದ್ಧಿಯನ್ನು ಕಲಿಸುವಂಥವನಾಗಿ ತನ್ನ ಸಿದ್ಧತೆಯನ್ನು ತಾನು ಮಾಡಿಕೊಂಡಿದ್ದದ್ದರಿಂದ ಆಗ ಉಳಿದುಕೊಂಡನು. ಅವನು ಒಳಗೆ ಉಕ್ಕಿನ ಅಂಗಿಯನ್ನು ತೊಟ್ಟಿದ್ದದ್ದರಿಂದ ಆ ಕತ್ತಿಯು ಅವನ ದೇಹಕ್ಕೆ ನಾಟಲಿಲ್ಲ. ಕತ್ತಿಯ ಹೊರತು ಅಫಜುಲನಿಗೆ ಇನ್ನೇನೂ ಸಾಧನವಿರಲಿಲ್ಲ. ಶಿವಾಜಿಗೆ ಬಲಗಯ್ಯಲ್ಲಿ ಕತ್ತಿ ಇತ್ತು; ಎಡಗಯ್ಯಲ್ಲಿ ಉಕ್ಕಿನ ಉಗುರುಗಳಿದ್ದವು. ಆಗ ಶಿವಾಜಿಯು ತನ್ನ ಎಡಗಯ್ಯನ್ನು ಅಫಜುಲಖಾನನ ಸೊಂಟಕ್ಕೆ ಸುತ್ತಿ ಅವನ ಕರುಳನ್ನು ಬಗೆದದ್ದಲ್ಲದೆ ಬಲಗಯ್ಯ ಕತ್ತಿಯಿಂದ ಅವನನ್ನು ಇರಿದು ಕೆಡವಿದನು. ಅಷ್ಟರಲ್ಲಿ ಅಫಜುಲನ ಅಂಗರಕ್ಷಕನು ಬಂದು ತನ್ನ ಕತ್ತಿಯನ್ನು ಶಿವಾಜಿಯ ತಲೆಗೆ ಬೀಸಿದನು. ಶಿವಾಜಿಯು ಉಕ್ಕಿನ ಕುಲಾವಿಯನ್ನು ಹಾಕಿಕೊಂಡಿದ್ದದ್ದರಿಂದ ಅದರಿಂದ ಗಾಸಿಯಾಗಲಿಲ್ಲ. ಹೀಗೆ ಅವನು ಯಮನ ದವಡೆಯಿಂದ ಕಳಚಿಕೊಂಡು ತನ್ನ ಶಿಬಿರಕ್ಕೆ ತೆರಳಿದನು. ಶಿವಾಜಿಯು ಇಷ್ಟರ ಸಿದ್ಧತೆಯನ್ನು ಮಾಡಿಕೊಂಡು ಬರದೆ ಇದ್ದರೆ ಅವನಿಗೆ ಆಗ ಉಳಿಗಾಲವೆ ಇರುತ್ತಿರಲಿಲ್ಲ.

ಶಿವಾಜಿಯು ಔರಂಗಜೇಬನ ನಿಯೋಗಿಯಾದ ತನ್ನನ್ನು ಅಡಗಿಸುವದಕ್ಕೆ ಬಂದ ಷಾಯಸ್ತೆಖಾನನನ್ನೂ ಉಪಾಯಾಂತರದಿಂದಲೆ ಓಡಿಸಿದನು. ಔರಂಗಜೇಬನ ನಿಯೋಗಿಯ ಮಾತಿರಲಿ; ಶಿವಾಜಿಯು ಔರಂಗಜೇಬನಿಗೇ ಚಳ್ಳೇಹಣ್ಣನ್ನು ತಿನ್ನಿಸಿರುವನು. ಶಿವಾಜಿಯು ಔರಂಗಜೇಬನ ಆಸ್ಥಾನಕ್ಕೆ ಹೋಗಿದ್ದಾಗ ತನಗೆ ಯೋಗ್ಯವಾದ ಸ್ಥಲವನ್ನು ಮಾಡಿಲ್ಲವೆಂದು ಧಿಟ್ಟತನದಿಂದ ಹಿಂದಕ್ಕೆ ಬಂದನಷ್ಟೆ. ಅದೇ ಸಮಯದಲ್ಲಿ ಅವನನ್ನು ಮೆಲ್ಲಗೆ ಹಿಡಿದುಹಾಕಬೇಕೆಂದು ಯೋಚಿಸಿ ಔರಂಗಜೇಬನು ಅವನನ್ನು ಒಂದು ಕಡೆ ನಿರ್ಬಂಧದಲ್ಲಿಟ್ಟನು. ಏಕಾಂಗಿಯಾದ ಶಿವಾಜಿಯು ಈಗ ಮಾಡುವದೇನು? ಕೆಲವು ದಿನ ಸುಮ್ಮನಿದ್ದು ಆಮೇಲೆ ತನಗೆ ಪ್ರಾಪ್ತವಾಗಿರುವ

ರೋಗದ ಪರಿಹಾರಕ್ಕಾಗಿ ಬ್ರಾಹ್ಮಣರಿಗೆ ಫಲದಾನವನ್ನು ಮಾಡುವ ನೆವವನ್ನು ಹೂಡಿದನು. ಕೆಲವುದಿನ ಕಾವಲುಗಾರರು ಆ ದಾನದ ಪದಾರ್ಥಗಳನ್ನೆಲ್ಲ ನೋಡಿ ನೋಡಿ ಬಿಟ್ಟರು. ಆ ಮೇಲೆ ಅವರಿಗೆ ನಂಬಿಕೆಯಾಯಿತು. ಈ ಸಮಯವನ್ನು ಸಾಧಿಸಿ ಶಿವಾಜಿಯು ತನ್ನ ಹಾಸಿಗೆಯ ಮೇಲೆ ಒಬ್ಬ ಸೇವಕನನ್ನು ಮಲಿಗಿಸಿ ತಾನೆ ಒಂದು ಬುಟ್ಟಿಯಲ್ಲಿ ಕೂತು ಬ್ರಾಹ್ಮಣರೂಪಧಾರಿಯಾದ ತನ್ನ ಭಟನ ತಲೆಯನ್ನೇರಿ ಹೋರಬಿದ್ದು ಹೋಗಿಯೆ ಬಿಟ್ಟನು. ಶಿವಾಜಿಯು ಮಾಯಗಾರನೆಂದು ಔರಂಗಜೇಬನು ಮೂಗಿನ ಮೇಲೆ ಬೆರಳಿಟ್ಟು ಕೊಂಡು ಸುಮ್ಮನೆ ಕುಳಿತುಕೊಳ್ಳುವಂತಾಯಿತು. ಬಣ್ಣದ ಬೆಕ್ಕಿಗೆ ಬಣ್ಣದ ಹಾಲೆಂಬಂತೆ ಶತ್ರುಗಳು ತೋರಿಸುವ ಧೈರ್ಯಕ್ಕೆ ಇದು ಉತ್ತರದ ರೂಪವಾದ ಧೈರ್ಯ. ಶಿವಾಜಿಯು ಈ ಬಗೆಯ ಧೈರ್ಯವನ್ನು ತೋರಿಸದೆ ಹೋಗಿದ್ದರೆ ಅವನ ಹೆಸರು ಈಗಿನಷ್ಟು ಮುಂದಕ್ಕೆ ಬರುತ್ತಲೆ ಇರಲಿಲ್ಲ.

ಧೈರ್ಯವೆಂದರೆ ಅಧರ್ಮಿಷ್ಠನಾದ ಶತ್ರುವಿನ ಮುಂದೆ ಭುಜವನ್ನು ಚಪ್ಪರಿಸಿಕೊಂಡು ನಿಲ್ಲುವ ಮನೋದಾರ್ಢ್ಯಮಾತ್ರವೇ ಅಲ್ಲ; ಮಾತಿನಲ್ಲಿ ಕೂಡ ತನ್ನ ಸ್ವಾಭಿಮಾನಕ್ಕೆ ಕುಂದು ತಂದುಕೊಳ್ಳದಿರುವದೂ ಧೈರ್ಯವೇ. ಧೀರತೆಯೆಂಬುವದು ಶರೀರದಲ್ಲಿ ಹೇಗೆ ತೋರುವದೊ ವಾಕ್ಕಿನಲ್ಲಿಯೂ ಹಾಗೆಯೇ ತೋರಬೇಕು. ಶರೀರದಲ್ಲಿ ಹಿಂದೆಗೆದರೂ ಅಪಜಯವೆ; ವಾಕ್ಕಿನಲ್ಲಿ ಹಿಂದೆಗೆದರೂ ಅಪಜಯವೆ. ಧೈರ್ಯಶಾಲಿಯು ಯಾವ ಅಪಜಯವನ್ನೂ ಸಹನಮಾಡುವದಿಲ್ಲ. ಪೇಶ್ವೆಬಾಜಿರಾಯನು ಇದಕ್ಕೆ ಉದಾಹರಣೆಯಾಗಿರುವನು. ಒಮ್ಮೆ ಬಾಜಿರಾಯನು ನಿಜಾಮನ ದರ್ಶನಕ್ಕೆ ಹೋಗಬೇಕಾಗಿತ್ತು. ಅವನೊಡನೆ ಐವರಿಗಿಂತ ಹೆಚ್ಚು ಪರಿವಾರದವರಿರಬಾರನೆಂದು ಗೊತ್ತಾಗಿತ್ತು. ಬಾಜಿರಾಯನು ಅದರಂತೆ ಬಂದನು. ನಿಜಾಮನು ಅವನನ್ನು ಬರಮಾಡಿಕೊಂಡು ಯೋಗ್ಯಸತ್ಕಾರಮಾಡಿ ಅವನ ಹುರುಳನ್ನು ನೋಡಬೇಕೆಂದು "ಪಂತಪ್ರಧಾನರೆ, ನೀವು ಈಗ ನಮ್ಮ ಕೈಯಲ್ಲಿ ಸಿಕ್ಕಿರುತ್ತೀರಿ. ಈಗ ನಿಮ್ಮನ್ನು ನಾವು ಮೋಸಗೊಳಿಸುವದಾದರೆ ನಿಮ್ಮನ್ನು ರಕ್ಷಣೆಮಾಡುವದಕ್ಕೆ ಸಿಂಧ್ಯ, ಹೋಲ್ಕರ್–ಮೊದಲಾದ ವೀರಾಗ್ರಣಿಗಳೆಲ್ಲಿರುವರು?" ಎಂದನು. ಆಗ ಬಾಜಿರಾಯನು ದೈನ್ಯತೆಯನ್ನು ತಂದು ಕೊಳ್ಳದೆ ನಿಜಾಮುನನ್ನು ಕುರಿತು "ನನ್ನ ನೆರಳಿನಂತೆ ಸಿಂಧ್ಯ,

ಹೋಲ್ಕರ್–ಮೊದಲಾದವರು ನನ್ನ ನೆರೆಯಲ್ಲಿ ಇಗೋ ಇಲ್ಲಿಯೇ ಇರುವರು" ಎಂದು ತನ್ನ ಪರಿವಾರದವರ ಕಡೆಗೆ ಕೈಮಾಡಿ ತೋರಿಸಿದನು. ತನ್ನಂಥ ಪ್ರಬಲಪಕ್ಷದವನ ಕೈಗೆ ಸಿಕ್ಕು ಹಿನ್ನಾಗಲೂ ಜೀವಗಳ್ಳನಾಗಿ ತನ್ನ ಅನು ಗ್ರಹವನ್ನು ಪ್ರಾರ್ಥಿಸದೆ ಧೈರ್ಯದಿಂದ ಮಾತಾಡಿದ್ದನ್ನು ನೋಡಿ ನಿಜಾ ಮನಿಗೆ ಅತ್ಯಾಶ್ಚರ್ಯವಾಯಿತು.

ಮಾತಿನಲ್ಲಿ ಧೈರ್ಯವನ್ನು ತೋರಿಸುವ ರೀತಿಯನ್ನು ಕೂಡ ಶಿವಾಜಿಯು ವೇಳುಪಜ್ತಿಯಾಗಿ ಹಾಕಿಕೊಟ್ಟಿದ್ದಾನೆ. ಮೊಗಲರಿಗೆ ಹಿಂದುಗಳು ಕೊಡಬೇಕಾಗಿದ್ದ ಬಹು ಅವಮಾನಕರವಾದ ತಲೇತೆರಿಗೆ ಯನ್ನು ನೋಡಿ ಶಿವಾಜಿಗೆ ತಲೆತಿರುಗಿ ಹೋಯಿತು. ಆಗ ಶಿವಾಜಿಯು ದಿಟ್ಟತನದಿಂದ ಔರಂಗಜೇಬನಿಗೆ ಒಂದು ಪತ್ರವನ್ನು ಬರೆದು ಕಳುಹಿಸಿರು ವದರ ಸಾರಾಂಶವೇನೆಂದರೆ: "ನಿಮ್ಮ ತಾತನಾದ ಅಕ್ಬರನು ಸರ್ವಧರ್ಮ ಪಂಥಗಳಲ್ಲಿಯೂ ಸಹಾನುಭೂತಿಯುಳ್ಳವನಾಗಿದ್ದು ನಮ್ಮ ದೇಶದವರ ಗೌರವಕ್ಕೆ ಪಾತ್ರನಾಗಿ ಏಳಿಗೆಯನ್ನು ಪಡೆದನು. ನಿಮ್ಮ ಆಳಿಕೆಯಲ್ಲಿ ನಿಮ್ಮ ಎಷ್ಟೋ ದೇಶಕೋಶಗಳು ನಿಮ್ಮ ಕೈಬಿಟ್ಟು ಹೋಗಿವೆ. ಉಳಿದಿರು ವವುಗಳೂ ಅದೇ ದಾರಿಯನ್ನು ಹಿಡಿಯುವಂತೆ ನಾನು ನನ್ನ ಸರ್ವಸಾಹಸ ವನ್ನೂ ಮಾಡುತ್ತೇನೆ. ನಿಮ್ಮ ರೈತರೆಲ್ಲ ನೆಲಾಹಿಡಿದು ಹೋಗಿದ್ದಾರೆ. ಚಕ್ರವರ್ತಿಗಳಾದ ನಿಮ್ಮ ಮನೆಗೇ ದರಿದ್ರಲಕ್ಷ್ಮಿ ಕಾಲುಹಾಕಿರುವಾಗ ಇನ್ನು ಬಡಬಗ್ಗರ ಮಾತು ಹೇಳುವವೇನು? ನಿಮ್ಮಾಳಿಕೆಯಲ್ಲಿ ಸೇನೆಗೆ ನಿಲವಿಲ್ಲ; ವರ್ತಕರಿಗೆ ದುಃಖ; ಮುಸಲ್ಮಾನರಿಗೆ ಕೂಡ ಗೋಳು; ಹಿಂದುಗಳಿಗೆ ಪ್ರಾಣಸಂಕಟ. ಇದರ ಜೊತೆಗೆ ನೀವು ಯೋಗಿಗಳಿಂದ, ವೈರಾಗಿಗಳಿಂದ, ಸಂನ್ಯಾಸಿಗಳಿಂದ, ಕೊನೆಗೆ ತಿರುಕರಿಂದ ಕೂಡ ತಲೆತೆರಿಗೆಯನ್ನೆತ್ತಿ ತಿನ್ನು ವರೆಂಬ ದಂದುಭಿಧ್ವನಿಯು ದಶದಿಕ್ಕುಗಳನ್ನು ವ್ಯಾಪಿಸಿರುವದು. ದೇವರು ಮಹಮ್ಮದೀಯರಿಗೆ ಮಾತ್ರ ದೇವರಲ್ಲವೆಂಬವನ್ನು ಒಮ್ಮೆಯಾದರೂ ಮನ ಸ್ಸಿಗೆ ತಂದುಕೊಳ್ಳಿರಿ. ದೇವರನ್ನು ಬರಮಾಡಿಕೊಳ್ಳುವದಕ್ಕೆ ಮಸೀದಿಯವರು ಕೂಗಿ ಕರೆಯುತ್ತಾರೆ; ದೇವಸ್ಥಾನದವರು ಗಂಟೆಯನ್ನು ಬಾರಿಸುತ್ತಾರೆ. ಒಬ್ಬನ ಪಂಥವನ್ನು ಧಿಕ್ಕರಿಸುವದು ದೇವರಾಜ್ಞೆಯನ್ನು ಧಿಕ್ಕರಿಸಿದಂತೆ. ಆದ್ದರಿಂದ ತಲೆತೆರಿಗೆಯು ಎಷ್ಟು ಮಾತ್ರವೂ ನ್ಯಾಯುವಲ್ಲ. ಹಿಂದುಗಳನ್ನು

ಹೆದರಿಸಿ ತಳಕ್ಕೆ ತುಳಿಯುವದೇ ನಿಮ್ಮ ಪಂಥವಾಗಿದ್ದರೆ ನಿಮ್ಮ ರಾಣಾ ರಾಜಸಿಂಹನ ಮೇಲೆ ತಲೆಯೆತ್ತಿರಿಗೆಯನ್ನು ಹೇರಿರಿ. ಅದನ್ನು ಬಿಟ್ಟು ಇರುವೆ ಗಳನ್ನೂ ನೊಣಗಳನ್ನೂ ಹೊಸಕುವದಕ್ಕೆ ಹೋಗುವದು ಶೂರತನವಲ್ಲ.''

ಧೈರ್ಯವು ಧರ್ಮದ ಉದ್ಧಾರಕ್ಕಾಗಿ ಉದಯವಾಗಬೇಕು. ಅದನ್ನು ಅಧರ್ಮದ ಸಾಧನೆಗೆ ಉಪಯೋಗಮಾಡಿಕೊಂಡರೆ ಅದು ದುರ್ಬಲ ವಾಗುವದು ಸ್ವಭಾವವಾಗಿ ಧೈರ್ಯಕ್ಕೆ ಬಲ ಹೆಚ್ಚು. ಅದಕ್ಕೆ ಧರ್ಮದ ಕಾರಣವು ದೊರೆಯಿತೆಂದರೆ ಅದರ ಶಕ್ತಿಯು ಚೆನ್ನಾಗಿ ಹುರಿಗೂಡಿಕೊಳ್ಳು ವದು. ಧರ್ಮದ ಕಾರಣಕ್ಕಾಗಿ ಧೈರ್ಯವನ್ನು ಉಪಯೋಗಿಸಿ ದಾಗ ಅದಕ್ಕೆ ದೈವಾನುಗ್ರಹವು ದೊರೆತೇ ದೊರೆಯುವದು ಮತ್ತು ಅದಕ್ಕೆ ಜಯವಾಗಿಯೇ ಆಗುವದು. ಮಲ್ಹಾರರಾಯನು ಸತ್ತ ಮೇಲೆ ಇಂದೂರು ಸಂಸ್ಥಾನವು ಅನಾಯಕವಾಗುವ ಹೊತ್ತು ಬಂದಿತ್ತು. ಆಗ ವಿಧವೆಯಾದ ಅಹಲ್ಯಾಬಾಯಿಯು ಪತಿವಿಯೋಗದ ದುಃಖವನ್ನು ನುಂಗಿಕೊಂಡು ಮನೆ ತನದ ಯಶಸ್ಸನ್ನು ಮುಳುಗಿಸಬಾರದೆಂದು ತಾನೆ ಅಧಿಕಾರಸೂತ್ರವನ್ನು ಕೈ ಕೊಂಡಳು. ಹೀಗಿರುವಾಗ ಆಕೆಗಿದ್ದ ಒಬ್ಬನೇ ಮಗನಾದ ಮಾಲೇ ರಾಯನೂ ಮಾರಿಗೆ ತುತ್ತಾದನು. ಈ ರೀತಿಯಲ್ಲಿ ಸಂಸ್ಥಾನಕ್ಕೆ ಉತ್ತರಾ ಧಿಕಾರಿಯ ಅಭಾವವಾದ ಸಂಧಿಯನ್ನು ಸಾಧಿಸಿಕೊಂಡು ಸಂಸ್ಥಾನದ ಹಳೇ ಹೆಗ್ಗಣವಾಗಿದ್ದ ಗಂಗಾಧರರಾಯನೆಂಬ ಅಧಿಕಾರಿಯು ಒಬ್ಬ ಕ್ಷುದ್ರ ಬಾಲಕನನ್ನು ದತ್ತಕನನ್ನಾಗಿ ಮಾಡಿ ಅವನ ದೌರ್ಬಲ್ಯದ ಮೂಲಕ ರಾಜ್ಯವನ್ನು ತಾನು ಹಾರಿಸಬೇಕೆಂದು ಮನಸ್ಸಿನಲ್ಲಿ ಮಂಡಿಗೆಯನ್ನು ಮಾಡಿ ಕೊಂಡು ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವದಕ್ಕಾಗಿ ಪೇಷ್ವೆಯ ತಮ್ಮನಾದ ರಘುನಾಥರಾಯನ ಮೂಗಿಗೆ ತುಪ್ಪವನ್ನು ಹಚ್ಚಿ ಅವನ ಆಗ ಮನಕ್ಕೆ ಮಂತ್ರಾಕ್ಷತೆಯನ್ನು ಕಳುಹಿಸಿದನು. ಇಂಥ ಸಮಯ ಸಿಕ್ಕಿದರೆ ಸಾಕೆಂದಿದ್ದ ಜಗಳಗಂಟಿಗನಾದ ರಘುನಾಥರಾಯನು ಒಡನೆ ಸೇನೆಯೊಡನೆ ಬಂದೇ ಬಿಟ್ಟನು. ಈ ಸಂಚನ್ನು ತಿಳಿದು ಅಹಲ್ಯಾಬಾಯಿಯು ಧರ್ಮದ ಕಾರಣಕ್ಕಾಗಿ ತಾನು ಹಿಂದೆಗೆಯಬಾರದೆಂದು ಧೈರ್ಯವನ್ನು ತಂದುಕೊಂಡು ತನ್ನವರಿಗೆಲ್ಲ ಉತ್ಸಾಹವನ್ನು ತುಂಬಿ ಯುದ್ಧಸನ್ನಾಹವನ್ನೇ ಮಾಡಿ ರಘು ನಾಥರಾಯನಿಗೆ ನಾಚಿಕೆಯಾಗುವಂತೆ ಒಂದು ಪತ್ರವನ್ನು ಬರೆದಳು.

ಇಷ್ಟರಲ್ಲಿ ಈ ಕೆಲಸಕ್ಕೆ ಹೋದವನು ತಪ್ಪೆಂದು ಪೇಷ್ವೆ ಮಾಧವರಾಯನೂ ತನ್ನ ತಮ್ಮನಿಗೆ ಬರೆದು ಹಿಂದಿರುಗಹೇಳಿದ್ದರಿಂದ, ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂಬಂತೆ, ತಾನು ಬರೀ ಯೋಗಕ್ಷೇಮವನ್ನು ನೋಡಿಕೊಂಡು ಹೋಗುವದಕ್ಕೆ ಬಂದಿದ್ದೆನೆಂದು ಹೇಳಿ ರಘುನಾಥರಾಯನು ಮುಖವನ್ನು ತಿರುಗಿಸಬೇಕಾಯಿತು. ನಾಟೂರು ರಾಣಿಯಾದ ಭವಾನೀದೇವಿಯಲ್ಲಿಯೂ ಈ ಧೈರ್ಯವು ಕಂಡುಬಂದಿರುವದು. ಒಮ್ಮೆ ಭವಾನೀದೇವಿಯು ಗಯೆಯಲ್ಲಿ ಪಿಂಡದಾನಮಾಡಬೇಕೆಂದು ಸಂಕಲ್ಪಮಾಡಿಕೊಂಡು ಹೋದಳು. ಅಲ್ಲಿದ್ದ ನವಾಬನು ಅದಕ್ಕೆ ಪ್ರತಿಬಂಧಕಮಾಡಲು 'ಭವಾನೀದೇವಿಯು ಧರ್ಮವಿದ್ದ ಕಡೆ ಜಯವಿರುವದೆಂದು ಧೈರ್ಯವನ್ನು ತಂದುಕೊಡು ಮುರ್ಷಿದಾಬಾದ ನವಾಬನ ಸೇನೆಯ ಸಹಾಯವನ್ನು ಪಡೆದು ಅವನ ಅಧಿಕಪ್ರಸಂಗಕ್ಕೆ ತಕ್ಕ ಪ್ರತೀಕಾರವನ್ನು ಮಾಡಿದಳು.

ಮೇಲಿನ ಉದಾಹರಣೆಗಳೆಲ್ಲ ಕಾಯಿಕಧೈರ್ಯವನ್ನೂ ಮತ್ತು ವಾಚನಿಕಧೈರ್ಯವನ್ನೂ ವ್ಯಕ್ತಮಾಡಿದವು. ಇನ್ನು ಮಾನಸಿಕಧೈರ್ಯವನ್ನು ಹೇಳಬೇಕಾಗಿದೆ. ಕಾಯ ಮತ್ತು ವಚನ ಇವುಗಳಿಗಿಂತ ಮನಸ್ಸು ಶ್ರೇಷ್ಠವಾದದ್ದೆಂದು ಯಾರಾದರೂ ಒಡಂಬಡತಕ್ಕದ್ದೆ. ಏಕೆಂದರೆ: ಮನಸ್ಸನ್ನವಲಂಬಿಸಿಕೊಂಡೆ ಕಾಯದ ಮತ್ತು ವಚನದ ಪ್ರವೃತ್ತಿ. ಮಾನಸಿಕಧೈರ್ಯವೆಂದರೆ ಮನಸ್ಸಿನ ದುಷ್ಟತನವನ್ನು ನಿಗ್ರಹಿಸುವದು. ವಜ್ರವನ್ನು ವಜ್ರದಿಂದಲೆ ಹೇಗೆ ಕೊರೆಯತಕ್ಕದ್ದೊ ಹಾಗೆ ಮನಸ್ಸನ್ನು ಮನಸ್ಸಿನಿಂದಲೆ ನಿಗ್ರಹಿಸತಕ್ಕದ್ದು. ಆದರೆ ಕೊರೆಯುವ ವಜ್ರದ ತುದಿಯು ಕೊರೆಯಿಸಿಕೊಳ್ಳುವ ವಜ್ರಕ್ಕಿಂತ ಚೂಪಾಗಿರುವಂತೆ ನಿಗ್ರಹಿಸುವ ಮನಸ್ಸು ವಶವಾಗುವ ಮನಸ್ಸಿಗಿಂತ ಒಂದು ಬಗೆಯ ವಿಶೇಷವುಳ್ಳದ್ದಾಗಿರಬೇಕು ಆ ವಿಶೇಷವಿಲ್ಲದೆ ಇಲ್ಲ. ನಿಗ್ರಹಿಸುವ ಮನಸ್ಸಿನ ತುದಿಯಲ್ಲಿ ವಿವೇಕವೆಂಬ ಅಲಗಿದ್ದು ಅದು ಬುದ್ಧಿ ಎನಿಸಿಕೊಳ್ಳುವದು. ಬುದ್ಧಿಯೂ ಮನಸ್ಸೂ ಭಿನ್ನಭಿನ್ನ ಪದಾರ್ಥಗಳಲ್ಲ. ಎರಡೂ ಮನಸ್ಸೆ. ಅದರೊಳಗೆ ವಿವೇಕದಿಂದ ಕೂಡಿದ ಭಾಗಕ್ಕೆ ಬುದ್ಧಿಯೆಂದು ಹೆಸರು. ಬುದ್ಧಿಯಿಂದ ಮನಸ್ಸನ್ನು ಗೆಲ್ಲುವ ಸೂಕ್ಷ್ಮಯುದ್ಧವು ಅತ್ಯಂತಪ್ರಶಂಸನೀಯವಾದದ್ದು. ಆದ್ದರಿಂದ ಇದರಲ್ಲಿ ತೋರುವ ಧೈರ್ಯಕ್ಕೆ ಬೆಲೆ ಹೆಚ್ಚು. ಹೆಚ್ಚಿನ ದೇಶಕೋಶಗಳನ್ನು ಗೆಲ್ಲು

ವಾಗ ಅವುಗಳ ಪ್ರಾಪ್ತಿಯ ಆಶೆಯು ತನ್ನ ಧೈರ್ಯಕ್ಕೆ ಬೆಂಬಲವಾಗುತ್ತದೆ; ಅಥವಾ ತನ್ನ ಸ್ವತ್ತನ್ನು ರಕ್ಷಣೆಮಾಡಿಕೊಳ್ಳುವಾಗ ತೋರಿಸುವ ಧೈರ್ಯಕ್ಕೆ ಅವುಗಳನ್ನು ಕಳೆದುಕೊಳ್ಳಬಾರದೆಂಬ ಹಠವು ಸಹಾಯ ವಾಗುತ್ತದೆ. ಮಾನಸಿಕಯುದ್ಧದಲ್ಲಿ ಇಂಥ ಸ್ಥೂಲವಾದ ಪ್ರತ್ಯಾಶೆಗಳೇನೂ ಇರುವದಿಲ್ಲ. ಆದರೂ ಆ ಯುದ್ಧವನ್ನು ನಡೆಸುವದೆ ನಿಜವಾದ ನಿಷ್ಕಾಮ ಯುದ್ಧ. ಕಾಯಿಕಧೈರ್ಯವನ್ನೂ ವಾಚನಿಕಧೈರ್ಯವನ್ನೂ ತೋರಿ ಸುವವರು ಬಹುಮಂದಿ ಇರಬಹುದು. ಆದರೆ ಮಾನಸಿಕಧೈರ್ಯವನ್ನು ತೋರಿಸುವವರು ಮಾತ್ರ ಬಹುವಿರಲ. ನಿಜವಾಗಿ ಅವರ ಧೈರ್ಯವೇ ಧೈರ್ಯ. ಆದರೆ ಪ್ರಾಪಂಚಿಕರು ಯಾರೂ ಆ ಧೈರ್ಯವನ್ನು ಧೈರ್ಯ ವೆಂದು ಸಂಭಾವಿಸುವದಿಲ್ಲ. ಅವರಿಗೆ ಅದರ ತಿರುಳು ತಿಳಿಯದೆ ಇರುವದೆ ಅವಕ್ಕೆ ಕಾರಣ. ಈ ಮಾನಸಿಕಧೈರ್ಯದ ದೀಕ್ಷೆಯೇ ಸಂನ್ಯಾಸ. ಮನು ಷ್ಯನು ಅತಿರಥಮಹಾರಥರನ್ನಾದರೂ ಹುಡಿಗುಟ್ಟಬಹುದು; ವಿಷಯಗಳ ಸೆಳೆತದಿಂದ ಕಳಚಿಕೊಳ್ಳುವದು ಕಠಿನ.

ಬುದ್ಧ, ಶ್ರೀಶಂಕರಾಚಾರ್ಯರು, ಶ್ರೀಮಧ್ವಾಚಾರ್ಯರು—ಇವರೆಲ್ಲ ಮಾನಸಿಕಧೈರ್ಯವನ್ನು ತೋರಿಸಿದಂಥ ಮಹಾಮಹಿಮರು. ಸರ್ವ ಸೌಭಾಗ್ಯಗಳ ಸಂಪೂರ್ಣತೆಯನ್ನು ಪಡೆದಿದ್ದ ಬುದ್ಧನು ಒಂದು ದಿನದ ನಗರವಿಹಾರದಲ್ಲಿ ಮುದುಕನನ್ನೂ ರೋಗಿಯನ್ನೂ ಹೆಣವನ್ನೂ ನೋಡಿ ವಿರಕ್ತಿಯನ್ನು ಪಡೆಯುತ್ತಲೆ ತಾನು ಸರ್ವದುಃಖಗಳ ಸಮ್ಮಾರ್ಜನಕ್ಕಾಗಿ ದೀಕ್ಷೆಯನ್ನು ವಹಿಸಬೇಕೆಂದು ಅವನ ಮನಸ್ಸಿನಲ್ಲಿ ಸಂಕಲ್ಪವುಂಟಾಯಿ ತಷ್ಟೆ. ಆಗ ಅವನು ತನ್ನ ಮುದ್ದು ಹೆಂಡತಿಯಾದ ಯಶೋಧರೆಯ ಮತ್ತು ಮುದ್ದು ಮಗನಾದ ರೋಹಿಲನ ಕೊನೆಯ ಅನುಜ್ಞೆಯನ್ನು ತೆಗೆದು ಕೊಳ್ಳಬೇಕೆಂದು ಶಯ್ಯಾಗೃಹಕ್ಕೆ ಬಂದನು. ಹಂಸತೂಲಿಕಾತಲ್ಪದ ಮೇಲೆ ಯಶೋಧರೆಯು ಹಾಯಾಗಿ ಮಲಗಿದ್ದಾಳೆ; ತಾಯ ತೋಳ ತಲೆಗಿಂಬಿನ ಮೇಲೆ ರೋಹಿಲನು ನಿಶ್ಚಿಂತೆಯಿಂದ ಪವಡಿಸಿದ್ದಾನೆ. ಅವರ ನಿದ್ರಾಭಂಗ ಮಾಡಬಾರದೆಂದು ಮನಸ್ಸು ಚುಚ್ಚುತ್ತಿದೆ. ಅದೇ ಮನಸ್ಸೇ ಒಮ್ಮೆ ಆ ಮುದ್ದು ಮುಖಗಳಿಗೆ ಮುತ್ತು ಕೊಡಬೇಕೆಂದು ತವಕಿಸುತ್ತಿದೆ. ಯಾರ ಪ್ರಾಣಗಳು ಇದುವರೆಗೆ ತನ್ನ ಪ್ರಾಣಗಳೆ ಆಗಿದ್ದವೊ ಅಂಥ ಹೆಂಡತಿಯನ್ನೂ

ಮಗನನ್ನೂ ಬುದ್ಧನು ಆಗ ಕೈಬಿಟ್ಟು ಹೊರಡುವವನಾಗಿದ್ದಾನೆ. ಒಂದು ದಿನದ ಸಂಚಾರದಲ್ಲಿ ತೋರಿದ ದುಃಖಗಳಿಂದ ದೇಶವನ್ನೂ ಕೋಶವನ್ನೂ ತಂದೆಯನ್ನೂ ತಾಯಿಯನ್ನೂ ಹೆಂಡತಿಯನ್ನೂ ಮಗನನ್ನೂ ಬಂಧುಗಳನ್ನೂ ಬಳಗವನ್ನೂ ಪರಿವಾರವನ್ನೂ ಪ್ರಜೆಗಳನ್ನೂ ಸರ್ವಸ್ವವನ್ನೂ ಒಮ್ಮೆಗೇ ಬಿಟ್ಟು ಹೊರಡುವದೆಂಬುದೇನು ಸಾಮಾನ್ಯವಾದ ಮಾತೇ? ಸಂಸಾರವು ದುಃಖಮಯವೆಂದು ಈ ಲೋಕದಲ್ಲಿ ಯಾರಿಗೆ ತಿಳಿದಿಲ್ಲ? ಆದರೆ ಅದರಿಂದ ಹಿಮ್ಮುಖವಾಗುವ ಧೈರ್ಯವು ಮಾತ್ರ ಬಹು ಜನಕ್ಕೆ ಇಲ್ಲ. ಬುದ್ಧನು ಸಂಸಾರದ ನಿಸ್ಸಾರತ್ವವನ್ನು ಒಮ್ಮೆ ಮನಗಂಡಕೂಡಲೆ ಅದನ್ನು ವಾಂತಾಶನದಂತೆ ತುಚ್ಛವಾಗಿ ಕಂಡು ಹಿಂದಿರುಗಿದನಲ್ಲ! ಇದು ಧೈರ್ಯ ಶ್ರೀಶಂಕರಾಚಾರ್ಯರೂ ಶ್ರೀಮಧ್ವಾಚಾರ್ಯರೂ ಕೂಡ ಒಳ್ಳೆ ದಿಗ್ದಂತಿ ಪಂಡಿತರಾಗಿದ್ದು ಭೌತಿಕಭಾಗ್ಯವನ್ನು ಬೇಕಾದಷ್ಟು ಪಡೆಯುವ ಅವಕಾಶವಿದ್ದರೂ ದೂರದರ್ಶಿಗಳಾಗಿ ಅವುಗಳ ಸೋಂಕು ತಗಲುವದಕ್ಕೆ ಮೊದಲೆ ಎಚ್ಚತ್ತು ಸರ್ವಲೌಕಿಕಸುಖಗಳಿಗೂ ಶರಣುಮಾಡಿ ಹೊರಟರಲ್ಲ! ಈ ಧೈರ್ಯದ ಮುಂದೆ ಭೌತಿಕಸೌಖ್ಯದ ಯೋಗಕ್ಷೇಮಕ್ಕಾಗಿ ತೋರಿಸುವ ಧೈರ್ಯವನ್ನು ನಿವಾಳಿಸಿ ಒಗೆಯಬೇಕು ಮನಸ್ಸಿನಲ್ಲಿರುವ ಬೇಕೆಂಬ ಮತ್ತು ಬೇಡವೆಂಬ ಎರಡು ಕಲ್ಪನೆಗಳನ್ನೂ ಬೇರು ಕಿತ್ತಿಸೆದು ವಿವೇಕದಿಂದ ಅದರ ಪ್ರವಾಹವನ್ನು ಭಗವದ್ವಿಚಾರದ ಕಡೆಗೆ ತಿರುಗಿಸುವ ಧೈರ್ಯದ ಮುಂದೆ ಹದಿನಾಲ್ಕು ಲೋಕಗಳೂ ಹುಲ್ಲ ಕಡ್ಡಿ.

ಪಾರಮಾರ್ಥಿಕಧೈರ್ಯವು ಪ್ರಾಪಂಚಿಕರ ಧೈರ್ಯಕ್ಕಿಂತ ಎಷ್ಟೋ ಪಾಲು ಹೆಚ್ಚಿನದಾದರೂ ಅದರ ಪ್ರದರ್ಶನದ ರೀತಿಯು ಮಾತ್ರ ಭಿನ್ನವಾಗಿರುವದು. ಪ್ರಾಪಂಚಿಕರು ತಮ್ಮ ಧೈರ್ಯವನ್ನು ಶರೀರದ ಮೂಲಕವಾಗಿ ಅಥವಾ ಮಾತಿನ ಮೂಲಕವಾಗಿ ಪೌರುಷಪ್ರದರ್ಶನ ಮಾಡುವದರಲ್ಲಿ ತೋರಿಸುವರು. ಪಾರಮಾರ್ಥಿಕರು ತಮಗಾಗುವ ಕಷ್ಟವನ್ನು ಸಹನ ಮಾಡುವದರಲ್ಲಿ ತಮ್ಮ ಧೈರ್ಯವನ್ನು ತೋರಿಸುವರು. ತುಕಾರಾಮನ ಉದಾಹರಣೆಯನ್ನು ತೆಗೆದುಕೊಳ್ಳಿರಿ. ವಿಠೋಬದೇವಸ್ಥಾನದ ಒಂದು ಹಾದಿಯಲ್ಲಿ ಮುಂಬಾಜಿಯೆಂಬ ಬ್ರಾಹ್ಮಣನು ತೋಟಕ್ಕೆ ಬೇಲಿಯನ್ನು ಹಾಕಿಸಿದ್ದನು. ಒಂದು ದಿನ ಆ ದೇವಸ್ಥಾನದಲ್ಲಿ ಕೀರ್ತನವಾಗತಕ್ಕದ್ದಿತ್ತು.

ಅವನ್ನು ಕೇಳುವದಕ್ಕೆ ಬರುವ ಜನರಿಗೆ ಆ ಮುಳ್ಳುಬೇಲಿಯು ತ್ರಾಸದಾಯಕವಾಗುವದೆಂದು ತುಕಾರಾಮನು ಆ ಬೇಲಿಯನ್ನು ಸರಿಸಿ ದಾರಿಯನ್ನು ಮಾಡಿದನು. ಪೂಜ್ಯನಾದ ತುಕಾರಾಮನು ಭಗವದ್ಭಕ್ತರಲ್ಲಿ ಅಗ್ರಗಣ್ಯನಾಗುತ್ತಿದ್ದದ್ದು ದುರಭಿಮಾನಿಯಾದ ಆ ಬ್ರಾಹ್ಮಣನಿಗೆ ಸಹನವಾಗಲಿಲ್ಲ. ಈ ದ್ವೇಷದಿಂದ ಆ ಬ್ರಾಹ್ಮಣನು ತುಕಾರಾಮನನ್ನು ಹಿಡಿದು ಎಲುಬು ಪುಡಿಪುಡಿಯಾಗುವಂತೆ ಹೊಡೆದನು. ಆಗ ತುಕಾರಾಮನೂ ಕೈಮಾಡಿದ್ದರೆ ಏನಾಗುತ್ತಿತ್ತೊ? ಆ ಮಾತು ಬೇರೆ. ಆದರೆ ತುಕಾರಾಮನು ಬ್ರಾಹ್ಮಣನ ಹೊಡೆತಕ್ಕೆ ಧೈರ್ಯದಿಂದ ಮೈಗೊಟ್ಟು ತನ್ನ ಆತ್ಮಶಕ್ತಿಯನ್ನು ಪ್ರದರ್ಶನ ಮಾಡಿದನು. ಕಾರಣಾಂತರದಿಂದ ಸಹನಮಾಡಿದ ವಿಷಯವೂ ಒಂದು ಕಡೆ ಇರಲಿ. ಶ್ರೀಸಮರ್ಥ ರಾಮದಾಸರ ಉದಾಹರಣೆಯನ್ನು ತೆಗೆದುಕೊಳ್ಳಿರಿ. ಅವರು ಗೋದಾವರಿಯಲ್ಲಿ ಎದೆಯುದ್ದವಾದ ನೀರಲ್ಲಿ ನಿಂತು ಉಗ್ರತಪಶ್ಚರ್ಯೆಯನ್ನು ಮಾಡುತ್ತಿದ್ದಾಗ ಜಲಚರಗಳು ಅವರ ಮೈಯನ್ನೆಲ್ಲ ಕಚ್ಚಿ ಹುಣ್ಣು ಹುಣ್ಣು ಮಾಡಿದರೂ ಕೂಡ ಅವರು ತಪಶ್ಚರ್ಯೆಯನ್ನು ಮಾತ್ರ ನಿಲ್ಲಿಸುತ್ತಿರಲಿಲ್ಲ. ಆ ಬಾಧೆಯನ್ನು ಮನಸ್ಸಿಗೆ ತಂದುಕೊಳ್ಳದೆ ಧೈರ್ಯದಿಂದ ಸಹನಮಾಡುವದರಲ್ಲಿ ಅವರು ತೋರಿಸಿರುವ ಆತ್ಮಶಕ್ತಿಯು ಅತ್ಯಂತಪ್ರದರ್ಶನೀಯವಾಗಿದೆ. ಜಲಚರಗಳಿಗೆ ಮೈಗೊಡದೆ ತಮ್ಮ ತಪಶ್ಚರ್ಯೆಯನ್ನು ಸಾಧಿಸಬಹುದಾಗಿತ್ತಾದರೂ ಅದಕ್ಕೆ ತೀವ್ರತೆಯನ್ನು ತಂದುಕೊಡುವದಕ್ಕಾಗಿ ಅವರು ಆ ಬಾಧೆಯನ್ನು ಸಹನಮಾಡಿ ತಮ್ಮ ಧೈರ್ಯದ ಧ್ವಜಸ್ವರೂಪವಾಗಿ ಮೈಮೇಲೆಲ್ಲ ಕಲೆಗಳನ್ನು ಮಾಡಿಕೊಂಡರು. ಇಂಥ ಧೈರ್ಯವನ್ನು ಪ್ರದರ್ಶನಮಾಡುವದಕ್ಕೆ ಪ್ರತಿಯೊಬ್ಬನೂ ಪ್ರಯತ್ನಮಾಡಬೇಕು.

ಒಂದು ಪಕ್ಷ ಶರೀರಬಲವಿರಲಿ, ಇಲ್ಲದಿರಲಿ; ದೇವರ ಮೇಲೆ ಭಾರವನ್ನು ಹಾಕಿ ಧೈರ್ಯವನ್ನು ಮಾಡಿಬಿಟ್ಟರೆ ಅದಕ್ಕೆ ನಿಜವಾಗಿ ಯಶಸ್ಸು ದೊರೆತೇ ದೊರೆಯುವದು. ಲೋಕದಲ್ಲಿ ದೈವೇಚ್ಛೆಯ ಮುಂದೆ ಮನುಷ್ಯನದೇನು ನಡೆಯುತ್ತದೆ? ಎಷ್ಟೋ ಸಂದರ್ಭಗಳಲ್ಲಿ ಅಪಾರವಾದ ಸೇನೆಯು ಕ್ಷುದ್ರಸೇನೆಯ ಮುಂದೆ ತಲೆಬಗ್ಗಿಸಿದ್ದನ್ನು ನಾವು ನೋಡುತ್ತೇವೆ. ವಜ್ರದೇಹಿಗಳಾದವರು ಸಾಮಾನ್ಯನ ಕೈಮೈಯನ್ನು ತಡೆಯಲಾರದೆ ಹಿಮ್ಮೆಟ್ಟಿದೂ

ನಮಗೆ ಕಂಡುಬರುವದು ಇವೆಲ್ಲ ದೈವಚಿಂತನೆಯ ಪ್ರಾಬಲ್ಯವನ್ನು ಪ್ರಕಾಶಗೊಳಿಸುತ್ತವೆ. ಮನುಷ್ಯನು ಧೈರ್ಯವನ್ನು ಮಾಡುವಪಕ್ಕ ಮೊದಲು ದೇವರಿಗೆ ಶರಣುಹೋದನೆಂದರೆ ದೈವಚಿಂತನೆಯು ಬಹುಮಟ್ಟಿಗೆ ಅವನಿಗೆ ಅನುಕೂಲವಾಗುವದು. ಆದರೆ ಲೋಕದಲ್ಲಿ ದೇವರಿಗೆ ಶರಣೆನ್ನುವದು ತಮ್ಮ ಶರೀರದೌರ್ಬಲ್ಯದ ಚಿಹ್ನವೆಂದು ಜನರಿಗೆ ಭ್ರಮೆಯಾಗುವದುಂಟು. ಶರೀರವು ಸಬಲವಾಗಿರಲಿ, ದುರ್ಬಲವಾಗಿರಲಿ, ಜಯಾಪಜಯಗಳು ದೈವೇಚ್ಛೆಯನ್ನು ಹಿಂಬಾಲಿಸುವದು ಹೆಚ್ಚು. ಆದ್ದರಿಂದ ಜಯೇಚ್ಛು ಗಳಾದವರೆಲ್ಲರೂ ಅಗತ್ಯವಾಗಿ ದೇವರಿಗೆ ಶರಣು ಹೋಗಿ ಮುಂದೆ ಅಡಿ ಯಿಡಬೇಕು. ಈ ಉಪದೇಶವನ್ನು ಏಕನಾಥರ ಚರಿತ್ರೆಯು ಸ್ಪಷ್ಟಗೊಳಿಸು ವದು. ಏಕನಾಥರು ಕೇವಲ ಚಿಕ್ಕ ವಯಸ್ಸಿನಲ್ಲಿ ಪರಮಾರ್ಥಸಾಧನೆ ಯನ್ನು ಮಾಡಬೇಕೆಂದು ಜನಾರ್ದನಪಂತರೆಂಬ ಗುರುಗಳ ಆಶ್ರಯವನ್ನು ಪಡೆದರು. ಜನಾರ್ದನಪಂತರು ದೇವಗಡದಲ್ಲಿ ದೌಲತಾಬಾದದ ಒಬ್ಬ ಯವನರಾಜನ ಮುಖ್ಯಾಧಿಕಾರಿಗಳಾಗಿದ್ದರು. ಒಮ್ಮೆ ಶತ್ರುರಾಜರು ಮುಂ ದಾಗಿ ತಿಳಿಸದೆ ದೇವಗಡದ ಊರಮುಂದಕ್ಕೆ ಬಂದು ಕಹಳೆಯನ್ನು ಊದಿ ದರು. ಆಗ ದೇವಗಡದ ಯವನರಾಜನು ಎದೆಯೊಡೆದವನಾಗಿ ಒಡನೆ ಶತ್ರುವನ್ನು ಓಡಿಸುವಂತೆ ಜನಾರ್ದನಪಂತರಿಗೊಂದು ಪತ್ರವನ್ನು ಬರೆದು ಕಳುಹಿಸಿದನು. ಆ ಪತ್ರವು ಬಂದಾಗ ಪಂತರು ದೇವರ ಮನೆಯಲ್ಲಿ ಧ್ಯಾನಾ ರೂಢರಾಗಿ ಕುಳಿತಿದ್ದರು; ಏಕನಾಥರು ಬಾಗಿಲನ್ನು ಕಾಯುತ್ತಿದ್ದರು. ರಾವುತನು ತಂದುಕೊಟ್ಟ ಪತ್ರವನ್ನು ಏಕನಾಥರು ಓದಿಕೊಂಡರು. ಗುರು ಗಳನ್ನೆಬ್ಬಿಸಿದರೆ ಸಮಾಧಿಗೆ ಭಂಗವಾಗುವದೆಂದೂ ಸುಮ್ಮನಿದ್ದರೆ ಕೆಲಸ ಕೆಡುವದೆಂದೂ ನೆನೆದು ಏಕನಾಥರು ಹೊರಗಣಿಂದಲೆ ಗುರುವಿಗೆ ನಮ ಸ್ಕಾರ ಮಾಡಿ ಪಂತರ ಯುದ್ಧಕಾಲದ ಉಡಿಗೆತೊಡಿಗೆಗಳನ್ನೆ ಧರಿಸಿ ದಿವ್ಯಾಯುಧಗಳನ್ನು ಹಿಡಿದು ದಿವ್ಯಾಶ್ವವನ್ನೇರಿ ಹೊರಬಿದ್ದರು. ಏಕನಾಥರ ಮುಖಭಾವವೂ ಜನಾರ್ದನಪಂತರನ್ನು ಹೋಲುತ್ತಿದ್ದದ್ದರಿಂದ ಆ ಗಡಿಬಿಡಿ ಯಲ್ಲಿ ಯಾರಿಗೂ ಸಂಶಯ ಬರಲಿಲ್ಲ. ಬಾಲಕನಾದ ಏಕನಾಥನ ಧೈರ್ಯವು ಅಷ್ಟು ಪ್ರಬಲವಾಗಿತ್ತು.

ಕಂ|| ಕರಿಘಟೆಯಂ ಸೀಳ್ವುದು ಕೇ |
ಸರಿ ಶಿಶುವಾಗಿರ್ದೊಡಂ ಮಹಾರಭಸದಿ ತಾಂ ||
ಅರಿಗಳನುರುಪುವ ಧೀರತೆ |
ಮೆರೆವೊಡೆ ಬಾಲತ್ವಮಡ್ಡನಿಲ್ಲದದೆಂದುಂ ||

ಯುದ್ಧದ ಸಾಮಾನ್ಯಪರಿಚಯವಿದ್ದ ಏಕನಾಥರು ಆ ದಿನ ತುಮುಲ ಯುದ್ಧವನ್ನು ನಡೆಸಿ ಶತ್ರುಗಳನ್ನು ದಿಕ್ಕುಗೆಡಿಸಿ ಜಯಭೇರಿಯನ್ನು ಹೊಡಿಸಿಕೊಂಡೇ ಬಂದರು.

ಕಂ|| ಧರೆ ಮಣ್ಣಕಟ್ಟೆಯಪ್ಪುದು; |
ಶರನಿಧಿ ಕಾಲುವೆಯ ಪಾಡ ಪೋಲುವದು; ||
ಗಿರಿರಾಜನೊಂದು ಹುತ್ತಕೆ |
ಸರಿ; ಧೀರತೆಯೊಂದು ಮನದೊಳಿಹ ನರಗೆ ||

ಈ ರೀತಿಯಲ್ಲಿ ಕಾಯಿಕಧೈರ್ಯವನ್ನೂ ವಾಚನಿಕಧೈರ್ಯವನ್ನೂ ತೋರಿ ಸುವಾಗಲೂ ಭಗವಂತನಿಗೆ ಶರಣುಹೋಗುವದರಿಂದ ಅಸಾಧಾರಣ ಸಾಮರ್ಥ್ಯವುಂಟಾಗುವದು. ಮಾನಸಿಕಧೈರ್ಯಕ್ಕಂತು ಇದು ಬೇಕೇ ಬೇಕು. ಭಗವದನುಗ್ರವಿಲ್ಲದೆ ಮನುಷ್ಯನು ವಿಷಯಗಳಿಂದ ವಿಮುಖ ನಾಗುವದಕ್ಕಾಗುವದೇ ಇಲ್ಲ.

ಧೈರ್ಯವೆಂಬ ಚಿನ್ನದ ಬೆಲೆಯನ್ನು ಕಟ್ಟುವದಕ್ಕೆ ಅಪಜಯವೆ ಒರೆಗಲ್ಲು. ಗೆಲುವು ಸಿಕ್ಕುತ್ತ ಹೋದ ಹಾಗೆಲ್ಲ ಧೈರ್ಯವು ಉಕ್ಕುವ ದೇನೂ ದೊಡ್ಡ ಮಾತಲ್ಲ. ಆ ಧೈರ್ಯಕ್ಕೇನೂ ಬೆಲೆ ಇಲ್ಲ. ಸೋಲಿನ ಮೇಲೆ ಸೋಲಾದರೂ ಮನಸ್ಸಿನ ಉತ್ಸಾಹವು ತಗ್ಗದಿರುವದೆ ನಿಜವಾದ ಧೈರ್ಯ. ಗೆಲುವನ್ನವಲಂಬಿಸಿ ಬೆಳೆಯುವ ಧೈರ್ಯವು ಹೇಡಿಯಲ್ಲಾ ದರೂ ವ್ಯಕ್ತವಾಗುವದು. ಅದು ಹುರುಳಿಲ್ಲದ ಧೈರ್ಯ. ಎಷ್ಟು ಸೋಲಾದರೂ ಕುಗ್ಗದಿರುವ ಧೈರ್ಯವು ನಿಜವಾದ ಧೀರನಲ್ಲಿ ಮಾತ್ರ ಕಾಣಿಸಿಕೊಳ್ಳುವದು. ಚಿತ್ತೂರಿನ ಪ್ರತಾಪಸಿಂಹನೂ ಝಾಂಸಿಯ ಲಕ್ಷ್ಮೀಬಾಯಿಯೂ ಅಂಥ ಧೈರ್ಯವನ್ನು ವ್ಯಕ್ತಮಾಡಿ ತಮ್ಮ ಯಶಸ್ಸನ್ನು ಆಚಂದ್ರಾರ್ಕವಾಗಿ ಮಾಡಿರುವರು.

ಪ್ರತಾಪಸಿಂಹನ ಚರಿತ್ರೆಯನ್ನು ನೋಡಿರಿ. ಎಲ್ಲೆಲ್ಲಿಯೂ ತನ್ನ

ಕಾಲನ್ನು ಚಾಚಬೇಕೆಂದಿದ್ದ ಅಕ್ಬರನು ಚಿತ್ತೂರನ್ನು ಸ್ವಾಹಾಕಾರಮಾಡು ವದಕ್ಕಾಗಿ ರಣಯಜ್ಞವನ್ನಾರಂಭಿಸಿದನು. ಮುಸಲ್ಮಾನರ ಅಬ್ಬರಕ್ಕೆ ತಬ್ಬಿಬ್ಬಾಗಿ ತಂದೆಯಾದ ಉದಯಸಿಂಗನು ಕಾಲಿಗೆ ಬುದ್ಧಿಯನ್ನು ಹೇಳಿ ದರೂ ತಂದೆಯ ಸೋಲಿನಿಂದ ನಿರಾಶನಾಗದೆ ಬಾಲಕನಾದ ಪ್ರತಾಪಸಿಂಹನು ತನ್ನ ಎಳೇ ಮೈಯನ್ನು ರಣಭೂಮಿಗೊಡ್ಡಿದನು. ಆಗಿನ ಪರಿಸ್ಥಿತಿಯಲ್ಲಿ ಆವನಿಗೆ ಉಳಿಗಾಲವು ಕಾಣದ್ದರಿಂದ ಅವನ ಪರಿವಾರದವರು ಆವನನ್ನು ಕಮಲಮಿಾರಮರ್ಗಕ್ಕೆ ಸಾಗಿಸಿದರು. ರಾಮೇಶ್ವರಕ್ಕೆ ಹೋದರೂ ಶನೈಶ್ಚ ರನು ಬಿಡನೆಂಬಂತೆ ಅಲ್ಲಿಗೂ ಅಕ್ಬರನ ಪಕ್ಷವನ್ನು ಹಿಡಿದು ಮಾನಸಿಂಹನು ಬಂದು ಭಯಂಕರವಾದ ಯುದ್ಧವನ್ನು ಹೂಡಿದನು. ಪ್ರತಾಪನು ಅಲ್ಲಿಂದಲೂ ತಲೇತಪ್ಪಿಸಿಕೊಳ್ಳಬೇಕಾಗಿ ಬಂತು. ಪ್ರತಾಪನು ಉದಯಪುರವನ್ನು ಸಾಧಿಸಿ ಕೊಂಡು ಬಲವಾದ ಪ್ರತಿಪಕ್ಷವನ್ನು ಕಟ್ಟಿದನು. ಆಗಲೂ ತುಂಬ ಗಾಸಿಯಾಗಿ ಅವನು ಕಮಲಮಿಾರನ್ನೂ ಬಿಟ್ಟು ಅಜ್ಞಾತವಾಸಮಾಡಬೇಕಾಯಿತು.

ಕಂ॥ ಎರಡೇ ಸ್ಥಿತಿಗಳ್ಧೀರ।
ಗಿರುವವು ಪೂಗೊಂಚಲಂತೆ ಹೋಲಿಸಿ ನೋಡಲ್ ॥
ನರರೆಲ್ಲರ ಶಿರವೇರುತ।
ಮೆರೆವುದದಿಲ್ಲಮೊಡೆ ಕಾಡಿನೊಳೆ ಸೊರಗುವದು ॥

ಇಷ್ಟರಲ್ಲಿ ಅವನಿಗೆ ಹಿಂದೆ ಆವನ ಉಪ್ಪನ್ನು ಉಂಡಿದ್ದ ಭೀಮಸಿಂಹನಿಂದ ಒತ್ತಾಸೆ ದೊರೆಯಿತು. ಆಗ ನಡೆದ ಯುದ್ಧದಲ್ಲಿ ಮಾತ್ರ ಪ್ರತಾಪನಿಗೆ ಕಮಲಮಿಾರವೂ ಇನ್ನೂ ಇಪ್ಪತ್ತೆರಡು ಕೋಟೆಗಳೂ ಸಿಕ್ಕಿದವು. ಆದರೂ ಚಿತ್ತೂರು ಮಾತ್ರ ಕೈಸೇರಲಿಲ್ಲ. ಸ್ಥೂಲದೃಷ್ಟಿಯಿಂದ ಇವನ ಚರಿತ್ರೆಯು ತುಂಬ ಸೋಲುಗಳೆ ಇದ್ದರೂ ಅವೆಲ್ಲ ಅವನ ಧೀರತೆಯನ್ನು ಪ್ರಕಾಶ ಮಾಡುವ ಭೂಷಣಗಳಾಗಿರುವವು.

ಕಂ॥ ಮಹನೀಯಮಾನವರ್ದು।
ಸ್ಸಹವಾದಪಘಾತದಿಂದೆಯುಂ ಜಸವಡೆವರ್ ॥
ತುಹಿನಗಿರಿಯಂ ವಿದಾರಿಪ।
ಮಹಾಗಜಂ ದಂತಭಂಗದಿಂ ಶೋಭಿಪವೊಲ್ ॥

ಗೆಲುವಾಗದಿದ್ದರೂ ಕೊನೆಯವರೆಗೂ ಹೋರಾಡುವದೇ ನಿಜವಾದ ಧೀರತೆ.

ಝಾಂಸಿಯ ಲಕ್ಷ್ಮೀಬಾಯಿಯಲ್ಲಿಯೂ ಈ ಬಣ್ಣವು ಮೆರುಗನ್ನು ಪಡೆದು ಮೆರೆಯುತ್ತಿರುವದು. ನಿಜವಾಗಿ ಆಕೆ ಆಗ ನಡೆದ ಶಿಪಾಯರ ದಂಗೆಯಲ್ಲಿ ಇಂಗ್ಲೀಷರ ಪಕ್ಷವನ್ನೇ ಹಿಡಿದು ಎಷ್ಟೋ ಉಪಕಾರವನ್ನು ಮಾಡಿದ್ದರೂ ಕೂಡ ಇಂಗ್ಲೀಷರಿಗೆ ಅವರ ತಪ್ಪು ತಿಳಿವಳಿಕೆಯಾಗಿ ಅವರು ಲಕ್ಷ್ಮೀಬಾಯಿಯ ಮೇಲೆ ಪ್ರತಿಭಟಿಸುವವರಾದರು. ಕೊನೆಗೆ ಅನರ್ಥ ಪರಂಪರೆಗಳಾಗಿ ಊರೆಲ್ಲ ರಣರಂಗವಾದ ಮೇಲೆ ಲಕ್ಷ್ಮೀಬಾಯಿಯು ಆ ಊರನ್ನು ಬಿಟ್ಟು ಜೀವವನ್ನು ಉಳಿಸಿಕೊಳ್ಳಬೇಕಾಯಿತು. ಧೀರಳಾದ ಲಕ್ಷ್ಮೀಬಾಯಿಯು ಜೀವಗಳ್ಳಳಾಗಿ ಹೊರಡಲಿಲ್ಲ. ಜೀವವನ್ನುಳಿಸಿಕೊಂಡು ಧರ್ಮಪಕ್ಷದ ಜಯಧ್ವಜವನ್ನು ಹಿಡಿಯಬೇಕೆಂದು ಅಲ್ಲಿಂದ ಕಾಲ್ತೆಗೆದು ಕಾಲ್ಪಿಕೋಟೆಯಲ್ಲಿದ್ದ ಪೇಶ್ವೆಬಾಜಿರಾಯನಿಗೆ ಶರಣುಹೋದಳು. ಬಾಜಿರಾಯನನ್ನು ಸತ್ಕರಿಸಿ, ಇಂಗ್ಲೀಷರಿಗೆ ಅಭಿಮುಖಳಾಗುವದಕ್ಕೆ ತಕ್ಕ ಸಿದ್ಧತೆಯನ್ನು ಮಾಡಿಕೊಳ್ಳುತ್ತಿರುವಷ್ಟರಲ್ಲಿಯೆ ಲಕ್ಷ್ಮೀಬಾಯಿ ಬಂದ ದಾರಿಯನ್ನೇ ಹಿಡಿದು ಇಂಗ್ಲೀಷರ ದಂಡೂ ಬಂತು. ಅಲ್ಲಿಯೂ ಲಕ್ಷ್ಮೀಬಾಯಿಗೆ ಜಯವಾಗಲಿಲ್ಲ. ಬಾಜಿರಾಯನೂ ಕೂಡ ಪಲಾಯನಸೂಕ್ತವನ್ನು ಪಾರಾಯಣ ಮಾಡಬೇಕಾಗಿ ಬಂತು. ಆಮೇಲೆ ಅವರಿಬ್ಬರೂ ಗ್ವಾಲ್ಹೇರಿಗೆ ಹೋಗಿ ಸಿಂಧ್ಯನನ್ನು ವಶಮಾಡಿಕೊಂಡು ಗರಿಗಟ್ಟಿಕೊಂಡರು. ಅದರ ವಾಸನೆಯನ್ನು ಹಿಡಿದು ಇಂಗ್ಲೀಷರು ಅಲ್ಲಿಗೂ ಬಂದು ತಮ್ಮ ಆರ್ಭಟವನ್ನು ತೋರಿಸಿದರು. ಆಗ ಬಾಜಿರಾಯನು ಮದೋನ್ಮತ್ತನಾಗಿ ಊರಲ್ಲಿ ವಿಷಯ ಸುಖದಲ್ಲಿ ಮಗ್ನನಾಗಿದ್ದನು. ಬಂದ ಮೃತ್ಯುವಿಗೆ ಉತ್ತರವನ್ನು ಹೇಳುವ ಭಾರವು ಲಕ್ಷ್ಮೀಬಾಯಿಯ ಮೇಲೆಯೆ ಬಿತ್ತು. ಲಕ್ಷ್ಮೀಬಾಯಿಯೂ ಅದಕ್ಕೆ ಹಿಂದೆಗೆಯುವವಳಾಗಿರಲಿಲ್ಲ. ಆಕೆಯು ಮುಂದೆ ಬಂದು ಮಹಿಷಾಸುರಮರ್ದನಿಯಂತೆ ರಣರಂಗದಲ್ಲಿ ತನ್ನ ವೀರಾವೇಶವನ್ನು ತೋರಿಸಿದಳು. ಏನುಮಾಡುವದು? ದೈವಸಹಾಯವಿರಲಿಲ್ಲ. ಲಕ್ಷ್ಮೀಬಾಯಿಯು ಅಲ್ಲಿಂದಲೂ ಓಡಬೇಕಾಗಿ ಬಂತು. ಶತ್ರುಗಳನ್ನು ನುಚ್ಚುನುರಿ ಮಾಡಿದ ಲಕ್ಷ್ಮೀಬಾಯಿಯು ಹೇಗೊ ಅಲ್ಲಿಂದ ನುಸುಳಿ ಬೇರೆ ಕಡೆಗೆ ದಾರಿಯನ್ನು ಹಿಡಿದಳು. ಆಗಲೂ ಶತ್ರುಭಟರು ಹಿಂಬಾಲಿಸಿದರು. ಕೊನೆಗೆ ತಾನು ಹತ್ತಿದ ಕುದುರೆ ಸಂಪೂರ್ಣವಾಗಿ ಸೋತು ನಿಂತುಬಿಟ್ಟದ್ದರಿಂದ ಒಂದು

ಜಲಾಶಯದ ತೀರದಲ್ಲಿ ವಿಶ್ರಮಿಸಿ ಶತ್ರುಗಳ ಖಡ್ಗದ ಪೆಟ್ಟಿನಿಂದ ಗಾಸಿಪಟ್ಟು ಹಾಗೆಯೆ ಪರಂಧಾಮವನ್ನೈದಿದಳು. ಲಕ್ಷ್ಮೀಬಾಯಿಯ ಇತಿಹಾಸದಲ್ಲಿಯೂ ಸ್ಥೂಲದೃಷ್ಟಿಯಿಂದ ಸೋಲುಗಳೇ ತುಂಬಿತುಳುಕುತ್ತಿದ್ದರೂ ಅವುಗಳೆಲ್ಲ ಆಕೆಯ ಧೀರತೆಯೆಂಬ ಕನ್ನಡಿಯ ಮುಸುಕನ್ನು ಅಳಿಸಿ ಬೆಳಗುವವುಗಳಾಗಿ ರುವವು. ಮೊದಲನೆ ಸಲವೆ ಲಕ್ಷ್ಮೀಬಾಯಿ ಗೆದ್ದಿದ್ದರೂ ಆಕೆಗೆ ಈಗಿನಷ್ಟು ಯಶಸ್ಸು ಬರುತ್ತಿರಲಿಲ್ಲ. ಸೋಲುಗಳು ಕಾಯಿಕಧೈರ್ಯದಲ್ಲಿಯೂ ವಾಚನಿಕಧೈರ್ಯದಲ್ಲಿಯೂ ಹೇಗೆ ಭೂಷಣವೋ ಮಾನಸಿಕ ಧೈರ್ಯದಲ್ಲಿಯೂ ಹಾಗೆಯೆ ಭೂಷಣ. ಯಾವನಾದರೊಬ್ಬನು ವಿಷಯಗಳಿಂದ ವಿಮುಖನಾಗಬೇಕೆಂದು ಪ್ರಯತ್ನಿಸುತ್ತಲೆ ಜಯವನ್ನು ಪಡೆದರೆ ಅವನಿಗೆ ಅದರ ಮಹತ್ತ್ವವೇ ತಿಳಿಯುವದಿಲ್ಲ. ಅದು ಎಷ್ಟೊ ಸಲ ಕಷ್ಟವೆನಿಸಿ, ಎಷ್ಟೋ ಸಲ ಅಪಜಯವಾದರೆ ಆಗ ಜಯದ ಬೆಲೆ ತಿಳಿಯುವದು. ಕೊನೆಗೆ ಜಯವಾಗದಿದ್ದರೂ ಕೂಡ ಜಯವು ಅಷ್ಟು ಹೆಚ್ಚಿನ ಬೆಲೆಯದೆಂದು ವ್ಯಕ್ತವಾಗುವದು. ಆದ್ದರಿಂದ ಧೈರ್ಯವೆಂಬ ಆತ್ಮಶಕ್ತಿಯನ್ನು ಮೈಗೂಡಿಸಿಕೊಳ್ಳಬೇಕೆನ್ನುವವರು ಸೋಲುಗಳಿಗೆ ಅಳುಕಬಾರದು.

# ಉದ್ಯೋಗ

ಮನುಷ್ಯನಲ್ಲಿ ಧೈರ್ಯವೆಂಬ ಆತ್ಮಶಕ್ತಿಯೊಂದು ಅಳವಟ್ಟರೆ ಅದು ಉಳಿದ ಗುಣಗಳನ್ನೆಲ್ಲ ತನ್ನ ನಿಯಮನಕ್ಕೊಳಪಡಿಸಿಕೊಂಡು ಅವುಗಳ ಮೇಲೆಲ್ಲ ತನ್ನ ಸರ್ವಾಧಿಕಾರವನ್ನು ಸಾಧಿಸಿ ಅವುಗಳ ಬೆಳಕನ್ನು ಬೀಳಿಸುವದು. ಆದರೂ ಅವುಗಳಲ್ಲಿ ಉದ್ಯೋಗದ ವಿಚಾರಕ್ಕೆ ಹೆಚ್ಚು ಲಕ್ಷ್ಯವನ್ನು ಕೊಡತಕ್ಕದ್ದು ಅಗತ್ಯವಾಗಿರುವದು. ಉದ್ಯೋಗವೆಂದರೆ ಯಾವಾಗಲೂ

ಕೆಲಸದಲ್ಲಿ ತೊಡಗಿರುವಿಕೆ. ಮನುಷ್ಯನಿಗೆ ಐದು ಜ್ಞಾನೇಂದ್ರಿಯಗಳಿರು ವಂತೆ ಐದು ಕರ್ಮೇಂದ್ರಿಯಗಳೂ ಇರುವವರಿಂದ ಜ್ಞಾನಕ್ಕೆ ಹೇಗೋ ಹಾಗೆ ಮನುಷ್ಯನು ಕರ್ಮಕ್ಕೂ ಪ್ರಾಶಸ್ತ್ಯವನ್ನು ಕೊಡಲೇಬೇಕು. ಮನು ಷ್ಯನು ಹೊಟ್ಟೆಗಾಗಿ ಉದ್ಯೋಗವನ್ನು ಮಾಡಬೇಕಾಗುವದೆಂಬುದಂತು ಸರಿಯಷ್ಟೆ? ಭಾಗ್ಯಶಾಲಿಯಾಗಿ ಹುಟ್ಟಿರುವವನು ಕೂಡ—ಹೊಟ್ಟೆಗಾಗಿ ದುಡಿಯಬೇಕಾದ್ದಿಲ್ಲದಿದ್ದರೂ—ಬದುಕಿರುವದಕ್ಕಾದರೂ ಅವನು ಏನಾ ದರೂ ಕರ್ಮವನ್ನು ಮಾಡಬೇಕಾಗುವದು. ಉಪಯೋಗಿಸದೆ ಗಾಳಿಗೆ ಬಿಸುಟಿರುವ ಕಬ್ಬಿಣವು ತುಕ್ಕು ಹಿಡಿದು ಕೆಡುವಂತೆ ಉಪಯೋಗಿಸದೆ ದೇಹಕ್ಕೆ ಭಾರಮಾತ್ರವಾಗಿರುವ ಕರ್ಮೇಂದ್ರಿಯಗಳು ತಮ್ಮ ಸಾಮರ್ಥ್ಯ ವನ್ನು ಕಳೆದುಕೊಂಡು ಸಜೀವಶವಗಳಾಗುವವು. ಒಬ್ಬ ಒಳ್ಳೆ ಸೋಮಾ ರಿಯು ಸ್ವಾಮಿ ವಿವೇಕಾನಂದರ ಬಳಿಗೆ ಬಂದು ತನಗೆ ಉದ್ಧಾರಕ್ಕೆ ದಾರಿ ಯನ್ನು ತೋರಿಸಿರೆಂದು ಕೇಳಿದಾಗ ಅವನು ನಿರುದ್ಯೋಗಿಯಾಗಿರುವದನ್ನು ತಿಳಿದು ಕಳ್ಳತನವನ್ನಾದರೂ ಕಲಿತುಕೊಂಡು ಬಂದಮೇಲೆ ಉದ್ಧಾರದ ಮಾರ್ಗವನ್ನು ಹುಡುಕಿ ಹೇಳುತ್ತೇನೆಂದು ಸ್ವಾಮಿಗಳು ಹೇಳಿದರಂತೆ. ಕಳ್ಳತನವು ಮಾಡತಕ್ಕದ್ದಲ್ಲ ನಿಜ; ಆದರೆ ಯಾವ ಕೆಲಸವನ್ನೂ ಮಾಡದೆ ಸುಮ್ಮನೆ ಕೈಮುದುರಿಕೊಂಡು ಕೂಡುವದಕ್ಕಿಂತ ಕೆಟ್ಟ ಕೆಲಸವನ್ನಾದರೂ ಮಾಡುವದುತ್ತಮವೆಂದು ಹೇಳಬೇಕಾಗುತ್ತದೆ. ಏಕೆಂದರೆ: ಯಾವ ಕೆಲಸವನ್ನೂ ಮಾಡದೆ ಕುಳಿತರೆ ಶರೀರವು ಇದ್ದಲ್ಲಿಯೇ ಗೆದ್ದಲು ತಿಂದು ಹೋಗುವದು. ಧರ್ಮದ ಸಾಧನಗಳಲ್ಲಿ ಶರೀರವು ಮೊದಲನೆಯದು. ಶರೀರವಿಲ್ಲದೆ ಯಾವ ಧರ್ಮವನ್ನು ಮಾಡುವದಕ್ಕೂ ಆಗುವದಿಲ್ಲ. ಧರ್ಮವಿಲ್ಲದೆ ಮನುಷ್ಯನ ಉದ್ಧಾರವಿಲ್ಲ. ಹೀಗೆ ಶರೀರವೇ ಮುಕ್ತಿಗೆ ಸಾಧನ. ಇಂಥ ಶರೀರವನ್ನು ಕೈಗೆ ಬಂದ ತುತ್ತು ಬಾಯಿಗಿಲ್ಲದಂತೆ ಮಾಡಿ ಕೊಳ್ಳುವದೇನು ಜಾಣತನ? ಶರೀರವು ಸಜೀವವಾಗಿರಬೇಕಾದರೆ—ಕಳ್ಳತನ ವಾದರೂ ಚಿಂತೆ ಇಲ್ಲ—ಏನಾದರೂ ಉದ್ಯೋಗವಿರಬೇಕು. ನರಕದ ದಾರಿಯನ್ನೂ ಸ್ವರ್ಗದ ದಾರಿಯನ್ನೂ ಹಿಡಿಯುವದೆಂಬದು ಶರೀರವು ಸಜೀವವಾಗಿದ್ದಮೇಲಿನ ಮಾತು. ಆದ್ದರಿಂದ ಪ್ರತಿಯೊಬ್ಬನೂ ಉದ್ಯೋಗಿ ಯಾಗಿರಬೇಕಾದದ್ದು ಗತ್ಯ.

ಮನುಷ್ಯನ ಸ್ಥಿತಿಯು ಅವನ ಉದ್ಯೋಗವನ್ನವಲಂಬಿಸಿರುವದು. ಒಬ್ಬನು ತಾನು ಯಾವ ಕೆಲಸವನ್ನೂ ಮಾಡುವದಿಲ್ಲವೆಂದು ತಿಳಿದು ಕೊಂಡಿದ್ದರೂ ಏನಾದರೂ ವ್ಯರ್ಥವಾದ ಚೇಷ್ಟೆಗಳನ್ನಾದರೂ ಮಾಡು ತ್ತಿರುತ್ತಾನೆ. ಕೊನೆಗೆ ತಿನ್ನುವದು, ಕುಡಿಯುವದು, ಉಸಿರಾಡುವದು-ಈ ಬಗೆಯ ಕ್ರಿಯೆಗಳಾದರೂ ತಪ್ಪಿದ್ದೇ ಅಲ್ಲ. ಯಾವ ಕೆಲಸವನ್ನೂ ಮಾಡದೆ ಯಾವನೂ ಒಂದು ಕ್ಷಣವೂ ಇರುವದಕ್ಕಾಗುವದಿಲ್ಲ. ಉದ್ಯೋಗವನ್ನು ಮಾಡದೆ ಹೊಟ್ಟೆಯ ಪಾಡಂತು ಸಾಗುವದೆ ಇಲ್ಲ. ಧನಿಕನಾದರೂ ಹೊಟ್ಟೆಗಾಗಿ ದುಡಿಯಬೇಕಾದ್ದಿಲ್ಲವಾದರೂ ತಿಂದವನ್ನವು ಜೀರ್ಣಿಸುವ ದಕ್ಕಾಗಿ ವ್ಯಾಯಾಮವನ್ನಾದರೂ ಮಾಡಬೇಕಾಗುವದು. ಮನುಷ್ಯನು ಎಂಥ ಧೀರತೆಯನ್ನು ಪಡೆದಿದ್ದರೂ ಉದ್ಯೋಗದ ಹೊರತು ಅದಕ್ಕೆ ಪ್ರಕಾಶವಿಲ್ಲ. ಧೀರತೆಯು ಸುವರ್ಣಪುಷ್ಪದಂತೆ; ಉದ್ಯೋಗವು ಅದರ ಸುವಾಸನೆಯಂತೆ. ವಾಸನೆಯು ಮುಂದಾದ ಹೊರತು ಹೂ ಯಾರ ಮನಸ್ಸನ್ನೂ ಆಕರ್ಷಿಸುವದಿಲ್ಲ. ಉದ್ಯೋಗವು ಮುಂದಾದ ಹೊರತು ಧೀರತೆಯು ಯಾರ ಮನಸ್ಸನ್ನೂ ಆಕರ್ಷಿಸುವದಿಲ್ಲ. ಉದ್ಯೋಗವಿಲ್ಲದೆ ಎಷ್ಟು ಧೀರತೆಯಿದ್ದೇನು ಪ್ರಯೋಜನ?

ಕಂ|| ಬರಿಶಕ್ತಿಯಿಂದೆ ಫಲಮೇಂ ? |
ಮೊರೆವೆದ್ದುದ್ಯೋಗಗೆಯ್ಯದಿರೆ ಫಲಿಸದು ತಾಂ ||
ಗೊರಕೆಯ ಹೊಡೆಯುತ್ತಿಹ ಕೇ |
ಸರಿಯಾಸ್ಯಕೆ ಬಂದು ತಾವೆ ಬೀಳ್ವವೆ ಮೃಗಗಳ್ ? ||

ಅಥವಾ ಗುರು ಕೊಟ್ಟ ಜೋಳಿಗೆಯೊಂದು ಗೂಟಕ್ಕೆ ತಗಲುಹಾಕಿದರೆ ಹೊಟ್ಟೆ ತುಂಬುವದೆ? ಆದರೆ ಇಲ್ಲಿ ಇನ್ನೊಂದು ವಿಷಯನ್ನು ಸೂಚಿಸ ತಕ್ಕದ್ದಿದೆ. ಅದೇನೆಂದರೆ:

"ಯಾರು ಯಾವಾಗಲೂ ತನ್ನನ್ನು ಅನನ್ಯಭಕ್ತಿಯಿಂದ ಭಜಿಸು ವರೊ ಅಂಥವರ ಯೋಗಕ್ಷೇಮವನ್ನು ಪರಮಾತ್ಮನು ವಹಿಸುವನೆಂದಮೇಲೆ ನಾವು ಹೊಟ್ಟೆಗಾಗಿ ಏಕೆ ಚಿಂತಿಸಬೇಕು? ನಾವು ಅವನ ಭಜನೆಯಲ್ಲಿದ್ದರಾಯಿತು." ಎಂದು ಯಾರಾದರೂ ಹೇಳಬಹುದು. ಇದು ಸಯುಕ್ತಿಕ ವಾದ ಮಾತೇ ಸರಿ; ಆದರೆ ಇದರ ಆಚರಣೆಯು ಮಾತ್ರ ಕಠಿನ. ಯಾರಿ

ಗಾದರೂ ಯಾವಾಗಲೂ ಅನನ್ಯಭಕ್ತಿಯಿಂದ ಪರಮಾತ್ಮನನ್ನು ಭಜಿಸು ವದಕ್ಕೆ ಬರುತ್ತಿದ್ದರೆ ಅವರು ಉದ್ಯೋಗವನ್ನು ಬಿಟ್ಟು ಅದರಲ್ಲಿಯೇ ಇರ ಬಹುದು; ಅವರ ಮುಂದೆ ನಮ್ಮ ನಾಲಿಗೆಯನ್ನೆತ್ತಲಾರೆವು. ಅವರಿಗೆ ನಮ್ಮ ಸಹಸ್ರಾರು ಪ್ರಣಾಮಗಳು. ಅವರ ಯೋಗಕ್ಷೇಮದ ಭಾರವನ್ನು ಪರಮಾತ್ಮನು ವಹಿಸದೆ ಇರುವದಕ್ಕೆ ಶಕ್ಯವೆ ಇಲ್ಲ. ಸಾಮಾನ್ಯವಾಗಿ ಈ ಯೋಗ್ಯತೆಯುಂಟಾಗುವದೆ ಕಡಿಮೆ. ಆದ್ದರಿಂದ ಸಾಮಾನ್ಯರು ಕೂಡ ತಾವು ಭಕ್ತರೆಂಬ ಭಾರವಾದ ಬಿರುದಿನ ಬಿಲ್ಲೆಯನ್ನು ಮೈಮೇಲೆ ಹಾಕಿ ಕೊಂಡು ಉದ್ಯೋಗವನ್ನು ಉಪೇಕ್ಷೆಮಾಡುವವರಾಗಬಾರದೆಂಬದಕ್ಕಾಗಿ ಉದ್ಯೋಗಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಹೇಳಬೇಕಾಗಿರುವದು. ಅಥವಾ ನಾವು ಹೇಳಬೇಕಾಗಿರುವದೇನು? ಭಗವಂತನನ್ನು ಅನನ್ಯಭಕ್ತಿಯಿಂದ ಭಜಿಸುವದೂ ಒಂದು ಉದ್ಯೋಗವೆ. ಆದ್ದರಿಂದ ಮನುಷ್ಯನ ಸ್ಥಿತಿಯು ಉದ್ಯೋಗವನ್ನವಲಂಬಿಸಿರುವದೆಂಬ ಮಾತಿಗೇನೂ ಎರಡಿಲ್ಲ. ಉದ್ಯೋ ಗದ ಕಲ್ಪನೆಯನ್ನು ಕೂಡ ತಂದುಕೊಳ್ಳದೆ ಭಗವಂತನ ಮೇಲೆ ಅನನ್ಯ ಭಕ್ತಿಯನ್ನು ಮಾಡಿದರೆ ಒಳ್ಳೇದೆ ಆಯಿತು. ಬರೀ ಸ್ಥೂಲದೃಷ್ಟಿಯಿಂದ ಉದ್ಯೋಗವನ್ನು ಬಿಟ್ಟು ಕುಳಿತುಕೊಳ್ಳುವದರಲ್ಲೇನರ್ಥವಿದೆ? ಹೊರಗೆ ಕರ್ಮೇಂದ್ರಿಯಗಳನ್ನು ಬಿಗಿಹಿಡಿದು ಮನಸ್ಸಿನಲ್ಲಿಯೇ ವಿಷಯಗಳನ್ನು ಸ್ಮರಣೆ ಮಾಡುವವನು ಡಾಂಭಿಕನೆನಿಸಿಕೊಳ್ಳುತ್ತಾನೆ. ಮೈಗಳ್ಳತನವು ಅದನ್ನುಳ್ಳ ಮನುಷ್ಯನಿಗೆಷ್ಟರ ಅವಮಾನಕರವೊ ಅವನಿರುವ ಜನಾಂಗಕ್ಕೂ ಅಷ್ಟೇ ಅವಮಾನಕರವು. ಸೋಮಾರಿತನವೆಂಬುದು ಒಂದು ರೋಗವೆ ಸರಿ. ನೀರು ಹರಿಯದೆ ನಿಂತಿರುವ ಕುಂಟೆಯಲ್ಲಿ ಹುಳುಗಳು ಹೆಚ್ಚುವಂತೆ ಸೋಮಾರಿಯಾದ ಮನುಷ್ಯನಲ್ಲಿ ಕೆಡುಕಿನ ಮತ್ತು ನೀಚವಾದ ಆಲೋಚನೆ ಗಳುಂಟಾಗುವವು. ಅವನ ಆತ್ಮವು ಅಪವಿತ್ರವಾಗುವದು. ಅವನ ಬಾಳು ಜನಾಂಗಕ್ಕೊಂದು ನೆಗ್ಗಿಲಮುಳ್ಳಿಗಿಡ. ಈ ಅಭಿಪ್ರಾಯವನ್ನು ನೀತಿಶಾಸ್ತ್ರಕಾರರೂ ಹೇಳಿರುವರು.

ಕಂ|| ಆಲಸ್ಯಮೆಂಬ ದೃಢತರ ।
ಜಾಲದ ತೊಡರಲ್ಲಿ ಸಿಕ್ಕಿ ನಿಶ್ಚೇಷ್ಟತೆಯಂ ||

ಪಾಲಿಪ ಮನುಜರ್ ತಮಗುಂ ।
ಮೇಲೆನಿಸಿದ ತನ್ನ ಕುಲಕಮುಮರಿಪರಳಿವಂ ॥"

—ನೀತಿಮಂಜರಿ

ಸೋಮಾರಿಯಾದವನು ಎಂದಿಗೂ ಭಾಗ್ಯವಂತನಾಗುವದೂ ಇಲ್ಲ; ಸುಖಿಯಾಗುವದೂ ಇಲ್ಲ. ಆದ್ದರಿಂದ ಆತ್ಮಹಿತಕ್ಕಾಗಿಯೂ ಜನಾಂಗದ ಹಿತಕ್ಕಾಗಿಯೂ ಪ್ರತಿಯೊಬ್ಬನೂ ಉದ್ಯೋಗಿಯಾಗಲೇಬೇಕು.

ಉದ್ಯೋಗಿಯಾಗುವದೆಂದರೆ ಬೀಸುವ ದೊಣ್ಣೆಗೆ ತಲೆ ತಪ್ಪಿಸಿಕೊಳ್ಳುವ ಮಟ್ಟಿಗೆ ಸಾಲದು; ಉದ್ಯೋಗವು ತ್ರಿಕರಣಶುದ್ಧಿಯಾಗಿ ನಡೆಯಬೇಕು. ಉದ್ಯೋಗದಲ್ಲಿ ತನ್ಮಯವೃತ್ತಿಯಾಗಬೇಕು; ಉದ್ಯೋಗವೇ ತನ್ನ ಸರ್ವಸ್ವವಾಗಬೇಕು. ಈ ಉದ್ಯೋಗವೇ ಉದ್ಯೋಗ. ಲೋಕದಲ್ಲಿ ಬಹುಮಟ್ಟಿಗೆ ಪ್ರತಿಯೊಬ್ಬನೂ ಏನಾದರೊಂದೊಂದುದ್ಯೋಗವನ್ನು ನಡೆಸುತ್ತಲೆ ಇರುವನು. ಆದರೂ ಅವರಲ್ಲಿ ಯಶಸ್ಸನ್ನು ಪಡೆದವರು ಬಹು ಕಡಿಮೆ. ಉದ್ಯೋಗದಲ್ಲಿ ಅವರಿಗೆ ತ್ರಿಕರಣಶುದ್ಧಿ ಇಲ್ಲದಿರುವದೆ—ತನ್ಮಯವೃತ್ತಿಯಾಗದಿರುವದೇ—ಅದು ತನ್ನ ಸರ್ವಸ್ವವೆಂಬ ಭಾವನೆ ಬಾರದೆ ಇರುವದೆ—ಅವಕ್ಕೆ ಕಾರಣ. ತನ್ಮಯವೃತ್ತಿಯಾಗಿ ಮಾಡಿದ ಕಾರ್ಯವು ಸಾರ್ಥಕವಾಗದೆ ಇರುವದಕ್ಕೆ ಕಾರಣವೇ ಇಲ್ಲ. ಉದ್ಯೋಗದಲ್ಲಿ ತನ್ಮಯತೆಯುಂಟಾಗುವದು ಕೇವಲ ಪ್ರಾಪಂಚಿಕಸುಖಕ್ಕೆ ಮಾತ್ರ ಸಾಧನವಾಗುವದೆಂದು ಕೆಲವರು ತಿಳಿದುಕೊಂಡಿರುವರು. ಪ್ರಪಂಚವನ್ನು ಬಿಟ್ಟು ಪರಮಾರ್ಥವಿಲ್ಲ. ಪ್ರಪಂಚವು ಪರಮಾರ್ಥದ ಹಾದಿ. ಪ್ರಪಂಚದಲ್ಲಿ ಯಶಸ್ಸನ್ನು ತಂದು ಕೊಟ್ಟದ್ದು ಪರಮಾರ್ಥದಲ್ಲಿಯೂ ಫಲಕಾರಿಯಾಗಲೆ ಬೇಕು. ಇದು ಬರೀ ಗಾಳಿಯುಗಂಟಿನ ಮಾತಲ್ಲ. ಇದಕ್ಕೆ ಪ್ರತ್ಯಕ್ಷವಾದ ಉದಾಹರಣೆಯುಂಟು. ಮುಮುಕ್ಷುಗಳಾಗಿದ್ದ ಏಕನಾಥರು ದೇವಗಡದ ಯವನರಾಜನ ಪಂತಪ್ರಧಾನರಾಗಿದ್ದ ಜನಾರ್ದನಪಂತರಲ್ಲಿ ಗುರುಕುಲವಾಸಮಾಡಿಕೊಂಡಿದ್ದರು. ಮುಮುಕ್ಷುವಾಗಿ ಬಂದವನಿಗೆ ಗುರುಗಳು ಪರಮಾರ್ಥದ ಸಂಬಂಧವಾದ ಉದ್ಯೋಗದಲ್ಲಿ ತೊಡಗಿಸುವರೆಂದು ಎಲ್ಲರಿಗೂ ನಿರೀಕ್ಷಣೆ ಇರುವದಷ್ಟೆ. ಜನಾರ್ದನಪಂತರು ಏಕನಾಥನಿಗೆ ಕೊಟ್ಟ

ಕೆಲಸಗಳೆಲ್ಲ ಕೇವಲ ಪ್ರಾಪಂಚಿಕಗಳೆ ಆಗಿದ್ದವು. ಎಂಥ ಪ್ರಾಪಂಚಿಕಗಳು! ಯುದ್ಧಕಲೆಯಲ್ಲಿ ಕೂಡ ಅನ್ಯಾದೃಶವಾದ ಪರಿಚಯ. ಇರಲಿ. ಒಮ್ಮೆ ಅವರು ಒಂದು ಸಾಯಂಕಾಲ ಏಕನಾಥರ ಕೈಗೆ ತಮ್ಮ ಸಂಸ್ಥಾನದ ಸಂಬಂಧವಾದ ಒಂದು ದೊಡ್ಡ ಲೆಕ್ಕವನ್ನು ಕೊಟ್ಟು ಬೆಳಕು ಹರಿಯುವದರೊಳಗೆ ಅದನ್ನು ಸಂಕ್ಷಿಪ್ತರೂಪಕ್ಕೆ ಇಳಿಸಬೇಕೆಂದು ಹೇಳಿದರು. ಏಕನಾಥರು ಇತರ ಕೆಲಸಗಳನ್ನೆಲ್ಲ ಮುಗಿಸಿಕೊಂಡು ರಾತ್ರಿ ಸುಮಾರು ಹನ್ನೊಂದು ಹೊಡೆಯುವ ಹೊತ್ತಿಗೆ ಲೆಕ್ಕಕ್ಕೆ ಕೂತರು. ಅವರು ಒಳ್ಳೆ ತೀವ್ರಬುದ್ಧಿಯವರಾಗಿದ್ದದ್ದರಿಂದ ಲೆಕ್ಕವೆಲ್ಲ ಅರ್ಧ ತಾಸಿನಲ್ಲಿ ಮುಗಿಯಿತು; ಆದರೆ ಆಯವ್ಯಯಗಳ ಮೊತ್ತದಲ್ಲಿ ಒಂದು ದುಡ್ಡಿನ ವ್ಯತ್ಯಾಸ ಬಂತು. ಅದಕ್ಕಾಗಿ ಅವರು ಕಣ್ಣಲ್ಲಿ ಕಣ್ಣಿಟ್ಟು ಎಷ್ಟೆಷ್ಟೋ ಸಲ ಕೂಡಿ ಕಳೆದರು. ಏನಾದರೂ ಆ ತಪ್ಪು ಹೊರಬೀಳಲಿಲ್ಲ. ಏನು ಮಾಡಿದರೂ ಲೆಕ್ಕವು ಬಾಯಿಗೂಡದೆ ಹೋದದ್ದರಿಂದ ಅವರು ಮುಂದು ಗಾಣದೆ ಕಣ್ಣೀರಿಡುವದಕ್ಕೆ ಮೊದಲು ಮಾಡಿದರು. ಈ ತಳಮಳದಲ್ಲಿ ದಿಕ್ಕುಗಾಣದೆ ಕುಳಿತಿರುವಾಗ ರಾತ್ರಿ ಮೂರು ಹೊಡೆದದ್ದೂ ಆಯಿತು. ದೂರದ ಕೋಣೆಯಲ್ಲಿ ನಿದ್ರೆಯಲ್ಲಿದ್ದ ಪಂತರು ಕಾರಣಾಂತರದಿಂದ ಕಣ್ಣು ಬಿಟ್ಟು ದೀಪವು ಉರಿಯುತ್ತಿರುವದನ್ನೂ ಏಕನಾಥರು ಕುಳಿತಿರುವದನ್ನೂ ನೋಡಿ ಈ ಜಾಗರಕ್ಕೇನು ಕಾರಣವೆಂಬುದನ್ನು ತಿಳಿಯಲು ಮೆಲ್ಲಗೆ ಹಿಂದಿನಿಂದ ಅಲ್ಲಿಗೆ ಬಂದು ನಿಂತರು. ಏಕನಾಥರ ಸರ್ವೇಂದ್ರಿಯಗಳೂ ಮನಸ್ಸೂ ಕೂಡ ಲೆಕ್ಕದಲ್ಲಿ ಮುಳುಗಿ ನೆಲಾಕಚ್ಚಿದ್ದದ್ದರಿಂದ ಅವರಿಗೆ ಪಂತರು ಬಂದ ಜ್ಞಾನವಾಗುವದಕ್ಕೆ ದಾರಿಯೆ ಇರಲಿಲ್ಲ. ಹೀಗಿರುವಾಗ ಒಮ್ಮೆಗೇ ಆ ತಪ್ಪು ಹೊರಬೀಳಲು ಏಕನಾಥರು ಅತ್ಯಂತ ಹಸನ್ಮುಖರಾಗಿ ಚಪ್ಪಾಳೆಯನ್ನು ಹೊಡೆದು ಕೇಕೆಯನ್ನು ಹಾಕಿದರು. ಪಂತರು ಮುಂದೆ ಬಂದು ಅದರ ಕಾರಣವನ್ನು ಕೇಳಿದಾಗ ಏಕನಾಥರು ನಡೆದ ಸಂಗತಿಯನ್ನು ಹೇಳಿ ನಾಚಿಕೊಂಡರು. ಆದರೂ ಆ ತನ್ಮಯವೃತ್ತಿಗೆ ಸಂತುಷ್ಟರಾದ ಪಂತರು ಇದೇ ತನ್ಮಯತೆಯೆ ಪರಮಾತ್ಮಸಾಕ್ಷಾತ್ಕಾರವನ್ನು ತಂದುಕೊಡುವದೆಂದು ಹೇಳಿ ಅವರ ಭುಜವನ್ನು ಚಪ್ಪರಿಸಿ ಆಗಲೆ ಅವರ ಮೇಲೆ ಪೂರ್ಣಾನುಗ್ರಹವನ್ನು ಮಾಡಿದರಂತೆ. ಆದ್ದರಿಂದ ಹಿಡಿದ ಉದ್ಯೋ

ಗವನ್ನು ಮನಃಪೂರ್ವಕವಾಗಿಯೇ ಮಾಡುವ ಅಭ್ಯಾಸವನ್ನಿಡುವದು ಶ್ರೇಯಸ್ಕರವು.

ಉದ್ಯೋಗಿಯಾದ ಮನುಷ್ಯನನ್ನು ಸರ್ವಸಂಪತ್ತುಗಳೂ ತಾವೆ ಹುಡುಕಿಕೊಂಡು ಬರುವವು. ಉದ್ಯೋಗದ ಬೆಂಬಲವೊಂದಿದ್ದರೆ ಆ ಮನುಷ್ಯನಿಗೆ ಅಸಾಧ್ಯವಾದದ್ದು ಯಾವದೂ ಇಲ್ಲ. ರಣಜಿತಸಿಂಗನು ಒಮ್ಮೆ ಬಿಯಾಸ್ ನದಿಯ ಬಳಿಯಲ್ಲಿ ತನ್ನ ದಂಡನ್ನೆಲ್ಲ ಕಳೆದುಕೊಂಡು ನಿರ್ವಿಣ್ಣನಾಗಿದ್ದನು. ಹೀಗಿರುವಾಗಲೆ ಕಾಬೂಲಿನಿಂದ ಶಹಾಝುಮಾರ ನೆಂಬುವನು ದಂಡೆತ್ತಿಬಂದು ರಣಜಿತನ ಲಾಹೋರನ್ನೂ ಹಿಡಿದುಕೊಂಡು ತನ್ನ ಬೆಳಕನ್ನು ಕೆಡಹುವದಕ್ಕೆ ಮೊದಲುಮಾಡಿದನು. ಇಷ್ಟರಲ್ಲಿ ಸಹಾಝುಮಾರನು ಕಾರಣಾಂತರದಿಂದ ಕಾಬೂಲಿಗೆ ಹಿಂದಿರುಗಬೇಕಾಗಿ ಬಂತು. ಆ ಪ್ರಯಾಣದಲ್ಲಿ ಅವನ ಹನ್ನೆರಡು ತೋಫುಗಳು ಜೀಲಂ ನದಿಯಲ್ಲಿ ಕೃಷ್ಣಾರ್ಪಣವಾದವು. ಇದರಿಂದ ಅತ್ಯಂತ ಖಿನ್ನನಾದ ಶಹಾಝುಮಾರನು ಆ ತೋಫುಗಳನ್ನು ತೆಗೆದುಕೊಟ್ಟರೆ ಲಾಹೋರನ್ನು ತಿರುಗಿ ಕೊಡುತ್ತೇನೆಂದು ರಣಜಿತನಿಗೆ ಹೇಳಿಕಳುಹಿಸಿದನು. ಈ ಸಮಯ ವನ್ನು ಬಿಡಬಾರದೆಂದು ರಣಜಿತನು ಬಹುಸಾಹಸ ಮಾಡಿ ಆ ತೋಫು ಗಳನ್ನು ತೆಗೆಸಿ ಶಹಾಝುಮಾರನಿಗೆ ಮುಟ್ಟಿಸಿ ತನ್ನ ರಾಜ್ಯವನ್ನು ತಾನು ಹಿಂದಕ್ಕೆ ಪಡೆದನು. ಈ ಉದ್ಯೋಗದಲ್ಲಿ ಅವನು ಮುಂದಾಗದಿದ್ದರೆ ರಣಜಿತನು ಹಿಂದುಸ್ಥಾನದ ಪ್ರಸಿದ್ಧಪುರುಷರಲ್ಲೊಬ್ಬನಾಗುವ ಸುಯೋ ಗವನ್ನೆ ಪಡೆಯುತ್ತಿರಲಿಲ್ಲ.

ಮಹಾರಾಷ್ಟ್ರರಾಜ್ಯಸ್ಥಾಪಕನಾದ ಶಿವಾಜಿಯೂ ಉದ್ಯೋಗ ತತ್ಪರತೆಯನ್ನು ಚೆನ್ನಾಗಿ ಪ್ರಕಾಶನಮಾಡಿರುವನು. ಅವನ ಜೀವಿತಕಾಲ ದಲ್ಲಿ ಒಂದೆರಡು ವರ್ಷಗಳು ಅವನ ವಿರಾಮಕಾಲಗಳಂತೆ ಕಾಣುತ್ತಿದ್ದವು. ಆಗ ಅವನು ಎಲ್ಲಿಗೂ ದಂಡೆತ್ತಿಹೋಗದೆ ತಟಸ್ಥನಾಗಿದ್ದದ್ದನ್ನು ನೋಡಿ ಕೆಲವರು ಅವನಿಗೆ ಇದ್ದದ್ದೆ ಸಾಕೆನ್ನಿಸಿರುವದೆಂದರು. ಮತ್ತೆ ಕೆಲವರು ಮೊಗಲರ ಮೇಲೆ ತನ್ನ ಕೈ ಹಾಯದೆ ಹೋದದ್ದರಿಂದ ಸುಮ್ಮನಿರುವ ನೆಂದರು. ಯಾರು ಏನು ಹೇಳಿದರೂ ಶಿವಾಜಿಯು ಮಾತ್ರ ಒಂದುಗಳಿ ಗೆಯೂ ಸುಮ್ಮನೆ ಇರುತ್ತಿರಲಿಲ್ಲ. ಆ ಎರಡು ವರ್ಷಗಳಲ್ಲಿ ಅವನು

ಹೊರಗೆ ದಂಡಯಾತ್ರೆಗೆ ಹೊರಡದಿದ್ದರೂ ರಾಜ್ಯದಲ್ಲಿ ಉತ್ತಮವಾದ ವ್ಯವಸ್ಥೆಯನ್ನು ನೆಲೆಗೊಳಿಸುವದರಲ್ಲಿ ತನ್ನ ಸರ್ವಸಾಹಸವನ್ನೂ ಮಾಡು ತ್ತಿದ್ದನು. ಇದು ಕರ್ಮಭೂಮಿಯೆಂದೂ ಜನರೆಲ್ಲರೂ ಕರ್ಮವನ್ನು ಮಾಡುವದಕ್ಕಾಗಿಯೆ ಇಲ್ಲಿ ಹುಟ್ಟಿರುವರೆಂದೂ ಅವನು ಅಡಿಗಡಿಗೆ ಅಡಿ ತೋರಿಸುತ್ತಿದ್ದನು. ಅವನು ಪ್ರತಿದಿನವೂ ಸಾಮಾನ್ಯವಾಗಿ ನಿದ್ರೆಮಾಡು ತ್ತಿದ್ದ ನಾಲ್ಕೈದು ತಾಸುಗಳ ಕಾಲವನ್ನು ಬಿಟ್ಟರೆ ಉಳಿದ ಕಾಲದಲ್ಲಿ ಯಾವಾಗಲೂ ಅವನು ಉದ್ಯೋಗವನ್ನು ಬಿಟ್ಟಿದ್ದವನೆ ಅಲ್ಲ. ಹೊರಗೆ ಶತ್ರುಗಳೊಡನೆ ಹೋರಾಡುವದಕ್ಕೆ ಹೊರಟನೆಂದರೆ ಹಗಲೆಲ್ಲ ಕುದುರೆಯ ಬೆನ್ನಿನ ಮೇಲೆಯೆ ಇರುತ್ತಿದ್ದನು; ಆಹಾರಕ್ಕಾಗಿ ಕೂಡ ಕೆಳಕ್ಕೆ ಇಳಿಯು ತ್ತಿರಲಿಲ್ಲ. ಗೋಸೇವೆ, ಸ್ನಾನ, ಪೂಜೆ, ಪುರಾಣಶ್ರವಣ, ಲಕ್ಷ್ಯಭೇದಾದಿ ಸಾಧನೆ, ಪರಿಜನರೊಡನೆ ಮತ್ತು ಪುರಜನರೊಡನೆ ಸಂಭಾಷಣೆ, ರಾಜ ಕಾರ್ಯದ ಆಲೋಚನೆ, ಭೋಜನ ಮತ್ತು ರಾಜಕಾರ್ಯನಿರ್ವಹಣ— ಇವೇ ಆಗಿನ ಅವನ ನಿತ್ಯಕರ್ಮಗಳಾಗಿದ್ದವು. ಈ ರೀತಿಯಲ್ಲಿ ಉದ್ಯೋಗ ನಿರತನಾಗಿರುವ ಆತ್ಮಶಕ್ತಿಯನ್ನು ಸಂಪಾದಿಸಿದ್ದರಿಂದಲೆ ಅವನಿಗೆ ಲೋಕೋತ್ತರವಾದ ಯಶಸ್ಸು ಪ್ರಾಪ್ತವಾಯಿತು.

ಉದ್ಯೋಗವನ್ನು ಮಾಡಿದ ಮೇಲೆ ಅದರ ಫಲರೂಪವಾಗಿ ಕಾರ್ಯ ಸಾಧನೆಯಾಗುವದಂತು ಸರಿಯಷ್ಟೆ. ಉದ್ಯೋಗತ್ವದ ದರ್ಶನಮಾತ್ರವೆ ಎಷ್ಟೊ ಕಾರ್ಯಗಳನ್ನು ಕೈವಶಮಾಡಿಕೊಡುವದು. ಉದ್ಯೋಗದ ಪ್ರತಿಭೆಯು ಅಷ್ಟು ಬಲವತ್ತರವಾದದ್ದು. ಒಮ್ಮೆ ದೆಹಲಿಯ ಮೊಗಲ ಸೇನೆಯು ಪೇಶ್ವೆಬಾಜೀರಾಯನ ಪೆಟ್ಟಿನಿಂದ ಹಣ್ಣಾಗಿ ಹಿಂದಕ್ಕೆ ಬಂತು. ಇದನ್ನು ನೋಡಿ ಮೊಗಲಚಕ್ರವರ್ತಿಗೆ ಆಶ್ಚರ್ಯವಾಯಿತು. ಆಗ ಅವನು ತನ್ನ ಸೇನೆಯನ್ನು ಮೂಗುಹಿಡಿಸಿ ಕಳುಹಿಸಿದಂಥ ಶೂರನ ದರ್ಶನವನ್ನು ಮಾಡಬೇಕೆಂದು ಅವನ ಭಾವಚಿತ್ರವನ್ನು ತರಹೇಳಿ ತನ್ನ ಕಡೆಯ ಪ್ರಸಿದ್ಧ ಚಿತ್ರಗಾರನನ್ನು ಕಳುಹಿಸಿದನು. ಆ ಚಿತ್ರಗಾರನು ಬರೆದು ತಂದ ಚಿತ್ರದಲ್ಲಿ ಬಾಜೀರಾಯನು ದೊಡ್ಡದೊಂದು ಕುದುರೆಯ ಮೇಲೆ ಕಾಲು ಮುದುರಿ ಕೊಂಡು ಕುಳಿತು ಕಡಿವಾಣದ ತುದಿಯನ್ನು ಹೆಗಲ ಮೇಲಕ್ಕೆಸೆದುಕೊಂಡು ಎಡಬಲದ ಹೊಲಗಳಿಂದ ಆಳುಗಳು ತಂದುಕೊಟ್ಟ ಬಲಿತ ರಾಗಿಯ ತೆನೆ

ಗಳನ್ನು ಕಯ್ಯಲ್ಲಿ ಉಜ್ಜಿ ಊದಿ ಬಾಯಲ್ಲಿ ಹಾಕಿಕೊಳ್ಳುತ್ತ ನಡುನಡುವೆ ಹಸೀ ಮೆಣಸಿನ ಕಾಯನ್ನು ಕಡಿಯುತ್ತ ಇದ್ದನು. ಭೋಗಪರವಶ ಸಾಗಿದ್ದ ಮೊಗಲಚಕ್ರವರ್ತಿಯು ಈ ಬಗೆಯ ಚಿತ್ರವನ್ನು ನೋಡಿ :ಇವ ನೊಡನೆ ಹೋರಾಡುವದು ಕಠಿನವೆಂದು ಬಗೆದು ಬಾಜೀರಾಯನಿಗೆ ತನ್ನ ಆದಾಯದ ಚತುರ್ಥಾಂಶವನ್ನೂ ದಂಡಿನ ವೆಚ್ಚವನ್ನೂ ಕೊಟ್ಟು ಸಮಾ ಧಾನಮಾಡಿಕೊಂಡನು.

ದೇವರು ತಮಗೆ ಕೊಟ್ಟಿರುವ ಕೈಕಾಲುಗಳ ಉಪಯೋಗದ ವಿಷಯ ದಲ್ಲಿ ಯಾರ ಮನಸ್ಸಾಕ್ಷಿಯು ಜಾಗರೂಕವಾಗಿರುವದೊ ಅಂಥವರು ತಮ್ಮ ಜೀವನಯಾತ್ರೆಯನ್ನು ಎಷ್ಟು ಕಷ್ಟಕಾರ್ಯಗಳಿಗಾದರೂ ಎದೆಗೊಟ್ಟು ಸ್ವತಂತ್ರರೀತಿಯಿಂದ ನಡೆಸುವರೆ ಹೊರತು ಮತ್ತೊಬ್ಬರ ದಾಕ್ಷಿಣ್ಯದಿಂದ ಬಾಳುವ ದೀನವೃತ್ತಿಯನ್ನೆಂದಿಗೂ ಸ್ವೀಕರಿಸುವದಿಲ್ಲ. ಮನುಷ್ಯನ ಬಾಳು ಎಂದಿಗೆ ದೀನವೃತ್ತಿಗಿಳಿಯುವದೊ ಅಂದೆ ಅದು ನಿರ್ಜೀವವೆನಿಸುವದು. ಒಮ್ಮೆ ಆ ನಿರ್ಜೀವಸ್ಥಿತಿಯನ್ನು ಪಡೆಯಿತೆಂದರೆ ಆಮೇಲೆ ಅದಕ್ಕೆ ಅಭ್ಯು ದಯದ ಆಸೆ ಇಲ್ಲ. ನಮ್ಮ ದೇಹವನ್ನು ದುಡಿಸದೆ, ನಮ್ಮ ಸಂಪಾದನೆ ಇಲ್ಲದೆ, ಮತ್ತೊಬ್ಬನ ಕೃಪಾಕಟಾಕ್ಷದ ಮೇಲೆ ಹೊಟ್ಟೆಯನ್ನು ಹೊರೆಯು ವದು ಬಹು ಕೆಟ್ಟ ಹೇಡಿತನ. ಇತರರಿಂದ ಅನಾಯಾಸವಾಗಿ ದೊರೆಯುವ ಸುಖಸೌಕರ್ಯಕ್ಕೆ ಮನಸ್ಸು ಮರುಳಾಗುವದು ಬಹಳ. ಇದು ಮನಸ್ಸಿನ ದೌರ್ಬಲ್ಯವನ್ನು ತೋರಿಸುವದೆ ಹೊರತು ಮತ್ತೇನೂ ಇಲ್ಲ. ಧೀರ ರಾದವರು ಈ ದೌರ್ಬಲ್ಯವನ್ನು ತಮ್ಮ ಆತ್ಮಶಕ್ತಿಯಿಂದ ನಿಗ್ರಹಿಸಿ ತಮ್ಮ ದೇಹೇಂದ್ರಿಯಗಳ ಉದ್ಯೋಗದ ಬಲದಿಂದಲೆ ತಮ್ಮನ್ನು ತಾವು ಚಿರಸ್ಥಾಯಿ ಯಾಗಿ ಮಾಡಿಕೊಳ್ಳುವರು. ಇತರರ ಅನುಗ್ರಹದಿಂದ ಬದುಕುವವನು ಸಾಯುವವರೆಗೂ ಬದುಕಿರುವವನೆನಿಸಿಕೊಂಡರೂ ಅವನು ಬದುಕಿರು ವಾಗಲೆ ಸತ್ತವನು. ತನ್ನ ಉದ್ಯೋಗಬಲದಿಂದ ಜೀವಿಸುವವನು ಸತ್ತರೂ ಕೀರ್ತಿಶರೀರದಲ್ಲಿ ಬದುಕಿರುವನು. ವೈದ್ಯನು ಕೊಡುವ ಸಂಜೀವಿನೀ ಮಾತ್ರೆಯ ಸಾಮರ್ಥ್ಯದಿಂದ ಚೈತನ್ಯವನ್ನು ಪಡೆದಿರುವ ರೋಗಿಯನ್ನು ಬದುಕಿರುವವರಲ್ಲಿ ಯಾರು ಗಣಿಸುತ್ತಾರೆ? ತಮ್ಮಲ್ಲಿ ಸ್ವಭಾವವಾಗಿರುವ ಚೈತನ್ಯದ ಸುಸ್ಥಿತಿಯುಳ್ಳವರೆ ಬದುಕಿರುವವರು.

ಸ್ವಭಾವವಾಗಿ ಪ್ರತಾಪವುಳ್ಳ ಪ್ರತಾಪಸಿಂಹನು ಮಹಾಪ್ರಬಲಶತ್ರುವಾದ ಅಕ್ಬರನೊಡನೆ ಯುದ್ಧವನ್ನು ಹೂಡಿದ್ದ ಕಾಲವಲ್ಲಿ ಪ್ರತಾಪನಿಗೆ ಸೋಲಿನ ಮೇಲೆ ಸೋಲುಗಳೆ ಆದವು. ಆದರೆ ಅಕ್ಬರನ ಮೈತ್ರಿತ್ವಕ್ಕೆ ಕೊನೆಗೆ ಅರ್ಧಾಂಗೀಕಾರವನ್ನು ತೋರಿಸಿದ್ದರೂ ಪ್ರಾಪಂಚಿಕಸುಖಾನುಭವದಲ್ಲಿ ಪ್ರತಾಪನು ಉಳಿದ ರಾಜಪುತ್ರರನ್ನೆಲ್ಲ ಮರೆಸುವಷ್ಟು ಮುಂದೆ ಬರುತ್ತಿದ್ದನು. ಹೀಗಿದ್ದರೂ ಅಕ್ಬರನ ಕೃಪಾಕಟಾಕ್ಷದ ಕಡೆಗೆ ನೋಡುವದು ಪ್ರತಾಪನಿಗೆ ಒಗ್ಗಲಿಲ್ಲ. ಹುಟ್ಟಿದ ಮನುಷ್ಯನೆಂದಿದ್ದರೂ ಸಾಯಬೇಕು. ಬದುಕುವದಾದರೆ ಭಗವಂತನ ಕಟಾಕ್ಷದಿಂದ ಬದುಕುವದುತ್ತಮ. ತನ್ನಂಥ ಅಥವಾ ತನಗಿಂತಲೂ ಕೀಳಾದಂಥ ಮನುಷ್ಯಮಾತ್ರದವರ ಅನುಗ್ರಹದಿಂದ ಎಡಗಯ್ಯಲ್ಲಿ ಜೀವವನ್ನು ಹಿಡಿದುಕೊಂಡಿರುವದು ಮಾತ್ರ ಅನುಚಿತ. ಪ್ರತಾಪನು ಅಕ್ಬರನ ಅನುಗ್ರಹಕ್ಕೆ ಮಹತ್ತ್ವವನ್ನು ಕೊಡದೆ ಹೋದದ್ದಿಷ್ಟೆ ಅಲ್ಲ. ಅವನ ತಮ್ಮನು ಜಾತಿಯಭಿಮಾನವನ್ನು ತೊರೆದು ಅಕ್ಬರನ ಅನ್ನದಿಂದ ಅಪವಿತ್ರನಾಗಿ ಕೊನೆಗೆ ಕಾರಣಾಂತರದಿಂದ ಅಕ್ಬರನ ಶಿಬಿರದಿಂದ ಹೊರಬಿದ್ದು ಅಣ್ಣನಿಗೆ ನೆರವಾಗಬೇಕೆಂದು ಸ್ವಸಾಮರ್ಥ್ಯದಿಂದ ಕೆಲವು ಕೋಟೆಗಳನ್ನು ಸ್ವಾಧೀನಮಾಡಿಕೊಂಡು ಬಂದು ಅವುಗಳನ್ನು ತನ್ನ ಅಣ್ಣನಿಗೆ ಅರ್ಪಣೆಮಾಡಿದನು. ಆಗಿನ ಪರಿಸ್ಥಿತಿಯನ್ನು ನೋಡಿದರೆ ಪ್ರತಾಪನಿಗೆ ಅಂಥ ಸೌಕರ್ಯದ ಅವಶ್ಯಕತೆ ಬಹಳವಾಗಿತ್ತು. ಆದರೂ ಪ್ರತಾಪನು ತಮ್ಮನ ಉಪಕಾರದ ಕಟ್ಟಿಗೆ ಬೀಳುವದಕ್ಕೆ ಕೂಡ ಮನಸ್ಸು ಮಾಡಲಿಲ್ಲ. ಸ್ವಪ್ರತಿಷ್ಠೆಯನ್ನು ಕಾಪಾಡಿಕೊಳ್ಳುವದಕ್ಕೆ ಸ್ವಸಾಮರ್ಥ್ಯದಲ್ಲಿ ಕೊರತೆಯಿದ್ದರೆ ಇತರರ ಸಹಾಯವು ಸಿಕ್ಕಿದರೆ ಸಾಕೆಂದು ಮನಸ್ಸು ಕಾತರಿಸುವದು. ತನ್ನಲ್ಲಿ ತಿರುಳಿರುವ ಮನುಷ್ಯನು ತನ್ನ ಮೇಲೆ ಉಪಕಾರವನ್ನು ಹೊರಿಸುವವರ ದಾಕ್ಷಿಣ್ಯದ ಬಲೆಗೆ ಬೀಳುವದಿಲ್ಲ.

ಗಂಗಾಧರರಾಯನು ಸತ್ತ ಮೇಲೆ ಇಂಗ್ಲೀಷರು ಝೂಂಸಿ ರಾಜ್ಯವನ್ನು ಸ್ವಾಹಾಕಾರ ಮಾಡಿದಾಗ ವಿಧವೆಯಾದ ಲಕ್ಷ್ಮೀಬಾಯಿಯು ತನ್ನ ದತ್ತಪುತ್ರನಿಗೆ ರಾಜ್ಯವನ್ನು ಬಿಡಬೇಕೆಂದು ಎಷ್ಟೋ ಹೇಳಿಕೊಂಡಳು. ದತ್ತಪುತ್ರನು ರಾಜ್ಯಕ್ಕೆ ನಿಜವಾದ ಅಧಿಕಾರಿಯಾಗಿದ್ದನು. ಇಂಗ್ಲೀಷರ ಅಧಿಕಾರಿಗಳು ಅವನ ವಿಚಾರವನ್ನು ಬಿಟ್ಟು ತಮ್ಮ ಕಾರ್ಯವನ್ನು ಸಾಧಿಸಿ

ಕೊಂಡು ಕೊನೆಗೆ ಲಕ್ಷ್ಮೀಬಾಯಿಗೆ ಮಾಸಾಶನವನ್ನು ಕೊಡುವಂತೆ ನಿಶ್ಚಯವಮಾಡಿದರು. ಲಕ್ಷ್ಮೀಬಾಯಿಯು ಬ್ರಾಹ್ಮಣಜಾತಿಯವಳಾಗಿದ್ದರೂ ದಾನವನ್ನು ಹಿಡಿಯುವ ಸ್ವಭಾವದವಳಾಗಿರಲಿಲ್ಲ. ಕ್ಷಾತ್ರತೇಜಸ್ಸಿನ ಸಮ್ಮಿಶ್ರಣದಿಂದ ಆಕೆ ತನ್ನ ಉಜ್ಜ್ವಲತೆಯನ್ನು ಕಾಪಾಡಿಕೊಳ್ಳುವದನ್ನೆ ನಿಶ್ಚಯಿಸಿ ಆ ಮಾಸಾಶನವನ್ನು ನಿರಾಕರಿಸಿಬಿಟ್ಟಳು. ಆಗ ಆಕೆ ಮಾಸಾಶನವನ್ನು ತೆಗೆದುಕೊಂಡಿದ್ದರೆ ಕೆಲವು ದಿವಸ ತನ್ನ ಹೊಟ್ಟೆಯನ್ನು ಹೊರೆಯಬಹುದಾಗಿತ್ತು. ಆ ಕಾಕಜೀವನವು ತುಚ್ಛವೆಂದೆಣಿಸಿ ಆಕೆ ಸ್ವಸಾಮರ್ಥ್ಯದ ಮೇಲೆ ಭರವಸವನ್ನಿಟ್ಟು ಮುಂದುವರಿದು ಯುದ್ಧಕ್ಕೆ ಕೈಗೊಟ್ಟದ್ದರಿಂದ ಆಕೆಯ ಶರೀರವು ಕ್ಷಿಪ್ರದಲ್ಲಿಯೇ ರಣದೇವತೆಗೆ ತುತ್ತಾಗಬೇಕಾಯಿತಾದರೂ ಆಕೆಯು ಮರಣವನ್ನೇ ಜಯಿಸಿದವಳೆನಿಸಿಕೊಂಡು ಕೀರ್ತಿಶರೀರದಿಂದ ಭಾರತಭೂದೇವಿಯ ನಂದಾದೀಪರೂಪವಾಗಿ ನೆಲೆಸಿರುವಳು.

ಸಾಮಾನ್ಯರಾದ ವ್ಯಾವಹಾರಿಕರ ಮಾತು ಹಾಗಿರಲಿ. ವ್ಯವಹಾರವನ್ನೆಲ್ಲ ತೊರೆದು ಭಕ್ತಿಮಾರ್ಗವನ್ನು ಹಿಡಿದಿದ್ದ ತುಕಾರಾಮನ ದೆಸೆಯಿಂದ ನಷ್ಟಪಟ್ಟಿದ್ದ ಒಬ್ಬನಿಗೆ ಅಪಾರಧನಪ್ರಾಪ್ತಿಯಾಯಿತು. ಆಮೇಲೆ ಅವನು ಅದನ್ನು ತುಕಾರಾಮನಿಗೇ ತಂದು ಕೊಡಲು ತಾನು ಅಂಥ ಪರಿಗ್ರಹದಿಂದ ಜೀವಿಸಲಾರೆನೆಂದು ಹೇಳಿ ತುಕಾರಾಮನು ಅದನ್ನು ಅವನಿಗೇ ಹಿಂದಕ್ಕೆ ಕೊಟ್ಟು ಆ ಹಣದಿಂದ ಒಂದು ದೇವಸ್ಥಾನದ ಜೀರ್ಣೋದ್ಧಾರವನ್ನು ಮಾಡಿ ಶ್ರೇಯಸ್ಸನ್ನು ಪಡೆಯಬಹುದೆಂದು ಹೇಳಿ ಕಳುಹಿಸಿದನು. ತಾತ್ಪರ್ಯವೇನೆಂದರೆ: ಇತರರ ಮುಂದೆ ದೀನತೆಯಿಂದ ಬದುಕುವ ಬಾಳು ಬಾಳಲ್ಲ. ಈ ನಿಯಮವನ್ನು ಈಗಿನ ಜನತೆಗೆ ಅನ್ವಯಿಸಿಕೊಂಡು ನೋಡಿ ನಾವು ಕೆಲವು ಸಂಗತಿಗಳನ್ನು ತಿಳಿದುಕೊಳ್ಳಬೇಕಾಗಿದೆ.

ಗುಣದ ಕಡೆಗೂ ಉದ್ಯೋಗದ ಕಡೆಗೂ ಲಕ್ಷ್ಯವನ್ನು ಕೊಟ್ಟು ನಾಲ್ಕು ವರ್ಣಗಳನ್ನು ಸೃಷ್ಟಿಮಾಡಿದೆನೆಂದು ಶ್ರೀ ಕೃಷ್ಣಪರಮಾತ್ಮನು ಹೇಳಿದ್ದಾನೆ. ನಾಲ್ಕುವರ್ಣಗಳೆಂಬ ಕಾಲುವೆಗಳಲ್ಲಿ ಗುಣಕರ್ಮರೂಪವಾದ ಪ್ರವಾಹಗಳು ತಮ್ಮ ತಮ್ಮ ಪಾತ್ರಗಳಲ್ಲಿಯೆ ಅನಾದಿಕಾಲದಿಂದ ಹರಿಯುತ್ತ ಬಂದು ಈಗ ಆ ಕಾಲುವೆಗಳ ದಡಗಳೆಲ್ಲ ಶಿಥಿಲವಾಗಿ ಹೋಗಿ

ನಾಲ್ಕು ಕಾಲುವೆಗಳ ಪ್ರವಾಹಗಳೂ ಎಷ್ಟೋ ಕಡೆಗಳಲ್ಲಿ ಒಂದಕ್ಕೊಂದು ಕೂಡಿಕೊಂಡು ಹರಿಯುತ್ತ ಬಂದಿವೆ. ಆದ್ದರಿಂದ ಈಗಿನ ಗುಣಕರ್ಮವ್ಯವಸ್ಥೆಯು ತನ್ನ ತನ್ನ ಪಾತ್ರದಲ್ಲಿ ಶುದ್ಧವಾಗಿ ಉಳಿದುಕೊಂಡಿಲ್ಲ. ಜನರು ಜನ್ಮದಿಂದ ಯಾವ ವರ್ಣದವರಾಗಿದ್ದರೂ ತಮ್ಮ ಮನಸ್ಸಿಗೆ ಬಂದ ವರ್ಣದ ಉದ್ಯೋಗವನ್ನು ಹಿಡಿಯುತ್ತಿದ್ದಾರೆ. ಬೇಕಾದವರು ಬೇಕಾದ ಉದ್ಯೋಗದಲ್ಲಿ ಮುಂದುವರಿಯುವ ಪದ್ಧತಿಯು ನಮ್ಮ ದೇಶಕ್ಕೆ ಪರದೇಶದಿಂದ ಬಂದ ಸಾಂಕ್ರಾಮಿಕರೋಗ. ಗುಣಕರ್ಮವ್ಯವಸ್ಥೆಯು ತನ್ನ ತನ್ನ ಪಾತ್ರದಲ್ಲಿ ಶುದ್ಧವಾಗಿ ಉಳಿಯುವದರಿಂದ ಒಂದು ವರ್ಣದಲ್ಲಿ ಹುಟ್ಟಿದ ಮನುಷ್ಯನು ತನ್ನ ವರ್ಣದ ಗುಣವನ್ನೂ ಕರ್ಮವನ್ನೂ ಒಳ್ಳೆ ಉತ್ಕರ್ಷಸ್ಥಿತಿಗೊಯ್ಯುವದಕ್ಕೆ ಸಾಧ್ಯವಾಗುವದು. ಏಕೆಂದರೆ: ಅವನ ರಕ್ತದಲ್ಲಿ ಪರಂಪರಾಗತವಾದ ಆ ಗುಣದ ಮತ್ತು ಆ ಕರ್ಮದ ಸಂಸ್ಕಾರವು ಬಲವಾಗಿ ಬೇರು ಬಿಟ್ಟುಕೊಂಡಿದ್ದು ಅವನನ್ನು ಬಹು ಬೇಗ ಮುಂದುವರಿಸುವದು. ಸ್ವಭಾವಸಿದ್ಧವಾದ ಆ ಅನುಕೂಲತೆಯನ್ನು ಉಪೇಕ್ಷಿಸಿಮಾಡಿ ಕ್ಷಣಿಕವಾದ ಮನಸ್ಸಿನಲ್ಲಿ ಮೋಹದಿಂದ ಒಮ್ಮೆ ಉಂಟಾದ ಒಂದು ಪ್ರವೃತ್ತಿಯ ಬಾಲವನ್ನು ಹಿಡಿದು ಕಂಡಕಂಡ ಉದ್ಯೋಗಕ್ಕೆ ಕೈನೀಡುವದರಿಂದ ಆ ಉದ್ಯೋಗದ ಉತ್ಕರ್ಷತೆಯ ಅವಕಾಶವು ಬಹು ಕಡಿಮೆಯಾಗುವದು. "ಪರದೇಶಗಳಲ್ಲಿ ವರ್ಣವ್ಯವಸ್ಥೆ ಇಲ್ಲದಿದ್ದರೂ ಉದ್ಯೋಗಗಳು ಉತ್ಕರ್ಷಸ್ಥಿತಿಯನ್ನು ಪಡೆದಿರುವದಲ್ಲ!" ಎಂದರೆ ನಿಜ. ಆ ಉತ್ಕರ್ಷತೆಯ ಶ್ಲಾಘನೆಯು ಅಲ್ಲಿಯ ಜನರ ದೇಹೇಂದ್ರಿಯಾದಿಗಳ ಉದ್ಯೋಗಕ್ಕೆ ಸಲ್ಲುವದಿಲ್ಲ. ಅದೆಲ್ಲಾ ಯಂತ್ರದ ಮಹಿಮೆ.

"ನಮ್ಮ ದೇಶದಲ್ಲಿಯೂ ಯಂತ್ರಗಳಿಂದಲೆ ಉದ್ಯೋಗಗಳು ಉತ್ಕರ್ಷತೆಯನ್ನು ಹೊಂದಲಿ; ವರ್ಣವ್ಯವಸ್ಥೆ ಏಕೆ ಬೇಕು?" ಎಂದರೆ ಯಂತ್ರಗಳಿಂದ ಉದ್ಯೋಗಗಳನ್ನು ಬೇಕಾದಷ್ಟು ಬೆಳೆಸಬಹುದು; ನಿಜ ಆದರೆ ಅದರಿಂದ ಪ್ರಯೋಜನವೇನು ? ಬರೀ ಉದ್ಯೋಗದ ಉತ್ಕರ್ಷತೆಯೆ ನಮ್ಮ ಧ್ಯೇಯವಲ್ಲ. ಜನರ ನೆಮ್ಮದಿಯ ಬೆಳವಳಿಗೆಯೆ ನಮ್ಮ ಧ್ಯೇಯ. ಯಂತ್ರವು ಈ ಉದ್ದೇಶಕ್ಕೆ ಸಹಕಾರಿಯಾಗಲಾರದು. ಅಷ್ಟೇ ಅಲ್ಲ. ಅದು ನಮ್ಮ ಉದ್ದೇಶಕ್ಕೆ ಸಂಪೂರ್ಣಪ್ರತೀಕಾರಮಾಡುವದು. ಸರ್ವವ್ಯವಹಾರಗಳನ್ನೂ

ಯಂತ್ರಗಳ ಬಾಯಿಗೆ ಕೊಟ್ಟಿರುವವರಿಂದ ನಾವು ಪರದೇಶಿಗಳಾಗಿರುವ ಸ್ಥಿತಿಯ ಕಡೆಗೆ ಒಮ್ಮೆ ಕಣ್ಣು ಹಾಕಿಸಿನು ನೋಡಿರಿ. ಯಂತ್ರಗಳ ಘನಘೋರ ನಾದವು ಎಷ್ಟರಮಟ್ಟಿಗೆ ದಿಗಂತಗಳನ್ನು ವ್ಯಾಪಿಸಿರುವವೊ ಅವಕ್ಕಿಂತ ಹೆಚ್ಚಾಗಿ ಅಲ್ಲಿಯ ಬಹುಭಾಗದವರಾದ ಸಾಮಾನ್ಯಜನರ ಹೊಟ್ಟೆಗಿಲ್ಲದ ಗೋಳಿನ ಘೋಷವು ವಾತಾವರಣದಲ್ಲೆಲ್ಲ ಗಿಟ್ಟಿಗಿಡಿದಿರುವದು. ಏಕೆಂದರೆ: ಯಂತ್ರವ್ಯವಹಾರವು ಧನಿಕರಿಗೆ ಮಾತ್ರ ಸಾಧ್ಯವಾದದ್ದು. ಯಂತ್ರವನ್ನು ಸರಿಯಾಗಿ ನಡೆಸಿದರೆ, ಧನಿಕರ ಧನಿಕತ್ವವು ಹಾವಿನ ವಿಷದಂತೆ ಸರ್ರನೆ ಏರುವದು. ಯಂತ್ರದ ಚಲನೆಯೊಡನೆ ಮನುಷ್ಯನ ಕೈಕಾಲುಗಳ ಚಲನೆಯು ಸ್ಪರ್ಧೆಮಾಡಲಾಗುವದಿಲ್ಲವಾದ ಕಾರಣ ಯಂತ್ರದವರ ಮುಂದೆ ಕೈನೀಡಿ ಬಾಯಿ ತೆರೆಯುವದರ ಹೊರತು ಸಾಮಾನ್ಯ ಜನತೆಯ ಪಾಲಿಗೆ ಬೇರೆ ಯಾವ ಉದ್ಯೋಗವೂ ಉಳಿಯಲಿ ಇಲ್ಲ. ಹೀಗಾಗಿ ಬಹು ಜನರ ಬಾಯಿಗೆ ಬುಟ್ಟಿಯನ್ನು ಕಟ್ಟಿದಂತಾಯಿತು. ಯಂತ್ರಗಳು ಹೀಗೆ ಜನತೆಯ ಜೀವರಕ್ತವನ್ನು ಹೀರಿದ್ದರಿಂದ ಬಹುಭಾಗದವರು ಹೊಟ್ಟೆಗಿಲ್ಲದೆ ಪ್ರಾಣವನ್ನು ಬಿಡಬೇಕಾಗಿರುವದು. ಯಂತ್ರಗಳಿಂದ ಅಲ್ಪಸಂಖ್ಯಾಕರಾದ ಧನಿಕರು ಮಾತ್ರ ಹಿರಿಹಿರಿ ಹಿಗ್ಗುತ್ತ ಮೆರೆಯುತ್ತಿರುವರು. ಈ ಸ್ಥಿತಿಯು "ಇಲಿಗೆ ಪ್ರಾಣಸಂಕಟ, ಬೆಕ್ಕಿಗೆ ಚೆಲ್ಲಾಟ" ಎಂಬ ನಾಣ್ಣುಡಿಯನ್ನು ಮನುಷ್ಯವ್ಯವಹಾರದಲ್ಲಿ ಅರ್ಥವತ್ತಾಗಿ ಮಾಡುವದು. ದೂರದೃಷ್ಟಿಯನ್ನಿಟ್ಟು ವಿಚಾರಮಾಡಿದರೆ, ಯಂತ್ರಗಳು ಧನಿಕರಿಗೂ ಜೀವನಪ್ರದಗಳಲ್ಲ ಹೇಗೆಂದರೆ: ಸಾಮಾನ್ಯಜನರು ಹೊಟ್ಟೆಗಿಲ್ಲದೆ ಸತ್ತರೆ ಧನಿಕರು ಅಜೀರ್ಣದಿಂದ ಸಾಯುತ್ತಿರುವರು. ಆದ್ದರಿಂದ ಯಂತ್ರಗಳು ಸರ್ವರೀತಿಯಿಂದಲೂ ಹಾನಿಕಾರಕಗಳೆ.

ಜನತೆಯೆಲ್ಲ ನೆಮ್ಮದಿಯಾಗಿರಬೇಕಾದರೆ ಜನತೆಯಲ್ಲಿ ಪ್ರತಿಯೊಬ್ಬರೂ ಉದ್ಯೋಗವನ್ನು ಮಾಡುವ ಅವಕಾಶವಿರಬೇಕು. ಇದರ ವ್ಯವಸ್ಥೆಯೆ ವರ್ಣವ್ಯವಸ್ಥೆ. ಆದ್ದರಿಂದ ವರ್ಣವ್ಯವಸ್ಥೆಯು ಬರೀ ನಮ್ಮ ದೇಶಕ್ಕೆ ಮಾತ್ರವೆ ಅಲ್ಲ, ಸಮಸ್ತ ಜಗತ್ತಿಗೂ ಶ್ರೇಯಸ್ಕರವಾದದ್ದು. ನಮ್ಮ ಸುದೈವದಿಂದ ನಮ್ಮ ಪೂರ್ವಿಕರು ಇದನ್ನು ನಡೆವಳಿಕೆಯಲ್ಲಿ ತಂದರು. ಈಗ ಅದು ಶುದ್ಧಸ್ಥಿತಿಯಲ್ಲಿ ಉಳಿದುಕೊಂಡಿಲ್ಲವೆಂಬ ಕಾರಣದಿಂದ ನಾವು

ಅದರ ಬೇರನ್ನೇ ಕಿತ್ತುಹಾಕಿದರೆ ಮನುಷ್ಯನು ಆರೋಗ್ಯಸ್ಥಿತಿಯಲ್ಲಿಲ್ಲವೆಂಬ ನೆವದಿಂದ ಅವನ ಕತ್ತನ್ನು ಕೊಯ್ದಂತೆ ಆಗುತ್ತದೆ. ವರ್ಣವ್ಯವಸ್ಥೆಯು ಊರ್ಜಿತವಾಗಬೇಕೆಂದು ನಮ್ಮ ಧ್ಯೇಯವಿರಬೇಕು. ಆದಕ್ಕೆ ನೆರವಾಗ ಬೇಕೆಂದು ಭಗವಂತನನ್ನು ಪ್ರಾರ್ಥಿಸಬೇಕು. ಪ್ರಯತ್ನಮಾಡುವವರಿಗೆ ಅನುಗ್ರಹವನ್ನು ಮಾಡುವದು ದೇವರ ನಿಯಮ. ಆದ್ದರಿಂದ ನಮ್ಮ ವರ್ಣವ್ಯವಸ್ಥೆಯ ಊರ್ಜಿತಸ್ಥಿತಿಗೆ ಪಯತ್ನಮಾಡಬೇಕು. ಅದರ ಪ್ರಯತ್ನ ವೆಂದರೆ ಉದ್ಯೋಗಗಳನ್ನು ಯಂತ್ರಗಳ ಬಾಯಿಗೆ ಕೊಡದೆ ಮನುಷ್ಯರ ಕೈಗೆ ಕೊಡುವದು. ಆ ಯಂತ್ರವೆಂಬ ಪಿಶಾಚಿಯು ಅಬ್ಬರವನ್ನು ತಗ್ಗಿಸಿ ಅದನ್ನು ಉಚ್ಚಾಟನೆ ಮಾಡುವಂಥ ಮಂತ್ರವನ್ನು ಜಪಿಸಬೇಕಾಗಿದೆ. ಕಷ್ಟಸಾಧ್ಯವಾದ ಇದನ್ನು ಸಾಧಿಸಲು ನಮ್ಮ ಜನತೆಯ ಎಲ್ಲರೂ ಕೈಗೆ ಕೈ ಕೊಟ್ಟು ಒಟ್ಟುಗೂಡಬೇಕಾಗಿದೆ. ಈಗಿನ ಜನತೆಯಲ್ಲಿರುವ ಎಲ್ಲ ವರ್ಣ ದವರೂ ಉದ್ಯೋಗದ ಕಡೆಗೆ ಕೈನೀಡಬೇಕಾಗಿದೆ. ಬ್ರಾಹ್ಮಣತ್ವವೂ ಕ್ಷತ್ರಿ ಯತ್ವವೂ ಈ ಕಾಲದಲ್ಲಿ ನಾಮಾವಶೇಷಮಾತ್ರವಾಗಿರುವದರಿಂದ ಇದನ್ನು ಆಪತ್ಕಾಲವೆಂದು ತಿಳಿದು ವೈಶ್ಯವೃತ್ತಿಯಾದ ಈ ಉದ್ಯೋಗಕ್ಕೆ ಮುಂದಾಗ ಬೇಕು. ಇದನ್ನು ಬಿಟ್ಟು ಸೇವಾವೃತ್ತಿಯನ್ನವಲಂಬಿಸುವದು ಸಂಪೂರ್ಣ ಅಶ್ರೇಯಸ್ಕರವು. ಈ ಪ್ರಕಾರ ಎಲ್ಲರೂ ಒಕ್ಕಟ್ಟಾಗಿ ಉದ್ಯೋಗಗಳನ್ನೆಲ್ಲ ಕೈಗಳಲ್ಲಿ ಆವಾಹನೆ ಮಾಡಿಕೊಂಡು ಪ್ರತಿಪಕ್ಷಿಗಳಾದ ಯಂತ್ರವನ್ನು ತುಕ್ಕು ಹಿಡಿಸಿದ ಮೇಲೆ ವರ್ಣಗಳ ವ್ಯವಸ್ಥೆಯ ವಿಚಾರವಾದ ಮಾತು. ಮೊದಲು ಉದ್ಯೋಗಗಳಿದ್ದರಲ್ಲವೆ ಉದ್ಯೋಗಗಳ ವಿಭಾಗಕ್ಕಾಗಿ ವರ್ಣವ್ಯ ವಸ್ಥೆ. ಆದ್ದರಿಂದ ಈಗ ಹಿಂದುಸ್ಥಾನದಲ್ಲಿ ಎಲ್ಲರೂ ಯಾವದಾದರೊಂದು ಉದ್ಯೋಗವನ್ನವಲಂಬಿಸುವದು ಅತ್ಯಗತ್ಯ. ಇತರರ ಮುಂದೆ ದೀನತೆ ಯಿಂದ ಬಾಳುವ ಬಾಳು ಬಾಳಲ್ಲವೆಂಬ ಮಾತಿನಂತೆ ಹಿಂದುಸ್ಥಾನದವರ ಈಗಿನ ಬಾಳೆಲ್ಲ ವಿಶೇಷವಾಗಿ ಯಂತ್ರಗಳ ಮುಂದೆ ದೀನತೆಯಿಂದ ಬಾಳುವ ಬಾಳಾಗಿರುವದೆಂದು ತಿಳಿದು ಇದರ ಪರಿಹಾರವನ್ನು ವಿಚಾರಮಾಡು ವಾಗ ಪ್ರಾಸಂಗಿಕವಾಗಿ ಬಂದ ವರ್ಣವ್ಯವಸ್ಥೆಯ ವಿವರಣೆಯು ಕೇವಲ ದಿಕ್ಪ್ರದರ್ಶನಾರ್ಥವಾಗಿ ಇರುವದು. ಒಬ್ಬನು ಒಳ್ಳೇ ಪುಣ್ಯಶಾಲಿಯೆಂಬ ದಕ್ಕೆ ಗುರ್ತೇನೆಂದರೆ ಬಹುಸಂಕಟ ಪಡದೆ ಸಾಯುವದು ಮತ್ತು ದೀನತೆ

ಯನ್ನು ಕಾಣದೆ ಬಾಳುವದು. ಇವೆರಡೂ ಪುಣ್ಯದ ಚಿಹ್ನಗಳು. ನಮಗೆ ಈಗ ಇರುವ ಸೇವಾವೃತ್ತಿಯ ದೀನತೆ ಮೊದಲಾದವುಗಳು ಪಾಪದ ಚಿಹ್ನಗಳು. ಈ ಪಾಪವನ್ನು ಹಿಮ್ಮೆಟ್ಟಿಸಿ ಉದ್ಯೋಗಾವಲಂಬನೆಯ ರೂಪವಾದ ಪುಣ್ಯವನ್ನು ಮೈದುಂಬಿಸಬೇಕು ಇದು ನಮಗೆ ಅಶಕ್ಯವಲ್ಲ. ನಾವು ನಮ್ಮ ಆತ್ಮಶಕ್ತಿಯಿಂದ ಆ ಮಾರ್ಗದಲ್ಲಿ ಮುಂದಡಿಯಿಟ್ಟೆವೆಂದರೆ ಪರಮಕರುಣಾಳುವಾದ ಭಗವಂತನು ನಮ್ಮನ್ನು ಮುಂದಕ್ಕೆ ಸಾಗಿಸುವನು.

ಕ್ಷಣಿಕವಾದ ಇಹಲೋಕಸುಖಕ್ಕಿಂತಲೂ ಶಾಶ್ವತವಾದ ಭಗವದ್ಭಜನಾನಂದವನ್ನು ಪಡೆಯಬೇಕೆನ್ನುವ ಕೆಲವರು ಉದ್ಯೋಗವನ್ನು ಕಡೆಗಾಣುವದುಂಟು. ಅವರ ಉದ್ದೇಶವೇನೊ ಶ್ರೇಯಸ್ಕರವಾದದ್ದೆ. ಅವರು ಅಗತ್ಯವಾಗಿ ಭಗವದ್ಭಜನೆಯನ್ನು ಮಾಡಬೇಕು. ತಮ್ಮ ಕಾಲವನ್ನೆಲ್ಲ ಭಜನೆಯಲ್ಲಿ ತನ್ಮಯವೃತ್ತಿಯಲ್ಲಿ ಕಳೆಯುವಂತಿದ್ದರೆ ಅವರು ಇತರ ಉದ್ಯೋಗಗಳಿಗೆ ಕೈಹಾಕದಿರುವದು ತಪ್ಪಲ್ಲ. ಏಕೆಂದರೆ: ಭಗವದ್ಭಜನೆಯ ಉದ್ಯೋಗವು ಇತರ ಎಲ್ಲ ಉದ್ಯೋಗಗಳಿಗಿಂತಲೂ ಶ್ರೇಷ್ಠವಾದದ್ದು. ತನ್ಮಯವೃತ್ತಿಯೊಗದಿರುವ ಕಾಲಗಳಲ್ಲಿ ಮಾತ್ರ ಭಕ್ತನು ಏನಾದರೊಂದುದ್ಯೋಗವನ್ನು ಮಾಡುವದು ಬಾಧಕವಲ್ಲ. ಕಬೀರನ ಭಗವದ್ಭಕ್ತಿಯು ಎಲ್ಲರಿಗೂ ಗೊತ್ತಿರಬಹುದು. ಅವನು ಬಹು ಪ್ರಸಿದ್ಧನಾದ ಸಾಧುವಾಗಿದ್ದನು. ಅವನು ಯಾವಾಗಲೂ ಬಹು ಮಟ್ಟಿಗೆ ದೇವರಲ್ಲಿ ತನ್ಮಯವೃತ್ತಿಯಲ್ಲಿರುವವನಾಗಿದ್ದರೂ ಹೊರಗಣ ಉದ್ಯೋಗವನ್ನು ಬಿಟ್ಟಿರಲಿಲ್ಲ. ತನ್ನ ಮನೆಯಲ್ಲಿ ಹಿಂದಿನಿಂದ ನಡೆದು ಬಂದ ನೇಯಿಗೆಯ ಉದ್ಯೋಗದಲ್ಲಿ ನಿಪುಣತೆಯನ್ನು ಪಡೆದು ಅವನು ಅದನ್ನೆ ಚೆನ್ನಾಗಿ ನಡೆಸುತ್ತಿದ್ದನು. ಮಗ್ಗದ ಲಾಳಿಗಳ ಸುತ್ತಾಟದ ಸಪ್ಪಳವೆ ಅವನ ಗಾಯನಕ್ಕೆ ತಾಳಗಳಾಗಿದ್ದವು. ಹೀಗೆ ಅವನು ಉದ್ಯೋಗವನ್ನು ಭಗವದ್ಭಜನೆಗೆ ಉಪಕರಣವಾಗಿ ಮಾಡಿಕೊಂಡು ಇತರರಿಗೆ ಉದಾಹರಣೆಯನ್ನು ತೋರಿಸಿರುವನು. ಉದ್ಯೋಗದಲ್ಲಿ ಅವನ ಕೈಕಾಲುಗಳು ತೊಡಗಿದ್ದವೆಂಬ ಕಾರಣದಿಂದ ಅವನ ಸ್ವರಮಾಧುರ್ಯ ಮೊದಲಾದ ಯಾವ ರಸಕ್ಕೂ ಕುಂದು ಬರಲಿಲ್ಲ. ಅವನು ನೇಯುತ್ತ ಹಾಡುತ್ತಿದ್ದರೆ ಅದರ ಇಂಪಿಗೆ ಮರುಳಾಗಿ ನೆರೆಹೊರೆಯವರೆಲ್ಲ ಬಂದು ಅವನ ಸುತ್ತು ನೆರೆಯುತ್ತಿದ್ದರು. ಆದ್ದರಿಂದ ಭಕ್ತಿಮಾರ್ಗದಲ್ಲಿ ಮುಂದು

ವರಿಯುವವರು ಕೂಡ ಕೈಯಿಂದ ನಡೆಸುವ ಉದ್ಯೋಗಗಳನ್ನು ಉಪೇಕ್ಷೆ ಮಾಡುವ ಕಾರಣವಿಲ್ಲ.

ಭಕ್ತಿಮಾರ್ಗವನ್ನು ಹಿಡಿದವನೊಬ್ಬನು ಕೈಯಿಂದ ಮಾಡುವ ಉದ್ಯೋಗವನ್ನು ಬಿಟ್ಟು ಧರ್ಮೋಪದೇಶಕಾರ್ಯದಲ್ಲಿ ತೊಡಗಿದರಂತು ಅದಕ್ಕೆ ಎಣೆಯೆ ಇಲ್ಲ. ಧರ್ಮೋಪದೇಶವೆಂಬ ಕಾರ್ಯವು ಸಾಮಾನ್ಯ ವಾದದ್ದಲ್ಲ. ಕೈಗಳಿಂದ ಮಾಡುವ ಉದ್ಯೋಗಗಳಿಗಿಂತ ಎಷ್ಟೊ ಮೇಲಾದದ್ದು. ಕೈಗಳಿಂದ ಮಾಡುವ ಕೆಲಸಗಳು ಮನುಷ್ಯನ ಐಹಿಕಸುಖಕ್ಕೆ ಮಾತ್ರ ಸಾಧನಗಳಾಗುವವು. ಅವುಗಳ ಅವಶ್ಯಕತೆಯು ಎಲ್ಲರಿಗೂ ತೋರಿಯೆ ತೋರುವದರಿಂದ ಎಲ್ಲರೂ ಒಂದಿಲ್ಲೊಂದು ಪ್ರಮಾಣದಲ್ಲಿ ಅವುಗಳನ್ನು ನಡೆಸಿಯೆ ನಡೆಸುವರು. ಧರ್ಮೋಪದೇಶಕಾರ್ಯವು ಐಹಿಕಪ್ರಯೋಜನಕ್ಕೆ ಅಷ್ಟೇನೂ ಪ್ರತ್ಯಕ್ಷವಾದ ಪ್ರಬಲಸಾಧನವಲ್ಲ. ಅದರ ಫಲವು ಪಾರಮಾರ್ಥಿಕಸುಖ. ಇದನ್ನು ಅಪೇಕ್ಷಿಸುವವರೂ ಕಡಿಮೆ; ಪಡೆದುಕೊಂಡವರೂ ಕಡಿಮೆ. ಇದು ಅಷ್ಟು ತುಟ್ಟಿಯಾದದ್ದು. ಮಾನುಷ್ಯನ ಧ್ಯೇಯವೆ ಇದಾದ್ದರಿಂದ ಇದು ಎಷ್ಟು ಮಾತ್ರವೂ ಉಪೇಕ್ಷಣೀಯವಲ್ಲ. ಆದ್ದರಿಂದ ಧರ್ಮೋಪದೇಶಕರ ಗೌರವವು ಹೆಚ್ಚಿನದು. ಕರ್ನಾಟಕದಲ್ಲಿ ಪುರಂದರ ದಾಸರನ್ನು ನೋಡಿರಿ. ಜನತೆಯಲ್ಲಿ ಅವರಿಂದಾಗುವ ಪ್ರಯೋಜನವು ಎಷ್ಟೊ ಕಾಣುತ್ತಿದೆ! ಅಕ್ಷರಸ್ಥರಲ್ಲವೆ ಇರುವವರು ಕೂಡ ದಾಸರ ಪದಗಳನ್ನು ಬಾಯಲ್ಲಿ ಕಲಿತು ಎಷ್ಟೊ ಪರಮಾರ್ಥರಹಸ್ಯಗಳನ್ನರಿತು ಸನ್ಮಾರ್ಗದಲ್ಲಿ ನಡೆಯುತ್ತಿದ್ದಾರೆ. ಅವರ ಜೀವಿತಕಾಲದಲ್ಲಿ ಅವರು ಬಡವರು ಬಲ್ಲಿದರೆನ್ನದೆ ಮನೆಮನೆಗೆ ಹೋಗಿ ತಮ್ಮ ಕಾಲಕ್ಷೇಪಕ್ಕಾಗಿ ಭಜನೆಯನ್ನು ಮಾಡುವ ನೆವದಿಂದ ಭಕ್ತಿಯ ಬೀಜವನ್ನು ಪ್ರತಿಯೊಬ್ಬರ ಹೃದಯದಲ್ಲಿಯೂ ಬಿತ್ತಿ ಧರ್ಮವನ್ನು ಉದ್ಧಾರಮಾಡಿದ್ದಾರೆ. ಮಹಮ್ಮದೀಯರ ತುಳಿತದಿಂದ ನಮ್ಮ ಧರ್ಮವೆಲ್ಲ ಧೂಳಿದ್ದು ಹೋಗುತ್ತಿದ್ದಾಗ ಪುರಂದರ ದಾಸರು ಧರ್ಮೋಪದೇಶವನ್ನು ಹರಡದೆ ಇದ್ದರೆ ನಮ್ಮ ಸ್ಥಿತಿಯು ಇನ್ನೂ ಅಧಃಪಾತಾಲಕ್ಕಿಳಿದು ಹೋಗುತ್ತಿತ್ತೆಂದು ಕಾಣುತ್ತದೆ. ಧರ್ಮೋಪದೇಶವು ಪಾರಮಾರ್ಥಿಕಸುಖಕ್ಕೇ ಅಲ್ಲ; ವ್ಯಾವಹಾರಿಕಸುಖಕ್ಕೂ ಎಷ್ಟು ಬೆಂಬಲವಾಗುವದೆಂಬದನ್ನು ಶ್ರೀ ಸಮರ್ಥ ರಾಮದಾಸರು ತೋರಿಸಿದ್ದಾರೆ.

ಮುಸಲ್ಮಾನರ ಉಬ್ಬಟೆಗೆ ಈಡಾಗದೆ ಹಿಂದುಗಳು ಅವರದೊಂದು ಹುಸಿ ನಗೆಯನ್ನೆ ಮಹಾಪ್ರಸಾದವೆಂದು ಭಾವಿಸಿ ತಮ್ಮ ತನುಮನಧನಗಳನ್ನೆಲ್ಲ ಅವರಿಗೆ ಸೂರೆಗೊಟ್ಟು ಅವರ ಮುಂದೆ ನಾಲಿಗೆಯನ್ನು ನೀಡಿಕೊಂಡು ಬಾಯಿನೀರು ಸುರಿಸುತ್ತಿದ್ದಾಗ ಶ್ರೀಸಮರ್ಥರಾಮದಾಸರು ತಮ್ಮ ಶಿಷ್ಯರ ಮೂಲಕ ಧರ್ಮೋಪದೇಶವನ್ನು ಮಾಡಿ ಜನತೆಯಲ್ಲಿ ಧರ್ಮಜಾಗರೂಕತೆಯನ್ನು ಹುಟ್ಟಿಸದೆ ಇದ್ದರೆ ಶಿವಾಜಿಗೆ ಸ್ವರಾಜ್ಯವನ್ನು ಸ್ಥಾಪಿಸುವ ಸುಯೋಗವೆ ಉಂಟಾಗುತ್ತಿರಲಿಲ್ಲ. ತುರುಕರ ಹಿಡಿತದೊಳಕ್ಕೆ ಸಿಕ್ಕು ಬಿದ್ದಿದ್ದ ಹಿಂದುಗಳ ಮನೋಭೂಮಿಯನ್ನೆಲ್ಲ ಶ್ರೀಸಮರ್ಥರು ತಮ್ಮ ಉಪದೇಶಪ್ರಭಾವದಿಂದ ಗೆದ್ದು ಅದನ್ನು ಶಿವಾಜಿಯ ಕಡೆಗೆ ಒಲಿಸಿಕೊಟ್ಟ ಮೇಲೆ ಶಿವಾಜಿಯ ಧೀರತೆಯೂ ವೀರತೆಯೂ ಶೂರತೆಯೂ ಬಯಲಿಗೆ ಬಿತ್ತು. ಹೀಗೆ ಧರ್ಮೋಪದೇಶವು ಪ್ರಪಂಚವ್ಯವಹಾರವನ್ನು ಸುಸೂತ್ರ ವಾಗಿ ಮಾಡುವದಲ್ಲದೆ ಬರೀ ಪ್ರಾಪಂಚಿಕರಿಗೆ ಕನಸಿನ ಗಂಟಾಗಿರುವಂಥ ಪಾರಮಾರ್ಥಿಕಸುಖವನ್ನೂ ಕರತಲಾಮಲಕವಾಗಿ ಮಾಡುವದರಿಂದ ಅದರ ಯೋಗ್ಯತೆ ಹೆಚ್ಚು. ಆದ್ದರಿಂದ ಇದು ಧರ್ಮೈಕಪರಾಯಣರಾದವರಿಗೆ ಒಳ್ಳೆ ಉದ್ಯೋಗ.

ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯುವದೆ ಮನುಷ್ಯನ ಮುಖ್ಯ ಧ್ಯೇಯವಾದ್ದರಿಂದ ಅಲ್ಲಿಯವರೆಗೆ ಅದಕ್ಕೆ ಸಾಧನವಾಗಿ ಏನಾದರೂ ಉದ್ಯೋಗವನ್ನು ಮಾಡುತ್ತಿರಬೇಕೆಂಬ ಮಾತು ಒಪ್ಪುವದಾದರೂ ಸಾಕ್ಷಾ ತ್ಕಾರವಾದ ಮೇಲೆ ಉದ್ಯೋಗದ ತೊಡಕನ್ನು ಕಳಚಿಕೊಂಡಿರಬಹುದೆಂಬ ಯೋಚನೆ ಹುಟ್ಟಬಹುದು. ಮೈಗಳ್ಳತನವೆಂಬ ದುರ್ಗುಣವು ಸಾಕ್ಷಾ ತ್ಕಾರಕ್ಕೆ ಪೂರ್ವದಲ್ಲಿರಬಹುದೆ ಹೊರತು ಆಮೇಲೆ ಇರುವದಕ್ಕೆ ಶಕ್ಯವೆ ಇಲ್ಲ. ಸಾಕ್ಷಾತ್ಕಾರವನ್ನು ಪಡೆದ ಮನುಷ್ಯನು ಎಲ್ಲಿಯೊ ಒಂದು ಗುಹೆ ಯಲ್ಲಿ ಕುಳಿತಿದ್ದರೂ ಅವನ ಸಹಜವಾದ ತಪಶ್ಚರ್ಯಪ್ರಭಾವದಿಂದ ಅವನ ಸುತ್ತಮುತ್ತಣ ಜಗತ್ತಿನಲ್ಲೆಲ್ಲ ಧರ್ಮಜಾಗರೂಕತೆಯುಂಟಾಗುವದೆಂದು ಶ್ರೀಸ್ವಾಮಿವಿವೇಕಾನಂದರು ಹೇಳಿರುತ್ತಾರೆ. ತಾವಿದ್ದಲ್ಲಿಯೆ ಇದ್ದು ತಮ್ಮ ಮೌನದಿಂದಲೆ ಇತರರಿಗೆ ಜ್ಞಾನೋದಯವಾಗುವಂತೆ ಮಾಡುವ ಈ ಮಹಾ

ಸಾಮರ್ಥ್ಯವು ಅಂಥಿಂಥವರಿಗೆ ದಕ್ಕುವ ಮಾತಲ್ಲ. ಈ ಯೋಗ್ಯತೆಯು ದಕ್ಷಿಣಾಮೂರ್ತಿಸ್ವರೂಪದಲ್ಲಿ ಮೂರ್ತಿಮಂತವಾಗಿ ಕಂಡು ಬಂದಿದೆ.

ಆಲದ ಮರದ ಬುಡವಲ್ಲಿ ಶಿಷ್ಯರೆಲ್ಲ ಮುದುಕರು; ಗುರು ಯುವಕನು; ಮೌನವೆ ಗುರುವಿನ ಪ್ರವಚನ; ಶಿಷ್ಯರ ಸಂಶಯಗಳೆಲ್ಲ ತುಂಡು ತುಂಡು. ಎಂಥ ಆಶ್ಚರ್ಯ! ಹೂವು ಇದ್ದಲ್ಲಿಯೆ ಇದ್ದರೂ ಅದರ ಪರಿಮಳವು ವನವನ್ನೆಲ್ಲ ವ್ಯಾಪಿಸುವಂತೆ ಆ ಮಹಾಮಹಿಮರು ಇದ್ದಲ್ಲಿಯೆ ಇದ್ದರೂ ಅವರಿಂದ ಪ್ರತಿಕ್ಷಣವೂ ಲೋಕೋದ್ಧಾರವಾಗುತ್ತಲೆ ಇರುವದು. ಸಾಕ್ಷಾತ್ಕಾರವನ್ನು ಪಡೆದ ಕೆಲವರು ತಮ್ಮ ಕೆಲಸವನ್ನು ಮಾಡಿಕೊಂಡ ಮೇಲೆ ಲೋಕೋದ್ಧಾರಕ್ಕೆ ದೀಕ್ಷೆಯನ್ನು ವಹಿಸಿರುವ ದೃಷ್ಟಾಂತಗಳು ಎಷ್ಟೊ ಇವೆ. ಭಗವಾನ್ ಬುದ್ಧನು ತಾನು ಒಂದು ಉಚ್ಚಸ್ಥಿತಿಯನ್ನು ಪಡೆದ ಮೇಲೆ ಉಳಿದ ಜನರಿಗೆ ಕೂಡ ಅದನ್ನು ತಂದುಕೊಟ್ಟು ಎಲ್ಲರನ್ನೂ ಉಚ್ಚಸ್ಥಿತಿಗೇರಿಸಬೇಕೆಂದು ದೇಶಸಂಚಾರಮಾಡಿ ಅನೇಕವಿಧದಲ್ಲಿ ಧರ್ಮನೀತಿಗಳ ಪ್ರಸಾರವನ್ನು ಮಾಡಿರುತ್ತಾನೆ. ಭಗವಾನ್ ಶಂಕರಾಚಾರ್ಯರು ತಾವು ಕೃತಕೃತ್ಯರಾಗುತ್ತಲೆ ಇತರರ ದೈನ್ಯಸ್ಥಿತಿಯನ್ನು ನೋಡಿ ಅವರಿಗೂ ಕೃತಕೃತ್ಯತೆಯನ್ನು ತಂದುಕೊಡುವದಕ್ಕಾಗಿ ಆಸೇತುಹಿಮಾಚಲವೂ ಕಾಲನಡಿಗೆಯಿಂದ ತಿರುಗಿ ತಿರುಗಿ ಜನತೆಯಲ್ಲಿದ್ದ ವಿಪರೀತಕಲ್ಪನೆಗಳನ್ನೆಲ್ಲ ತೆಗೆದು ಹಾಕಿ ತಮ್ಮ ಸಿದ್ಧಾಂತವನ್ನು ಮನಗಾಣಿಸಿ ಅನೇಕರನ್ನು ದಾರಿಗೆ ತಿರುಗಿಸಿದರು. ಇದೇ ರೀತಿಯಲ್ಲಿ ಶ್ರೀಸಮರ್ಥರಾಮದಾಸರೂ ಸಾಕ್ಷಾತ್ಕಾರವಾದ ಮೇಲಿನ ತಮ್ಮ ಆಯುಷ್ಯವನ್ನೆಲ್ಲ ಧರ್ಮಪ್ರಸಾರದಲ್ಲಿಯೆ ಕಳೆದರು. ಇಂಥವರ ಧರ್ಮೋಪದೇಶದಿಂದಲೆ ಇನ್ನೂ ಜಗದ್ವ್ಯವಹಾರದ ವ್ಯವಸ್ಥೆಯು ಉಳಿದಿರುವದು. ನಿಜವಾಗಿ ಧರ್ಮೋಪದೇಶದ ಉದ್ಯೋಗವೆ ಉದ್ಯೋಗ. ಈ ದೃಷ್ಟಿಯಿಂದ ನೋಡಿದರೆ ಉಳಿದ ಕೈಗಾರಿಕೆಗಳಿಗೆ ಉದ್ಯೋಗವೆಂಬ ಹೆಸರು ಬರೀ ಉಪಚಾರ; ಏಕೆಂದರೆ: ಧರ್ಮದಿಂದ ನಿಜವಾಗಿ ಲೋಕೋದ್ಧಾರವಾಗುವದು. ಧರ್ಮೋಪದೇಶದ ಕಡೆತದಿಂದ ಜನರ ಮನಃಸ್ಥಿತಿಯು ಒಂದು ಬಗೆಯ ಮೆರುಗನ್ನು ಪಡೆದು ಮನುಷ್ಯತ್ವವನ್ನು ದಾಟಿ ದೇವತ್ವದ ಮೆಟ್ಟಲಿಗೇರುವದು. ಕೈಗಾರಿಕೆಗಳ ಉದ್ಯೋಗ

ದಿಂದ ಆ ಪ್ರಯೋಜನವಾಗಲಾರದಾದ್ದರಿಂದ ಅದನ್ನು ಲೋಕೋದ್ಧಾರವೆನ್ನುವದಕ್ಕಿಂತಲೂ ಲೋಕಸೇವೆಯೆನ್ನುವದು ಹೆಚ್ಚು ಒಪ್ಪುವದು.

ಲೋಕೋದ್ಧಾರಕ್ಕಾಗಿ ದೀಕ್ಷೆಯನ್ನು ವಹಿಸುವವರ ವಿಚಾರದಲ್ಲಿ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಅವರು ತಮ್ಮ ಸಾಕ್ಷಾತ್ಕಾರವನ್ನು ತಾವು ಮಾಡಿಕೊಂಡವರಾಗಿರುವದರಿಂದ ಇನ್ನು ಮುಂದೆ ಅವರಿಗೆ ಶಾಸ್ತ್ರದ ಯಾವ ವಿಧಿನಿಷೇಧಗಳ ಭಾರವೂ ಇಲ್ಲದೆ ಇರಬಹುದು. ಏಕೆಂದರೆ: ಸಾಕ್ಷಾತ್ಕಾರಕ್ಕೆ ಮನಸ್ಸನ್ನು ಸಿದ್ಧಗೊಳಿಸುವವಕ್ಕಾಗಿ ಮನುಷ್ಯನು ವಿಧಿನಿಷೇಧಗಳಿಗೆ ಬದ್ಧನಾಗಬೇಕು. ಆದಾದ ಮೇಲೆ ಅವುಗಳದೇನು ಹಂಗು? ಆದರೂ ಜನತೆಯನ್ನು ತಿದ್ದುವ ದೀಕ್ಷೆಯನ್ನು ವಹಿಸಿದವರು ಮಾತ್ರ ಇತರರಂತೆ ವಿಧಿನಿಷೇಧಗಳಿಗೆ ಬದ್ಧರಾಗಿ ನಡೆಯಲೆ ಬೇಕು. ಉಪಾಧ್ಯಾಯನು ವಿದ್ಯಾರ್ಥಿಯ ಮನಸ್ಸಿನ ಪರಿಸ್ಥಿತಿಗೆ ಇಳಿದು ಆ ಸ್ಥಿತಿಯಿಂದ ಉಪದೇಶಮಾಡಿದ ಹೊರತು ವಿದ್ಯಾರ್ಥಿಯ ಮೇಲೆ ವಿದ್ಯೆಯ ಪರಿಣಾಮವು ಹೇಗೆ ಆಗುವದಿಲ್ಲವೊ ಹಾಗೆ ಎಂಥ ಸಿದ್ಧಪುರುಷನಾದರೂ ಜನತೆಯ ನಡವಳಿಕೆಗೆ ಅವಿರುದ್ಧವಾಗ ತಾನಿದ್ದು ಉಪದೇಶಮಾಡಿದ ಹೊರತು ಜನತೆಯ ಮೇಲೆ ಆ ಉಪದೇಶದ ಪರಿಣಾಮವಾಗಲಾರದು.

ತಿಳಿವಳಿಕೆ ಇಲ್ಲದವರು ಹೇಗೆ ಕರ್ಮಗಳನ್ನು ಕೇವಲ ಆಸಕ್ತಿಯಿಂದ ಮಾಡುತ್ತಾರೊ ಹಾಗೆ ತಿಳಿದವನು ಆಸಕ್ತಿಯಿಲ್ಲದೆ ಮಾಡಬೇಕು. ತಿಳಿಯದವನು ಕರ್ಮಗಳಲ್ಲಿ ಆಸಕ್ತನಾಗಿರುವನು; ತಿಳಿದವನಿಗೆ ಆಸಕ್ತಿಯಿರುವದಿಲ್ಲ. ಇಷ್ಟೆ ಭೇದವೆ ಹೊರತು ಕರ್ಮವನ್ನು ನಡೆಸುವಿಕೆಯು ಇಬ್ಬರಲ್ಲಿಯೂ ಒಂದೆ ಆಗಿರುವದು. ಹೀಗೆ ಆಸಕ್ತರಂತೆ ಕರ್ಮವನ್ನು ಮಾಡುವ ತೊಂದರೆಯನ್ನು ಸಹಿಸಿಕೊಂಡು ಅನಾಸಕ್ತನಾಗಿ ಕರ್ಮವನ್ನು ಮಾಡುವದು ಜ್ಞಾನಿಯ ಪಾಲಿಗೆ ಬಂತು. ಕರ್ಮವನ್ನು ಮಾಡುವದೆಂಬುದು ಸಾಮಾನ್ಯರ ದೃಷ್ಟಿಯಿಂದ ತೊಂದರೆಯೆ ಹೊರತು ಲೋಕೋದ್ಧಾರವನ್ನು ಮಾಡಬೇಕೆಂಬ ಮಹಾಸಂಕಲ್ಪವನ್ನು ಮಾಡಿದವರ ದೃಷ್ಟಿಯಿಂದ ಅದು ಅವರಿಗೊಂದು ಹೊರೆಯಲ್ಲ. ಪರಹಿತದ ಪ್ರಭಾವವೇ ಅಂಥದ್ದು.

ಪರಹಿತಮಂ ಕೈವಲ್ಯದ ।
ಪರಿಯಂ ನೆರೆ ತೂಗಿ ನೋಡಿ ಹರಿಯಾದರದಿಂ॥

ಪರಹಿತಮೇ ಮೇಲಹುದೆಂ ।
ದರಿತಾಂತಂ ತಾಂ ದಶಾವತಾರಶ್ರಮೆಯುಂ ॥

ಮಹಾಜ್ಞಾನಿಗಳಾಗಿ ವಿಧಿನಿಷೇಧಗಳಿಗೆ ಅತೀತರಾಗಿದ್ದರೂ ಪರಹಿತದ ದೀಕ್ಷೆಯನ್ನು ಬಹುಮಾನಿಸುವ ಉದ್ದೇಶದಿಂದ ಜ್ಞಾನದೇವಸಾಧುಗಳು ವಿಧಿನಿಷೇಧಗಳಿಗೆ ಬದ್ಧರಾಗಿ ವರ್ತಿಸಿ ಇತರರಿಗೆ ನಿದರ್ಶಕರಾಗಿರುವರು. ಜ್ಞಾನದೇವರ ತಂದೆಯು ಸಂನ್ಯಾಸದಿಂದ ಗೃಹಸ್ಥಾಶ್ರಮಕ್ಕೆ ಹಿಂದಿರುಗಿ ಆರೂಢಪತಿತನೆನಿಸಿ ಸಮಾಜದಿಂದ ಬಹಿಷ್ಕೃತನಾಗಿದ್ದನು. ಅವನು ಗುರ್ವಾಜ್ಞಾಬದ್ಧನಾಗಿ ಹಾಗೆ ಮಾಡಬೇಕಾಗಿ ಬಂದದ್ದರಿಂದ ಅದರ ದೋಷವು ಅವನಿಗೆ ತಗುಲುವ ಸಂಭವವಿರಲಿಲ್ಲ. ಆದರೂ ಅವನು ಸಮಾಜದ ನಿಯಮವನ್ನು ಪಾಲಿಸಬೇಕೆಂದು ತನ್ನ ಪತಿತತ್ವಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವದಕ್ಕೆ ಸಿದ್ಧನಾಗಿ ಅನೇಕಜನ ಪಂಡಿತರಿಗೆ ಶರಣುಹೋದನು. ಯಾರೂ ಇವನ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ; ಮರಣದ ಹೊರತು ಎರಡನೆ ಪ್ರಾಯಶ್ಚಿತ್ತವಿಲ್ಲವೆಂದು ಹೇಳಿ ಎಲ್ಲರೂ ಅವನನ್ನು ದೂರಮಾಡಿದರು. ಆಗ ಅವನು ತಾನೂ ತನ್ನ ಹೆಂಡತಿಯೂ ಮರಣರೂಪವಾದ ಪ್ರಾಯಶ್ಚಿತ್ತವನ್ನು ತೆಗೆದುಕೊಂಡು ತನ್ನ ಮಕ್ಕಳಾದ ನಿವೃತ್ತಿನಾಥ, ಜ್ಞಾನದೇವ—ಮೊದಲಾದವರಿಗೆ ಸಮಾಜಕ್ಕೆ ಯೋಗ್ಯರಾಗುವ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಇಬ್ಬರೂ ಸೇರಿ ಪ್ರಯಾಗಕ್ಕೆ ಹೋಗಿ ತ್ರಿವೇಣಿಯಲ್ಲಿ ಆತ್ಮಾರ್ಪಣವನ್ನು ಮಾಡಿದರು. ಅಷ್ಟರಲ್ಲಿ ನಿವೃತ್ತಿನಾಥನು ಒಬ್ಬ ಯೋಗಿಯಿಂದ ಉಪದಿಷ್ಟನಾಗಿ ಉಪನಯನಾದಿಸಮಾಜಸಂಸ್ಕಾರದಿಂದ ತನಗೇನೂ ಆಗತಕ್ಕದ್ದಿಲ್ಲವೆಂದು ಮುಂತಾಗಿ ಹೇಳುವದಕ್ಕೆ ಮೊದಲು ಮಾಡಿದನು. ಸಮಾಜವೆಲ್ಲ ಹೀನಸ್ಥಿತಿಯಲ್ಲಿರುವಾಗ ವ್ಯಕ್ತಿಯ ಉನ್ನತಿಯು ಬೆಂಬಲವಿಲ್ಲದ್ದಾಗುವದೆಂದೂ ಆದ್ದರಿಂದ ವ್ಯಕ್ತಿಯ ಉನ್ನತಿಯನ್ನು ಮಾಡಿಕೊಳ್ಳಬೇಕಾದರೆ ಅಷ್ಟಿಷ್ಟಾದರೂ ಸಮಾಜದ ಉನ್ನತಿಯ ಕಡೆಗೆ ಲಕ್ಷ್ಯವನ್ನು ಕೊಡಬೇಕಾಗುವದೆಂದೂ ಸಮಾಜದ ಉನ್ನತಿಯ ಉದ್ಯೋಗವನ್ನು ಉಪಕ್ರಮಿಸಬೇಕಾದರೆ ಸಮಾಜದ ನಿಯಮಗಳನ್ನೆಲ್ಲ ಅನುಸರಿಸಬೇಕಾಗುವದೆಂದೂ ಜ್ಞಾನದೇವರು ಅಣ್ಣನಿಗೆ ತಿಳಿಯ ಹೇಳಿ ಕೊನೆಗೆ ಬ್ರಾಹ್ಮಣರ ಸಮ್ಮತಿಯನ್ನು ಪಡೆದು ಉಪನಯನಾದಿಸಂಸ್ಕಾ

ರವನ್ನು ಹೊಂದಿ ತಾವಾಗಿ ವಿಧಿನಿಷೇಧಗಳಿಗೆ ಬದ್ಧರಾಗಿ ತಮ್ಮ ಧರ್ಮೋಪ ದೇಶದಿಂದ ಮಹಾರಾಷ್ಟ್ರದೇಶದ ಉನ್ನತಿಯನ್ನು ಮುಗಿಲುಮುಟ್ಟಿಸಿದರು. ಯಾವ ವಿಧಿನಿಷೇಧಗಳು ಜ್ಞಾನಕ್ಕೆ ಸಾಧನಗಳಾದವೊ ಆ ವಿಧಿನಿಷೇಧಗಳಿಂದ ಜ್ಞಾನಾನಂತರದಲ್ಲಿ ಬಾಧಕವೇನಿದೆ? ಬಾಧಕವಿಲ್ಲದಿರುವದಿಷ್ಟೆ ಅಲ್ಲ; ಅದ ರಿಂದ ಲೋಕಕ್ಕೆ ಒಳ್ಳೆ ಉದಾಹರಣೆಯಾಗುತ್ತದೆ.

ಶಾಸ್ತ್ರವಿಧಿಪ್ರಕಾರವಾಗಿ ಸಂನ್ಯಾಸದೀಕ್ಷೆಯನ್ನು ವಹಿಸಿದರೆ ಆ ಮೇಲೆ ಅವರು ಯಾವ ಉದ್ಯೋಗದಲ್ಲಿಯೂ ಕೈಹಾಕಬಾರದೆಂದು ಕೆಲವರ ತಿಳಿವಳಿಕೆ ಇರುವದು. ಇದು ಕೇವಲ ನಿರಾಧಾರವಾದದ್ದು. ಏಕೆಂದರೆ: ಯಾರು ಸಂನ್ಯಾಸದೀಕ್ಷೆಯ ಭುಜವನ್ನು ಚಪ್ಪರಿಸಿ ಅದಕ್ಕೆ ಶ್ರೇಷ್ಠತೆಯನ್ನು ತಂದುಕೊಟ್ಟು ಶಾಸ್ತ್ರವ್ಯಾಖ್ಯಾನವನ್ನು ಮಾಡಿರುವರೊ ಅಂಥ ಶ್ರೀಶಂಕರಾ ಚಾರ್ಯರೇ ಎಲ್ಲೆಲ್ಲಿಯೂ ಒಂದು ಕಡೆ ನಿಲ್ಲದೆ ತಿರುಗಿ ತಿರುಗಿ ತಮ್ಮ ಸಿದ್ಧಾಂತವನ್ನು ಪ್ರಸಾರಮಾಡುವರಲ್ಲಿಯೆ ತಮ್ಮ ಆಯುಷ್ಯವನ್ನು ಮುಗಿ ಸಿರುತ್ತಾರೆ. ಆದರೆ ಇದು ಕೇವಲ ಧರ್ಮಪ್ರಸಾರಸಂಬಂಧವಾಯಿತೆಂದೂ ವ್ಯಾವಹಾರಿಕವಾದ ಉದ್ಯೋಗಗಳಲ್ಲಿ ಜ್ಞಾನಿಗಳು ಪ್ರವರ್ತಿಸಬಾರದೆಂದೂ ಕೆಲವರು ಹೇಳಬಹುದು. ಶ್ರೀ ಶಂಕರಾಚಾರ್ಯರವರ ಪರಂಪರೆಯಲ್ಲಿಯೆ ಅವರಿಗೆ ಎರಡನೆಯವರಾಗಿ ಯಶಸ್ವಿಗಳಾಗಿರುವ ಶ್ರೀ ವಿದ್ಯಾರಣ್ಯಸ್ವಾಮಿ ಗಳು ಆ ಸಂದೇಹವನ್ನು ನಿವೃತ್ತಿಮಾಡಿರುವರು. ಶ್ರೀ ವಿದ್ಯಾರಣ್ಯರು ತಮ್ಮ ಪೂರ್ವಾಶ್ರಮದಲ್ಲಿ ಹರಿಹರಬುಕ್ಕರ ಪ್ರಾರ್ಥನೆಗೆ ಕಿವಿಗೊಟ್ಟು ಆಗಿನ ಕಾಲದಲ್ಲಿ ಧರ್ಮದೇವತೆಯ ನಡುನೆತ್ತಿಯ ಮೇಲೆ ಬೀಳುತ್ತಿದ್ದ ಮಹ ಮ್ಮದೀಯರ ಮುಸಲಪ್ರಹಾರಗಳನ್ನು ಮುರಿದೊತ್ತಿ ಶಾಂತಿಪ್ರತಿಷ್ಠೆಯನ್ನು ಮಾಡಬೇಕೆಂದು ಪ್ರತಿಜ್ಞೆಯನ್ನು ತೊಟ್ಟು ವಿಜಯನಗರಕ್ಕೆ ಬಂದು ತಮ್ಮ ತಪಃಪ್ರಭಾವದಿಂದ ಕನಕವೃಷ್ಟಿಯನ್ನು ಮಾಡಿಸಿ ಆ ಹಣದ ಸಹಾಯದಿಂದ ತುಂಗಭದ್ರಾತೀರದಲ್ಲಿಯೆ ವಿಜಯನಗರದ ರಾಜ್ಯವನ್ನು ಸ್ಥಾಪನೆಮಾಡಿ ಹರಿಹರನಿಗೆ ಪಟ್ಟವನ್ನು ಕಟ್ಟಿದ್ದು ಜಗದ್ವಿಶ್ರುತವಾಗಿದೆ. ಕರ್ಣಾಟಕದ ಹೆಸರು ಹಿಂದುಸ್ಥಾನದಲ್ಲೆಲ್ಲ ಗುಡುಗಾಡಿದ ಯಶಸ್ಸು ಈಗಲೂ ಶ್ರೀ ವಿದ್ಯಾರಣ್ಯರೊಬ್ಬರಿಗೆ ಮೀಸಲಾಗಿದೆ. ಅವರು ಧರ್ಮದ ವಿಷಯದಲ್ಲಿ "ಭೂಮಂಡಲಾಚಾರ್ಯ" ಎಂಬ ಪರಂಪರಾಗತವಾದ ಬಿರುದಿನ ಜೊತೆಗೆ

ವ್ಯವಹಾರದಲ್ಲಿ "ಕರ್ಣಾಟಕಸಿಂಹಾಸನಪ್ರತಿಷ್ಠಾಪನಾಚಾರ್ಯ" ಎಂಬ ಬಿರುದನ್ನು ಸ್ವಪ್ರತಿಭೆಯಿಂದ ಸಂಪಾದಿಸಿರುವರು. ತಾವು ದೂರದಲ್ಲಿದ್ದು ತಮ್ಮ ತಪಃಪ್ರಭಾವದಿಂದ ರಾಜ್ಯಸ್ಥಾಪನೆ ಮಾಡಿ ಸುಮ್ಮನಾದರೆಂದೂ ಹೇಳುವ ಹಾಗಿಲ್ಲ. ಅವರು ಅಲ್ಲಿಯೆ ರಾಜಗುರುಗಳಾಗಿ ಐವತ್ತಾರು ವರುಷಗಳಿದ್ದು ರಾಜ್ಯಸೂತ್ರದ ಚಾಲಕರಾಗಿ ರಾಮರಾಜ್ಯಪದ್ಧತಿಯನ್ನು ಆಚರಣೆಗೆ ತಂದು ತೋರಿಸಿದರು. ಇನ್ನೂ ವಿಶೇಷವೇನೆಂದರೆ: ಹೊಸದೊಂದು ರಾಜ್ಯವನ್ನು ಸ್ಥಾಪನೆಮಾಡುವಂಥ ಮತ್ತು ರಾಜ್ಯಭಾರದಲ್ಲೊಂದು ಹೊಸ ಪದ್ಧತಿಯನ್ನು ನೆಲೆಗೊಳಿಸುವಂಥ ಗಡಿಬಿಡಿಯಲ್ಲಿ ತೊಡಗಿದ್ದರೂ ಅವರು ವೇದಭಾಷ್ಯದಂಥ ಮಹತ್ಕಾರ್ಯವನ್ನು ಪೂರ್ಣಗೊಳಿಸಿದ್ದಲ್ಲದೆ ಧರ್ಮಶಾಸ್ತ್ರ, ಸ್ಮೃತಿಗಳು, ವೈದ್ಯಶಾಸ್ತ್ರ, ವೇದಾಂತ, ವ್ಯಾಕರಣ— ಮೊದಲಾದ ಪ್ರತಿಯೊಂದು ವಿಷಯದಲ್ಲಿಯೂ ಉತ್ತಮವಾದ ಗ್ರಂಥಗಳನ್ನು ಬರೆದು ಅನ್ಯಾದೃಶವಾದ ಭಾಷಾಸೇವೆಯನ್ನು ಮಾಡಿರುವರು. ಆದ್ದರಿಂದ ಸಾಧಕರಿಗಾಗಲಿ ಸಿದ್ಧರಿಗಾಗಲಿ ಉದ್ಯೋಗವು ದೂಷಣವಾಗದೆ ಭೂಷಣವೆ ಆಗಿರುವದು. ಈ ಮರ್ಮವನ್ನರಿತು ಪ್ರತಿಯೊಬ್ಬನೂ ಉದ್ಯೋಗಿಯಾಗಿರುವ ಆತ್ಮಶಕ್ತಿಯನ್ನು ಊರ್ಜಿತಗೊಳಿಸಿ ಕೊಳ್ಳಬೇಕು.

# ಆಶ್ರಿತರಕ್ಷಣೆ.

ಉದ್ಯೋಗದ ವಿಚಾರವನ್ನು ಹೇಳಿದ ಮೇಲೆ ಆ ಉದ್ಯೋಗನಿಷ್ಠೆಯೆಂಬ ಸುವರ್ಣಪುಷ್ಪದ ಸುವಾಸನೆಯು ಹೊರಹೊಮ್ಮುವ ಪ್ರಸಂಗವಿಶೇಷವನ್ನು ಲಕ್ಷ್ಯಕ್ಕೆ ತಂದುಕೊಡುವದು ಅಗತ್ಯವಾಗುತ್ತದೆ. ಉದ್ಯೋಗನಿಷ್ಠೆಯು ತನಗೆ ತಾನೆ ಪ್ರಸಂಗವಿಶೇಷದಲ್ಲಿ ತನ್ನ ಪ್ರತಿಷ್ಠೆಯನ್ನು ಪ್ರಕಟ

ಮಾಡಿಕೊಳ್ಳುವದಾದರೂ ಅದನ್ನು ನೆನಪಿಗೆ ತಂದುಕೊಟ್ಟರೆ ಒಂದು ಬಗೆಯ ಸಹಾಯವಾಗುವದೆಂದು ಈ ಪ್ರಕರಣವು ಆ ವಿಚಾರವನ್ನು ತೆಗೆದುಕೊಂಡಿರುವದು. ಉದ್ಯೋಗನಿಷ್ಠನಾದ ಮನುಷ್ಯನು ತನ್ನ ಸುಖಸೌಕರ್ಯಗಳನ್ನು ತಾನು ಸಮೃದ್ಧಿಯಾಗಿ ಸಂಪಾದಿಸಿಕೊಳ್ಳಬಲ್ಲನೆಂಬುದನ್ನಂತು ಯಾರೂ ಹೇಳಬೇಕಾಗಿಯೇ ಇಲ್ಲ. ಆದರೆ ಉದ್ಯೋಗನಿಷ್ಠೆಗೆ ಇದೆ ಮುಖ್ಯ ಫಲವಲ್ಲ. ಇನ್ನು ತನ್ನ ಹೆಂಡಿರುಮಕ್ಕಳನ್ನು ಸುಸ್ಥಿತಿಯಿಂದ ರಕ್ಷಿಸುವದೂ ದೊಡ್ಡ ಮಾತಲ್ಲ. ಏಕೆಂದರೆ: ಮನುಷ್ಯಮಾತ್ರನಿಗೆ ಹೆಂಡಿರು ಮಕ್ಕಳ ಮೇಲಿನ ಪ್ರೀತಿಯು ಸ್ವಭಾವವಾಗಿ ಒಂದು ವ್ಯಸನದಂತೆ ಹತ್ತಿಕೊಂಡಿದ್ದೆ ಇರುವದು. ಹೆಂಡಿರುಮಕ್ಕಳ ಸಂರಕ್ಷಣೆಯಾದರೆ ತಮ್ಮ ಸಂರಕ್ಷಣೆಯಾಯಿತೆಂಬಷ್ಟು ಎಲ್ಲರಿಗೂ ಸ್ತ್ರೀಪುತ್ರಾದಿಗಳ ಮೇಲೆ ಮಮತೆ ಇರುವಾಗ ಒಬ್ಬನು ಆ ತನ್ನ ಪರಿವಾರವನ್ನು ಪರಿಪಾಲಿಸುವದು ಹೆಚ್ಚಲ್ಲ. ಇನ್ನೇನು? ಒಬ್ಬನು ಉದ್ಯೋಗನಿಷ್ಠನಾದನೆಂದರೆ ಅವನಿಂದ ಅವನ ಜನಾಂಗದ ಉನ್ನತಿಯೆ ಆಯಿತೆಂದು ತಿಳಿಯಬೇಕಾಗುವದು. ಏಕೆಂದರೆ: ವ್ಯಕ್ತಿಯು ಜನಾಂಗದ ಅಂಶವಾದ್ದರಿಂದ ವ್ಯಕ್ತಿಯ ಉನ್ನತಿಯಿಂದ ಜನಾಂಗವು ಒಂದು ಸೂಕ್ಷ್ಮಪ್ರಮಾಣದಿಂದಲಾದರೂ ಉನ್ನತಿಯನ್ನು ಪಡೆದಂತೆಯೇ ಆಗುವದು. ವ್ಯಕ್ತಿಯು ನಿಜವಾಗಿ ತನ್ನೊಬ್ಬನ ಉನ್ನತಿಯನ್ನೆ ಸಾಧಿಸಿದರೂ ಅದು ಇತರರಿಗೆ ಉದಾಹರಣೆಯಾಗಿ ಎಷ್ಟೋ ಜನರ ಉನ್ನತಿಗೆ ನೆರವಾಗುವದು. ಈ ರೀತಿಯಲ್ಲಿ ವ್ಯಕ್ತಿಯ ಉದ್ಯೋಗನಿಷ್ಠೆಯಿಂದ ಜನಾಂಗದ ಉನ್ನತಿಯು ಸ್ವಭಾವವಾಗಿಯೆ ಆಗುವದರಿಂದ ಅದು ಉದ್ಯೋಗನಿಷ್ಠೆಯ ಪ್ರತಿಷ್ಠೆಯ ಪ್ರಕಾಶವನ್ನು ಹೊರಗೆಡಹುವಂಥದ್ದೆನಿಸಲಾರದು. ಉದ್ಯೋಗನಿಷ್ಠೆಯ ಪ್ರತಿಷ್ಠೆಯನ್ನು ಪ್ರಕಾಶಮಾಡುವ ಪ್ರಸಂಗವು ಆಶ್ರಿತರಕ್ಷಣೆ. ಇಲ್ಲಿ ಆಶ್ರಿತರೆಂದರೆ ರಕ್ತಸಂಬಂಧಿಗಳಾದ ಸ್ತ್ರೀಪುತ್ರಾದಿಗಳಲ್ಲದೆ ಆರ್ತರಾಗಿ ಮರೆಹೊಕ್ಕವರೆಂದು ತಿಳಿಯಬೇಕು. ಏಕೆಂದರೆ: ರಕ್ತಸಂಬಂಧಿಗಳ ರಕ್ಷಣೆಯು ಸ್ವಭಾವವಾಗಿಯೇ ನಡೆದು ಹೋಗುವದೆಂದು ಹಿಂದೆ ಹೇಳಿದೆ.

ಭಕ್ತರು ಭಗವಂತನನ್ನು ಹೊಗಳುವಾಗಲೆಲ್ಲ "ಶರಣಾಗತಪರಿಪಾಲಕ" ಎಂದು ಸಂಬೋಧಿಸುತ್ತಿರುವದನ್ನು ನೋಡಿದರೂ ದೇವರಿಗೆ ದೇವತ್ವವು

ಆಶ್ರಿತರಕ್ಷಣೆಯಿಂದಲೆ ಬಂದಂತೆ ವ್ಯಕ್ತವಾಗುತ್ತದೆ. ವ್ಯವಹಾರಕ್ಕೆಲ್ಲ ಆದರ್ಶಸ್ವರೂಪನಾದ ಶ್ರೀ ರಾಮಚಂದ್ರಮೂರ್ತಿಗೆ ಕೂಡ ಇದೆ ಪರಮ ವ್ರತವಾಗಿರುವದು ನೋಡಿರಿ. ರಾವಣನಿಂದ ತಿರಸ್ಕೃತನಾಗಿ ಬಂದ ವಿಭೀಷಣನು ಆಕಾಶಮಾರ್ಗವಲ್ಲಿ ನಿಂತು ರಾಮಸಂದರ್ಶನವನ್ನು ಯಾಚನೆ ಮಾಡಲು ರಾವಣಸಂಬಂಧಿಯೆಂದು ಅವನನ್ನು ತಡೆದು ವಾನರಪ್ರಮುಖರು ರಾಮಸನ್ನಿಧಿಯಲ್ಲಿ ವಿಜ್ಞಾಪನೆ ಮಾಡಿದಾಗ ಶ್ರೀರಾಮಚಂದ್ರನು ಆಡಿರುವ ಮಾತು ಚಿರಸ್ಮರಣೀಯವಾಗಿದೆ. "ಒಮ್ಮೆ ನನ್ನ ಕಡೆಗೆ ಬಂದು ನಿನ್ನ ವನೆಂದು ಹೇಳಿಕೊಂಡರೆ ಸಾಕು; ಅಂಥ ಸಮಸ್ತರಿಗೂ ಅಭಯವನ್ನು ಕೊಡುವದೆ ನನ್ನ ವ್ರತ" ಎಂದು ಅವನು ಹೇಳಿದ್ದಾನೆ. ಆ ಸಮಯದಲ್ಲಿ ಬರೀ ವಿಭೀಷಣನೆ ಅಲ್ಲ; ಸಾಕ್ಷಾದ್ರಾವಣನೆ ಶರಣೆಂದು ಬಂದರೂ ಅವನ ಸಂರಕ್ಷಣೆಯ ಭಾರವನ್ನು ತಾನು ವಹಿಸುವವನೆಂದು ಶ್ರೀ ರಾಮಚಂದ್ರನು ಆಡಿ ತೋರಿಸಿರುವನು. ಆದ್ದರಿಂದ ಉದ್ಯೋಗನಿಷ್ಠಾಸ್ವರೂಪವಾದ ಆತ್ಮಶಕ್ತಿಗೆ ಆಶ್ರಿತರಕ್ಷಣೆಯೆ ಒಳ್ಳೆ ವಿಹಾರಭೂಮಿ.

ಒಬ್ಬನು ಇನ್ನೊಬ್ಬನಿಗೆ ಶರಣು ಹೋಗುವದೆಂದರೆ ತನ್ನಲ್ಲಿ ತನ್ನ ಆತ್ಮರಕ್ಷಣೆಯ ಸಾಮರ್ಥ್ಯದ ಕೊರತೆಯು ತೋರಿದಾಗಲೆ ಸರಿ. ಅಂಥ ಕೊರತೆಯ ಕಾಲದಲ್ಲಿ ಸಮರ್ಥನಾದವನು ಆಶ್ರಯವನ್ನು ಕೊಡುವದು ದೇವತ್ವದ ಲಕ್ಷಣ. ಯಾವ ಜಾತಿಯಲ್ಲಾದರೂ ದೇವಾಂಶರೆಂದು ಹೇಳಿಸಿ ಕೊಳ್ಳುವ ಮಹಾಮಹಿಮರಲ್ಲೆಲ್ಲ ಈ ಗುಣವು ಕಂಡೆ ಕಾಣುವದು. ಮುಸಲ್ಮಾನರೂ ಹಿಂದುಗಳೂ ಇಬ್ಬರೂ ಬಹುಮಾನಿಸುವ ಅಕ್ಬರನ ಚರಿತ್ರೆ ಯಲ್ಲೆಲ್ಲ ಉಜ್ಜ್ವಲವಾಗಿರುವದು ಆಶ್ರಿತರಕ್ಷಣೆಯೆ. ಅವನು ಹಿಂದುರಾಜರ ಮುಂದೆ ತನ್ನ ಕತ್ತಿಯನ್ನು ಝಳಪಿಸಿ ಅವರ ಕಣ್ಣಿಗೆ ಕತ್ತಲೆಯನ್ನುಂಟು ಮಾಡಿದ್ದು ನಿಜ. ಆ ಕಾರ್ಯವನ್ನು ತೋಳ ತೀಟೆಯುಳ್ಳವರೆಲ್ಲರೂ ಸಹಜ ವಾಗಿ ಮಾಡಬಹುದು. ಅವನಿಗೆ ಯಶಸ್ಸು ದೊರೆತದ್ದು ಪ್ರತಿಯೊಬ್ಬರನ್ನೂ ಸೋಲಿಸಿದ್ದರಿಂದ ಅಲ್ಲ. ಸೋಲಿಸಿದವರು ಬಹುಮಂದಿಯುಂಟು. ಸೋತು ಶರಣೆಂದವರನ್ನು ರಕ್ಷಿಸಿದ್ದೆ ಅಕ್ಬರನ ಹೆಚ್ಚುಗಾರಿಕೆ. ನಿಜವಾಗಿ ಅಕ್ಬರನ ಚರಿತ್ರೆಯಲ್ಲಿ ಕತ್ತಿಯಿಂದಾದ ಜಯಕ್ಕಿಂತಲೂ ಆಶ್ರಿತರಕ್ಷಣೆಯಿಂದಾದ ಜಯವೆ ಪ್ರಶಂಸನೀಯವಾಗಿರುವದು. ಮಹಮ್ಮದೀಯರೆಂದರೆ ಎಷ್ಟೊ

ಶತಮಾನಗಳಿಂದ ವಿಷವನ್ನು ಕಕ್ಕುತ್ತಿದ್ದ ಹಿಂದುಗಳು ಅಕ್ಬರನ ಕಾಲದಲ್ಲಿ ತಮ್ಮ ಜಾತಿಮರ್ಯಾದೆಗಳನ್ನೆಲ್ಲ ಮರೆತು ರಕ್ತಸಂಬಂಧವನ್ನು ಬೆಳೆಸಿದ್ದಕ್ಕೆ ಆಶ್ರಿತರಕ್ಷಣೆಯ ಪ್ರಭಾವದ ಹೊರತು ಮತ್ತೇನು ಕಾರಣವಿದೆ? ಶರಣೆಂದ ಮಾತ್ರದಿಂದ ಅಕ್ಬರನು ತನ್ನ ಮಹಾಪ್ರಬಲಪ್ರತಿಕಕ್ಷಿಯನ್ನಾದರೂ ಅತ್ಯಂತಸ್ವಕೀಯನನ್ನಾಗಿ ಸಂಭಾವಿಸುತ್ತಿದ್ದದ್ದರಿಂದ ಅವನ ಯಶಸ್ಸು ದಿಗಂತವಿಶ್ರಾಂತವಾಯಿತು ರಾಜರಾಗಿದ್ದವರು ಶರಣುಬಂದಾಗ ಅವರ ರಾಜತ್ವವನ್ನು ಅವರ ಕಡೆಗೆ ಬಿಟ್ಟು ಅವರನ್ನು ಆಶ್ರಿತಮಂಡಲಿಯಲ್ಲಿ ಸೇರಿಸಿಕೊಳ್ಳುವದೂ ದೊಡ್ಡಮಾತಲ್ಲ. ಏಕೆಂದರೆ. ಅವರ ಅಧೀನರಾಜತ್ವ ದಿಂದ ತನಗೆ ಬಗೆಬಗೆಯ ಲಾಭಗಳಿರುವವು. ಅಕ್ಬರನು ತನ್ನ ಅಧಿಕಾರಿ ಗಳಲ್ಲಿ ದುರ್ವೃತ್ತರಾಗಿ ನಡೆದವರನ್ನು ಮನ್ನಿಸಿ ಅವರ ಅನ್ಯಾಯದ ಸಂಪಾ ದನೆಯನ್ನು ಅವರಿಗೆ ಕೈಬಿಟ್ಟಿರುವ ಉದಾಹರಣೆಗಳುಂಟು. ಖಾನಜಮಾನ ನೆಂಬ ಅಧಿಕಾರಿಯು ತಾನು ಸುಲಿಗೆಯಲ್ಲಿ ತಂದ ಹಣವನ್ನು ಅಕ್ಬರನಿಗೆ ಮುಟ್ಟಿಸದೆ ಬಚ್ಚಿಟ್ಟುಕೊಂಡಿದ್ದು ಕೊನೆಗೆ ತನ್ನ ಯಾವ ಉಪಾಯವೂ ಸಾಗದೆ ಹೋದ ಮೇಲೆ ಅವನ್ನು ಅಕ್ಬರನ ಮುಂದಿಟ್ಟು ತನ್ನ ತಪ್ಪಿಗೊಪ್ಪಿ ಕೊಂಡು ಶರಣು ಬಂದನು. ಅಕ್ಬರನು ·ಅವನನ್ನು ಮನ್ನಿಸಿದ್ದಿಷ್ಟೆ ಅಲ್ಲ; ಅವನ ಆಸೆಯನ್ನು ನೋಡಿ ಆ ಸುಲಿಗೆಯ ಬಹುಭಾಗವನ್ನು ಅವನಿಗೇ ಕೊಟ್ಟುಬಿಟ್ಟನು. ಇನ್ನೊಂದೆ ಉದಾಹರಣೆಯುಂಟು. ಆದಂಖಾನನೆಂಬ ಒಬ್ಬ ದಳವಾಯಿಯು ಒಬ್ಬ ರಾಜನನ್ನು ಸೋಲಿಸಿ ಅವನ ರಾಣಿವಾಸದವ ರನ್ನೂ ಅಷ್ಟೈಶ್ವರ್ಯವನ್ನೂ ತನ್ನ ಉಪಭೋಗಕಿಟ್ಟುಕೊಂಡದ್ದನ್ನು ನೋಡಿದೊಡನೆ ಅಕ್ಬರನು ಅವನನ್ನು ಆ ಅಧಿಕಾರದಿಂದ ತೆಗೆದೊಗೆದನು. ಆದರೆ ಅವನು ಪಶ್ಚಾತ್ತಾಪವನ್ನು ಹೊಂದಿದಂತೆ ತೋರಿಸಿಕೊಂಡು ಶರಣು ಬರುತ್ತಲೆ ಅವನು ಮತ್ತೆ ಆ ಖಾನನಿಗೆ ಮೊದಲಿಗಿಂತಲೂ ಹೆಚ್ಚಿನ ಅಧಿಕಾರ ವನ್ನು ಕೊಟ್ಟು ತನ್ನವನನ್ನಾಗಿ ಕೈಹಿಡಿದನು. ಹೀಗೆಂದು ಅವನು ಕ್ಷಮಿಸು ವದನ್ನೆ ನಿತ್ಯವ್ರತವಾಗಿ ಮಾತ್ರ ಮಾಡಿಕೊಂಡಿರಲಿಲ್ಲ. ಅದೆ ಆದಂಖಾನನೆ ಮತ್ತೊಮ್ಮೆ ಅಕ್ಬರನಿಗೆ ಎರಡು ಬಗೆದು ಅವನನ್ನು ಕೊಲ್ಲುವ ಒಳಸಂಚಿ ನಿಂದ ಬರಲು ಇವನ ಕೃತ್ರಿಮತನಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡ ಬೇಕೆಂದು ನಿಶ್ಚಯಿಸಿ ಅಕ್ಬರನು ಅವನನ್ನು ಚೂರುಚೂರಾಗುವಂತೆ ಅರ

ಮನೆಯ ಮೇಲಿನಿಂದ ಕೆಳಕ್ಕೆ ಬೀಳಿಸಿ ಬಿಟ್ಟನು. ದುರುಳರಿಗೆ ತಕ್ಕ ಶಾಸನವನ್ನು ಮಾಡುತ್ತ ಶರಣರನ್ನು ರಕ್ಷಿಸುವದೆ ಮಹನೀಯತೆ. ನೀತಿಶಾಸ್ತ್ರಕಾರರ ವಚನವನ್ನು ಕೇಳಿರಿ:—

ಕಂ|| ಸುರಪನ ಪವಿಯಂ ನಗುವಂ।
ತಿರೆ ಕಠಿನತೆ; ಪೂವಿನಂತಿರಲ್ಮಾರ್ದವಮುಂ; ||
ಧರೆಗಚ್ಚರಿಯೆನಿಸುವ ಸ।
ತ್ಪುರುಷರ ನಡೆವಳಿಯ ಬೆಲೆಯನರಿಯುವದಳವೇ? ||

ಶತ್ರುಗಳು ಶತ್ರುತ್ವವನ್ನು ಬಿಟ್ಟು ಶರಣೆನ್ನುತ್ತಲಿ ರಕ್ಷಣೆಮಾಡಿದ ಅಕ್ಬರನ ಇತಿಹಾಸದೊಂದಿಗೆ ಲಕ್ಷ್ಮೀಬಾಯಿಯ ಇತಿಹಾಸವನ್ನು ಗಂಟು ಹಾಕಿ ನೋಡಿರಿ. ಇಂಗ್ಲೀಷರು ಲಕ್ಷ್ಮೀಬಾಯಿಯ ಕೈಯಿಂದ ಝಾಂನ್ಸಿಯ ರಾಜ್ಯಸೂತ್ರವನ್ನು ಕಸುಕೊಂಡು ಆಕೆಯನ್ನು ಕೋಟೆಯ ಅರಮನೆಯಲ್ಲಿ ಕೂಡ ಇರಗೊಡದೆ ಹೊರಗೆ ಕಾಲಕ್ಷೇಪಮಾಡುವಂತೆ ಶಾಸನವನ್ನು ಮಾಡಿದ್ದರು. ಈ ಪರಿಭವದ ಸಂಕಟದಿಂದ ಲಕ್ಷ್ಮೀಬಾಯಿಯ ಮನಸ್ಸು ಬೆಂದು ಬೇಗುದಿಗೊಂಡು ಹೋಗಿತ್ತು. ಇಂಥ ಸಂದರ್ಭದಲ್ಲಿ ದೊಡ್ಡ ಶಿಪಾಯ ದಂಗೆಯ ಹಾವಳಿಯು ಝಾಂನ್ಸಿಗೂ ಕಾಲು ಹಾಕಿತು. ಆಗ ಅಲ್ಲಿ ಇಂಗ್ಲೀಷರಿಗೆ ನಿಲ್ಲುವದಕ್ಕೆ ನೆರಳಿಲ್ಲದಂಥ ಹೊತ್ತು ಬಂದಿತ್ತು. ಆ ಗಡಿಬಿಡಿಯಲ್ಲಿ ಲಕ್ಷ್ಮೀಬಾಯಿಯು ಇಂಗ್ಲೀಷರ ಹೆಂಗಸರುಮಕ್ಕಳಿಗೆಲ್ಲ ತನ್ನಲ್ಲಿ ಆಶ್ರಯವನ್ನು ಕೊಟ್ಟು ಹೊರಗಿದ್ದ ಗಂಡಸರಿಗೂ ಆಹಾರದ್ರವ್ಯಗಳನ್ನು ಒದಗಿಸಿ ಅವರೆಲ್ಲರನ್ನೂ ಸಂರಕ್ಷಣೆಮಾಡಿದಳು. ಹೀಗೆ ತಮ್ಮ ಸ್ವಾಭಿಮಾನವನ್ನು ಬಿಟ್ಟು ಶರಣೆನ್ನದೆ ಪ್ರತಿಪಕ್ಷದಲ್ಲಿಯೆ ಇದ್ದು ಶರಣೆಂದರೂ ಅದಕ್ಕೆ ಆಶ್ರಯವನ್ನು ಕೊಟ್ಟ ಲಕ್ಷ್ಮೀಬಾಯಿಯ ಆತ್ಮಶಕ್ತಿಯು ಸ್ತುತ್ಯವಾಗಿರುವದು.

ಅಕ್ಬರನೂ ಲಕ್ಷ್ಮೀಬಾಯಿಯೂ ತೋರಿಸಿರುವ ಆಶ್ರಿತರಕ್ಷಣೆಯು ಆತ್ಮಶಕ್ತಿಯಲ್ಲಿ ಒಂದೊಂದು ಪ್ರಯೋಜನರೂಪವಾದ ಜಿದ್ದು ಇರುವದೆಂದರೂ ಸಲ್ಲುವದು. ಅಕ್ಬರನಿಗೆ ಅಧೀನರಾಜರಿಂದ ಅಥವಾ ಪಶ್ಚಾತ್ತಾಪಪಟ್ಟ ಅಧಿಕಾರಿಗಳಿಂದ ಪ್ರತ್ಯಕ್ಷವಾದ ಲಾಭವಿದ್ದೆ ಇತ್ತು. ಲಕ್ಷ್ಮೀಬಾಯಿಗೆ ಇಂಗ್ಲೀಷರಿಂದ ಆ ಉಪಕಾರದ ಫಲವಾಗಿ ರಾಜ್ಯವು ಹಿಂದಿರುಗ

ಬಹುದೆಂಬ ಮನೋರಾಜ್ಯವಿತ್ತು. ಶ್ರೀ ವಿದ್ಯಾರಣ್ಯರ ಚರಿತ್ರೆಯನ್ನು ನೋಡಿದರೆ ಇಂಥ ಪ್ರಸಂಗಗಳೇನೂ ಇಲ್ಲ. ಇನ್ನೇನು? ವಿದ್ಯಾರಣ್ಯರ ಪೂರ್ವಿಕರು ಹುಕ್ಕಬುಕ್ಕರ ಮನೆತನದ ಪುರೋಹಿತರಾಗಿರಬಹುದು. ಸಾಕ್ಷಾತ್ತಾಗಿ ವಿದ್ಯಾರಣ್ಯರಿಗೆ ಹುಕ್ಕಬುಕ್ಕರಿಂದಾಗಿರುವ ಲಾಭವೆಂದರೆ ತಮ್ಮ ತಪಶ್ಚರ್ಯೆಯ ಕಾಲದಲ್ಲಿ ಒಂದೊಂದು ಸಮಯದಲ್ಲಿ ಅವರು ತಂದು ಕೊಡುತ್ತಿದ್ದ ಹಣ್ಣುಹಂಪಲು; ಇಷ್ಟೆ. ಹೀಗಿದ್ದರೂ ಮದೋನ್ಮತ್ತರಾದ ಮುಸಲ್ಮಾನರ ಮಹಾಭಯಂಕರವಾದ ಪೆಟ್ಟಿನಿಂದ ಹಿಂದುಗಳ ರಾಜ್ಯಗಳೆಲ್ಲ ಮಣ್ಣುಮುಕ್ಕಿ ಹೋಗಿರುವಾಗ ಸ್ವಾಭಿಮಾನದ ಸ್ಫೂರ್ತಿಯನ್ನು ಪಡೆದ ಹುಕ್ಕಬುಕ್ಕರು ತಮಗೆ ಸಹಾಯವಾಗಬೇಕೆಂದು ಬಯಸಿ ಶರಣುಬರುತ್ತಲೆ ಶ್ರೀ ವಿದ್ಯಾರಣ್ಯರು ತಮ್ಮ ಕೆಲಸಗಳನ್ನೆಲ್ಲ ಬಿಟ್ಟು ಆಶ್ರಿತರಕ್ಷಣೆಯೆ ಪರಮಧರ್ಮವೆಂದು ಮನಸ್ಸುಗೊಟ್ಟು ಹಂಪೆಗೆ ಬಂದು ಹುಕ್ಕಬುಕ್ಕರಿಗಾಗಿ ವಿಜಯನಗರದ ಸಾಮ್ರಾಜ್ಯವನ್ನು ಸ್ಥಾಪಿಸಿದ್ದು ಎಷ್ಟು ಮಹತ್ತ್ವದ ಮಾತು! ಬರೀ ಸ್ಥಾಪಿಸಿದ್ದಿಷ್ಟೆ ಅಲ್ಲ; ಉತ್ತಮ ರಾಜ್ಯಪದ್ಧತಿಗೆ ಮಾರ್ಗದರ್ಶಕರಾಗಿ ಅನೇಕ ವರ್ಷಗಳು ರಾಜ್ಯಸೂತ್ರದ ಚಾಲಕರಾಗಿಯೆ ಇದ್ದು ಆಶ್ರಿತರಕ್ಷಣೆಯನ್ನು ಮಾಡಿದ ಆತ್ಮಶಕ್ತಿಯ ಬೆಲೆಯನ್ನಂತು ಹೇಳಲಿಕ್ಕೆ ಆಗುವದಿಲ್ಲ.

ಶ್ರೀ ವಿದ್ಯಾರಣ್ಯರಂಥ ಮಹಾವಿಭೂತಿಗಳ ಮಾತು ಹಾಗಿರಲಿ; ಏಕೆಂದರೆ: ಆಶ್ರಿತರಕ್ಷಣೆಯೆಂಬುವದು ಅಂಥವರ ಸಹಜಗುಣವೆ ಆಗಿರುವದು. ಕೇವಲ ವ್ಯವಹಾರಿಕರಾಗಿದ್ದವರಲ್ಲಾದರೂ ನಮ್ಮವರಲ್ಲಿ ಆಶ್ರಿತರಕ್ಷಣೆಯು ವ್ಯಕ್ತಪಟ್ಟಿರುವದು. ಹೈದರಾಬಾದಿನ ನವಾಬನ ರುಖಮತದೌಲಾ ಎಂಬ ಒಬ್ಬ ಸಚಿವನು ಒಂದು ಕಡೆ ತನ್ನ ಅರಮನೆಯನ್ನು ಕಟ್ಟಿಸಬೇಕಾಗಿತ್ತು. ಆ ಸ್ಥಳದ ನೆರೆಯಲ್ಲಿ ಒಬ್ಬ ಬಡ ಹಾರವನದೊಂದು ಮನೆ ಇತ್ತು. ಆ ಸ್ಥಳವನ್ನು ಒಳಗು ಮಾಡಿಕೊಂಡರೆ ತನ್ನರಮನೆಯು ಅಂದವಾಗುವದೆಂದು ಆ ಸಚಿವನ ಮನಸ್ಸಿನಲ್ಲಿ ಒಂದು ಕಲ್ಪನಾತರಂಗವೆದ್ದಿತು. ಅವನು ಆ ಬ್ರಾಹ್ಮಣನನ್ನು ಕೇಳಿ ನೋಡಿದನು. ಅದು ಸಫಲವಾಗಲಿಲ್ಲ. ಆಮೇಲೆ ಅವನು ತನ್ನ ಅಧಿಕಾರದರ್ಪದಿಂದ ಅದನ್ನು ಆಕ್ರಮಿಸಿಕೊಂಡುಬಿಟ್ಟನು. ದಿಕ್ಕಿಲ್ಲದವನಾದ ಆ ಬ್ರಾಹ್ಮಣನು ಆಗ ನೆಟ್ಟಗೆ ಪುಣೆಗೆ ಬಂದು ಪೇಷ್ವೆ ಮಾಧವರಾಯನಿಗೆ ಶರಣು ಹೊಕ್ಕನು. ಶರಣಾಗತರನ್ನು ರಕ್ಷಿಸುವದು

ತನ್ನ ಕರ್ತವ್ಯವೆಂಬ ಅಭಿಮಾನವನ್ನು ತಳೆದು ಅನಿಮಿತ್ತಬಂಧುವಾದ ಮಾಧವರಾಯನು ಒಡನೆ ತನ್ನ ಆಸ್ಥಾನದಲ್ಲಿದ್ದ ಹೈದರಾಬಾದಿನ ರಾಯಭಾರಿಯನ್ನು ಕರೆದು ಆ ಬ್ರಾಹ್ಮಣನ ಸ್ಥಲವನ್ನು ಹಿಂದಕ್ಕೆ ಕೊಡಿಸಬೇಕೆಂದು ಹೇಳಿದನು. ಆ ರಾಯಭಾರಿಯು ಆಗಲೆಂದು ಅವರಂತೆ ಹೈದರಾಬಾದಿಗೆ ಪತ್ರವನ್ನು ಬರೆದನು. ಆದರೂ ಆ ಕಾರ್ಯವು ನೆರವೇರಲಿಲ್ಲ. ಇದನ್ನು ನೋಡಿ ಕ್ರುದ್ಧನಾದ ಮಾಧವರಾಯನು ಒಡನೆ ಸೇನೆಯನ್ನು ಸನ್ನದ್ಧಮಾಡಿ ಹೈದರಾಬಾದಿಗೆ ಕಳುಹಿಸಿ ರಣಭೇರಿಯನ್ನು ಹೊಡೆಸಲು ಒಂದಲ್ಪಕಾರ್ಯಕ್ಕಾಗಿ ಮಹದಪಾಯವನ್ನು ಕೈಗೊಂಡ ಪೇಷ್ವೆಯ ನಡೆವಳಿಕೆಗೆ ಚಕಿತನಾಗಿ ಆ ಸಚಿವನು ಉಸಿರೆತ್ತದೆ ಬ್ರಾಹ್ಮಣನ ಸ್ಥಲವನ್ನು ಬಿಟ್ಟುಕೊಟ್ಟು ಸೇನೆಯನ್ನು ಸಮಾಧಾನಮಾಡಿ ಹಿಂದಿರುಗಿಸಿದನು.

ಸಾಕ್ಷಾತ್ತಾಗಿ ಬಂದು ನಿನ್ನವನನ್ನಾಗಿ ಮಾಡಿಕೊಳ್ಳೆಂದು ಶರಣುಬಂದ ಬ್ರಾಹ್ಮಣನನ್ನು ಕಾಪಾಡಿದ ಪೇಷ್ವೆಯ ಮಾತಂತಿರಲಿ. ಪರೋಕ್ಷದಲ್ಲಿ ಶರಣುಬಂದವರನ್ನು ಕೂಡ ಕಾಪಾಡಿದಂಥ ಸ್ವಾಭಿಮಾನದ ದಿವ್ಯಮೂರ್ತಿಗಳು ನಮ್ಮ ದೇಶದಲ್ಲಿ ಕಂಗೊಳಿಸುವರು. ಕಾನ್ಯಕುಬ್ಜದ ಅರಸಾದ ಜಯಚಂದನು ಒಮ್ಮೆ ತನ್ನ ಮಗಳಾದ ಸಂಯುಕ್ತೆಯ ಸ್ವಯಂವರ ಸಮಾರಂಭವನ್ನು ಹೂಡಿದನು. ಮಹಾಪ್ರತಿಭಾಸಂಪನ್ನರಾದ ಅನೇಕ ರಾಜಪುತ್ರರಿಂದ ಸಭೆಯು ಕಿಕ್ಕಿರಿದು ಹೋಗಿತ್ತು. ಇವನಲ್ಲಿ ಸಹಾನುಭೂತಿ ಇಲ್ಲದ್ದರಿಂದ ದೆಹಲಿಯ ಪೃಥ್ವೀರಾಜನೊಬ್ಬನು ಮಾತ್ರ ಬಂದಿರಲಿಲ್ಲ. ಪೃಥ್ವೀರಾಜನು ನಿಜವಾಗಿ ಪೃಥ್ವೀರಾಜನಾಗಿಯೆ ಹೆಸರುಗೊಂಡಿದ್ದನು. ಆದ್ದರಿಂದ ಆ ಸಂಯುಕ್ತೆಯಾದರೂ ಪೃಥ್ವೀರಾಜನ ಯಶಸ್ಸಿಗೆ ಸೋತವಳಾಗಿ ತನ್ನ ಮನಸ್ಸಿನಲ್ಲಿ ಅವನನ್ನೆ ವರಿಸುವವಳಾಗಿದ್ದಳು. ದುರ್ದೈವಿಯಾದ ಜಯಚಂದನಿಗೆ ಈ ಗುಟ್ಟು ತಿಳಿಯಲಿಲ್ಲ. ತನ್ನ ಪ್ರತಿಸ್ಪರ್ಧಿಯಾದ ಅವನಿಗೆ ಅವಮಾನವನ್ನು ಮಾಡಬೇಕೆಂದು ಚಿನ್ನದಲ್ಲಿ ಅವನ ವಿಗ್ರಹವನ್ನು ಮಾಡಿಸಿ ಅದನ್ನು ಸ್ವಯಂವರಮಂಟಪದ ದ್ವಾರಪಾಲಕಸ್ಥಾನದಲ್ಲಿಡಿಸಿದನು. ಪುಷ್ಪಮಾಲೆಯನ್ನು ಹಿಡಿದು ವರಾನ್ವೇಷಣಕ್ಕಾಗಿ ಸಭಾಪ್ರವೇಶ ಮಾಡಿದ ಸಂಯುಕ್ತೆಯು ಉಳಿದ ರಾಜಪುತ್ರರ ಕಡೆಗೆ ಕಡೆಗಣ್ಣನ್ನು ಕೂಡ ಹಾಕದೆ ನೆಟ್ಟಗೆ ಬಂದು ಪೃಥ್ವೀರಾಜನ ಪುಟ್ಟ ಪುತ್ಥಳಿಗೆ ಮಾಲೆ

ಯನ್ನು ಹಾಕಿದಳು. ಇದನ್ನು ನೋಡಿ ಎಲ್ಲರೂ ದಿಗ್ಭ್ರಾಂತರಾದರು. ತನ್ನನ್ನು ವರಿಸಿದಳೆಂಬ ಸಮಾಚಾರವನ್ನು ಹೇಗೊ ತಿಳಿದು ಪೃಥ್ವೀರಾಜನು ಒಡನೆ ಸಂಯುಕ್ತೆಯನ್ನು ಕರೆದೊಯ್ಯಲು ಸಿಂಹದಂತೆ ಹಾರಿಬಂದನು. ಜಯಚಂದನಿಗೂ ಪೃಥ್ವೀರಾಜನಿಗೂ ತುಮುಲಯುದ್ಧವಾಯಿತು. ಜಯಚಂದನ ಕೈ ಸಾಗಲಿಲ್ಲ. ಜಯಲಕ್ಷ್ಮಿಯನ್ನೂ ಸಂಯುಕ್ತೆಯನ್ನೂ ಒಳಗೊಂಡು ಪೃಥ್ವೀರಾಜನು ತನ್ನ ರಾಜಧಾನಿಯನ್ನು ಸೇರಿ ತನ್ನ ಆಶ್ರಿತರಕ್ಷಣೆಯ ಆತ್ಮಶಕ್ತಿಯಿಂದ ಲೋಕವನ್ನೆಲ್ಲ ಬೆರಗುಮಾಡಿದನು.

ಸ್ವಾಭಿಮಾನಿಗಳು ಮಾಡುವ ಆಶ್ರಿತರಕ್ಷಣೆಗಿಂತಲೂ ಸಾಧುಸತ್ಪುರುಷರು ಮಾಡುವ ಆಶ್ರಿತರಕ್ಷಣೆಯು ವಿಲಕ್ಷಣವಾಗಿರುವದು. ಹೇಗೆಂದರೆ: ಎಂಥ ಸ್ವಾಭಿಮಾನಿಯಾದರೂ ಅವನು ರಕ್ಷಿಸುವದು ಶರಣಾಗತರನ್ನು; ಶರಣೆನ್ನದಿದ್ದರೂ ತಾವಾಗಿ ರಕ್ಷಿಸುವದು ಸಾಧುಸತ್ಪುರುಷರ ಸ್ವಭಾವ. ಲೌಕಿಕವ್ಯವಹಾರದಲ್ಲಿ ಜಿಹಾಸೆಯನ್ನು ಹೊಂದಿ ನಿರಭಿಮಾನದಿಂದ ಸಂಚಾರಮಾಡುತ್ತಿದ್ದ ತುಲಸೀದಾಸರು ಒಮ್ಮೆ ಷಹಾಬಾದ ಜಿಲ್ಲೆಯಲ್ಲಿ ಓಡಾಡುತ್ತಿದ್ದರು. ಅವರ ದರ್ಶನವಾದಾಗ ಒಬ್ಬ ದನಾಕಾಯುವವನು ಸಾಧುಸತ್ಪುರುಷರ ಮೇಲಿನ ಸ್ವಭಾವಸಿದ್ಧವಾದ ಪ್ರೀತಿಯಿಂದ ಅವರನ್ನು ಕರೆದು ಆದರಿಸಿ ಅವರಿಗೆ ಹಾಲನ್ನು ಕೊಟ್ಟನು. ಅಷ್ಟಕ್ಕೇ ಸಂತುಷ್ಟರಾಗಿ ಪರಮಕೋಮಲಾಂತಃಕರಣರಾದ ತುಲಸೀದಾಸರು ಅವನ ಮೇಲೆ ತಮ್ಮನುಗ್ರಹವನ್ನು ಮಾಡಬೇಕೆಂದು ತಾವಾಗಿಯೆ ಅವನನ್ನು ಕರೆದು "ನಿನ್ನಿಷ್ಟಾರ್ಥವೇನು?" ಎಂದು ಕೇಳಿದರು. ದಡ್ಡನಾಗಿ ನಿಜವಾಗಿ ದನಕಾಯುವವನೆ ಆಗಿದ್ದ ಅವನಿಗೆ ಇಂಥ ದೊಡ್ಡವರಿಂದ ಏನನ್ನು ಪಡೆಯಬೇಕೆಂಬುದು ತಿಳಿಯಲಿಲ್ಲ. ಅವನ ಮನಸ್ಸಿಗೆ ಸಾವಿನ ವಿಚಾರವೊಂದು ಪ್ರತಿಕ್ಷಣದಲ್ಲಿಯೂ ಹುಲಿಯಂತೆ ಕಾಣಿಸಿಕೊಳ್ಳುತ್ತಿತ್ತು. ಇದರಿಂದ ಭೀತನಾಗಿದ್ದ ಅವನು ಇದರ ಭಯವನ್ನು ತಪ್ಪಿಸಿರೆಂದು ಅವರನ್ನು ಕೇಳಿಕೊಂಡನು. ಕೇಳಿದವರ ಇಷ್ಟವನ್ನು ಸರ್ವವಿಧದಿಂದಲೂ ಪೂರ್ಣಮಾಡುವದೆ ಸಾಧುಸತ್ಪುರುಷರ ಸಹಜಗುಣವಾದ್ದರಿಂದ ಅವರು ಅವನ ಇಷ್ಟವನ್ನು ಪೂರ್ಣಮಾಡಲಿಬೇಕಾಗಿ ಬಂತು. ಅವನ ಇಷ್ಟವು ಸಾಮಾನ್ಯವಾದದ್ದಾಗಿರಲಿಲ್ಲ. ಬಹುಮಹತ್ತ್ವದ್ದಾಗಿತ್ತು. ಆಗ ತುಲಸೀದಾಸರು "ಇನ್ನು ಮುಂದೆ ನೀನು

ದುಷ್ಕರ್ಮಗಳನ್ನು ಬಿಟ್ಟು ಸತ್ಕರ್ಮಗಳನ್ನು ಮಾಡು; ಹಿಂದಿನ ದುಷ್ಕರ್ಮಗಳನ್ನು ಮನ್ನಿಸಿ ಭಗವಂತನು ನಿನಗೆ ಮರಣದ ಭಯವನ್ನು ತಪ್ಪಿಸುವ" ನೆಂದು ಅಭಯವನ್ನು ಕೊಟ್ಟು ತಮ್ಮ ಆಶ್ರಿತರಕ್ಷಣೆಯ ಆತ್ಮಶಕ್ತಿಯನ್ನು ಅರ್ಥವತ್ತಾಗಿ ಮಾಡಿದರು.

# ನಿಷ್ಪಕ್ಷಪಾತ

ಧೈರ್ಯದಿಂದ ಉದ್ಯೋಗನಿಷ್ಠನಾಗಿ ಆಶ್ರಿತರಕ್ಷಣೆ ಮೊದಲಾದ ಆತ್ಮಶಕ್ತಿಗಳನ್ನು ಪ್ರಕಾಶಮಾಡುವಾಗ ಎಷ್ಟೋ ಸಂದರ್ಭಗಳಲ್ಲಿ ಗುಣದೋಷಗಳನ್ನು ತಕ್ಕಡಿಗೆ ಹಾಕಿ ತೂಕಮಾಡಿ ನೋಡಬೇಕಾಗುತ್ತದೆ. ಎಷ್ಟೊ ವೇಳೆ ಅದರ ಮೇಲುಕೀಳುಗಳನ್ನು ಜಾಗರೂಕತೆಯಿಂದ ಕಾದು ತಿಳಿಯಲಾಗುವಷ್ಟು ಲಕ್ಷ್ಯ ಉಂಟಾಗುವದೆ ಕಡಿಮೆ. ಒಂದು ವೇಳೆ ಜಾಗರೂಕತೆಯಿಂದ ನೋಡುತಾಗಲೂ ಮನುಷ್ಯರು ತಮ್ಮ ಮನಸ್ಸಿನಲ್ಲಿ ಮನೇಮಾಡಿಕೊಂಡಿರುವ ಗುಣದೋಷಗಳೆಂಬ ಸುಲೋಚನವನ್ನು ಕಣ್ಣಿಗೆ ಹಾಕಿಕೊಂಡೆ ನೋಡುವರು. ಹೀಗೆ ಮಾಡುವದರಿಂದ ವಸ್ತುವಿನಲ್ಲಿ ಸ್ವಭಾವವಾಗಿರುವ ಗುಣದೋಷವು ಕಾಣುವದಕ್ಕೆ ಬದಲಾಗಿ ಆ ವಸ್ತುವೆಲ್ಲ ನಮ್ಮ ಮನಸ್ಸಿನಲ್ಲಿರುವ ಗುಣದೋಷಗಳಿಂದ ಆವೃತವಾಗಿ ಕಂಡು ಬರುವದು. ಈ ನೋಟಕ್ಕೆ ನೋಡಿದ ಶ್ರಮೆಯೊಂದೆ ಲಾಭವೇ ಹೊರತು ಮತ್ತೇನೂ ಇಲ್ಲ. ಹೀಗೆ ತನ್ನ ಮನಸ್ಸಿನಲ್ಲಿ ಮೊದಲೆ ಮನೇಮಾಡಿಕೊಂಡಿರುವ ಗುಣದೋಷವಿಚಾರಗಳನ್ನು ಮುಂದು ಮಾಡಿಕೊಂಡೇ ನೋಡುವದು ಮನುಷ್ಯವರ್ಗಕ್ಕಿರುವ ಒಂದು ದೊಡ್ಡ ನ್ಯೂನತೆ. ಇದನ್ನು ಹಿಮ್ಮೆಟ್ಟಿಸಿ ಸ್ವಭಾವಶುದ್ಧವಾದ ಕಣ್ಣಿನಿಂದ ನೋಡಿದಾಗ ಮಾತ್ರ ವಸ್ತು ಸ್ವಭಾವವು ವ್ಯಕ್ತವಾಗುವದು. ನಿಜವಾದ ಸ್ಥಿತಿಯನ್ನು ನೋಡಬೇಕೆನ್ನು

ವಾಗ ತಲೆಯೆತ್ತುವ ಮನಸ್ಸಿನ ಗುಣದೋಷಗಳನ್ನು ಹಿಮ್ಮೆಟ್ಟಿಸಿ ನಿಷ್ಪಕ್ಷಪಾತದಿಂದ ಮನಸ್ಸನ್ನು ಮುಂದು ಮಾಡುವದಕ್ಕೆ ಆತ್ಮಶಕ್ತಿಯ ಬೆಂಬಲವು ಬಲವಾಗಿರಬೇಕಾಗುವದು. ಮನುಷ್ಯನು ಈ ಪ್ರಯತ್ನವನ್ನು ಮೈಗೂಡಿಸಿಕೊಳ್ಳುವದಕ್ಕೆ ಆದಷ್ಟು ಪ್ರಯತ್ನಿಸಬೇಕು.

ಶಿವಾಜಿಯು ಮೊಗಲರ ಮೂಗುಹಿಡಿಸಿದವನೆಂದು ಎಲ್ಲೆಲ್ಲಿಯೂ ಖ್ಯಾತಿಯಾಗಿತ್ತಷ್ಟೆ. ಅದು ಔರಂಗಜೇಬನ ಮಗಳಾದ ಜೇಬಉನ್ನಿಸಳ ಕಿವಿಗೂ ಬಿದ್ದಿತ್ತು. ತನ್ನ ತಂದೆಯಂಥ ಸರ್ವಸೌಕರ್ಯಸಮೃದ್ಧಿಯುಳ್ಳ ಚಕ್ರವರ್ತಿಯು ಕೂಡ ತಲೆಯ ಮೇಲೆ ಕೈ ಹೊತ್ತುಕೊಳ್ಳುವಷ್ಟು ಸಾಹಸವನ್ನು ತೋರಿಸಿರುವ ಶಿವಾಜಿಯನ್ನು ಒಮ್ಮೆ ಕಣ್ಣಿನಿಂದ ನೋಡಬೇಕೆಂದು ಆಕೆಗೆ ತುಂಬ ಕುತೂಹಲವುಂಟಾಯಿತು. ಹೀಗಿರುವಾಗ ಒಮ್ಮೆ ಶಿವಾಜಿಯು ಔರಂಗಜೇಬನ ಆಸ್ಥಾನಕ್ಕೆ ಬರುವನೆಂಬ ಸುದ್ದಿ ಹರಡಿಕೊಂಡಿತು. ಆ ಪ್ರಕಾರ ಶಿವಾಜಿಯು ಒಂದು ದಿನ ಔರಂಗಜೇಬನ ಆಸ್ಥಾನಕ್ಕೆ ಬಂದನು. ಆ ಸಮಯದಲ್ಲಿ ಜೇಬಉನ್ನೀಸಳು ಪರದೆಯ ಹಿಂದೆ ಮರೆಯಲ್ಲಿದ್ದು ಶಿವಾಜಿಯನ್ನು ನಿಟ್ಟಿಸಿ ನೋಡಿ ಕಣ್ಣಿಗೆ ಹಬ್ಬವನ್ನು ಮಾಡಿಕೊಂಡಳು. ಮಧ್ಯಮಪರಿಮಾಣದ ದೇಹ, ಅನುರೂಪಪ್ರಮಾಣದ ಅವಯವಗಳು, ನಗೆಮೊಗ, ಉತ್ಸಾಹಪೂರ್ಣವಾದ ನೋಟ, ಆಜಾನುವಾದ ಬಾಹು, ಗಿಳಿಯ ಮೂಗು—ಇವುಗಳ ಸೌಂದರ್ಯವು ಒಮ್ಮೆಗೇ ಆಕೆಯ ಮನಸ್ಸನ್ನು ಹರಣ ಮಾಡಿತು. ಇತರಕಾರಣಗಳಿಂದ ಕಲುಷಿತವಾಗದೆ ನಿಷ್ಪಕ್ಷಪಾತದೃಷ್ಟಿಯಿಂದ ನೋಡಿದ ಆಕೆಯ ಮನಸ್ಸು ಶಿವಾಜಿಯ ಸಹಜಸ್ಥಿತಿಯನ್ನು ಗ್ರಹಿಸಿ ತಾನಾಗಿಯೇ ಅವನಿಗೆ ಸೂರೆಹೋಯಿತು. ಕೊನೆಗೆ ಆಕೆ ಆ ತನ್ನ ಉತ್ಕಟವಾದ ಇಚ್ಛೆಯನ್ನು ತನ್ನಲ್ಲಿಯೆ ಅಡಗಿಸಿಕೊಳ್ಳಲಾರದೆ ತಂದೆಯ ಎದುರಿಗೆ ತನ್ನ ಮನಸ್ಸನ್ನು ಬಿಚ್ಚಿ ಆಡಿ ತೋರಿಸಿದಳು. ಔರಂಗಜೇಬನ ಮನಸ್ಸು ಶಿವಾಜಿಯ ವಿಷಯದಲ್ಲಿ ಅನೇಕ ಕಾರಣಾಂತರಗಳಿಂದ ಕಲುಷಿತವಾಗಿದ್ದದ್ದರಿಂದ ಮಗಳ ಅಭಿಪ್ರಾಯಗಳು ತಂದೆಯ ಉದ್ವಿಗ್ನತೆಗೆ ಕಾರಣಗಳಾದವು. ಶಿವಾಜಿಯ ವಿಷಯದಲ್ಲಿ ಮೊದಲೆ ತನಗೆ ಆಗಿರುವ ಕಲ್ಪನೆಗಳನ್ನು ಮೂಲೆಗೊತ್ತಿ ಅವನ ನಿಜಸ್ವಭಾವಕ್ಕೆ ಬೆಲೆಯನ್ನು ಕೊಡುವದು ಔರಂಗಜೇಬನಿಗೆ ಸಾಧ್ಯವಾಗಲಿಲ್ಲ.

ಸತ್ಯಕ್ಕೆ ಸರ್ವೋತ್ಕೃಷ್ಟವಾದ ಪ್ರಾಶಸ್ತ್ಯವನ್ನು ಕೊಡುವ ಆತ್ಮಶಕ್ತಿಯ ಧೀರರು ಮೊದಲು ತಮ್ಮ ಮನಸ್ಸಿನಲ್ಲಿ ಮೂಡಿರುವ ಕಲ್ಪನೆಗಳು ಧೂಳಿದ್ದು ಹೋಗುತ್ತಿದ್ದರೂ ಅವುಗಳನ್ನುಳಿಸಿಕೊಳ್ಳುವದಕ್ಕೆ ಯತ್ನಿಸುವದಿಲ್ಲ. ಏಕೆಂದರೆ: ಅವರಿಗೆ ಬೇಕಾದದ್ದು ಸತ್ಯ. ನಿಮ್ಮಲ್ಲಿರುವದು ಗಾಜಿನ ಚೂರೆಂದು ಹೇಳಿ ನಿಜವಾದ ರತ್ನವನ್ನು ಎದುರಿಗಿಟ್ಟು ಒಬ್ಬನು ಕಣ್ಣಿಗೆ ಕಟ್ಟಿದ ಹಾಗೆ ತೋರಿಸುವಾಗ ಗಾಜಿನ ಚೂರನ್ನು ಬಿಸಾಡುವದಕ್ಕೆ ಹಿಂದೆಗೆಯುವದು ಹೆಚ್ಚಿನ ದಡ್ಡತನವಲ್ಲವೆ? ಒರೆಗೆ ಹಚ್ಚಿ ಅದರ ತುಚ್ಛತ್ವವನ್ನು ತೋರಿಸಿದರೂ ಕೂಡ ಅದನ್ನು ತೆಗೆದೊಗೆಯಲಾರದೆ ಮತ್ತೆ ಅದನ್ನು ಹರಕು ಬಟ್ಟೆಯಲ್ಲಿ ಬಿಗಿಯಾಗಿ ಗಂಟಿಕ್ಕಿ ಬಚ್ಚಿಡುವದು ಬರೀ ಆಸೆಬುರುಕತನವನ್ನು ತೋರಿಸುವದಲ್ಲದೆ ಮತ್ತೇನು? ತುಚ್ಛವೆಂದು ತಿಳಿದ ಕೂಡಲೆ ಗಾಜನ್ನು ತೆಗೆದೊಗೆಯುವದಕ್ಕಾದರೂ ಒಂದು ಬಗೆಯ ಮಾನಸಿಕಧೈರ್ಯವು ಬೇಕು. ಅದರಂತೆ ಸತ್ಯವಾದ ವಿಚಾರಗಳು ಮುಂದೆ ಬಂದಾಗ ನಮ್ಮ ಮನಸ್ಸಿನ ಅಸತ್ಯವಾದ ಕಲ್ಪನೆಗಳನ್ನು ಗಾಳಿಗೆ ತೂರಿಬಿಡುವದಕ್ಕೂ ನಮಗೊಂದು ಬಗೆಯ ಆತ್ಮಶಕ್ತಿ ಬೇಕು. ಇಂಥ ಆತ್ಮಶಕ್ತಿಯನ್ನು ಶ್ರೀ ಸುರೇಶ್ವರಾಚಾರ್ಯರು ಬಹು ಚೆನ್ನಾಗಿ ಪ್ರದರ್ಶನ ಮಾಡಿರುವರು. ಶ್ರೀ ಸುರೇಶ್ವರಾಚಾರ್ಯರು ನರ್ಮದಾತೀರದ ಮಾಹಿಷ್ಮತಿಯೆಂಬ ಊರಿನಲ್ಲಿ ಘನವಿದ್ವಾಂಸರಾಗಿದ್ದು ಕರ್ಮಮಾರ್ಗವನ್ನು ಅದರ ತುಟ್ಟತುದಿಗೇರಿಸಿದವರಾಗಿದ್ದರು. ಸಂನ್ಯಾಸದ ವಿಷಯದಲ್ಲಿ ಅವರಿಗೆ ಸಂಪೂರ್ಣವಾಗಿ ತುಚ್ಛಬುದ್ಧಿ ಇತ್ತು. ಹೀಗಿದ್ದರೂ ಅವರು ಸಂನ್ಯಾಸಮಾರ್ಗೀಯರಾದ ಶ್ರೀ ಶಂಕರಾಚಾರ್ಯರೊಡನೆ ವಾದಮಾಡಿದ ನಡೆವಳಿಕೆಯು ವಿಶೇಷವಿಚಾರಾರ್ಹವಾಗಿದೆ. ವಾದವೆಂಬುದು ಈಗ ಬಹುಮಟ್ಟಿಗೆ ಶಬ್ದಮಾತ್ರದಲ್ಲಿ ಉಳಿದುಕೊಂಡಿರುವದೆ ಹೊರತು ಕೃತಿಯಲ್ಲಿ ತೋರುವದು ಕಡಿಮೆ. ಒಬ್ಬರಿಗೊಬ್ಬರು ತಮ್ಮ ಅಭಿಪ್ರಾಯಗಳನ್ನು ವಿನಿಮಯಮಾಡಿಕೊಂಡು ಚರ್ಚೆಮಾಡುವ ಪದ್ಧತಿ ಈಗಲೂ ಉಂಟು. ಈ ಚರ್ಚೆಗಳಲ್ಲೆಲ್ಲ ತನ್ನ ಪಕ್ಷವು ಗೆಲ್ಲಬೇಕೆಂಬ ಹಠವೆ ಮುಂದಾಗಿರುವದೆ ಹೊರತು ಸತ್ಯವಾದ ಅರ್ಥವು ಮುಂದೆ ಬರಬೇಕೆಂದಿರುವದಿಲ್ಲ. ಈ ಬಗೆಯ ಚರ್ಚೆಯು ವಾದವೆನಿಸಿಕೊಳ್ಳಲಾರದು.

ಚರ್ಚೆಯನ್ನು ಮಾಡುವ ಯಾರೂ ತಮ್ಮ ಪಕ್ಷವು ಗೆಲ್ಲಬೇಕೆಂಬವರಾಗಿರದೆ ತಾವು ಸತ್ಯಾರ್ಥವನ್ನು ನಿರೀಕ್ಷಿಸುವವರಾಗಬೇಕು. ಕೊನೆಯಲ್ಲಿ ಕೋಪ ದಿಂದಾದರೂ ಗದ್ದಲವನ್ನು ಮಾಡಿ ತನ್ನ ಪಕ್ಷದ ಜಯಧ್ವನಿಯನ್ನು ಮಾಡುವದರಲ್ಲೇನು ಹುರುಳಿದೆ! ಹೀಗೆ ತಮ್ಮ ಪಕ್ಷವನ್ನೆ ಸಾಧಿಸಬೇಕೆನ್ನು ವವರಿಗೆ ವಾದದಲ್ಲಿ ತಮ್ಮ ಅಭಿಪ್ರಾಯವೆಲ್ಲಿ ದುರ್ಬಲವಾದೀತೊ ಎಂದು ಎದೆ ಹೊಡೆದುಕೊಳ್ಳುತ್ತಿರುತ್ತದೆ. ಸತ್ಯಾರ್ಥವೆ ಮುಖ್ಯವೆನ್ನುವವನು ಪ್ರಸನ್ನಮನಸ್ಕನಾಗಿರುತ್ತಾನೆ. ವಾದಕಾಲದಲ್ಲಿ ಉದ್ವಿಗ್ನನಾಗುವದು ತನ್ನ ಪಕ್ಷದ ದೌರ್ಬಲ್ಯವನ್ನು ವ್ಯಕ್ತಮಾಡುತ್ತದೆ. ಶ್ರೀಸುರೇಶ್ವರಾ ಚಾರ್ಯರು ಅತ್ಯಂತಸಮಾಧಾನಸ್ಥಿತಿಯಿಂದ ವಾದವನ್ನು ಮಾಡುವದರಲ್ಲಿ ತಮ್ಮ ಆತ್ಮಶಕ್ತಿಯನ್ನು ತೋರಿಸಿದ್ದಲ್ಲದೆ ಕೊನೆಗೆ ಸಂನ್ಯಾಸಪಕ್ಷವೇ ಮೇಲುಗಯ್ಯಾಗಲು ಅದಕ್ಕೆ ಮಹತ್ತ್ವವನ್ನು ಕೊಟ್ಟು ತಾವೂ ಆ ದೀಕ್ಷೆ ಯನ್ನೆ ತೆಗೆದುಕೊಂಡುಬಿಟ್ಟರು.

ಪ್ರೌಢವಿಚಾರದ ಮುಂದೆ ತಮ್ಮ ಬಾಲಿಶವಿಚಾರದ ಪರಾಜಯ ವಾದರೆ ನಿಷ್ಪಕ್ಷಪಾತಬುದ್ಧಿಯಿಂದ ಗುಣಗ್ರಹಣಮಾಡುವವರೂ ಹೆಚ್ಚು ಜನರು ಸಿಕ್ಕಬಹುದು. ಪರಮಾರ್ಥವಿಚಾರದ ಸತ್ಯತ್ವವನ್ನು ಸಂಭಾವಿಸು ವದೂ ಅದನ್ನು ಕೃತಿಯಲ್ಲಿ ತರುವದೂ ಎಷ್ಟೊ ವೇಳೆ ಶಕ್ಯವಾಗುವದು. ಏಕೆಂದರೆ: ಪರಮಾರ್ಥದ ದಾರಿಯನ್ನು ಹಿಡಿದೊಡನೆಯೆ ಅದರ ಪ್ರಭಾವ ದಿಂದ ನಿಷ್ಪಕ್ಷಪಾತರೂಪವಾದ ಆತ್ಮಶಕ್ತಿಯು ತನಗೆ ತಾನೆ ತಲೆಎತ್ತು ವದು. ವ್ಯವಹಾರದ ವಿಚಾರದಲ್ಲಿ ಸತ್ಯತ್ವವನ್ನು ಸಂಭಾವಿಸುವದೂ ಅದನ್ನು ಕೃತಿಯಲ್ಲಿ ತರುವದೂ ಕಠಿನ. ವ್ಯವಹಾರದ ಪ್ರಭಾವವು ಎಷ್ಟೋ ವೇಳೆ ನಿಷ್ಪಕ್ಷಪಾತಬುದ್ಧಿಯ ಮೇಲೆ ಮಂಕುಬೂದಿಯನ್ನು ಹಾಕುವದು. ವ್ಯವ ಹಾರದಲ್ಲಿ ತಮ್ಮ ಹಠವನ್ನು ಬಿಟ್ಟು ಮತ್ತೊಬ್ಬನ ಅಭಿಪ್ರಾಯದ ಮುಂದೆ ತಲೆಯನ್ನು ಬಗ್ಗಿಸುವದು ಕಷ್ಟವೆನಿಸುವದು. ಮನಸ್ಸಿಗೆ ಸತ್ಯವೆಂದು ತೋರಿದರ್ಥವನ್ನು ಕೃತಿಯಲ್ಲಿ ವ್ಯಕ್ತಮಾಡುವದೂ ಅಸಾಧ್ಯವೆನಿಸುವದು. ಒಳ್ಳೆ ಬಲಿಷ್ಠಭಾವದವರು ಮಾತ್ರ ಆ ದೌರ್ಬಲ್ಯವನ್ನು ದೂರಮಾಡಿ ಸತ್ಯಕ್ಕೆ ಮಹತ್ತ್ವವನ್ನು ಕೊಡುವರು. ತನ್ನ ಕಿರಿಯ ಹೆಂಡತಿಯಾದ ತಿಷ್ಯರಕ್ಷಿತೆಯು ತನ್ನ ಮಲಮಗನ ಕಣ್ಣನ್ನು ಕುತಂತ್ರದಿಂದ ಕೀಳಿಸಿದಳೆಂದು ಅಶೋ

ಕನಿಗೆ ತಿಳಿಯಿತು. ಅಶೋಕನು ಅಹಿಂಸಾವ್ರತನಿಷ್ಠರಲ್ಲಿ ಅಗ್ರಗಣ್ಯನಾಗಿದ್ದನು. ಇದರ ಜೊತೆಗೆ ತನ್ನ ಮುದ್ದಿನ ಹೆಂಡತಿಯನ್ನು ಆ ಪಾಪಕೃತ್ಯದ ಫಲಾನುಭವಕ್ಕೆ ತನ್ನ ಕಣ್ಣೆದುರಿಗೇ ಗುರಿಮಾಡುವದು ಮನುಷ್ಯಸ್ವಭಾವಕ್ಕೆ ಆಗದ ಮಾತಾಗಿತ್ತು. ಆದರೂ ಅಶೋಕನು ತನ್ನ ಪತ್ನೀತ್ವ ಮೊದಲಾದ ಕಲ್ಪನೆಗಳನ್ನು ಮೂಲೆಗೊತ್ತಿ ಸತ್ಯಕ್ಕೆ ಮಹತ್ತ್ವವನ್ನು ಕೊಡಬೇಕೆಂದು ನಿಷ್ಪಕ್ಷಪಾತದಿಂದ ಆಕೆಯ ಶಿರಚ್ಛೇದವನ್ನು ಮಾಡಿಸಿಯೇ ಬಿಟ್ಟನು. ಈ ನಿಷ್ಪಕ್ಷಪಾತಬುದ್ಧಿಯನ್ನು ಶಿವಾಜಿಯೂ ಪ್ರದರ್ಶನ ಮಾಡಿರುವನು. ತನ್ನ ಮಗನು ಒಬ್ಬ ಪರಸ್ತ್ರೀಯ ಪಾತಿವ್ರತ್ಯಕ್ಕೆ ಕಲಂಕವನ್ನುಂಟುಮಾಡಿದನೆಂದು ತಿಳಿಯುತ್ತಲೆ ಶಿವಾಜಿಯು ತನ್ನ ಮಗನೆಂಬ ದಾಕ್ಷಿಣ್ಯವನ್ನಿಡದೆ ಅವನನ್ನು ಸೆರೆಯಲ್ಲಿಟ್ಟು ದಂಡಿಸಿರುವನು.

ಹೀಗೆ ಪರರಿಗೆ ಪ್ರತೀಕಾರವನ್ನು ಮಾಡುವಾಗ ನಿಷ್ಪಕ್ಷಪಾತದಿಂದಿರುವದೂ ಕಠಿನವಲ್ಲ. ತನ್ನ ಮೇಲೆ ತಾನೇ ಪ್ರತೀಕಾರಮಾಡಿಕೊಳ್ಳಬೇಕಾಗಿ ಬಂದಾಗ ಮಾತ್ರ ಮನುಷ್ಯನ ಆತ್ಮಶಕ್ತಿಯು ತತ್ತರಿಸುವದು. ಮನಸ್ಸು ಇತರರನ್ನು ಅಂಕೆಯಲ್ಲಿಡುವದಕ್ಕೆ ತವಕಿಸುವದೆ ಹೊರತು ತನ್ನನ್ನು ತಾನೇ ಅಂಕೆಯಲ್ಲಿಡುವದೆಂದರೆ ಅದರ ಪ್ರಾಣಕ್ಕೆ ಉರ್ಲುಬೀಳುವದು. ರಾವಣನು ಬೇಕಾದಷ್ಟು ದಿಗ್ವಿಜಯವನ್ನು ಮಾಡಿದನು; ತನ್ನ ಮನಸ್ಸಿನ ಮೇಲೆ ದಿಗ್ವಿಜಯವನ್ನು ಮಾಡುವದಾಗಲಿಲ್ಲ. ತನ್ನ ಮನಸ್ಸನ್ನು ತಾನು ಗೆಲ್ಲುವದಕ್ಕೆ ಆಸುರೀಸ್ವಭಾವವು ಎಷ್ಟು ಮಾತ್ರವೂ ನೆರವಾಗಲಾರದು. ಅದು ದೈವೀಪ್ರಕೃತಿಯೊಂದಕ್ಕೆ ಮಾತ್ರ ಶಕ್ಯವಾಗುವದು. ಯಾರ ಯಾರ ಮನಸ್ಸಿನಲ್ಲಿ ಅದು ಎಷ್ಟೆಷ್ಟು ಮೂಡಿರುವದೊ ಅದು ಅವರವರಲ್ಲಿ ಅಷ್ಟಷ್ಟು ಕಾರ್ಯಕಾರಿಯಾಗುವದು. ಪೇಷ್ವೆ ಬಾಜಿರಾಯನು ಕೆಲವು ಕಾಲ ವಿಷಯಲೋಲುಪನಾಗಿ ರಾಜಕಾರ್ಯಗಳಲ್ಲಿ ಅನಾಸಕ್ತನಾಗಿದ್ದದ್ದನ್ನು ಕಂಡ ಶಾಹುಮಹಾರಾಜನು ಒಬ್ಬ ನಿಯೋಗಿಯ ಮೂಲಕ ಅವನಿಗೆ ಎಚ್ಚರಿಕೆಯನ್ನು ಕೊಟ್ಟನು. ಬಾಜೀರಾಯನು ಶಾಹುರಾಜನ ಮಾತಿನಲ್ಲಿ ಗುಣಗ್ರಹಣ ಮಾಡಿ ತನ್ನ ತಪ್ಪನ್ನೊಪ್ಪಿಕೊಂಡು ಅಂದಿನಿಂದ ತನ್ನನ್ನು ತಾನು ತಿದ್ದಿಕೊಳ್ಳುವದಕ್ಕಾರಂಭಿಸಿದನು. ಶಿವಾಜಿಯ ವಿದ್ಯಾಗುರುವಾದ ದಾದಾಜಿ ಕೊಂಡದೇವನೂ ಈ ವಿಧವಾದ ತನ್ನ ಆತ್ಮಶಕ್ತಿಯನ್ನು ಪ್ರಕಟಮಾಡಿರು

ವನು. ಒಮ್ಮೆ ಅವನು ಶಿವಾಜಿಯ ತೋಟದ ಒಂದು ಹಣ್ಣನ್ನು ತನ್ನ ಉಪಭೋಗಕ್ಕಾಗಿ ಕಿತ್ತುಕೊಂಡನು. ಸ್ವಲ್ಪ ಹೊತ್ತಿನ ಮೇಲೆ ಅವನಿಗೆ ತಾನು ಮಾಡಿದ್ದು ಅಪರಾಧವೆನಿಸಿತು. ಯಜಮಾನನ ಪದಾರ್ಥವನ್ನು ಯಜಮಾನನಪ್ಪಣೆಯಿಲ್ಲದೆ ತಾನು ತೆಗೆದುಕೊಳ್ಳುವದು ಕಳ್ಳತನದಷ್ಟು ಕೆಡಕೆನಿಸಿತು. ಇದನ್ನು ಅವನು ಮನಸ್ಸಿನಲ್ಲಿ ವಿಚಾರಮಾಡಿಮಾಡಿ ಕೊನೆಗೆ ತನ್ನ ಅಪರಾಧವು ತನಗೇ ದೊಡ್ಡದೆನಿಸಿ ಅದಕ್ಕೆ ಶಾಸನರೂಪವಾಗಿ ತನ್ನ ಆ ಕಯ್ಯನ್ನು ತಾನೇ ಕಡಿದು ಹಾಕಿಬಿಡಬೇಕೆಂಬಷ್ಟು ದೂರಾ ಲೋಚನೆಮಾಡಿದನು. ಅಷ್ಟು ದೂರ ಹೋಗಬೇಕಾದದ್ದಿಲ್ಲವೆಂದು ಇತರರು ಅವನನ್ನು ಸಮಾಧಾನಗೊಳಿಸಿದ ಮೇಲೆಯೂ ಅವನು ಅದಕ್ಕೇನಾದರೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲೇಬೇಕೆಂದು ನಿಶ್ಚಯಿಸಿ ತನ್ನ ಕೈಗೆ ಶಿಕ್ಷೆಯ ಚಿಹ್ನವಾಗಿ ಅಂಗಿಯ ತೋಳ ಅರ್ಧಭಾಗವನ್ನು ಕತ್ತರಿಸಿಯೆ ಬಿಟ್ಟನು. ಅಂಗಿಯ ತೋಳನ್ನು ಕತ್ತರಿಸಿದರೆ ಇವನಿಗಾದ ಪ್ರಾಯಶ್ಚಿತ್ತ ವೇನೆಂದು ಕೇಳಬಹುದು. ಅಂಗಿಯ ತೋಳನ್ನು ಕತ್ತರಿಸುವ ಪ್ರಾಯ ಶ್ಚಿತ್ತವು ಶಾಸ್ತ್ರದಲ್ಲಿ ಇಲ್ಲದೆ ಇರಬಹುದು. ಆದರೂ ಅದು ನಿಜವಾದ ಪ್ರಾಯಶ್ಚಿತ್ತವೆ. ಅದು ಪಾಯಶ್ಚಿತ್ತದ ನಿಜವಾದ ತತ್ತ್ವವನ್ನು ಹಿಡಿದುಕೊಂಡಿರುವದು. ಪ್ರಾಯಶ್ಚಿತ್ತದ ತತ್ತ್ವವೇನು? ಮನು ಷ್ಯನಿಗೆ ಪಾಪದ ದೆಸೆಯಿಂದ ಪಶ್ಚಾತ್ತಾಪವುಂಟಾಗಿ ಅದನ್ನಿನ್ನೆಂದೆಂದೂ ಮಾಡಬಾರದೆನಿಸುವದು. ಮನಸ್ಸಿನ ಮೇಲೆ ಈ ಪರಿಣಾಮವಾಗದೆ ಯಾವ ಹೆಚ್ಚಿನ ಪ್ರಾಯಶ್ಚಿತ್ತವನ್ನು ತೆಗೆದುಕೊಂಡರೂ ಪ್ರಯೋಜನವಿಲ್ಲ. ಕೆಲ ಕೆಲವು ಪಾಪಗಳನ್ನು ಮಾಡಿದವರು ಎಲ್ಲರ ಮುಂದೆಯೂ ತಮ್ಮ ಪಾಪ ಗಳನ್ನು ಹೇಳಿಕೊಳ್ಳುತ್ತ ತಿರುಗಬೇಕೆಂದು ಒಂದು ಬಗೆಯ ಪ್ರಾಯಶ್ಚಿತ್ತವಿದೆ. ಹೀಗೆ ಅವನು ಎಲ್ಲರ ಮುಂದೆಯೂ ತನ್ನ ಪಾಪವನ್ನು ಹೇಳಿಕೊಳ್ಳುವದ ರಿಂದ ಎಲ್ಲರೂ ಅವನನ್ನು ಛೀಗುಟ್ಟುವದರ ಮೂಲಕ ಅವನಿಗೆ ಇನ್ನೆಂದೂ ಇಂಥ ಪಾಪವನ್ನು ಮಾಡುವದಿಲ್ಲವೆನಿಸುವ ಸಂಭವವುಂಟು. ಇಷ್ಟಾಗುವದೆ ಪ್ರಾಯಶ್ಚಿತ್ತದ ಪ್ರಯೋಜನ. ಅಂಗಿಯಿಂದ ಹಸ್ತದವರಿಗೂ ಕೈಗಳನ್ನು ಸಂಪೂರ್ಣವಾಗಿ ಮುಚ್ಚುವದು ನಮ್ಮ ಆರ್ಯಸಂಸ್ಕೃತಿ. ಆ ಅಂಗಿಯ ಅರ್ಧ ತೋಳನ್ನು ಕತ್ತರಿಸಿದ್ದು ಎಲ್ಲರ ಕಣ್ಣಿಗೂ ಕಂಡು ಎಲ್ಲರಿಗೂ ತನ್ನ

ಪಾಪವು ತಿಳಿಯಬಂದು ತನಗೆ ನಾಚಿಕೆಯಾಗುವದರ ಮೂಲಕ ಇಂಥ ಪಾಪಕ್ಕೆ ಕೈ ಇನ್ನು ಮುಂದೆ ಎಂದೂ ಮುಂದಾಗದಿರುವದಕ್ಕೆ ದಾದಾಜಿಗೆ ಅದು ಉತ್ತಮವಾದ ಸಾಧನವಾಯಿತು. ಇತರರ ನಿರ್ಬಂಧಕ್ಕೆ ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳುವವರಿಗಿಂತಲೂ ತಾವಾಗಿ ಈ ರೀತಿಯಲ್ಲಿ ಮಾಡಿಕೊಳ್ಳುವದು ಅತ್ಯಂತ ಶ್ರೇಯಸ್ಕರವಾದದ್ದು. ದಾದಾಜಿಯು ತನ್ನ ತಪ್ಪನ್ನು ತಿದ್ದಿಕೊಳ್ಳುವ ಆತ್ಮಶಕ್ತಿಯನ್ನು ಪ್ರದರ್ಶನ ಮಾಡಿದ್ದು ಪ್ರತಿಯೊಬ್ಬನಿಗೂ ಅನುಕರಣಕ್ಕೆ ಯೋಗ್ಯವಾಗಿದೆ.

ತಾನು ಮಾಡಿದ ಅಪರಾಧವನ್ನು ಮರೆಮಾಜಿಕೊಳ್ಳುವದರಿಂದ ಹೊರಗಣವರ ದೃಷ್ಟಿಯಿಂದ ತನ್ನ ಪ್ರತಿಷ್ಠೆಯು ಉಳಿದು ತನ್ನ ಐಹಿಕವಾದ ಅಭ್ಯುದಯವು ನಿರ್ಬಾಧವಾಗಿ ಮುಂದೆ ಸಾಗಿದಂತೆ ತೋರಬಹುದು. ಅದು ನಿಜವಾಗಿ ಅಭ್ಯುದಯವಲ್ಲ; ದೀಪವು ಆರುವ ಕಾಲವಲ್ಲಿ ಒಮ್ಮೆ ದೊಡ್ಡದಾಗುವಂತೆ ಆ ಅಭ್ಯುದಯವು ತನ್ನ ಅಂತಿಮಸ್ಥಿತಿಯನ್ನು ತೋರಿಸುತ್ತಿರುವದೆಂದು ತಿಳಿಯಬೇಕು. ಮನುಷ್ಯನು ಪಾಪಪುಣ್ಯಗಳನ್ನು ಬೇರೆ ಬೇರೆಯಾಗಿ ತಿಳಿದು ನಿಷ್ಪಕ್ಷಪಾತಪೂರ್ವಕವಾದ ವಿವೇಕದಿಂದ ಪಾಪವನ್ನು ಬದಿಗೊತ್ತಿ ಪುಣ್ಯದಲ್ಲಿ ಮುಂದುವರಿಯಲೆಂದು ದೇವರು ಬುದ್ಧಿಯನ್ನು ಕೊಟ್ಟಿರುವಾಗ ನಮ್ಮ ಆತ್ಮಶಕ್ತಿಯಿಂದ ಆ ಪಾಪವನ್ನು ಹಿಮ್ಮೆಟ್ಟಿಸುವದು ನಮ್ಮಿಂದಾಗದ ಮೇಲೆ ನಮಗೆ ದೇವರ ಅನುಗ್ರಹವು ಹೇಗೆ ಉಂಟಾದೀತು? ದೇವರ ಅನುಗ್ರಹವಿಲ್ಲದೆ ಅಭ್ಯುದಯವಾದರೂ ಹೇಗೆ ಆದೀತು? ದೇವರ ಅನುಗ್ರಹವು ಪುಣ್ಯದ ಬೆನ್ನು ಹತ್ತಿ ಬರುವಂಥದ್ದು. ಮನುಷ್ಯನ ನಾಲಿಗೆಯು ಇತರರ ಪಾಪವನ್ನು ಎತ್ತಿ ಹೇಳುವಾಗ ಉದ್ದವಾದಂತೆ ತನ್ನ ಪಾಪವನ್ನು ಹೇಳುವಾಗ ಹೊರಬೀಳುವದಿಲ್ಲ. ಈ ಪಕ್ಷಪಾತವು ಮನುಷ್ಯನಲ್ಲಿರುವ ಒಂದು ದೊಡ್ಡ ಕೊರತೆಯು ರೂಪವಾಗಿರುವದು. ಆತ್ಮಶಕ್ತಿಯಿಂದ ಈ ಪಕ್ಷಪಾತವನ್ನು ಗೆದ್ದು ನಿಷ್ಪಕ್ಷಪಾತದಿಂದ ವರ್ತಿಸಿದರೆ ದೇವರು ಪರಮಾವಧಿಯ ಪ್ರಯೋಜನವನ್ನುಂಟುಮಾಡಿಯೆ ಮಾಡುವನು. ಮನುಷ್ಯನು ತೋರಿಸುವ ಆತ್ಮಶಕ್ತಿಗೆ ಪ್ರತ್ಯಕ್ಷವಾಗಿ ಪ್ರತಿಫಲವನ್ನು ತೋರಿಸದೆ ಇರುವದು ಪರಮಕಾರುಣಿಕನಾದ ಪರಮೇಶ್ವರನಿಗೆ ಶಕ್ಯವೆ ಅಲ್ಲ. ಹಿಂದೆ ಕಾಶಿಯಲ್ಲಿ ಬ್ರಹ್ಮದತ್ತನೆಂಬ ಅರಸನಿದ್ದನು. ಅವನು ತನ್ನ ನೆರೆಯ ಕೋಸಲ

ದೇಶದ ದಿಘಿತಿ ಎಂಬ ಅರಸನ ಮೇಲೆ ದಂಡನ್ನು ನಡೆಯಿಸಿದನು. ಬ್ರಹ್ಮ ದತ್ತನು ಸಮೃದ್ಧಿಯಾದ ಸೇನೆಯುಳ್ಳವನಾಗಿ ಬಲಾಢ್ಯನಾಗಿದ್ದನು ದಿಘಿತಿಯು ಅಂಥ ಸೌಕರ್ಯಗಳೇನೂ ಇಲ್ಲದಿದ್ದರೂ ಒಳ್ಳೆ ಗುಣಾಢ್ಯನಾಗಿದ್ದನು. ಇಬ್ಬರಿಗೂ ರಣರಂಗದಲ್ಲಿ ಕೈ ಕೈ ಕೂಡಿತು. ಬ್ರಹ್ಮದತ್ತನ ಪ್ರಚಂಡವಾದ ಪ್ರತಿಭೆಯು ದಿಘಿತಿಯ ಸರ್ವಸ್ವವನ್ನೂ ಹೀರಿ ಹಿಪ್ಪೆಯಾಗಿ ಮಾಡಿತು. ದಿಘಿತಿಗೆ ಜೀವದ ಆಸೆಯೇನೂ ಉಳಿಯಲಿಲ್ಲ. ಆಗ ಅವನು ಜೀವಗಳ್ಳನಾಗಿ ಉಳಿಯುವದಕ್ಕಿಂತಲೂ ರಣದೇವತೆಗೆ ತನ್ನ ಜೀವಜ್ಯೋತಿಯಿಂದ ಆರತಿಯನ್ನು ಮಾಡುವದುತ್ತಮವೆಂದು ನಿಶ್ಚಯಿಸಿ ಕೊನೆಗಾಲದಲ್ಲಿ ತನ್ನ ಮಗನಾದ ದಿಘಾವನನ್ನು ಕರೆದು "ಮಗು, ಹಗೆತನವು ಹಗೆತನದಿಂದ ಎಂದಿಗೂ ತಗ್ಗುವದಿಲ್ಲ; ಪ್ರೀತಿಯಿಂದ ತಗ್ಗುತ್ತದೆ . . . ." ಎಂದು ಹೇಳುವಷ್ಟರಲ್ಲಿಯೆ ಪ್ರಾಣೋತ್ಕ್ರಮಣವಾಯಿತು. ಆಮೇಲೆ ರಾಜ್ಯವೆಲ್ಲ ಬ್ರಹ್ಮ ದತ್ತನಿಗೆ ಭೋಗ್ಯವಾಯಿತೆಂದು ಬೇರೆ ಹೇಳಬೇಕಾದದ್ದೇ ಇಲ್ಲ. ಬ್ರಹ್ಮ ದತ್ತನು ದಿಘಾವನನ್ನು ಕೆಲವು ಕಾಲ ಸೆರೆಯಲ್ಲಿಟ್ಟಿದ್ದು ಆ ಮೇಲೆ ಅವನ ಸೌಜನ್ಯವನ್ನು ಮನಗಂಡು ಅವನನ್ನು ತನ್ನ ಆಪ್ತನಿಯೋಗಿಯನ್ನಾಗಿ ಮಾಡಿಕೊಂಡನು. ಒಂದು ದಿನ ಕಾಡಿನಲ್ಲಿ ಮೃಗಯಾವಿಹಾರಕ್ಕೆ ಹೋಗಿದ್ದಾಗ ಬ್ರಹ್ಮದತ್ತನು ಅವನ ತೊಡೆಯ ಮೇಲೆ ತಲೆಯನ್ನಿಟ್ಟುಕೊಂಡು ನಿದ್ರೆ ಹೋಗಿದ್ದನು. ಆ ಸಮಯದಲ್ಲಿ ದಿಘಾವನ ಮನಸ್ಸಿನಲ್ಲಿ ಬ್ರಹ್ಮ ದತ್ತನ ಮೇಲಿನ ದ್ವೇಷಭಾವನೆಗಳು ತರಂಗತರಂಗವಾಗಿ ಏಳುವದಕ್ಕಾರಂಭವಾದವು. ಬ್ರಹ್ಮದತ್ತನು ತನ್ನ ತಂದೆಯನ್ನು ಕೊಂದವನೆಂಬ ನೆನಪು ಬಂದು ಆ ರಚ್ಚನ್ನು ತೀರಿಸಿಕೊಳ್ಳಬೇಕೆಂದು ದಿಘಾವನ ಮನಸ್ಸು ತಳಮಳಿಸಿತು. ಒಡನೆ ಅವನ ಕೈ ಒರೆಯಿಂದ ಕತ್ತಿಯನ್ನು ಹಿರಿದು ಝಳಪಿಸಿತು. ಇಷ್ಟರಲ್ಲಿ ತಂದೆಯ ಮಾತು ನೆನಪಿಗೆ ಬಂತು. ತಂದೆಯ ಆಜ್ಞೆಗೆ ವಿರೋಧವಾಗಿ ತಾನು ವರ್ತಿಸುತ್ತಿದ್ದೆನಲ್ಲ! ಎಂಬ ದುಃಖದಿಂದ ಅವನ ಕಣ್ಣುಗಳಿಂದ ನೀರು ತೊಟ್ಟಿಕ್ಕಿದವು. ಇದರಿಂದ ಎಚ್ಚತ್ತ ಬ್ರಹ್ಮದತ್ತನು ಎದ್ದು ಅತ್ತಿತ್ತ ನೋಡಿದಾಗ ದಿಘಾವನು ಒಡೆಯನಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ ತನ್ನ ಮನಸ್ಸಿನಲ್ಲಿ ನಡೆದ ಹೋರಾಟಗಳನ್ನೆಲ್ಲ ಅವನೆದುರಿಗೆ ಬಿಚ್ಚಿಟ್ಟನು. ದಿಘಾವನು ಕತ್ತಿಯನ್ನು ಪ್ರಯೋಗಮಾಡಿದ್ದರೆ ಅದಕ್ಕೆ

ಪ್ರತೀಕಾರವನ್ನು ಮಾಡಲಿಚ್ಛಿಸದೆ ಬ್ರಹ್ಮದತ್ತನು ಸುಮ್ಮನೆ ಬಲಿಯಾಗಬೇಕಾಗಿತ್ತು. ಮನಸ್ಸಿನ ಪ್ರಬಲವಾದ ತವಕವನ್ನು ಹಿಮ್ಮೆಟ್ಟಿಸಿ ತನ್ನ ಜೀವವನ್ನು ಉಳಿಸಿದ ದಿಘಾವನ ಆತ್ಮಶಕ್ತಿಯನ್ನು ನೋಡಿ ಬೆರಗಾದವನಾಗಿ ಬ್ರಹ್ಮದತ್ತನು ಒಡನೆ ಪಿತೃವಿನ ರಾಜ್ಯವನ್ನೆಲ್ಲ ದಿಘಾವನಿಗೆ ಕೊಟ್ಟು ಅವನನ್ನು ಗೌರವಿಸಿದ ಬಳಿಕ ಅವನನ್ನು ತನ್ನ ಅಳಿಯನನ್ನಾಗಿ ಮಾಡಿಕೊಂಡು ಸಂಬಂಧವನ್ನು ಬೆಳೆಸಿದನು. ನಿಷ್ಕ್ರಿಯ ಪ್ರತಿರೋಧನವಾದ ಆತ್ಮಶಕ್ತಿಯು ಯಾವಾಗ ಯಾವ ರೂಪದಲ್ಲಿ ಪ್ರಯೋಜನಕಾರಿಯಾಗುವದೆಂಬದನ್ನು ಮುಂದಾಗಿ ತಿಳಿಯಲಾಗದಿದ್ದರೂ ಅದು ಎಂದಿಗೂ ವ್ಯರ್ಥವಾಗುವದಿಲ್ಲ. ಇಷ್ಟೇ ಅಲ್ಲ; ಅದರಿಂದುಂಟಾಗುವ ಪ್ರಯೋಜನವು ಬೇರೆ ರೀತಿಯಿಂದ ಆಗುವ ಪ್ರಯೋಜನಕ್ಕಿಂತಲೂ ಎಷ್ಟೋ ಪಾಲು ಹೆಚ್ಚಿನದಾಗಿರುವದು.

ಈ ರೀತಿಗಳಲ್ಲೆಲ್ಲ ಆತ್ಮಶಕ್ತಿಯನ್ನು ಒಗ್ಗೂಡಿಸಿಕೊಂಡು ಮನುಷ್ಯನು ಪರಹಿತದಲ್ಲಿ ತೊಡಗಬೇಕು. ಪರಹಿತವೇ ಮನುಷ್ಯನಿಗೆ ಸತ್ಕೀರ್ತಿಯನ್ನು ತಂದುಕೊಡುವಂಥದು. ಈಗ ಇತಿಹಾಸದಲ್ಲಿ ಯಾರ ನಾಮಧೇಯಗಳು ಸುವರ್ಣಾಕ್ಷರಗಳಲ್ಲಿ ರೂಪುಗೊಂಡಿರುವವೋ ಅವರೆಲ್ಲ ಪರಹಿತದಿಂದ ಸತ್ಕೀರ್ತಿಯನ್ನು ಪಡೆದವರು. ಇದೇ ಮನುಷ್ಯತ್ವದ ಧ್ಯೇಯ. ಹೀಗೆ ಚಿರಜೀವಿಗಳಾಗುವಂತೆ ಸರ್ವರೂ ತಮ್ಮ ಆತ್ಮಶಕ್ತಿಯನ್ನು ಉಪಯೋಗಿಸಿ ಕೃತಾರ್ಥರಾಗಬೇಕು.

# ನೋಡಿದರೆ ಬಿಡದೆ ಇರುವ ಪುಸ್ತಕಗಳು

ತಿಳಿಗನ್ನಡ ! ಲೇಖಕ- ಹೊಸಕೆರೆ ಚಿದಂಬರಯ್ಯ ಸುಲಭ ಶೈಲಿ !!

## ವೇದಾಂತಗ್ರಂಥಗಳು

**ಆರ್ಯಧರ್ಮ ಪ್ರದೀಪ:-** ಹುಡುಗರ ಮನಸ್ಸಿನಲ್ಲಿ ಕೂಡ ಬಿಂಬಿಸುವಂತೆ ಹಿಂದೂ ಮತದ ಧರ್ಮಸೂಕ್ಷ್ಮಗಳನ್ನು ಚೆನ್ನಾಗಿ ವಿವರಿಸಿ ಅದಕ್ಕೆ ಅನೇಕ ಶಾಸ್ತ್ರವಚನಗಳನ್ನೂ ಧಾರ್ಮಿಕಮಹಾಪುರುಷರ ಉಕ್ತಿಗಳನ್ನೂ ಪ್ರಮಾಣವಾಗಿ ಕೊಟ್ಟು ಯುಕ್ತಿಗಳಿಂದಲೂ ಪುಷ್ಟಿಗೊಳಿಸಿ ಪುರಾಣಪುರುಷರ ದೃಷ್ಟಾಂತಗಳ ದುಂದುಮಾಡಿರುವ ಗ್ರಂಥ. ಇದೊಂದು ಹಿಂದೂಧರ್ಮದ ಕೈಗನ್ನಡಿ. ಬೆಲೆ ೩-೦-೦

**ಗೀತಾರ್ಥಚಂದ್ರಿಕೆ:-** ಇದರಲ್ಲಿ ಅನ್ವಯಕ್ರಮವಾಗಿ ಪ್ರತಿಪದದ ಅರ್ಥದೊಡನೆ ಹಿತವೂ ಮಿತವೂ ಆದ ವಿವರಣೆಯು ರತ್ನಕ್ಕೆ ಕುಂದಣವನ್ನು ಕೆತ್ತಿದಂತೆ ಹೊಂದಿಕೊಂಡಿರುವದು. ತೂಕದ ವಿಚಾರಗಳು ಮನಸ್ಸಿನಲ್ಲಿ ಒಡೆದು ಮೂಡುವಂತೆ ಯುಕ್ತಿಗಳೂ ಅನುಭವದ ಮಾತುಗಳೂ ಬೇಕಾದಷ್ಟಿರುವವು. ಅರ್ಥವಿಶೇಷಗಳೂ ಪಾಠಾಂತರಗಳೂ ಆಧಾರವಾಕ್ಯಗಳೂ ಕೂಡ ಸಮೃದ್ಧಿಯಾಗಿದ್ದು ಇದು ಕಣ್ಣಿಗೂ ಮನಸ್ಸಿಗೂ ಕೂಡ ಆನಂದವನ್ನು ಸೂರೆಮಾಡುವದು. ಬೆಲೆ ೨-೮-೦

**ಪಂಚದಶೀತತ್ತ್ವಾರ್ಥ:-** ವೇದಾಂತನೆಂಬ ಸಮುದ್ರದ ತಳದಲ್ಲಿರುವ ದೊಡ್ಡ ದೊಡ್ಡ ಮುತ್ತುರತ್ನಗಳನ್ನೆಲ್ಲ ಇದು ಅಂಗಯ್ಯೊಳಕ್ಕೆ ಬರಿಸುವದು. ಮನಸ್ಸಿಗೆ ನುರಿಯುವಂಥ ಗಡುಸಾದ ವಿಚಾರಗಳೆಂಬ ಉಕ್ಕಿನ ಕಡಲೆಗಳನ್ನೆಲ್ಲ ಇದು ಯುಕ್ತಿಗಳ, ಉದಾಹರಣೆಗಳ ಮತ್ತು ಅನುಭವದ ಮಾತುಗಳ ಹೆಣಿಗೆಯೊಳಗೆ ಒತ್ತೀ ಹಾಕಿ ರಸವನ್ನು ಚಿಮ್ಮುವ ದ್ರಾಕ್ಷೆಯ ಹಣ್ಣುಗಳನ್ನಾಗಿ ಮಾರ್ಪಡಿಸಿರುವ ಸರಳವಾದ ವಚನರೂಪ. ಬೆಲೆ ೨-೦-೦

ಎಸ್. ಎಸ್. ಎನ್ ಬುಕ್ ಡಿಪ್ರೋ, ಬಸವನಗುಡಿ, ಬೆಂಗಳೂರುಸಿಟಿ.

# ನೋಡಿದರೆ ಬಿಡದೆ ಇರುವ ಪುಸ್ತಕಗಳು

**ತಿಳಿಗನ್ನಡ !** **ಲೇಖಕ-ಹೊಸಕೆರೆ ಚಿದಂಬರಯ್ಯ** **ಸುಲಭ ಶೈಲಿ !!**

---

**ಭಗವದ್ಗೀತಾಸಾರವಿಚಾರ:-** ಭಗವದ್ಗೀತೆಯ ಗೂಢಾರ್ಥಗಳ ಸರ್ವಸಾರವೂ ಇದರಲ್ಲಿ ತಿಳಿಗನ್ನಡದ ಉಪನ್ಯಾಸದರೂಪದಲ್ಲಿ ಸೂರೆಯಾಗಿರುವದು. ಶ್ರುತಿಸ್ಮೃತಿಪುರಾಣೇತಿಹಾಸಗಳ ಸದುಪದೇಶಗಳ ಅರ್ಥಗಳೆಲ್ಲ ಇದರ ಹಾಸುಹೊಕ್ಕುಗಳಾಗಿರುವವು. ಲೌಕಿಕವಾದ ಉದಾಹರಣೆಗಳೂ ಅನುಭವದ ಮಾತುಗಳೂ ಸಾಧಕರಿಗೆ ಅಗತ್ಯವಾದ ಅನೇಕ ವಿಚಾರಗಳೂ ಇದರಲ್ಲಿ ತುಂಬಿತುಳುಕುತ್ತ ತಿಳಿವನ್ನು ಹೆಚ್ಚಿಸುವವು. ಬೆಲೆ ೧-೮-೦

**ವೇದಾಂತದ ಜೀವಾಳ:-** ಇನ್ನೊಬ್ಬರ ಅಭಿಪ್ರಾಯದ ಬೆರಕೆ ಇಲ್ಲದೆ ಶ್ರೀಶಾಂಕರಭಾಷ್ಯವನ್ನುಮಾತ್ರ ಹಿಡಿದು ನೇರವಾಗಿ ಶ್ರುತಿಸ್ಮೃತಿಸೂತ್ರ (ಪ್ರಸ್ಥಾನತ್ರಯ) ಗಳಿಂದಲೆ ಆರಿಸಿದ ಸಂಗತಿಗಳ ಹೊಂದಿಕೆಯಿಂದ ವೇದಾಂತದ ಮೂಲಸ್ವರೂಪದ ಮುದ್ದನ್ನು ಕನ್ನಡಿಗರ ಮುಖದ ಮುಂದಿಡುವದಕ್ಕೆ ಇದೇ ನೋಡಿರಿ. ಬಹು ಬೆಲೆಯುಳ್ಳ ವಿಚಾರಗಳ ಎಲ್ಲ ಸೊಗಸೂ ಇದರಲ್ಲಿ ಸರಳವಾದ ರೀತಿಯಲ್ಲಿ ಮನಸ್ಸಿನಲ್ಲೊಡೆದು ಮೂಡುವಂತೆ ಬಳಕೆಯಾದ ಮಾತುಗಳಲ್ಲಿ ರೂಪುಗೊಂಡಿದೆ. ಸ್ವಲ್ಪದರಲ್ಲಿ ವೇದಾಂತದ ಎಲ್ಲ ಮುಖ್ಯತತ್ತ್ವಗಳ ಸಂಪೂರ್ಣಸ್ವರೂಪವನ್ನು ಕಣ್ಣಿಗೆ ಕಟ್ಟಿದಹಾಗೆ ಮಾಡುವ ಇದರಲ್ಲಿ ಯುಕ್ತಿಗಳ ಸೂರೆ ! ಅನುಭವದ ಮಾತುಗಳ ಸುಗ್ಗಿ. ಬೆಲೆ ೧-೮-೦

**ಅನುಭವಾಮೃತ:-** ಕಠಿನಶಬ್ದಗಳ ಅರ್ಥವನ್ನೂ ಕೊಟ್ಟು ವಿಚಾರದ ಸ್ವಾರಸ್ಯಗಳನ್ನೆಲ್ಲ ಚೆನ್ನಾಗಿ ವಿವರಿಸಿ ಬೇರೆಬೇರೆ ಗ್ರಂಥಗಳ ಆಧಾರವಾಕ್ಯಗಳನ್ನೂ ಜೋಡಿಸಿರುವ ಶುದ್ಧಪ್ರತಿ ಬೆಲೆ ೧-೮-೦

**ಮಾಂಡೂಕ್ಯಸಂವಾದ:-** ಇದು ವೇದಾಂತವೆಂಬ ಅರಮನೆಯ ಶಿಖರದ ಮೇಲಿನ ಕಲಶದಂತಿರುವ ಮಾಂಡೂಕ್ಯೋಪನಿಷತ್ತಿನ ಶಾಂಕರಭಾಷ್ಯದ ಸರಳಾನುವಾದ. ಗುರುಶಿಷ್ಯರ ಮಾತುಗಾರಿಕೆಯ ರೂಪದಲ್ಲಿದೆ. ವೇದಾಂತದ ವಿಚಾರದಲ್ಲಿ ಸಾವಿರಾರು ಗ್ರಂಥಗಳನ್ನು ಓದಿದರೂ ಇದರ ವಿಚಾರಸರಣಿಗೆ ಶರಣುಬಂದ ಹೊರತು ಗತ್ಯಂತರವಿಲ್ಲ. ಬೆಲೆ ೦-೮-೦

---

**ಎಸ್. ಎಸ್. ಎನ್. ಬುಕ್ ಡಿಪೋ, ಬಸವನಗುಡಿ, ಬೆಂಗಳೂರು ಸಿಟಿ.**

# ನೋಡಿದರೆ ಬಿಡದೆ ಇರುವ ಪುಸ್ತಕಗಳು

ತಿಳಿಗನ್ನಡ! **ಲೇಖಕ-ಹೊಸಕೆರೆ ಚಿದಂಬರಯ್ಯ** ಸುಲಭಶೈಲಿ!!

---

**ಗೀತೆಯ ತಿರಳು:-** ಗೀತೆಯೊಳಗೆ ಆಳದಲ್ಲಿರುವ ಅರ್ಥವಿಶೇಷಗಳನ್ನೆಲ್ಲ ಮೇಲಕ್ಕೆ ತಂದು ಹಿಗ್ಗಿಸಿರುವ ಒಳ್ಳೆ ಸವಿಕಟ್ಟಾದ ಮಾತುಗಾರಿಕೆ. ಸ್ವಲ್ಪದರಲ್ಲಿ ಬಹಳವನ್ನು ತಿಳಿಸುವದು. ಬೆಲೆ ೦-೪-೦

**ಗೀತೆಯ ಕೈಗನ್ನಡಿ:-** ಪ್ರತಿಯೊಂದು ಶ್ಲೋಕ, ಅದರ ಕೆಳಗೆ ಅದರ ಸೊಗಸನ್ನೆಲ್ಲ ಭಟ್ಟಿ ಇಳಿಸಿದ ಕನ್ನಡ ತಾತ್ಪರ್ಯ - ಹೀಗ್ಹೆ ಮುದ್ದಾಗಿ ಮುದ್ರಿಸಿರುವದು. ಬಹು ಅಗ್ಗವಾದ ಪ್ರತಿ. ಬೆಲೆ ೦-೪-೦

**ಮಕ್ಕಳ ಕೈಗೀತೆ:-** ಮೂಲದ ಅರ್ಥವನ್ನೆಲ್ಲ ಮಕ್ಕಳಿಗೆ ಕೂಡ ತಿಳಿಯುವ ಮಾತಿನ ರೂಪಕ್ಕೆ ಇಳಿಸಿರುವದು. ಕಥೆಯ ಸಾರಾಂಶವೂ ಅಡಕವಾಗಿದೆ. ಕೆಲವು ಚಿತ್ರಗಳೂ ಇವೆ. ಬೆಲೆ ೦-೬-೦

## ಧರ್ಮನೀತಿಗ್ರಂಥಗಳು

**ನೀತಿಗಳ ನೆಲಗಟ್ಟು:-** ಬೇರೆಬೇರೆ ನೀತಿಗಳ ಸ್ವರೂಪವನ್ನು ವಿವರಿಸಿ ಪುರಾಣೇತಿಹಾಸಗಳ ಬೇರೆಬೇರೆ ಉದಾಹರಣೆಗಳನ್ನೂ ಒಂದೇ ಕಡೆಗೆ ತಂದು ಅವುಗಳನ್ನು ಜೋಡಿಜೋಡಿ ಮೆಟ್ಟಿಲುಗಳಾಗಿ ಮಾಡಿ ನೀತಿಶಿಖರಕ್ಕೆ ಹೋಗವು ಕೊಟ್ಟಿರುವದು ಬೆಲೆ ೧-೮-೦

**ಭರತಖಂಡದ ಜೀವಜ್ಯೋತಿಗಳು:-** ದಿಗಂತಗಳನ್ನೆಲ್ಲ ತಮ್ಮ ಪ್ರತಿಭೆಯಿಂದ ಪ್ರಕಾಶಗೊಳಿಸಿ ಪ್ರಸಿದ್ಧರಾಗಿರುವ ಧರ್ಮಾಭಿಮಾನಿಗಳೂ ದೇಶಾಭಿಮಾನಿಗಳೂ ಆದ ಅನೇಕ ಐತಿಹಾಸಿಕಮಹನೀಯರ ಚರಿತ್ರೆಗಳ ತಿರುಳನ್ನು ರಸಭರಿತವಾಗಿ ವಿವರಿಸಿರುವ ಸಚಿತ್ರ ಗ್ರಂಥ ಅನೇಕ ಛಾಯಾಚಿತ್ರಗಳೂ ಇವೆ. ಬೆಲೆ ೧-೪-೦

**ಆತ್ಮಶಕ್ತಿಯ ತೇಜಸ್ಸು:-** ಮನುಷ್ಯನಲ್ಲಿ ಅಪ್ರತಿಮಸಾಮರ್ಥ್ಯವು ಆವಿರ್ಭವಿಸುವಂತೆ ಮಾಡಿ ಕೀರ್ತಿಶರೀರರೂಪವಾದ ಚಿರಜೀವಿತ್ವವನ್ನು ತಂದುಕೊಡುವಂಥ ಆತ್ಮಶಕ್ತಿಯ ವಿವಿಧವಿಚಾರವಿಶೇಷಗಳನ್ನು ವಿವರಿಸಿ ಅವುಗಳನ್ನು ಸಾಧಿಸಿದ ಮಹಾವಿಭೂತಿಗಳನ್ನು ಉದಾಹರಿಸಿ ಹೊಸ ಚೈತನ್ಯವನ್ನು ತುಂಬುವದು. ಬೆಲೆ ೧-೨-೦

**ಶ್ರೀ ವಿದ್ಯಾರಣ್ಯಕಾವ್ಯ:-** ಹೊಸ ಬಗೆಯ ಕಲ್ಪನೆಗಳೂ ಹೊಸ ಬಗೆಯ ವರ್ಣನೆಗಳೂ ಇದ್ದು ಶಬ್ದಾರ್ಥಗಳ ಚಮತ್ಕಾರಗಳಿಂದ ಕೂಡಿ ವಿವಿಧವೃತ್ತರೂಪದಲ್ಲಿ ಧರ್ಮಾಭಿಮಾನವನ್ನೂ ದೇಶಾಭಿಮಾನವನ್ನೂ ಪುರಿದುಂಬಿಸುವ ಲಲಿತವಾದ ಚಂಪೂಕಾವ್ಯ. ೧-೦-೦

---

**ಎಸ್. ಎಸ್. ಎನ್ ಬುಕ್ ಡಿಪೋ, ಬಸವನಗುಡಿ, ಬೆಂಗಳೂರು ಸಿಟಿ.**

# ನೋಡಿದರೆ ಬಿಡದೆ ಇರುವ ಪುಸ್ತಕಗಳು

ತಿಳಿಗನ್ನಡ! **ಲೇಖಕ–ಹೊಸಕೆರೆ ಚಿದಂಬರಯ್ಯ** ಸುಲಭ ಶೈಲಿ!!

---

**ಕೀರ್ತನಕಂಠಾಭರಣ:-** ಕರ್ಣಾಟಕಭಾಷಾಪ್ರಪಂಚಕ್ಕೇ ಹೊಸಬಗೆಯ ಸಾಹಿತ್ಯವಾಗಿ ಕೀರ್ತನಕಾರರನ್ನು ಸಜೀವಗ್ರಂಥಭಂಡಾರವೆನಿಸುವ ಕೀರ್ತನ-ಹರಿಕಥೆ-ಗಳು. ಆಯಾ ಕಥೆಗಳಿಗೆ ತಕ್ಕ ಧರ್ಮನೀತಿಗಳ ಪ್ರತಿಪಾದನೆಯ ಬೇರೆಬೇರೆ ಪೀಠಿಕೆಗಳೊಡನೆ (೧) ಸಂಪೂರ್ಣ ರಾಮಾಯಣ (೧೨ ಕಥೆಗಳು) ೧-೮-೦; (೨) ಭಾರತದ (೧೦) ಕಥೆಗಳು ೧-೦ ೦; (೩) ಭಾಗವತದ (೧೦) ಕಥೆಗಳು ೧-೦-೦; (೪) ಉಪಾಖ್ಯಾನಗಳು (೯) ೧-೦-೦; (೫) ಸತ್ಪುರುಷರು (೯) ೧-೦-೦; ಎಲ್ಲ ಸೇರಿದರೆ ೫-೦-೦

**ಭರತನ ಬಂಧುಪ್ರೇಮ:-** ಪ್ರಾಚೀನಸಂಪ್ರದಾಯಗಳನ್ನು ಆಧುನಿಕ ದೃಷ್ಟಿಯಿಂದ ಸಕಾರಣವಾಗಿ ವಿವರಿಸಿರುವ ತುಲಸೀರಾಮಾಯಣದ ಕಥೆ. ಬಹು ಮನೋಹರವಾದದ್ದು. ಬೆಲೆ ೦-೧೦-೦

**ತಾರಾನಾಥ ತರ್ಕವಾಚಸ್ಪತಿ:-** ಅಪ್ರತಿಮಪಂಡಿತನಾಗಿ ಉದ್ಯೋಗಬಲದಿಂದ ತನ್ನ ಜೀವಿಕೆಯನ್ನು ಉನ್ನತ ಸ್ಥಿತಿಯಲ್ಲಿಟ್ಟುಕೊಂಡು ಧರ್ಮಾರ್ಥವಾಗಿ ವಿದ್ಯೆಯನ್ನು ಪ್ರಚಾರ ಮಾಡಿ ಪರೋಪಕಾರದಿಂದ ಸಮಸ್ತರಾಜರನ್ನೂ ಬೆರಗು ಮಾಡಿದ ಚರಿತ್ರೆ. ೦-೧೦-೦

**ಗುಣನಿರೂಪಣೆ:-** ಇತಿಹಾಸದಿಂದ ಉದಾಹರಿಸಿ ಗುಣಗಳನ್ನೆಲ್ಲ ವೀರ್ಯವತ್ತರವಾಗಿ ಬಣ್ಣಿಸಿ ಅದರ ಏಳಿಗೆಯನ್ನು ತೋರಿಸುವದು. ಬೆಲೆ೦-೮-೦

**ವಾಲ್ಮೀಕಿಯ ಜಯ:-** ಜ್ಞಾನಬಲಕ್ಕಿಂತ ಮತ್ತು ಬಾಹುಬಲಕ್ಕಿಂತ ಪ್ರೇಮಬಲವೇ ಜಗತ್ತಿನ ನೆಮ್ಮದಿಗೆ ಕಾರಣವೆಂದು ತೋರಿಸುವ ಬಹು ಆಶ್ಚರ್ಯಕರವಾದ ಬಂಗಾಲೀ ಕಾದಂಬರಿಯ ಅನುವಾದ. ೦-೮-೦

**ಶ್ರೀ ಶಂಕರಾಚಾರ್ಯರ ಆಖ್ಯಾನ**-ಹರಿಕಥೆಯ ರೂಪ. ೦-೮-೦

**ಚೂಡಾಲೆ,** ಉಪದೇಶಪಂಚಕ, ಷಟ್ಪದೀಝೇಂಕಾರ, ಮನಸ್ಸಿಗುಪದೇಶ, ಶ್ರೀರಾಮಮಹಿಮೆ- ಮೊದಲಾದವುಗಳು.

---

**ಭಾರತದ ಸವಿಕಟ್ಟು:-** ಭಾರತ ಚಂಪುವಿನ ಬಹು ಸರಸವಾದ ಅನುವಾದ. ಹೊಸಕೆರೆ ಶ್ರೀನಿವಾಸಮೂರ್ತಿಕೃತ. ೦-೧೨-೦

---

**ಎಸ್. ಎಸ್. ಎನ್. ಬುಕ್ ಡಿಪೋ, ಬಸವನಗುಡಿ, ಬೆಂಗಳೂರು ಸಿಟಿ**